ಶನಿವಾರ, ಮೇ 6, 2023 | ₹ 7.00
www.prajavani.net
prajavani.net prajavani prajavani prajavani
ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬುದ್ಧ ಪೂರ್ಣಿಮಾ ಶಿಮ್ಲಾದಲ್ಲಿ ಶುಕ್ರವಾರ ನಡೆದ ಬುದ್ಧ ಪೂರ್ಣಿಮಾ ಕಾರ್ಯಕ್ರಮದಲ್ಲಿ ಬಾಲಕನೊಬ್ಬ ಕಾಣಿಸಿಕೊಂಡಿದ್ದು ಹೀಗೆ



ಜಾಹೀರಾತು

40% ಕಮಿಷನ್: ಗುತ್ತಿಗೆದಾರರ ಸಂಘದ ಅಧ್ಯಕ್ಷ ಮತ್ತಿತರರಿಗೆ ವಾರೆಂಟ್

ಬೆಂಗಳೂರು, ಡಿಸೆಂಬರ್ 23; ರಾಜ್ಯ ರಾಜಕಾರಣದಲ್ಲಿ ಭಾರೀ ಸದ್ದು ಮಾಡಿದ್ದ ಶೇ 40 ರಷ್ಟು ಕಮೀಷನ್ ವಿವಾದಕ್ಕೆ, ಹೊಸ ತಿರುವು ಸಿಕ್ಕಿದೆ. ಕಮೀಷನ್ ಆರೋಪ ಮಾಡಿದ್ದವರಿಗೆ ಇದೀಗ ಕೋರ್ಟ್ ವಾರೆಂಟ್ ಜಾರಿ ಮಾಡಿದ್ದು ಅವರು ಇದೀಗ ಕೋರ್ಟ್ ಮುಂದೆ ಹಾಜರಾಗಲೇಬೇಕಾಗಿದೆ.

ತೋಟಗಾರಿಕೆ ಮತ್ತು ಯೋಜನಾ ಸಚಿವ ಮುನಿರತ್ನ ಅವರ ವಿರುದ್ಧ ಶೇ 40ರಷ್ಟು ಕಮೀಷನ್ ಆರೋಪ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಸೇರಿದಂತೆ 19 ಮಂದಿಗೆ ಬೆಂಗಳೂರಿನ 8ನೇ ಎಸಿಎಂಎಂ ನ್ಯಾಯಾಲಯ ಜಾಮೀನು ರಹಿತ ವಾರಂಟ್ ಜಾರಿ ಮಾಡಿದೆ.

ಹಾಗಾಗಿ ಸಂಘದ ಪದಾಧಿಕಾರಿಗಳು ಕೋರ್ಟ್ ಮುಂದೆ ಹಾಜರಾಗಿ ಸಾಕ್ಷ್ಯ ನುಡಿಯಲೇಬೇಕು ಇಲ್ಲವಾದರೆ ದಂಡನೆಗೆ ಗುರಿಯಾಗಬೇಕಾಗುತ್ತದೆ. ಮುನಿರತ್ನ ದಾಖಲಿಸಿರುವ ಕ್ರಿಮಿನಲ್ ಮಾನನಷ್ಟ ಮೊಕದ್ದಮೆಯ ವಿಚಾರಣೆ ನಡೆಸಿದ ನ್ಯಾಯಾಧೀಶ ಕೆ. ಎನ್. ಶಿವಕುಮಾರ್ ಅವರು ಈ ಆದೇಶ ಮಾಡಿದ್ದಾರೆ.

> **"ಸುಮಾರು ರೂ. 22,000 ಕೋಟಿ ಬಾಕಿ ಉಳಿಸಿದ ಕರ್ನಾಟಕ ಸರ್ಕಾರ**

ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ, ಉಪಾಧ್ಯಕ್ಷರಾದ ವಿ. ಕೃಷ್ಣ ರೆಡ್ಡಿ, ಕಾರ್ಯದರ್ಶಿ ಜಿ.ಎಂ. ರವೀಂದ್ರ ಮತ್ತು ಖಜಾಂಚಿ ಎಚ್.ಎಸ್. ನಟರಾಜ್ ಸೇರಿದಂತೆ ಪ್ರಕರಣದ ಇನ್ನಿತರ ಆರೋಪಿಗಳು ದೂರುದಾರ ಮುನಿರತ್ನ ವಿರುದ್ಧ ನೀಡಿರುವ ಹೇಳಿಕೆಗಳು ಮಾಧ್ಯಮಗಳಲ್ಲಿ ಪ್ರಕಟವಾಗಿವೆ.



ಶಿಕ್ಷಣ ಇಲಾಖೆಯಲ್ಲಿ ಭ್ರಷ್ಟಾಚಾರ: ಗಂಭೀರ ಆರೋಪ ಮಾಡಿದ ರುಪ್ಸಾ ರಾಜ್ಯಾಧ್ಯಕ್ಷ ಲೋಕೇಶ್ ತಾಳಿಕಟ್ಟೆ

ಶಿಕ್ಷಣ ಇಲಾಖೆಯಲ್ಲಿ ಭ್ರಷ್ಟಾಚಾರ ಇದೆ. ಈ ಸಂಬಂಧ ಪ್ರಧಾನಿ ಮೋದಿ ಅವರಿಗೆ ಪತ್ರ ಬರೆಯಲಾಗಿದೆ ಎಂದು ರುಪ್ಸಾ ರಾಜ್ಯಾಧ್ಯಕ್ಷ ಲೋಕೇಶ್ ತಾಳಿಕಟ್ಟೆ ತಿಳಿಸಿದ್ದಾರೆ.

ಇಂದು ಮಾಧ್ಯಮಗಳ ಜತೆ ಮಾತನಾಡಿದ ಲೋಕೇಶ್ ತಾಳಿಕಟ್ಟೆ, ಶಿಕ್ಷಣ ಸಚಿವ ಬಿಸಿ ನಾಗೇಶ್ ಅವರನ್ನ ಸಂಪುಟದಿಂದ ಕೈಬಿಡುವಂತೆ ಆಗ್ರಹಿಸಿ ಮೂರನೇ ಬಾರಿ ಪ್ರಧಾನಿಗೆ ಪತ್ರ ಬರೆಯುತ್ತಿದ್ದೇವೆ. ವಜಾಗೊಳಿಸದಿದ್ದರೇ ಕಾನೂನಾತ್ಮಕ ಹೋರಾಟ ಮಾಡುತ್ತೇವೆ. ಶೋಕಿ ಮಾಡೋರನ್ನ ಶಿಕ್ಷಣ ಸಚಿವರನ್ನಾಗಿ ಮಾಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.



ಶಿಕ್ಷಣ ಇಲಾಖೆಯ ಭ್ರಷ್ಟಾಚಾರದ ಬಗ್ಗೆ ಪ್ರಧಾನಿ ಮೋದಿಗೆ 8 ಅಂಶಗಳನ್ನ ಉಲ್ಲೇಖಿಸಿ ಪತ್ರ ಬರೆಯಲಾಗಿದೆ.

ಆರ್ ಆರ್ ನೀಡಲು ಲಂಚ ಪಡೆಯಲಾಗುತ್ತಿದೆ. 10 ವರ್ಷಗಳಿಗೊಮ್ಮೆ ಮಾನ್ಯತೆ ನವೀಕರಣ ಹೊಂದಿರಬೇಕೆಂದು ಹೈಕೋರ್ಟ್ ಹೇಳಿದೆ ಆದರೆ 2 ವರ್ಷಕ್ಕೊಮ್ಮೆ ಲಂಚ ಪಡೆಯುತ್ತಿರುವ ಅಧಿಕಾರಿಗಳ ಸಂಖ್ಯೆ ಹೆಚ್ಚಾಗಿದೆ.

ಲಂಚದ ವ್ಯಾಪ್ತಿ ಶೇ 40ರಿಂದ 50ಕ್ಕೆ ಹೆಚ್ಚಾಗಿದೆ. ಇಲಾಖೆಯ ಬಹುತೇಕ ಕೆಲಸಗಳಿಗೆ ಆನ್ ಲೈನ್ ವ್ಯವಸ್ಥೆ ಇಲ್ಲ. ಆನ್ ಲೈನ್ ವ್ಯವಸ್ಥೆ ಇಲ್ಲದ್ದಕ್ಕೆ ಲಂಚಬಾಕರಾಗಿದ್ದಾರೆ. ಡಿಡಿಪಿಐ 25 ಪರ್ಸೆಂಟ್ ಬಿಇಒ 20 ಪರ್ಸೆಂಟ್ ಅಂತಾ ತಗೋತಾರೆ ಎಂದು ಲೋಕೇಶ್ ತಾಳಿಕಟ್ಟೆ ಆರೋಪಿಸಿದರು.

ಲೋಕಾಯುಕ್ತ ದಾಳಿ: ಪುತ್ರನ ಮನೆ-ಕಚೇರಿಯಲ್ಲಿ 8 ಕೋಟಿ ರೂ ನಗದು ಪತ್ತೆ; ಶಾಸಕ ಮಾಡಾಳ್ ವಿರೂಪಾಕ್ಷಪ್ಪ ನಾಪತ್ತೆ



ಬೆಂಗಳೂರು: ದಾವಣಗೆರೆ ಜಿಲ್ಲೆಯ ಚನ್ನಗಿರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಕೆ ಮಾಡಾಳ್ ವಿರೂಪಾಕ್ಷಪ್ಪ ಅವರ ಪುತ್ರ ಪ್ರಶಾಂತ್ ಮಾಡಾಳ್ ಅವರ ಕಚೇರಿ ಮತ್ತು ನಿವಾಸದಲ್ಲಿ ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳು 8.12 ಕೋಟಿ ರೂಪಾಯಿ ಲೆಕ್ಕಕ್ಕೆ ಸಿಗದ ನಗದನ್ನು ವಶಪಡಿಸಿಕೊಂಡಿದ್ದಾರೆ.

ಮೊನ್ನೆ ಗುರುವಾರ ಸಾಯಂಕಾಲ ಲೋಕಾಯುಕ್ತ ಪೊಲೀಸರಿಂದ ಬಂಧನಕ್ಕೊಳಗಾಗಿದ್ದ ಪ್ರಶಾಂತ್ ನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ನಂತರ ನಡೆದ ವಿದ್ಯಾಮಾನದ ನಂತರ ನಿನ್ನೆ ಬೆಳಗ್ಗೆಯಿಂದ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಪರಾರಿಯಾಗಿದ್ದಾರೆ. ಮೊನ್ನೆ ಗುರುವಾರ, 40 ಲಕ್ಷ ರೂ. ಲಂಚ ಸ್ವೀಕರಿಸುತ್ತಿದ್ದಾಗ ಪ್ರಶಾಂತ್ ಬಂಧನವಾಗಿದೆ.

ವಶಪಡಿಸಿಕೊಂಡ 8.12 ಕೋಟಿ ರೂ ನಗದು ಕರ್ನಾಟಕ ಲೋಕಾಯುಕ್ತ ಇತಿಹಾಸದಲ್ಲಿ ಒಂದೇ ಪ್ರಕರಣದಲ್ಲಿ ಅತಿ ಹೆಚ್ಚು ಹೇಳಲಾಗಿದೆ. ಇದೀಗ ಪ್ರಕರಣದ ಪ್ರಮುಖ ಆರೋಪಿ ವಿರೂಪಾಕ್ಷಪ್ಪನ ಹುಡುಕಾಟದಲ್ಲಿ ಪೊಲೀಸರು ತೊಡಗಿದ್ದಾರೆ.

ಶಾಸಕರು ಈ ಹಿಂದೆ ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಲಿಮಿಟೆಡ್ (ಕೆಎಸ್‌ಡಿಎಲ್) ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ದಾವಣಗೆರೆಯ ಚನ್ನಗಿರಿ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಮಾಡಾಳ್ ಮತ್ತು ಅವರ ಪುತ್ರನ ವಿರುದ್ಧ ಕೆಮಿಕ್ಸಿಲ್ ಕಾರ್ಪೊರೇಷನ್ ನಡೆಸುತ್ತಿರುವ ಶ್ರೇಯಸ್ ಕಶ್ಯಪ್ ಎಂಬುವರು ತಂದೆ-ಮಗ ಇಬ್ಬರು ತಮ್ಮ ಮತ್ತು ಟಿಎಸ್ ಮೂರ್ತಿಯಿಂದ 81 ಲಕ್ಷ ರೂಪಾಯಿಗೆ ಬೇಡಿಕೆಯಿಟ್ಟಿದ್ದಾರೆ ಎಂದು ನೀಡಿದ ದೂರಿನ ಮೇರೆಗೆ ಲೋಕಾಯುಕ್ತ ಪೊಲೀಸರು ಎಫ್ಐಆರ್ ದಾಖಲಿಸಿದ್ದಾರೆ. ಇವರು ಖಚಿ ಡೆಲಿಸಿಯಾ ನಡೆಸುತ್ತಿದ್ದಾರೆ.


ಕೆಎಸ್‌ಡಿಎಲ್‌ಗೆ ಕೆಮಿಕಲ್ ಆಯಿಲ್ ಪೂರೈಕೆಗೆ ಟೆಂಡರ್ ನೀಡಿ, ಖರೀದಿ ಆದೇಶ ನೀಡಿ, ಪೂರೈಕೆಯಾದ ರಾಸಾಯನಿಕದ ಬಿಲ್ ಮೊತ್ತವನ್ನು ಮನಬಂದಂತೆ ಬಿಡುಗಡೆ ಮಾಡಲು ಲಂಚ ಪಡೆಯಲಾಗಿದೆ ಎಂದು ಲಕ್ಷ ಆರೋಪಿಸಲಾಗಿದೆ.

ಗುರುವಾರ ಬಂಧಿಸಲಾದ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಆಗಖಖಅ) ಮುಖ್ಯ ಲೆಕ್ಕಾಧಿಕಾರಿ ಪ್ರಶಾಂತ್ ಮತ್ತು ಇತರ ನಾಲ್ವರನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಗಿದ್ದು, ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಗುರುವಾರ ರಾತ್ರಿ ಕ್ರೆಸೆಂಟ್ ರಸ್ತೆಯಲ್ಲಿರುವ ಪ್ರಶಾಂತ್ ಅವರ ಖಾಸಗಿ ಕಚೇರಿಯಿಂದ 2.02 ಕೋಟಿ ರೂಪಾಯಿ ಲೆಕ್ಕವಿಲ್ಲದ ಹಣವನ್ನು ಪೊಲೀಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಮಠಗಳು ಕೂಡ ಸರ್ಕಾರಕ್ಕೆ ಶೇ.30ರಷ್ಟು ಕಮಿಷನ್ ಕೊಡಬೇಕು ದಿಂಗಾಲೇಶ್ವರ ಸ್ವಾಮೀಜಿ ಸ್ಫೋಟಕ ಹೇಳಿಕೆ

ಬಾಗಲಕೋಟೆ: ಮಠ ಮಾನ್ಯಗಳು ಅನುದಾನ ಪಡೆಯುವುದಕ್ಕೆ ಸರ್ಕಾರಕ್ಕೆ ಶೇ 30ರಷ್ಟು ಕಮಿಷನ್ ಕೊಡಬೇಕು ಎಂದು ದಿಂಗಾಲೇಶ್ವರ ಸ್ವಾಮೀಜಿ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಬಾಗಲಕೋಟೆ ಜಿಲ್ಲೆಯ ಬಾಡಗಂಡಿಯಲ್ಲಿ ನಡೆದ ಸಂಕಲ್ಪ ಯಾತ್ರೆ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಮಠಗಳಿಗೆ ಸರ್ಕಾರ ನೀಡುವ ಅನುದಾನದಲ್ಲಿ ಶೇ.30ರಷ್ಟು ಕಮಿಷನ್ ನೀಡಬೇಕಿದೆ. ಇಲ್ಲವಾದಲ್ಲಿ ಹಣವೇ ಬಿಡುಗಡೆ ಆಗಲ್ಲ. ಇಂದು ಭ್ರಷ್ಟಾಚಾರದ ಪರಿಸ್ಥಿತಿ ಇಲ್ಲಿಗೆ ಬಂದು ನಿಂತಿದೆ ನೋಡಿ ಎಂದು ತಿಳಿಸಿದ ಸ್ವಾಮೀಜಿ, ಅನುದಾನದಲ್ಲಿ ಅಧಿಕಾರಿಗಳು ಕಡಿತ ಮಾಡದೇ ಅನುದಾನ ನೀಡಲು ಸಾಧ್ಯವಿಲ್ಲ ಎಂದರು.

ದೆಹಲಿ, ಬೆಂಗಳೂರಿನಂತಹ ಊರಿನಲ್ಲಿ ಐಸ್‌ಕ್ರೀಂ ಬಿಡುಗಡೆಯಾದರೆ ನಮ್ಮ ಉತ್ತರ ಕರ್ನಾಟಕಕ್ಕೆ ಬರುವವರೆಗೂ ಐಸ್‌ಕ್ರೀಂ ಕಡ್ಡಿ ಮಾತ್ರ ಸಿಗುತ್ತೆ ರೊಕ್ಕ ಕಟ್ ಮಾಡದೇ ಅನುದಾನ ಬಿಡುಗಡೆ ಸಾಧ್ಯವಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ. ಹೀಗಾಗಿ ಮಠ ಮಾನ್ಯಗಳ ಅನುದಾನದಲ್ಲಿ ಶೇ.30 ಕಡಿತ ಆದ ಮೇಲೆಯ ಕಟ್ಟಡ ಆರಂಭವಾಗುತ್ತದೆ. ಎಂದು ಬಹಿರಂಗ ವೇದಿಕೆ ಮೇಲೆ ತಿಳಿಸಿದರು.



2500 ಕೋಟಿ ಕೊಟ್ರೆ ಸಿಎಂ ಮಾಡ್ತೀವಿ ಅಂತ ಬಂದಿದ್ರು: ಯತ್ನಾಳ್ ಬಾಂಬ್


ಬಿಜೆಪಿಯ ಫೈರ್ ಬ್ರ್ಯಾಂಡ್ ಲೀಡರ್ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮತ್ತೊಮ್ಮೆ ಪಕ್ಷದ ನಾಯಕರ ವಿರುದ್ಧ ಹರಿ ಹಾಯ್ದಿದ್ದಾರೆ. ಸಿಎಂ ಖುರ್ಚಿಯ ವ್ಯಾಪಾರದ ಬಗ್ಗೆಯೂ ಅವರು ಹೇಳಿಕೆ ನೀಡಿದ್ದು, ರಾಜಕೀಯ ವಲಯದಲ್ಲಿ ಸಂಚಲನ ಹುಟ್ಟುಹಾಕಿದೆ.

ಬೆಳಗಾವಿ ಜಿಲ್ಲೆಯ ರಾಮದುರ್ಗ ಪಟ್ಟಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಬಸನಗೌಡ ಪಾಟೀಲ್ ಯತ್ನಾಳ್ ಮಾತನಾಡಿದ ವೇಳೆ ಸರ್ಕಾರದ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ.

ದೆಹಲಿಯಿಂದ ಬಂದ ಕೆಲವು ಲೀಡರ್‌ಗಳು 2500 ಕೋಟಿ ರೂಪಾಯಿ ಕೊಡಿ, ಸಿಎಂ ಮಾಡ್ತೀವಿ ಅಂದಿದ್ರು. ರಾಜಕಾರಣದಲ್ಲಿ ಯಾರೂ ಅಲ್ಲಿ ಹೋಗಿ ಹಾಳಾಗಬೇಡಿ. ನಿಮಗೆ ಟಿಕೆಟ್ ಕೊಡಿಸುತ್ತೇವೆ. ದೆಹಲಿಗೆ ಕರೆದುಕೊಂಡು ಹೋಗ್ತೇವೆ. ಜೆ.ಪಿ. ನಡ್ಡಾರನ್ನು ಭೇಟಿ ಮಾಡಿಸ್ತೀವಿ ಅಂತ ಹೇಳ್ತಾರೆ. ದೆಹಲಿಯಿಂದ ಒಂದಷ್ಟು ಮಂದಿ ನನ್ನ ಬಳಿ ಬಂದಿದ್ದರು. ನಿಮ್ಮನ್ನು ಸಿಎಂ ಮಾಡ್ತೀವಿ 2500 ಕೋಟಿ ರೂ. ಕೊಡಿ ಎಂದಿದ್ದರು, ಎಂದು ಬಾಂಬ್ ಸಿಡಿದ್ದಾರೆ.



ಕೊಪ್ಪಳ | ಪಿಎಸ್ಐ ಅಕ್ರಮ ನೇಮಕಾತಿ ಹಗರಣಕ್ಕೆ ಹೊಸ ತಿರುವು: ಹಣ ಪಡೆದಿದ್ದನ್ನು ಒಪ್ಪಿಕೊಂಡ ಬಿಜೆಪಿ ಶಾಸಕ?



ಜಿಲ್ಲೆಯ ಕನಕಗಿರಿ ಕ್ಷೇತ್ರದ ಶಾಸಕ ಬಸವರಾಜ ದಡೇಸೂಗೂರು ಅವರು, ಪರಸಪ್ಪ ಎನ್ನುವವರ ಪುತ್ರನ ನೇಮಕಾತಿಗೆ ಹಣ ಪಡೆದಿರುವುದನ್ನು ಒಪ್ಪಿಕೊಂಡಿರುವ ಶಾಸಕರ ಸಂಭಾಷಣೆಯ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ಸೋಮವಾರ ವೈರಲ್ ಆಗಿದೆ. ಈ ಆಡಿಯೊದಲ್ಲಿರುವುದು ತಮ್ಮದೇ ಧ್ವನಿ ಎಂಬುದನ್ನೂ ಶಾಸಕರು ಖಚಿತಪಡಿಸಿದ್ದಾರೆ.

ತಾವು ಹಣ ಪಡೆದಿಲ್ಲ ಎಂದು ಸಮಜಾಯಿಷಿ ನೀಡಿದ್ದಾರೆ. ಆದರೆ, ಕಳೆದ ಹಲವು ತಿಂಗಳಿಂದ ಪೊಲೀಸ್ ಅಧಿಕಾರಿಗಳು, ಪರೀಕ್ಷಾ ಕೇಂದ್ರವಿದ್ದ ಸಂಸ್ಥೆಯ ಮುಖ್ಯಸ್ಥರು, ಮಧ್ಯವರ್ತಿಗಳನ್ನು ಸುತ್ತಿಕೊಂಡಿದ್ದ ಪ್ರಕರಣ, ಮೊದಲ ಬಾರಿ ಶಾಸಕರೊಬ್ಬರ ಪಾತ್ರವನ್ನು ಬಯಲುಗೊಳಿಸಿದ್ದು, ಪಿಎಸ್ಐ ನೇಮಕಾತಿ ಹಗರಣ ಹೊಸ ತಿರುವು ಪಡೆದಿದೆ.

ಕುಷ್ಟಗಿ ತಾಲೂಕಿನ ಶಿರಗುಂಪಿ ಮೂಲದ ಪರಸಪ್ಪ ಎನ್ನುವವರಿಂದ ಹಣ ಪಡೆದು ಸರಕಾರಕ್ಕೆ ಮುಟ್ಟಿಸಿರುವೆ, ಎಂದು ಶಾಸಕ ದಡೇಸೂಗೂರು ಅವರು ಮೊಬೈಲ್ ಸಂಭಾಷಣೆಯಲ್ಲಿ ಒಪ್ಪಿಕೊಂಡಿರುವುದು ಬಹಿರಂಗವಾಗಿದೆ. ಹಣ ವಾಪಸ್ ಕೇಳಿದ್ದಕ್ಕೆ ಪರಸಪ್ಪ ಅವರನ್ನು ತರಾಟೆಗೆ ತೆಗೆದುಕೊಂಡಿರುವ ಶಾಸಕರ ನಡೆ ಅನುಮಾನ ಮೂಡಿಸಿದೆ.

"ಪಿಎಸ್ಐ ಹಗರಣದಲ್ಲಿ ಯಾವೊಬ್ಬ ವ್ಯಕ್ತಿಯಿಂದ ನಾನು ಹಣ ಪಡೆದಿಲ್ಲ, ಆಡಿಯೊದಲ್ಲಿರುವ ಧ್ವನಿ ನನ್ನದೇ. ಬೇರೆ ಇಬ್ಬರ ನಡುವೆ ಜಗಳ ಉಂಟಾಗಿತ್ತು. ಅದನ್ನು ಪರಿಹರಿಸುವಂತೆ ನನ್ನ ಬಳಿ ಬಂದಿದ್ದರು. ಅವರಿಬ್ಬರನ್ನೂ ಒಟ್ಟುಗೂಡಿಸಿ ರಾಜಿ ಪಂಚಾಯಿತಿ ನಡೆಸಿರುವೆ. ಅದೇ ಸಂಭಾಷಣೆಯನ್ನು ವೈರಲ್ ಮಾಡಿದ್ದಾರೆ. ವರ್ಷಗಳ ಹಿಂದಿನಿಂದಲೂ ಸಮಸ್ಯೆ ಇತ್ತು. ಪರಿಹರಿಸುವಂತೆ ನನ್ನನ್ನು ಕೇಳಿದ್ದರು. ಅದನ್ನೇ ಮಾತನಾಡಿರುವೆ. ಚುನಾವಣಾ ವರ್ಷವಿದ್ದು, ನನ್ನ ವಿರುದ್ಧ ಷಡ್ಯಂತ್ರ ನಡೆಸಿದ್ದಾರೆ. ಹೀಗಾಗಿ ಆಡಿಯೊ ವೈರಲ್ ಮಾಡುತ್ತಿದ್ದಾರೆ."

–ಬಸವರಾಜ ದಡೇಸೂಗೂರು, ಶಾಸಕ, ಕನಕಗಿರಿ ಕ್ಷೇತ್ರ

ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣ ಸಚಿವ ಕೆ ಎಸ್ ಈಶ್ವರಪ್ಪ ವಿರುದ್ಧ ಎಫ್ಐಆರ್ ದಾಖಲು

ಉಡುಪಿ: ತಮ್ಮ ವಾಕ್ ಪ್ರಹಾರ, ವಿರೋಧ ಪಕ್ಷದ ನಾಯಕರ ವಿರುದ್ಧ ತೀವ್ರ ಟೀಕೆ, ವಾದ-ವಿವಾದಗಳಿಂದ ಆಗಾಗ ಸುದ್ದಿಯಾಗುತ್ತಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಕೆ ಎಸ್ ಈಶ್ವರಪ್ಪ ವಿರುದ್ಧ ಎಫ್ಐಆರ್ ದಾಖಲಾಗಿದೆ.

ಅದು ಬೆಳಗಾವಿ ಜಿಲ್ಲೆಯ ಹಿಂಡಲಗ ಮೂಲದ ಗುತ್ತಿಗೆದಾರ, ಸಂತೋಷ್ ಪಾಟೀಲ್, ಆತ್ಮಹತ್ಯೆ ಪ್ರಕರಣದಲ್ಲಿ, ಸಂತೋಷ್ ಪಾಟೀಲ್ ಗುತ್ತಿಗೆ ಕಾಮಗಾರಿಯೊಂದರಲ್ಲಿ ಸಚಿವ ಈಶ್ವರಪ್ಪ ವಿರುದ್ಧ 40% ಆರೋಪ ಮಾಡಿ ಪ್ರಧಾನಿ ನರೇಂದ್ರ ಮೋದಿಯವರಿಗೆ ಪತ್ರ ಬರೆದು ಕೆಲ ತಿಂಗಳ ಹಿಂದೆ ಸುದ್ದಿಯಾಗಿದ್ದರು. ಅವರ ಆರೋಪವನ್ನು ತಳ್ಳಿಹಾಕಿದ್ದ ಹಿರಿಯ ಸಚಿವ ಈಶ್ವರಪ್ಪ, ಸಂತೋಷ್ ಪಾಟೀಲ್ ವಿರುದ್ಧ ನ್ಯಾಯಾಲಯದ ಮೊರೆ ಹೋಗಿ ಮಾನನಷ್ಟ ಮೊಕದ್ದಮೆ ಹೂಡಿದ್ದರು. ಅದು ವಿಚಾರಣೆ ಹಂತದಲ್ಲಿರುವಾಗಲೇ ಸಂತೋಷ್ ಪಾಟೀಲ್ ನಿನ್ನೆ ಏಪ್ರಿಲ್ 12ರಂದು ಉಡುಪಿಯ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಬಳಿಯಿರುವ ಶಾಂಭವಿ ಲಾಡ್ಜ್ ನಲ್ಲಿ ಆತ್ಮಹತ್ಯೆಗೆ ಶರಣಾಗಿದ್ದರು.

ಈಶ್ವರಪ್ಪ ಅವರೇ ಕಾರಣ ಎಂಬ ಸಂದೇಶವನ್ನು ಎಲ್ಲ ಮಾಧ್ಯಮ ಪ್ರತಿನಿಧಿಗಳಿಗೆ ವಾಟ್ಸಪ್ ಮಾಡಿದ್ದರು. ಹೀಗಾಗಿ ಸಚಿವರಾದ ಈಶ್ವರಪ್ಪ ರಾಜೀನಾಮೆ ನೀಡಬೇಕು ಮತ್ತು ಅವರ ವಿರುದ್ಧ ಎಫ್ಐಆರ್ ದಾಖಲಿಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿತ್ತು. ಇದಾದ ಮೇಲೆ ನಿನ್ನೆ ಮಧ್ಯಾಹ್ನ ನಂತರ ನಡೆದ ಬೆಳವಣಿಗೆಯಲ್ಲಿ ಸಂತೋಷ್ ಆತ್ಮಹತ್ಯೆ ಸಂಬಂಧ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದ್ದು, ಮೊದಲ ಆರೋಪಿ ಸ್ಥಾನದಲ್ಲಿ ಸಚಿವ ಕೆ.ಎಸ್.ಈಶ್ವರಪ್ಪ ಅವರ ಹೆಸರು ಇದೆ.



ಶನಿವಾರ, ಮೇ 6, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 125 | ಪುಟ 24
www.prajavani.net
prajavani.net prajavani prajavani prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಇಂದು 3ನೇ ಚಾರ್ಲ್ಸ್ ಪಟ್ಟಾಭಿಷೇಕ 8
ಶೇ 1ಕ್ಕೂ ಹೆಚ್ಚು ಕುಸಿದ ಸೆನ್ಸೆಕ್ಸ್ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)
61,054 ▼	18,069 ▼	₹63,700 (ಬೆಂಗಳೂರು)	₹79,400 (ಬೆಂಗಳೂರು)



ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ.

ಪ್ರಜಾ ಮತ — ಜನತಂತ್ರದ ಹಬ್ಬ

ಚಿನಕುರಳಿ

ಪ್ರಕಾಶ್ ಶೆಟ್ಟಿ



ತಡೆ ಕೋರಿದ್ದ ಅರ್ಜಿ ವಜಾಗೊಳಿಸಿದ ಹೈಕೋರ್ಟ್ ● ನೀಟ್: ಮೋದಿ ಕಾರ್ಯಕ್ರಮ ಬದಲು

ರೋಡ್ ಶೋ: ಜನಾಕ್ರೋಶ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ವಿಧಾನಸಭೆ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ‘ನೀಟ್’ ಪರೀಕ್ಷೆಯ ದಿನದಂದೇ (ಮೇ 7) ರಾಜಧಾನಿಯ ಪ್ರಮುಖ ಪ್ರದೇಶಗಳಲ್ಲಿ ನಡೆಸಲಿರುವ ರೋಡ್ ಶೋ ಹಾಗೂ ಅದರಿಂದಾಗುವ ತೊಂದರೆ ಬಗ್ಗೆ ವಿದ್ಯಾರ್ಥಿಗಳು, ಪೋಷಕರು, ಎದುರಾಳಿ ರಾಜಕೀಯ ಪಕ್ಷಗಳ ಪ್ರಮುಖರಿಂದ ಶುಕ್ರವಾರ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಪ್ರಧಾನಿಯವರ ರೋಡ್ ಶೋ ಸಾಗಲಿರುವ ಮಾರ್ಗಗಳಲ್ಲಿ ಜನರ ಓಡಾಟಕ್ಕೆ, ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಿ ಪೊಲೀಸರು ಹೊರಡಿಸಿರುವ ಸೂಚನೆಗೆ ಕೂಡ ತೀವ್ರ ವಿರೋಧ ವ್ಯಕ್ತವಾಗಿದೆ. ಪರೀಕ್ಷೆ ಸಮಯದಲ್ಲಿ ಹಮ್ಮಿಕೊಂಡಿರುವ ರೋಡ್ ಶೋ ರದ್ದುಪಡಿಸಬೇಕು ಎಂಬ ಒತ್ತಾಯವೂ ಶುರುವಾಗಿದೆ.

ರೋಡ್ ಶೋಗೆ ಸಿಗುವ ಪ್ರಚಾರಕ್ಕಿಂತ ಜನಾಕ್ರೋಶವೇ ಮುಳುವಾದೀತೆಂದು ಆತಂಕಗೊಂಡ ಬಿಜೆಪಿ ನಾಯಕರು, ಪ್ರಧಾನಿಯವರ ಕಾರ್ಯಕ್ರಮದ ರೂಪುರೇಶೆಯನ್ನು ಬದಲಾಯಿಸಿದ್ದಾರೆ.

7ನೇ ಪುಟ ನೋಡಿ



ಬೆಂಗಳೂರಿನ ಬಸವನಗುಡಿ ರಸ್ತೆಯಲ್ಲಿ ಪ್ರಧಾನಿ ಮೋದಿ ಅವರ ರೋಡ್ ಶೋ ಸಾಗಲಿರುವ ಭಾಗಕ್ಕೆ ಮಾತ್ರ ಶುಕ್ರವಾರ ಟಾರು ಹಾಕಲಾಗಿದೆ. ಮಾರ್ಗದಲ್ಲಿ ಯಾರೂ ನುಗ್ಗದಂತೆ ತಡೆಗೋಡೆಯನ್ನೂ ನಿರ್ಮಿಸಲಾಗಿದೆ –ಪ್ರಜಾವಾಣಿ ಚಿತ್ರ

ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ಕ್ರಮ: ಶೋಭಾ ಕರಂದ್ಲಾಜೆ

ನೀಟ್ ಪರೀಕ್ಷೆ ಇರುವುದರಿಂದ ರೋಡ್ ಶೋ ಕಾರ್ಯಕ್ರಮದಲ್ಲಿ ಬದಲಾವಣೆ ಮಾಡಲಾಗಿದೆ. ಮಕ್ಕಳ ಶಿಕ್ಷಣ ಮತ್ತು ಭವಿಷ್ಯದ ಬಗ್ಗೆ ವಿಶೇಷ ಕಳಕಳಿ ಹೊಂದಿರುವ ಪ್ರಧಾನಮಂತ್ರಿಯವರು ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ತೊಂದರೆ ಆಗದಂತೆ ಕಾರ್ಯಕ್ರಮದಲ್ಲಿ ಬದಲಾವಣೆ ಮಾಡಲು ಸೂಚಿಸಿದ್ದಾರೆ ಎಂದು ಬಿಜೆಪಿ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕಿ ಶೋಭಾ ಕರಂದ್ಲಾಜೆ ತಿಳಿಸಿದರು.

ಭಾನುವಾರ ಯಾವುದೇ ವಿದ್ಯಾರ್ಥಿ ತೊಂದರೆಗೆ ಸಿಲುಕಿದರೆ ಅಂತಹ ವಿದ್ಯಾರ್ಥಿ ಪ್ರವೇಶ ಪತ್ರ ತೋರಿಸಿದರೆ, ಸಂಬಂಧಿಸಿದ ಪರೀಕ್ಷಾ ಕೇಂದ್ರಗಳಿಗೆ ಪೊಲೀಸರು ಬಿಡುತ್ತಾರೆ. ಈ ಕುರಿತು ಪೊಲೀಸರು ಮತ್ತು ಎಸ್‌ಪಿಜಿಯವರ ಜತೆ ಚರ್ಚಿಸಲಾಗಿದೆ ಎಂದೂ ಹೇಳಿದರು.

ಸಾರ್ವಜನಿಕರಿಗೆ ಪೊಲೀಸರ ಸೂಚನೆ

- ರೋಡ್ ಶೋ ಸಂದರ್ಭದಲ್ಲಿ ಮನೆಯ ಮೇಲೆ ಹಾಗೂ ಬಾಲ್ಕನಿ ಮೇಲೆ ನಿಲ್ಲುವಂತಿಲ್ಲ
- ಬೆಳಿಗ್ಗೆ 6 ಗಂಟೆಯಿಂದ ರೋಡ್ ಶೋ ಮುಗಿಯುವವರೆಗೂ ವಾಹನ ಸಂಚರಿಸುವಂತಿಲ್ಲ.
- ರೋಡ್ ಶೋ ವೇಳೆ ಮನೆ/ ಕಟ್ಟಡದ ಪ್ರವೇಶ ಹಾಗೂ ನಿರ್ಗಮನ ದ್ವಾರಗಳನ್ನು ಬಂದ್ ಮಾಡಬೇಕು.
- ಅಪರಿಚಿತರಿಗೆ ಮನೆ/ ಕಟ್ಟಡದೊಳಗೆ ಹೋಗಲು–ಬರಲು ಅನುಮತಿ ನೀಡುವಂತಿಲ್ಲ
- ರೋಡ್ ಶೋ ನೋಡಬೇಕು ಎನ್ನುವವರು, ನಿಗದಿತ ಜಾಗದಲ್ಲಿ ಬಂದು ನಿಂತುಕೊಂಡು ನೋಡಬೇಕು
- ಭದ್ರತೆ ಹಾಗೂ ಸುಗಮ ಸಂಚಾರ ದೃಷ್ಟಿಯಿಂದ ಪೊಲೀಸರ ಜೊತೆ ಸಹಕರಿಸಬೇಕು

ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಚೆಲ್ಲಾಟ ಬೇಡ: ಎಚ್‌ಡಿಕೆ

‘ರೋಡ್ ಶೋಗಳಿಂದ ಮಕ್ಕಳ ಭವಿಷ್ಯಕ್ಕೆ ಧಕ್ಕೆ ಆಗಬಾರದು. ಪ್ರಧಾನಿ ಮೋದಿ ಅವರ ರೋಡ್‌ಶೋ ವಿಚಾರದ ಬಗ್ಗೆ ವಿದ್ಯಾರ್ಥಿಗಳು ಮತ್ತು ಪೋಷಕರಿಂದ ಬರುತ್ತಿರುವ ಟೀಕೆಗಳ ಬಗ್ಗೆ ನನಗೆ ಮಾಹಿತಿ ಇದೆ. ಅವರು ವೇಳಾಪಟ್ಟಿ ಬದಲಿಸುವುದು ಸೂಕ್ತ’ ಎಂದು ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದ್ದಾರೆ. ‘ದೇಶದ ಪ್ರಧಾನಿಯಾಗಿ ಮಕ್ಕಳ ಭವಿಷ್ಯದ ಜತೆಗೆ ಚೆಲ್ಲಾಟ ಆಡೋದು ಸರಿಯಲ್ಲ. ನೀಟ್ ಪರೀಕ್ಷೆಗೆ ತೊಂದರೆ ಕೊಡಬಾರದು. ಮಕ್ಕಳ ಭವಿಷ್ಯದ ಬಗ್ಗೆ ಅವರಿಗೆ ಕಿಂಚಿತ್ ಕಾಳಜಿ ಇದ್ದರೆ ರೋಡ್ ಶೋ ಮುಂದಕ್ಕೆ ಹಾಕುವುದು ಒಳ್ಳೆಯದು’ ಎಂದಿದ್ದಾರೆ.

‘ಬಿಜೆಪಿಗೆ ನಾಡಿನ ಜನರ ಸಮಸ್ಯೆಗಳಿಗಿಂತ ಅಧಿಕಾರ ಹಿಡಿಯುವುದೇ ಮುಖ್ಯವಾಗಿದೆ’ ಎಂದು ಕಿಡಿಕಾರಿದ್ದಾರೆ.

‘ಕೋವಿಡ್ ಈಗ ಜಾಗತಿಕ ಆರೋಗ್ಯ ತುರ್ತು ಅಲ್ಲ’

ವಿಶ್ವಸಂಸ್ಥೆ/ಜಿನೀವಾ (ಪಿಟಿಐ): ‘ಕೋವಿಡ್–19 ಈಗ ಜಾಗತಿಕ ಆರೋಗ್ಯ ತುರ್ತು ಸ್ಥಿತಿ’ಯಾಗಿ ಉಳಿದಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ಶುಕ್ರವಾರ ಹೇಳಿದೆ. ಜಗತ್ತಿನಾದ್ಯಂತ 70 ಲಕ್ಷ ಜನರ ಪ್ರಾಣ ತೆಗೆದಿದ್ದ ಈ ರೋಗವು, ಎಲ್ಲ ದೇಶಗಳನ್ನು ಆರ್ಥಿಕ ಸಂಕಷ್ಟಕ್ಕೆ ದೂಡಿತ್ತು.

‘ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಆರೋಗ್ಯ ನಿಯಮಾವಳಿ (2005) ತುರ್ತು ಸಮಿತಿಯು ಗುರುವಾರ 15ನೇ ಬಾರಿಗೆ ಸಭೆ ಸೇರಿತ್ತು. ಈ ಸಭೆಯಲ್ಲಿ ಈ ಶಿಫಾರಸು ಮಾಡಲಾಗಿದೆ’ ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮಹಾನಿರ್ದೇಶಕ ಟೆಡ್ರೊಸ್ ಅಧಾನೊಮ್ ಘೆಬ್ರೆಯೆಸಸ್ ಅವರು ತಿಳಿಸಿದರು.

‘ನಾನು ಈ ಶಿಫಾರಸನ್ನು ಒಪ್ಪಿಕೊಂಡಿದ್ದೇನೆ. ಕೋವಿಡ್–19 ಜಾಗತಿಕ ಆರೋಗ್ಯ ತುರ್ತುಸ್ಥಿತಿ ಎಂಬ ಪರಿಗಣನೆಯನ್ನು ಈಗ ಕೈಬಿಡಲಾಗಿದೆ. ಆದರೆ, ಇದರ ಅರ್ಥ ಈ ಪಿಡುಗು ಅಂತ್ಯಗೊಂಡಿದೆ ಎಂದಲ್ಲ’ ಎಂದು ಎಚ್ಚರಿಸಿದರು.

ಕೋವಿಡ್–19ರಿಂದ ಮೃತಪಡುತ್ತಿರುವವರ ಸಂಖ್ಯೆಯಲ್ಲಿ ಇಳಿಕೆ, ಕೊರೊನಾ ಸೋಂಕಿನ ಕಾರಣ ಆಸ್ಪತ್ರೆಗೆ ದಾಖಲಾಗುತ್ತಿರುವವರು ಹಾಗೂ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆಯಲ್ಲಿ ಇಳಿಕೆ ಮತ್ತು ಜನರಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಾಗಿರುವುದನ್ನು ಗಮನದಲ್ಲಿಟ್ಟುಕೊಂಡು ಸಮಿತಿಯು ಈ ನಿರ್ಣಯ ಕೈಗೊಂಡಿದೆ.

ಕುಸ್ತಿಪಟುಗಳ ಧರಣಿ, ಗೆಲುವಿಗೆ ಪಕ್ಷಗಳ ‘ಪಟ್ಟು’

ಪ್ರಜಾವಾಣಿ ವಾರ್ತೆ

ನವದೆಹಲಿ: ಜಂತರ್ ಮಂತರ್‌ನಲ್ಲಿ ಕುಸ್ತಿಪಟುಗಳು ನಡೆಸುತ್ತಿರುವ ಪ್ರತಿಭಟನೆಗೆ ಬೆಂಬಲ ಸೂಚಿಸುವ ಮೂಲಕ ಪರಿಸ್ಥಿತಿಯ ಲಾಭ ಪಡೆಯಲು ಕಾಂಗ್ರೆಸ್ ಮತ್ತು ಎಎಪಿ ಯತ್ನಿಸುತ್ತಿದ್ದರೆ, ಬಿಜೆಪಿ ಈ ಯತ್ನಕ್ಕೆ ಪ್ರತ್ಯುತ್ತರ ನೀಡಲು ಯತ್ನಿಸುತ್ತಿದೆ. ಕುಸ್ತಿಪಟುಗಳ ಧರಣಿಯ ‘ಅಖಾಡ’ದಲ್ಲಿ ಗೆಲುವಿಗಾಗಿ ಪಕ್ಷಗಳು ಮಾತಿನ ಪಟ್ಟು ಬಳಸುತ್ತಿವೆ.

ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ವಿರುದ್ಧ ಲೈಂಗಿಕ ಕಿರುಕುಳ ಆರೋಪಕ್ಕೆ ಸಂಬಂಧಿಸಿ ಕ್ರಮಕ್ಕೆ ಆಗ್ರಹಪಡಿಸಿ ನಡೆಸುತ್ತಿರುವ ಧರಣಿ ಕೈಬಿಡಲು ಕುಸ್ತಿಪಟುಗಳು ನಿರಾಕರಿಸಿದ್ದಾರೆ. ಇದರ ಹಿಂದೆಯೇ ಧರಣಿ ನಡೆಸುತ್ತಿದ್ದ ಜಂತರ್ ಮಂತರ್‌ನ ಸ್ಥಳಕ್ಕೆ ವಿರೋಧ ಪಕ್ಷಗಳ ನಾಯಕರು ಭೇಟಿ ನೀಡಲಾರಂಭಿಸಿದ್ದಾರೆ.

7ನೇ ಪುಟ ನೋಡಿ





‘ನೀಟ್’: ಸುಗಮ ಪರೀಕ್ಷೆಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಮೇ 7ರಂದು ‘ನೀಟ್’ ಪರೀಕ್ಷೆ ನಡೆಯುತ್ತಿದ್ದು, ಅಂದೇ ಪ್ರಧಾನಿ ನರೇಂದ್ರ ಮೋದಿ ನಗರದಲ್ಲಿ ರೋಡ್ ಶೋ ನಡೆಸುತ್ತಿದ್ದಾರೆ. ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ತೆರಳಲು ಅಡೆತಡೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್ಒ) ಪದಾಧಿಕಾರಿಗಳು ಮುಖ್ಯ ಚುನಾವಣಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

ಅಂದು ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ‘ನೀಟ್’ ಪರೀಕ್ಷೆ ಬರೆಯಲಿದ್ದಾರೆ. ಹಲವು ಪಕ್ಷಗಳು ಸಹ ರೋಡ್ ಶೋ ನಡೆಸುತ್ತಿವೆ. ಪರೀಕ್ಷಾ ಕೇಂದ್ರಕ್ಕೆ ತೆರಳುವ ವಿದ್ಯಾರ್ಥಿಗಳಿಗೆ ತೊಂದರೆಯಾಗುವ ಸಾಧ್ಯತೆಯಿದೆ. ಸಮಯಕ್ಕೆ ಸರಿಯಾಗಿ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರ ತಲುಪುವ ವ್ಯವಸ್ಥೆ ಮಾಡಬೇಕು. ಚುನಾವಣೆ ಅಧಿಕಾರಿಗಳು ಇತ್ತ ಗಮನ ಹರಿಸಬೇಕು ಎಂದು ಎಐಡಿಎಸ್ಒ ರಾಜ್ಯ ಅಧ್ಯಕ್ಷ ಕೆ.ಎಸ್. ಅಶ್ವಿನಿ, ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಮನವಿ ಮಾಡಿದ್ದಾರೆ.

26.5 ಕಿ.ಮೀ ಪ್ರಧಾನಿ ಮೋದಿ ರೋಡ್ ಶೋ ● ಬೆಳಿಗ್ಗೆ 8 ರಿಂದ 1 ರವರೆಗೆ ವಿಪರೀತ ದಟ್ಟಣೆ ಸಾಧ್ಯತೆ

35 ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆಯ ಮತದಾನ ದಿನ ಹತ್ತಿರವಾಗುತ್ತಿದ್ದು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನಗರದಲ್ಲಿ ಶನಿವಾರ 26.5 ಕಿ.ಮೀ ರೋಡ್ ಶೋ ನಡೆಸಿ ಬಿಜೆಪಿ ಅಭ್ಯರ್ಥಿಗಳ ಪರ ಮತಯಾಚಿಸಲಿದ್ದಾರೆ.

ಬೆಳಿಗ್ಗೆ 9 ಗಂಟೆಗೆ ಜೆ.ಪಿ.ನಗರದ ಬ್ರಿಗೇಡ್ ಮಿಲೆನಿಯಂ ರಸ್ತೆಯಿಂದ ರೋಡ್ ಶೋ ಆರಂಭವಾಗಲಿದ್ದು, ಮಧ್ಯಾಹ್ನ ಸ್ಯಾಂಕಿ ಟ್ಯಾಂಕ್ ಬಳಿ ಅಂತ್ಯವಾಗಲಿದೆ. ರೋಡ್ ಶೋ ಸಾಗುವ ಮಾರ್ಗ ಸೇರಿ 35 ರಸ್ತೆಗಳಲ್ಲಿ ಸಾರ್ವಜನಿಕರ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

‘ರೋಡ್ ಶೋ ವೇಳೆ 35 ರಸ್ತೆಗಳು ಹಾಗೂ ಅಕ್ಕ-ಪಕ್ಕದ ಒಳ ರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಶನಿವಾರ ಬೆಳಿಗ್ಗೆ 8 ರಿಂದ 1ರವರೆಗೆ ವಿಪರೀತ ದಟ್ಟಣೆ ಸಾಧ್ಯತೆ ಇದೆ. ಹೀಗಾಗಿ, ಸಾರ್ವಜನಿಕರು ಪರ್ಯಾಯ ರಸ್ತೆ ಬಳಸಬೇಕು’ ಎಂದು ಸಂಚಾರ ಪೊಲೀಸರು ಕೋರಿದ್ದಾರೆ.

‘ಸಾರ್ವಜನಿಕ ವಾಹನಗಳು ಹಾಗೂ ಸರಕು ಸಾಗಣೆ ವಾಹನಗಳು ನಿರ್ಬಂಧಿತ ರಸ್ತೆಯಲ್ಲಿ ಸಂಚರಿಸುವಂತಿಲ್ಲ. ಪ್ರತಿ ರಸ್ತೆಯಲ್ಲೂ ಪೊಲೀಸರ ಬಿಗಿ ಭದ್ರತೆ ಇರಲಿದೆ. ಭದ್ರತೆ ದೃಷ್ಟಿಯಿಂದ ಪೊಲೀಸರು ಸಾರ್ವಜನಿಕರನ್ನು ತಡೆದು ನಿಲ್ಲಿಸಬಹುದು. ಎಲ್ಲರೂ ಸಹಕರಿಸಬೇಕು’ ಎಂದು ಮನವಿ ಮಾಡಿದ್ದಾರೆ.

ಮರಗಳ ಟೊಂಗೆ ತೆರವು, ಬ್ಯಾರಿಕೇಡ್ ನಿಲುಗಡೆ: ರೋಡ್ ಶೋ ನಡೆಯುವ ಮಾರ್ಗದಲ್ಲಿ ಬಿಜೆಪಿ ಬಾವುಟ ಹಾಗೂ ಇತರೆ ಕಟೌಟ್‌ಗಳನ್ನು ನಿಲ್ಲಿಸುವುದಕ್ಕಾಗಿ ಮರಗಳ ಟೊಂಗೆಗಳನ್ನು ಶುಕ್ರವಾರ ಕತ್ತರಿಸಲಾಗಿದೆ. ಪ್ರಮುಖ ರಸ್ತೆಗಳ ಅಕ್ಕ–ಪಕ್ಕದಲ್ಲಿ ಬ್ಯಾರಿಕೇಡ್‌ಗಳನ್ನು ನಿಲ್ಲಿಸಲಾಗಿದೆ.

‘ಪ್ರಧಾನ ಮಂತ್ರಿ ರೋಡ್ ಶೋಗೆ ಅಡ್ಡಿಯಾಗಿರುವ ಮರದ ಟೊಂಗೆಗಳನ್ನು ಕತ್ತರಿಸಿ’ ಎಂದು ಬಿಬಿಎಂಪಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಅವರು ಆಂತರಿಕ ಕಚೇರಿ ಆದೇಶ ಹೊರಡಿಸಿದ್ದಾರೆ. ಇದನ್ನು ಖಂಡಿಸಿರುವ ಕೆಪಿಸಿಸಿ ಉಪಾಧ್ಯಕ್ಷ ಪಿ.ಆರ್. ರಮೇಶ್ ಅವರು ಚುನಾವಣಾಧಿಕಾರಿ ಅವರಿಗೆ ದೂರು ನೀಡಿದ್ದಾರೆ.

‘ಜೆ.ಪಿ.ನಗರ, ಜಯನಗರ, ಬಸವಗುಡಿ, ಮಾಗಡಿ ರಸ್ತೆ, ಬಸವೇಶ್ವರ ನಗರ, ರಾಜಾಜಿನಗರ, ಮಲ್ಲೇಶ್ವರ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ಹೆಚ್ಚಿನ ಬ್ಯಾರಿಕೇಡ್‌ಗಳನ್ನು ಹಾಕಲಾಗಿದೆ. ಇದರಿಂದಾಗಿ ಶುಕ್ರವಾರ ಮಧ್ಯಾಹ್ನದಿಂದಲೇ ಜನರ ಓಡಾಟಕ್ಕೆ ತೊಂದರೆ ಉಂಟಾಗಿದೆ’ ಎಂದು ಸಾರ್ವಜನಿಕರು ದೂರಿದರು.

ಮೋದಿ ಸಾಗುವ ಮಾರ್ಗದ ಅಂಗಡಿಗಳು ಹಾಗೂ ಎಲ್ಲ ತರಹದ ಮಳಿಗೆಗಳನ್ನೂ ಪೊಲೀಸರು ಬಂದ್ ಮಾಡಿಸುವ ಸಾಧ್ಯತೆ ಇದೆ.





ಜೆ.ಪಿ. ನಗರದ ಬಿಜೆಪಿ ಕಚೇರಿ ಬಳಿ ನಿರ್ಮಿಸಲಾಗಿರುವ ಪ್ರಧಾನಿ ನರೇಂದ್ರ ಮೋದಿ ಅವರ ಪ್ರತಿಮೆ (ಎಡಚಿತ್ರ) ಬಸವೇಶ್ವರನಗರ ಮುಖ್ಯ ರಸ್ತೆಯಲ್ಲಿ ಶುಕ್ರವಾರ ಬ್ಯಾರಿಕೇಡ್ ಅಳವಡಿಸಿದ ಕಾರಣ ಜನರ ಓಡಾಟಕ್ಕೆ ತೊಂದರೆ ಉಂಟಾಯಿತು —ಪ್ರಜಾವಾಣಿ ಚಿತ್ರಗಳು

‘ಸ್ವಾತಂತ್ರ್ಯ ಉದ್ಯಾನಕ್ಕೆ ಬನ್ನಿ’

‘ನಗರದ ಯಾವುದೇ ಭಾಗದಲ್ಲಿ ರ್‍ಯಾಲಿ, ಮೆರವಣಿಗೆ ಹಾಗೂ ಪ್ರತಿಭಟನೆ ನಡೆಸಲು ಪೊಲೀಸರು ಅವಕಾಶ ನೀಡುವುದಿಲ್ಲ. ಹಕ್ಕುಗಳಿಗಾಗಿ ಹೋರಾಟ ನಡೆಸುವವರು ಸ್ವಾತಂತ್ರ್ಯ ಉದ್ಯಾನದಲ್ಲಿ ಕುಳಿತುಕೊಳ್ಳುತ್ತಿದ್ದಾರೆ. ಇಂಥ ಸ್ಥಿತಿಯಲ್ಲಿ ನರೇಂದ್ರ ಮೋದಿ ನಗರದೆಲ್ಲೆಡೆ ರೋಡ್ ಶೋ ನಡೆಸುವುದು ಯಾವ ನ್ಯಾಯ? ಅದರ ಬದಲಿಗೆ ಸ್ವಾತಂತ್ರ್ಯ ಉದ್ಯಾನಕ್ಕೆ ಬನ್ನಿ’ ಎಂದು ಬಹುತ್ವ ಕರ್ನಾಟಕ ವೇದಿಕೆ ಸಂಘಟನೆಯ ಪದಾಧಿಕಾರಿಗಳು ಸವಾಲು ಹಾಕಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, ‘ಪ್ರಜೆಗಳಿಗೆ ಪ್ರತಿಭಟಿಸುವ ಹಕ್ಕನ್ನು ಕಸಿದುಕೊಂಡು ನೀವು ಮಾತ್ರ ರಾಜಾರೋಷವಾಗಿ ರೋಡ್ ಶೋ ನಡೆಸಬಹುದಾ?’ ಎಂದು ಪ್ರಶ್ನಿಸಿದ್ದಾರೆ.


ಎಲ್ಲೆಲ್ಲಿ ಸಂಚಾರ ನಿರ್ಬಂಧ

ರಾಜಭವನ ರಸ್ತೆ, ರಮಣ ಮಹರ್ಷಿ ರಸ್ತೆ, ಮೇಖ್ರಿ ವೃತ್ತ, ಜೆ.ಪಿ. ನಗರದ ಆರ್‌ಬಿಐ ಬಡಾವಣೆ ರಸ್ತೆ, ರೋಸ್ ಗಾರ್ಡನ್, ಶಿರ್ಸಿ ವೃತ್ತ, ಜೆ.ಜೆ. ನಗರ, ಬಿನ್ನಿ ಮಿಲ್ ರಸ್ತೆ, ಶಾಲಿನಿ ಮೈದಾನ, ಸೌತ್ ಎಂಡ್ ವೃತ್ತ, ಆರ್ಮುಗಂ ರಸ್ತೆ, ಬುಲ್ ಟೆಂಪಲ್ ರಸ್ತೆ, ರಾಮಕೃಷ್ಣ ಆಶ್ರಮ, ಉಮಾ ಟಾಕೀಸ್, ಟಿ.ಆರ್. ಮಿಲ್, ಚಾಮರಾಜ ಪೇಟೆ ಮುಖ್ಯರಸ್ತೆ, ಬಾಳೆಕಾಯ ಮಂಡಿ, ಕೆ.ಪಿ.ಅಗ್ರಹಾರ, ಮಾಗಡಿ ಮುಖ್ಯರಸ್ತೆ, ಚೋಳರಪಾಳ್ಯ, ಎಂ.ಸಿ. ವೃತ್ತ, ಪಶ್ಚಿಮ ಕಾರ್ಡ್ ರಸ್ತೆ, ಎಂ.ಸಿ. ಬಡಾವಣೆ, ನಾಗರಬಾವಿ ಮುಖ್ಯರಸ್ತೆ, ಬಿಜಿಎಸ್ ಆಟದ ಮೈದಾನ, ಹಾವನೂರು ಜಂಕ್ಷನ್, ಬಸವೇಶ್ವರನಗರ 8ನೇ ಮುಖ್ಯರಸ್ತೆ, 15ನೇ ಮುಖ್ಯರಸ್ತೆ, ಶಂಕರಮಠ ಜಂಕ್ಷನ್, ಮೋದಿ ಆಸ್ಪತ್ರೆ ರಸ್ತೆ, ಪಶ್ಚಿಮ ಕಾರ್ಡ್ ರಸ್ತೆ, ನವರಂಗ್ ಸಿನಿಮಂದಿರ ವೃತ್ತ, ಎಂ.ಕೆ.ಕೆ ರಸ್ತೆ, ಮಲ್ಲೇಶ್ವರ ವೃತ್ತ, ಸಂಪಿಗೆ ರಸ್ತೆ ಹಾಗೂ ಸ್ಯಾಂಕಿ ರಸ್ತೆ.

25 ಅಡಿ ಮೋದಿ ಪ್ರತಿಮೆ ನಿರ್ಮಾಣ

ರೋಡ್ ಶೋ ನಿಮಿತ್ತ ಜೆ.ಪಿ.ನಗರದ 24ನೇ ಮುಖ್ಯ ರಸ್ತೆಯ ಬಿಜೆಪಿ ಕಚೇರಿ ಬಳಿ ಮೋದಿ ಅವರ 25 ಅಡಿ ಉದ್ದದ ಪ್ರತಿಮೆ ನಿರ್ಮಾಣ ಮಾಡಲಾಗಿದೆ.

‘ಮೇಕ್ ಇನ್ ಇಂಡಿಯಾ’ ಕಲ್ಪನೆಯಲ್ಲಿ 3 ಟನ್ ತೂಕದ ಪ್ರತಿಮೆ ನಿರ್ಮಿಸಲಾಗಿದೆ. ಶುಕ್ರವಾರ ಕಾರ್ಮಿಕರು ಪ್ರತಿಮೆಗೆ ಅಂತಿಮ ಸ್ಪರ್ಶ ನೀಡಿದರು.



ಬಿಲಾವಲ್ ಭುಟ್ಟೊ ವಿರುದ್ಧ ಜೈಶಂಕರ್ ವಾಗ್ದಾಳಿ

ಬೆನೊಲಿಂ (ಗೋವಾ) (ಪಿಟಿಐ): ‘ಭಯೋತ್ಪಾದನೆಯ ಸಂತ್ರಸ್ತರು ಎಂದು ಹೇಳಿಕೊಳ್ಳುವವರು ಭಯೋತ್ಪಾದನೆಯಲ್ಲಿ ತೊಡಗಿರುವವರ ಜೊತೆ ಕುಳಿತುಕೊಳ್ಳುವುದಿಲ್ಲ. ಅವರೊಂದಿಗೆ ಉಗ್ರವಾದದ ಬಗ್ಗೆ ಚರ್ಚೆ ನಡೆಸುವುದಿಲ್ಲ’ ಎನ್ನುವ ಮೂಲಕ ಸಚಿವ ಎಸ್.ಜೈಶಂಕರ್ ಅವರು ಪಾಕಿಸ್ತಾನ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ವಿರುದ್ಧ ಶುಕ್ರವಾರ ವಾಗ್ದಾಳಿ ನಡೆಸಿದ್ದಾರೆ.

ಇಲ್ಲಿ ನಡೆಯುತ್ತಿರುವ ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ) ವಿದೇಶಾಂಗ ಸಚಿವರ ಸಮಾವೇಶದ ಸಂದರ್ಭದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಅವರು ಮಾತನಾಡಿದರು.

ಭಯೋತ್ಪಾದನೆ ವಿರುದ್ಧ ಹೋರಾಟ ಕೈಗೊಳ್ಳುವುದಕ್ಕೆ ಸಂಬಂಧಿಸಿ ಭಾರತ ಮತ್ತು ಪಾಕಿಸ್ತಾನ ನಡುವೆ ಮಾತುಕತೆ ನಡೆಯುವ ಸಾಧ್ಯತೆ ಕುರಿತ ಪ್ರಶ್ನೆಗೆ ಅವರು ಈ ರೀತಿ ಉತ್ತರಿಸಿದರು.

‘ಉಗ್ರವಾದ ಒಡ್ಡುತ್ತಿರುವ ಅಪಾಯ ಕುರಿತು ಭಯೋತ್ಪಾದನೆಗೆ ಉತ್ತೇಜನ, ಸಮರ್ಥನೆ ಮಾಡುವ ಹಾಗೂ ಅದರ ವಕ್ತಾರನಾಗಿರುವ ವ್ಯಕ್ತಿಯ ನಿಲುವಿನ ಬಗ್ಗೆ ಎಸ್‌ಸಿಒ ಸಮಾವೇಶದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ’ ಎಂದರು.

ಸುದೀಪ್‌ಗೆ ಬೆದರಿಕೆ: ‘ಕಿಚ್ಚ ಟ್ರಸ್ಟ್’ ಅಧ್ಯಕ್ಷ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಸುದೀಪ್ ಅವರಿಗೆ ಎರಡು ಅನಾಮಧೇಯ ಪತ್ರಗಳನ್ನು ಕಳುಹಿಸಿ ಬೆದರಿಕೆಯೊಡ್ಡಿದ್ದ ಆರೋಪದಡಿ ಸಿನಿಮಾ ನಿರ್ದೇಶಕ ರಮೇಶ್ ಕಿಟ್ಟಿ ಎಂಬುವವರನ್ನು ಸಿಸಿಬಿ ಪೊಲೀಸರು ಶುಕ್ರವಾರ ವಶಕ್ಕೆ ಪಡೆದಿದ್ದಾರೆ.

‘ಆರೋಪಿ ರಮೇಶ್ ಕಿಟ್ಟಿ, ಸುದೀಪ್ ಅವರ ಆಪ್ತ. ‘ಕಿಚ್ಚ ಸುದೀಪ್ ಚಾರಿಟಬಲ್ ಟ್ರಸ್ಟ್’ ಅಧ್ಯಕ್ಷನಾಗಿ ಕೆಲಸ ಮಾಡಿದ್ದ. ಹಣಕಾಸು ವಿಚಾರವಾಗಿ ಉಂಟಾಗಿದ್ದ ವೈಷಮ್ಯದಿಂದಾಗಿ ಸುದೀಪ್ ಅವರಿಗೆ ಪತ್ರ ಕಳುಹಿಸಿ ಬೆದರಿಸಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

‘ಕೃತ್ಯದ ಬಗ್ಗೆ ಪುರಾವೆಗಳು ಸಿಗುತ್ತಿದ್ದಂತೆ, ರಮೇಶ್ ಕಿಟ್ಟಿಗೆ ನೋಟಿಸ್ ನೀಡಲಾಗಿತ್ತು. ಅವರು ವಿಚಾರಣೆಗೆ ಬಂದಿದ್ದಾರೆ. ಸದ್ಯಕ್ಕೆ ವಶಕ್ಕೆ ಪಡೆದು ವಿಚಾರಣೆ ಮುಂದುವರಿಸಲಾಗಿದೆ. ಅವರ ಹೇಳಿಕೆ ಪಡೆದು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

₹ 2 ಕೋಟಿ ವಿಚಾರದ ವೈಷಮ್ಯಕ್ಕಾಗಿ ಕೃತ್ಯ: ‘ಕಿಚ್ಚ ಸುದೀಪ್ ಅಭಿಮಾನಿ ಆಗಿದ್ದ ರಮೇಶ್ ಕಿಟ್ಟಿ, ‘ಕಿಚ್ಚ ಸುದೀಪ್ ಚಾರಿಟಬಲ್ ಟ್ರಸ್ಟ್’ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ. ಸುದೀಪ್ ಅವರನ್ನು ನಂಬಿ ₹ 2 ಕೋಟಿಯನ್ನು ಟ್ರಸ್ಟ್‌ನಲ್ಲಿ ಹೂಡಿಕೆ ಮಾಡಿದ್ದ. ಆದರೆ, ಸುದೀಪ್ ಹಣ ಹಿಂದಿರುಗಿಸಿರಲಿಲ್ಲವೆಂದು ಗೊತ್ತಾಗಿದೆ. ಇದೇ ವಿಚಾರಕ್ಕೆ ರಮೇಶ್ ಸಿಟ್ಟಾಗಿದ್ದ. ‘ಒಂದು ಗತಿ ಕಾಣಿಸುತ್ತೇನೆ’ ಎಂದು ಹೇಳಿ ಟ್ರಸ್ಟ್‌ನಿಂದ ಹೊರಬಂದಿದ್ದ’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘₹ 2 ಕೋಟಿ ವ್ಯವಹಾರ ಸಂಬಂಧ ಯಾವುದೇ ಪುರಾವೆಗಳು ಸಿಕ್ಕಿಲ್ಲ. ತನಿಖೆ ಮುಂದುವರಿಸಲಾಗಿದೆ. ಅಗತ್ಯಬಿದ್ದರೆ ಸುದೀಪ್ ಅವರಿಂದಲೂ ಹೇಳಿಕೆ ಪಡೆಯಲಾಗುವುದು’ ಎಂದು ತಿಳಿಸಿವೆ.



ರಮೇಶ್ ಕಿಟ್ಟಿ ಹಾಗೂ ಸುದೀಪ್

ಅಪರಾಧ ಸುದ್ದಿ

ರೌಡಿ ಬೆದರಿಕೆ: ಮದುವೆಗೆ ಭದ್ರತೆ ಒದಗಿಸಲು ನಿರ್ದೇಶನ ನೀಡಿದ ಹೈಕೋರ್ಟ್

ಬೆಂಗಳೂರು: ರೌಡಿ ಬೆದರಿಕೆ ಹಾಕಿರುವ ಹಿನ್ನೆಲೆಯಲ್ಲಿ ಯುವತಿಯೊಬ್ಬಳ ಮದುವೆಗೆ ಭದ್ರತೆ ಕಲ್ಪಿಸುವಂತೆ ಕೆಂಗೇರಿ ಠಾಣಾ ಪೊಲೀಸರಿಗೆ ಹೈಕೋರ್ಟ್ ನಿರ್ದೇಶಿಸಿದೆ.

‘ನನ್ನ ಮದುವೆಗೆ ಭದ್ರತೆ ಕಲ್ಪಿಸಲು ಪೊಲೀಸರಿಗೆ ನಿರ್ದೇಶಿಸಬೇಕು’ ಎಂದು ಕೋರಿ ನಗರದ ಯುವತಿಯೊಬ್ಬರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ರಜಾಕಾಲದ ಏಕಸದಸ್ಯ ಪೀಠದ ನ್ಯಾಯಮೂರ್ತಿ ಎನ್.ಎಸ್. ಸಂಜಯ ಗೌಡ ಅವರು ಈ ಕುರಿತಂತೆ ಆದೇಶಿಸಿದ್ದಾರೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಡಿ.ಮೋಹನ್ ಕುಮಾರ್, ‘ಅರ್ಜಿದಾರಳ ತಂದೆಯ ಜೊತೆಗೆ ಶಿವರಾಜ್ ಗೌಡ ಎಂಬುವರು 2014ರಿಂದಲೂ ವ್ಯಾಪಾರ ವಹಿವಾಟು ಭಾಗೀದಾರರಾಗಿದ್ದರು. ಹಣಕಾಸು ವಿಚಾರವಾಗಿ ಇಬ್ಬರ ನಡುವೆ ಭಿನ್ನಾಭಿಪ್ರಾಯ ಉಂಟಾಗಿತ್ತು. ಇದರಿಂದ ಶಿವರಾಜ್ ಗೌಡ, ಅರ್ಜಿದಾರಳ ಮನೆಗೆ ಬಂದು ಕುಟುಂಬದ ಸದಸ್ಯರಿಗೆ ಜೀವ ಬೆದರಿಕೆ ಒಡ್ಡಿದ್ದಾರೆ. ವರನ ಕಡೆಯವರಿಗೆ ಅರ್ಜಿದಾರಳ ನಕಲಿ ಫೋಟೋಗಳನ್ನು ತೋರಿಸಿ ಮದುವೆ ನಿಲ್ಲಿಸಲಾಗುವುದು ಮತ್ತು ಕಲ್ಯಾಣ ಮಂಟಪದಿಂದಲೇ ಅಪಹರಿಸಲಾಗುವುದು ಎಂದು ಬೆದರಿಕೆ ಹಾಕಿದ್ದಾರೆ‘ ಎಂದರು.

‘ಶಿವರಾಜ್ ಗೌಡನ ಉದ್ದೇಶವನ್ನು ತಿಳಿದು ಅರ್ಜಿದಾರರು ಮೇ 9 ಮತ್ತು 10ರಂದು ಮದುವೆ ನಡೆಯುವಾಗ ಭದ್ರತೆ ಕಲ್ಪಿಸಬೇಕು ಎಂದು ಮೇ 1ರಂದು ಕೆಂಗೇರಿ ಠಾಣಾ ಪೊಲೀಸರಿಗೆ ಕೋರಿದ್ದಾರೆ. ಈ ಕೋರಿಕೆಯನ್ನು ಪರಿಗಣಿಸಿ ಸೂಕ್ತ ಕ್ರಮ ಜರುಗಿಸುವಂತೆ ಪೊಲೀಸರಿಗೆ ನಿರ್ದೇಶಿಸಬೇಕು‘ ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸರ್ಕಾರದ ಪರ ವಕೀಲರು ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಂಗೇರಿ ಠಾಣಾ ಪೊಲೀಸ್ ಇನ್‌ಸ್ಪೆಕ್ಟರ್ ಇದೇ 4ರಂದು ಬರೆದಿದ್ದ ಪತ್ರವನ್ನು ನ್ಯಾಯಪೀಠಕ್ಕೆ ಹಾಜರುಪಡಿಸಿದರು.

‘ಅರ್ಜಿದಾರರ ಮನವಿಗೆ ಸಂಬಂಧಿಸಿದಂತೆ ಇದೇ 9 ಮತ್ತು 10ರಂದು ಠಾಣಾ ವ್ಯಾಪ್ತಿಯಲ್ಲಿ ಎರಡು ಹೊಯ್ಸಳ ವಾಹನಗಳನ್ನು ಗಸ್ತಿಗೆ ನಿಯೋಜಿಸಲಾಗುತ್ತಿದೆ. ಒಂದು ವೇಳೆ ಮದುವೆ ನಡೆಯುವಾಗ ತೊಂದರೆಯಾದರೆ ತಕ್ಷಣವೇ 112ಕ್ಕೆ ಕರೆ ಮಾಡಬಹುದು‘ ಎಂದು ತಿಳಿಸಿದರು.

ರಾಜಕಾರಣಿಗಳಿಗೆ ಉಡುಗೊರೆ: ಚಿನ್ನಾಭರಣ ಪಡೆದು ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆ ಪ್ರಚಾರಕ್ಕಾಗಿ ಬರುವ ರಾಜಕೀಯ ಮುಖಂಡರಿಗೆ ಉಡುಗೊರೆ ನೀಡಲೆಂದು 3 ಕೆ.ಜಿ 653 ಗ್ರಾಂ ಚಿನ್ನಾಭರಣ ಪಡೆದು, ಅದನ್ನು ವಾಪಸು ಕೇಳಿದ್ದಕ್ಕೆ ₹ 85 ಲಕ್ಷ ಸುಲಿಗೆ ಮಾಡಿದ್ದ ಆರೋಪಿ ಅಭಯ್ ಜೈನ್ ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಸಿ.ಟಿ. ಸ್ಟ್ರೀಟ್‌ನಲ್ಲಿರುವ ಅರಿಹಂತ್ ಆಭರಣ ಮಳಿಗೆ ಮಾಲೀಕ ವಿಶಾಲ್ ಜೈನ್ ಅವರು ವಂಚನೆ ಬಗ್ಗೆ ಸಿಟಿ ಮಾರ್ಕೆಟ್ ಠಾಣೆಗೆ ದೂರು ನೀಡಿದ್ದರು. ಅವರ ದೊಡ್ಡಪ್ಪನ ಮಗನ ಪತ್ನಿಯ ಸಂಬಂಧಿ ಅಭಯ್ ಜೈನ್, ಕಿರಣ್ ಪಗಾರಿಯಾ ಲೋಡಾ, ಸಂಕೇತ್, ನವೀನ್ ದನಿ, ಚರಣ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡು ಅಭಯ್ ಜೈನ್‌ನನ್ನು ಬಂಧಿಸಲಾಗಿದ್ದು, ಉಳಿದವರು ತಲೆಮರೆಸಿಕೊಂಡಿದ್ದಾರೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಅಭಯ್, ಕಿರಣ್ ಹಾಗೂ ನಿತಿನ್, ಫೆ. 16ರಂದು ವಿಶ್ವಾಸ್ ಅವರ ಆಭರಣ ಮಳಿಗೆಗೆ ಹೋಗಿದ್ದರು. ‘ನಮಗೆಲ್ಲ ದೊಡ್ಡ ರಾಜಕಾರಣಿಗಳು ಪರಿಚಯವಿದ್ದಾರೆ. ವಿಧಾನಸಭೆ ಚುನಾವಣೆಗಳು ಹತ್ತಿರವಾಗುತ್ತಿದ್ದು, ಪ್ರಚಾರಕ್ಕೆಂದು ಹೊರ ರಾಜ್ಯಗಳಿಂದ ಹಾಗೂ ಕೇಂದ್ರದಿಂದ ಮುಖಂಡರು ಕರ್ನಾಟಕಕ್ಕೆ ಬರಲಿದ್ದಾರೆ. ಅವರಿಗೆ ಉಡುಗೊರೆಯಾಗಿ ನೀಡಲು ಚಿನ್ನಾಭರಣಗಳು ಬೇಕಿವೆ. ನೀವು ಕೊಟ್ಟರೆ, ಹಣ ಕೊಡಿಸುತ್ತೇವೆ’ ಎಂದು ಅಭಯ್ ಹೇಳಿದ್ದ.’

‘ಆರೋಪಿಗಳ ಮಾತು ನಂಬಿದ್ದ ವಿಶ್ವಾಸ್, ಹಂತ ಹಂತವಾಗಿ ₹ 3 ಕೆ.ಜಿ 653 ಗ್ರಾಂ ಚಿನ್ನಾಭರಣ ನೀಡಿದ್ದರು. ಇದಾದ ನಂತರ, ಆರೋಪಿಗಳು ಹಣ ನೀಡಿರಲಿಲ್ಲ. ಸಂಪರ್ಕಕ್ಕೂ ಸಿಗದೇ ನಾಪತ್ತೆಯಾಗಿದ್ದರು’ ಎಂದು ಪೊಲೀಸರು ಹೇಳಿದರು.

ಪುನಃ ವಂಚನೆ: ‘ಆರೋಪಿಗಳನ್ನು ಪತ್ತೆ ಮಾಡಿದ್ದ ವಿಶ್ವಾಸ್, ‘ಹಣ ಕೊಡಿ. ಇಲ್ಲವಾದರೆ, ಆಭರಣ ವಾಪಸು ನೀಡಿ’ ಎಂದಿದ್ದರು. ರಾಜಕೀಯ ಮುಖಂಡರಿಗೆ ಚಿನ್ನಾಭರಣ ನೀಡಿರುವುದಾಗಿ ಹೇಳಿದ್ದ ಆರೋಪಿಗಳು, ‘ನಮ್ಮ ಪರಿಚಯಸ್ಥರೊಬ್ಬರ ಬಳಿ 8 ಕೆ.ಜಿ ಚಿನ್ನದ ಗಟ್ಟಿ ಇದೆ. ಅದನ್ನು ನಿಮಗೆ ಕೊಡಿಸುತ್ತೇವೆ. ನಾವು ನೀಡಬೇಕಿರುವ ಹಣ ಕಡಿತ ಮಾಡಿಕೊಂಡು, ಉಳಿದ ₹ 50 ಲಕ್ಷವನ್ನು ಆತನಿಗೆ ಕೊಟ್ಟು ಕಳುಹಿಸಿ’ ಎಂಬುದಾಗಿ ಆರೋಪಿಗಳು ಹೇಳಿದ್ದರು’ ಎಂದು ಪೊಲೀಸರು ವಿವರಿಸಿದರು.

‘ಆರೋಪಿಗಳ ಮಾತು ನಂಬಿದ್ದ ವಿಶ್ವಾಸ್, ಚಿನ್ನದ ಗಟ್ಟಿ ಇದೆ ಎನ್ನಲಾದ ಬ್ಯಾಗ್ ಪಡೆದು ₹ 50 ಲಕ್ಷ ನೀಡಿದ್ದರು. ಮಳಿಗೆಗೆ ಹೋಗಿ ಪರಿಶೀಲಿಸಿದಾಗ, ಬ್ಯಾಗ್‌ನಲ್ಲಿ ಕಬ್ಬಿಣದ ತುಂಡುಗಳಿರುವುದು ಪತ್ತೆಯಾಗಿತ್ತು. ಪುನಃ ವಂಚನೆಯಾಗಿದ್ದಕ್ಕೆ ಆಕ್ರೋಶಗೊಂಡಿದ್ದ ವಿಶ್ವಾಸ್, ಚಿನ್ನಾಭರಣ ಹಾಗೂ ಹಣ ವಾಪಸು ನೀಡುವಂತೆ ಪಟ್ಟು ಹಿಡಿದಿದ್ದರು. ಜೊತೆಗೆ, ವಿ.ವಿ. ಪುರ ಠಾಣೆಗೂ ದೂರು ನೀಡಿದ್ದರು. ಅಭಯ್ ಜೈನ್ ಹಾಗೂ ಇತರರನ್ನು ಠಾಣೆಗೆ ಕರೆಸಿದ್ದ ಪೊಲೀಸರು, ವಿಚಾರಣೆ ಮಾಡಿದ್ದರು. ಹಣ ವಾಪಸು ಕೊಡುವುದಾಗಿ ಆರೋಪಿಗಳು ಭರವಸೆ ನೀಡಿದ್ದರು.’

‘ಆದರೆ, ಆರೋಪಿಗಳು ಹಣ ಕೊಟ್ಟಿರಲಿಲ್ಲ. ಅದನ್ನು ಪ್ರಶ್ನಿಸಿದ್ದಕ್ಕೆ ಜೀವ ಬೆದರಿಕೆಯೊಡ್ಡಿದ್ದರು. ‘ದೊಡ್ಡ ರಾಜಕಾರಣಿಗಳು ನಮ್ಮ ಜೊತೆಗಿದ್ದಾರೆ. ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ’ ಎಂದಿದ್ದ ಆರೋಪಿಗಳು ₹ 30 ಲಕ್ಷ ಸುಲಿಗೆ ಮಾಡಿದ್ದರು’ ಎಂದು ಪೊಲೀಸರು ಹೇಳಿದರು.

‘ಶ್ರೀಲಂಕಾದಲ್ಲಿ ಚಲನಚಿತ್ರ ಅಕಾಡೆಮಿ’

ನಾಗತಿಹಳ್ಳಿ ಚಂದ್ರಶೇಖರ್ ಅವರ ಚಲನಚಿತ್ರ ಉತ್ಸವ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತ ಸರ್ಕಾರದ ಸಹಕಾರದೊಂದಿಗೆ ಶ್ರೀಲಂಕಾದಲ್ಲಿ ಚಲನಚಿತ್ರ ಅಕಾಡೆಮಿ ಆರಂಭಿಸಲು ಯೋಜಿಸಲಾಗಿದೆ’ ಎಂದು ಶ್ರೀಲಂಕಾದ ವಾರ್ತಾ ಮತ್ತು ಸಾರಿಗೆ ಸಚಿವ ಬಂದುಲ ಗುಣವರ್ಧನೆ ತಿಳಿಸಿದರು.


ಶ್ರೀಲಂಕಾದ ಕೊಲಂಬೋದಲ್ಲಿ ಶ್ರೀಲಂಕಾ ಪ್ರವಾಸೋದ್ಯಮ ಉತ್ತೇಜನ ಮಂಡಳಿ, ಏಷಿಯಾ ಮಾಧ್ಯಮ ಮತ್ತು ಸಾಂಸ್ಕೃತಿಕ ಸಂಸ್ಥೆ, ಶ್ರೀಲಂಕಾ ಚಲನಚಿತ್ರ ಮಂಡಳಿ, ಭಾರತ ರಾಯಭಾರ ಕಚೇರಿ ಹಾಗೂ ವಿವೇಕಾನಂದ ಸಾಂಸ್ಕೃತಿಕ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಿದ್ದ ನಾಗತಿಹಳ್ಳಿ ಚಂದ್ರಶೇಖರ್ ಅವರ ಚಲನಚಿತ್ರ ಉತ್ಸವ ಉದ್ಘಾಟಿಸಿ ಮಾತನಾಡಿದರು.

‘ಶ್ರೀಲಂಕಾದ ಆರ್ಥಿಕ ಅಭಿವೃದ್ಧಿಗೆ ಚಲನಚಿತ್ರೋದ್ಯಮ ಮಹತ್ವದ ಸೇತುವೆಯಾಗಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಮಾತನಾಡಿ, ‘ಕನ್ನಡ ಚಲನಚಿತ್ರ ರಂಗವು ಇಂದು ವಿಶ್ವವ್ಯಾಪಿ ಜನಪ್ರಿಯತೆ ಪಡೆದುಕೊಂಡಿದೆ. ಕನ್ನಡದ ಚಲನಚಿತ್ರಗಳು ದೃಶ್ಯ ಮಾಧ್ಯಮದ ಮಹತ್ವವನ್ನು ಹೆಚ್ಚಿಸಿವೆ. ಚಲನಚಿತ್ರ ನನ್ನ ಪಾಲಿಗೆ ಮನರಂಜನೆಯ ಜೊತೆಗೆ ಸಮಾಜದ ಬಿಕ್ಕಟ್ಟುಗಳನ್ನು ನೋಡುಗರ ಮುಂದಿಡುವ ಮಾಧ್ಯಮವಾಗಿದೆ. ನನ್ನ ಚಲನಚಿತ್ರಗಳು ನನ್ನ ಒಳತೋಟಗಳ ಜತೆಗೆ ಸಾಮಾಜಿಕ ಅರಿವು ಮೂಡಿಸಲು ಪ್ರಯತ್ನಿಸಿವೆ’ ಎಂದರು.

ಶ್ರೀಲಂಕಾದಲ್ಲಿನ ಭಾರತದ ರಾಯಭಾರಿ ಗೋಪಾಲ ಭಾಗ್ಲೆ, ವಿವೇಕಾನಂದ ಸಾಂಸ್ಕೃತಿಕ ಸಂಸ್ಥೆ ನಿರ್ದೇಶಕ ಅಂಕುರನ್ ದತ್ತ, ಪ್ರವಾಸೋದ್ಯಮ ಪ್ರಚಾರ ಬ್ಯೂರೋದ ಉಪ ನಿರ್ದೇಶಕ ಚಮಿಂದ ಮುನಿಸಿಂಘೆ, ಚಲನಚಿತ್ರ ನಟರಾದ ನಿರೂಪ್ ಭಂಡಾರಿ, ಕಾವ್ಯಾ ಶೆಟ್ಟಿ, ಚಲನಚಿತ್ರ ತಂತ್ರಜ್ಞ ಎಸ್. ಕೆ. ರಾವ್, ನಿರ್ಮಾಪಕ ಶಂಕರೇಗೌಡ ಇದ್ದರು.

ಉತ್ಸವದಲ್ಲಿ ನಾಗತಿಹಳ್ಳಿ ಚಂದ್ರಶೇಖರ್ ಅವರ ನಿರ್ದೇಶನದ ಅಮೆರಿಕಾ ಅಮೆರಿಕಾ, ಇಷ್ಟಕಾಮ್ಯ, ಮಾತಾಡ್ ಮಾತಾಡ್ ಮಲ್ಲಿಗೆ ಹಾಗೂ ಕೊಟ್ರೇಶಿ ಕನಸು ಚಲನಚಿತ್ರಗಳನ್ನು ಪ್ರದರ್ಶಿಸಲಾಯಿತು.



ಶ್ರೀಲಂಕಾದಲ್ಲಿ ನಡೆದ ಕನ್ನಡ ಚಲನಚಿತ್ರೋತ್ಸವದಲ್ಲಿ ಶ್ರೀಲಂಕಾದ ವಾರ್ತಾ ಮತ್ತು ಸಾರಿಗೆ ಸಚಿವರಾದ ಬಂದುಲ ಗುಣವರ್ಧನೆ, ಚಲನಚಿತ್ರ ನಿರ್ದೇಶಕರಾದ ನಾಗತಿಹಳ್ಳಿ ಚಂದ್ರಶೇಖರ್, ಏಷ್ಯಾ ಮಾಧ್ಯಮ ಹಾಗೂ ಸಾಂಸ್ಕೃತಿಕ ಸಂಘದ ಅಧ್ಯಕ್ಷರಾದ ಉಪುಲ್ ಜಯಸಿಂಘೆ, ಶ್ರೀಲಂಕಾ ಚಲನಚಿತ್ರ ಮಂಡಳಿಯ ಅಧ್ಯಕ್ಷ ದೀಪಲ್ ಚಂದ್ರರತ್ನೆ, ವಿವೇಕಾನಂದ ಸಾಂಸ್ಕೃತಿಕ ಸಂಸ್ಥೆ ನಿರ್ದೇಶಕ ಪ್ರೊ ಅಂಕುರನ್ ದತ್ತ, ಪತ್ರಕರ್ತರಾದ ಜಿ. ಎನ್. ಮೋಹನ್, ಎಚ್. ಬಿ. ಮದನಗೌಡ ಇದ್ದಾರೆ.

12ರವರೆಗೆ ವಿಮಾನ ಸೇವೆ ರದ್ದುಪಡಿಸಿದ ಗೋ ಫಸ್ಟ್

ನವದೆಹಲಿ (ಪಿಟಿಐ): ಗೋ ಫಸ್ಟ್ ವಿಮಾನಯಾನ ಕಂಪನಿಯು ತನ್ನ ಎಲ್ಲ ವಿಮಾನಗಳ ಸೇವೆಯನ್ನು ಮೇ 12ರವರೆಗೆ ರದ್ದು ಮಾಡಿದೆ. ‘ಕಾರ್ಯಾಚರಣೆಗೆ ಸಂಬಂಧಿಸಿದ ಕಾರಣಗಳಿಂದಾಗಿ, ಮೇ 12ರವರೆಗೆ ವಿಮಾನ ಸೇವೆಗಳನ್ನು ರದ್ದು ಮಾಡಲಾಗಿದೆ’ ಎಂದು ಕಂಪನಿಯು ಟ್ವೀಟ್ ಮಾಡಿದೆ.

ಟಿಕೆಟ್ ಕಾಯ್ದಿರಿಸಿದ್ದವರಿಗೆ ಪೂರ್ಣ ಮೊತ್ತವನ್ನು ಮರಳಿಸಲಾಗುವುದು ಎಂದು ಹೇಳಿದೆ. ಕಂಪನಿಯು ತನ್ನಿಂದ ಹಣಕಾಸಿನ ಹೊಣೆಗಾರಿಕೆ ನಿಭಾಯಿಸಲು ಆಗುತ್ತಿಲ್ಲ ಎಂದು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಗೆ (ಎನ್‌ಸಿಎಲ್‌ಟಿ) ಅರ್ಜಿ ಸಲ್ಲಿಸಿದೆ.

ನಗರದಲ್ಲಿ ಇಂದು

ಈಶ್ವರಂಭಾ ದಿನಾಚರಣೆ: ಸಾಂಸ್ಕೃತಿಕ ಕಾರ್ಯಕ್ರಮಗಳು, ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ಬೆಳಿಗ್ಗೆ 8.30

ಪ್ರವಚನ ವಾಹಿನಿ: ‘ಭಗವದ್ಗೀತೆಯಲ್ಲಿ ಮನೋವಿಜ್ಞಾನ’ ಕುರಿತು ಉಪನ್ಯಾಸ: ಗ.ನ. ಭಟ್ಟ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಹರಿನಾಮ ಸಂಕೀರ್ತನೆ: ರಕ್ಷಿತಾ ಶರ್ಮಾ, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ್ ಪರಿಷತ್, ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 1ನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 7



ರಕ್ಷಿತಾ ಶರ್ಮಾ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ **nagaradalli_indu@prajavani.co.in**

109ನೇ ಸಂಸ್ಥಾಪನಾ ದಿನಾಚರಣೆ ಸಮಾರಂಭ

ಕಸಾಪ: ದತ್ತಿ ಪ್ರಶಸ್ತಿಗಳು ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 109ನೇ ಸಂಸ್ಥಾಪನಾ ದಿನಾಚರಣೆ ಸಮಾರಂಭದಲ್ಲಿ ಕಸಾಪ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಅವರಿಗೆ ‘ಶತಮಾನೋತ್ಸವ ದತ್ತಿ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಈ ಪ್ರಶಸ್ತಿಯು ₹ 50 ಸಾವಿರ ನಗದು ಒಳಗೊಂಡಿದೆ. ಕಸಾಪ ಸಿಬ್ಬಂದಿಗೆ ಮೀಸಲಿಟ್ಟಿರುವ ‘ಎನ್. ರಮಾದೇವಿ ವಿಶ್ವೇಶ್ವರಯ್ಯ ದತ್ತಿ ಪ್ರಶಸ್ತಿ’ಯನ್ನು ಎಚ್.ಮಂಜುಳಾ, ‘ವಿ. ಗೌರಮ್ಮ ಗಂಗಾಧರಯ್ಯ ಸಿಬ್ಬಂದಿ ಸೇವಾ ದತ್ತಿ ಪ್ರಶಸ್ತಿ’ಯನ್ನು ಎನ್. ಕೃಷ್ಣಮೂರ್ತಿ, ಎ. ಅಮರನಾಥ್, ನಾ. ಚಕ್ರಪಾಣಿ ಹಾಗೂ ಕೆ. ರಾಮೇಗೌಡ ಅವರಿಗೆ ನೀಡಿ ಗೌರವಿಸಲಾಯಿತು.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಮಾತನಾಡಿ, ‘ಕನ್ನಡ ಸಾಹಿತ್ಯ ಪರಿಷತ್ತಿಗೆ ತನ್ನದೇ ಆದ ಘನತೆ ಇದೆ. ಇತ್ತೀಚಿನ ದಿನಗಳಲ್ಲಿ ಇದಕ್ಕೆ ಭಂಗ ತರುವ ರೀತಿಯಲ್ಲಿ ಪ್ರಜಾಪ್ರಭುತ್ವವಿರೋಧಿ ಗುಂಪೊಂದು ವರ್ತಿಸುತ್ತಿದೆ. ವಾಕ್ ಸ್ವಾತಂತ್ರ್ಯದ ಹೆಸರಿನಲ್ಲಿ ಹಿಂಬಾಗಿಲಿನಿಂದ ಪರಿಷತ್ತಿನ ದೈನಂದಿನ ಚಟುವಟಿಕೆಗಳಲ್ಲಿ ಹಸ್ತಕ್ಷೇಪ ಮಾಡುವ ಈ ಗುಂಪಿನ ಪ್ರಯತ್ನಕ್ಕೆ ಎಂದಿಗೂ ಅವಕಾಶ ನೀಡುವುದಿಲ್ಲ’ ಎಂದರು.

ಮನು ಬಳಿಗಾರ್ ಮಾತನಾಡಿ, ‘ಕನ್ನಡ ಪರ ಹೋರಾಟಗಳಲ್ಲಿ ಪರಿಷತ್ತು ಸದಾ ಮಂಚೂಣಿಯಲ್ಲಿ ನಿಂತಿದೆ’ ಎಂದು ಹೇಳಿದರು. ನಾ.ಚಕ್ರಪಾಣಿ ಅವರು ಮಾತನಾಡಿದರು.





ಸಮಾರಂಭದಲ್ಲಿ ಮನು ಬಳಿಗಾರ್ ಅವರಿಗೆ ‘ಶತಮಾನೋತ್ಸವ ದತ್ತಿ ಪ್ರಶಸ್ತಿ’ಯನ್ನು ಲೇಖಕ ಪ್ರೊ.ಜಿ. ಅಬ್ದುಲ್ ಬಷೀರ್ ಪ್ರದಾನ ಮಾಡಿದರು. ಮಹೇಶ ಜೋಶಿ, ಕಸಾಪ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗಶೆಟ್ಟಿ, ಚಿಂತಕ ಎಂ.ಎಲ್. ಶಂಕರಲಿಂಗಪ್ಪ ಮತ್ತು ಪರಿಷತ್ತಿನ ಗೌರವ ಕಾರ್ಯದರ್ಶಿ ಪದ್ಮಿನಿ ನಾಗರಾಜು ಇದ್ದಾರೆ —ಪ್ರಜಾವಾಣಿ ಚಿತ್ರ

ಪದ್ಮನಾಭನಗರ: ಕಾಂಗ್ರೆಸ್‌ನ ‘ಹೊಂದಾಣಿಕೆ ಇಲ್ಲದ’ ಪೈಪೋಟಿ

• ಆರ್. ಮಂಜುನಾಥ್


ಆರ್‌.ಅಶೋಕ


ರಘುನಾಥ ನಾಯ್ಡು



ಫಲಿತಾಂಶದ ಹಿನ್ನೋಟ

ಕ್ಷೇತ್ರ	2008	2013	2018
ಪದ್ಮನಾಭಗರ	ಬಿಜೆಪಿ	ಬಿಜೆಪಿ	ಬಿಜೆಪಿ

ಬೆಂಗಳೂರು: ಪದ್ಮನಾಭನಗರ ವಿಧಾನ ಸಭೆ ಕ್ಷೇತ್ರದಲ್ಲಿ ಕಾಂಗ್ರೆಸ್ ಈ ಬಾರಿ ‘ಹೊಂದಾಣಿಕೆ ಇಲ್ಲದ’ ಹೋರಾಟ ನೀಡುವುದಾಗಿ ಘೋಷಿಸಿರುವುದ-ರಿಂದ, ಏಳನೇ ಬಾರಿ ವಿಧಾನಸಭೆ ಪ್ರವೇಶಿಸುವ ಉತ್ಸಾಹದಲ್ಲಿರುವ ಬಿಜೆಪಿಯ ಆರ್. ಅಶೋಕ ಅವರಿಗೆ ಹೆಚ್ಚಿನ ಪೈಪೋಟಿ ಎದುರಾಗಿದೆ.

ಕನಕಪುರದಲ್ಲಿ ತಮ್ಮೆದುರು ಸ್ಪರ್ಧಿಸಿರುವ ಅಶೋಕ ಅವರನ್ನು ಮಣಿಸಲು ಪಣತೊಟ್ಟಂತಿ ರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವ ಕುಮಾರ್, ರಘುನಾಥ ನಾಯ್ಡು ಅವ ರನ್ನು ಕಣಕ್ಕಿಳಿ-ಸಿರುವ ಅವರು, ‘ಇಲ್ಲಿ ನಾನೇ ಅಭ್ಯರ್ಥಿ’ ಎಂಬ ಸಂದೇಶ ರವಾನಿಸಿರುವುದರಿಂದ ಸೆಣಸಾಟ ಮತ್ತಷ್ಟು ಬಿಗಿಯಾಗಿದೆ.

ಅತಿದೊಡ್ಡ ಉತ್ತರಹಳ್ಳಿ ವಿಧಾನಸಭೆ ಕ್ಷೇತ್ರದಲ್ಲಿ ಮೂರು ಬಾರಿ ಗೆಲುವು ಕಂಡಿದ್ದ ಆರ್. ಅಶೋಕ, ಕ್ಷೇತ್ರ ಮರುವಿಂಗಡಣೆಯಾದ ನಂತರ ಪದ್ಮ-ನಾಭನಗರ ಆಯ್ಕೆ ಮಾಡಿಕೊಂಡರು. ಅಂದಿನಿಂದಲೂ ತೀವ್ರ ಪೈಪೋಟಿ ಇಲ್ಲದೆ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದಾರೆ. 2008ರಲ್ಲಿ ಜೆಡಿಎಸ್‌ನ ಕಬ್ಬಡ್ಡಿ ಬಾಬು, 2013ರಲ್ಲಿ ಕಾಂಗ್ರೆಸ್‌ನ ಎಲ್.ಎಸ್. ಚೇತನ್ ಗೌಡ ಹಾಗೂ 2018ರಲ್ಲಿ ಜೆಡಿಎಸ್‌ನ ವಿ.ಕೆ. ಗೋಪಾಲ್ ಅವರು ಪ್ರಮುಖ ಸ್ಪರ್ಧಿಗಳಾಗಿದ್ದರೂ ಪ್ರಬಲ ಪೈಪೋಟಿಯೇನೂ ನೀಡಿರಲಿಲ್ಲ.

‘ಹೊಂದಾಣಿಕೆ ರಾಜಕಾರಣದ ಕ್ಷೇತ್ರ’ ಎಂಬ ಇನ್ನೊಂದು ಹೆಸರು ಹೊಂದಿರುವ ಪದ್ಮನಾಭನಗರ ವಿಧಾನಸಭೆ ಕ್ಷೇತ್ರದಲ್ಲಿ ಅಂತಹ ರಾಜಕಾರಣ ಈ ಬಾರಿ ಇಲ್ಲ ಎಂದು ಬಹಿರಂಗವಾಗಿಯೇ ಕಾಂಗ್ರೆಸ್ ಹೇಳಿಕೊಂಡಿದೆ. ಹೀಗಾಗಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಆಪ್ತರಾಗಿರುವ, ವೃತ್ತಿಯಲ್ಲಿ ಗುತ್ತಿಗೆದಾರರಾಗಿರುವ ವಿ. ರಘುನಾಥ ನಾಯ್ಡು ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. ಸಮುದಾಯದ ಆಧಾರದಲ್ಲಿ ಎಲ್ಲ ಮತಗಳನ್ನೂ ಸೆಳೆಯುವ ತಂತ್ರ ಕಾಂಗ್ರೆಸ್‌ನದ್ದಾಗಿದೆ.

ಅಶೋಕ ಅವರಿಗೆ ಸ್ಥಳೀಯ ಕಾರ್ಪೊರೇಟರ್‌ಗಳೇ ಬೆನ್ನೆಲುಬು. ಪ್ರತಿ ಬಾರಿಯೂ ಇಲ್ಲಿ ಕಾರ್ಪೊ ರೇಟರ್‌ಗಳು ಚುನಾವಣೆ ನಡೆಸುತ್ತಾರೆ. ಈ ಬಾರಿ ಟಿಕೆಟ್ ಆಕಾಂಕ್ಷಿಯಾಗಿದ್ದ ಎನ್‌.ಆರ್. ರಮೇಶ್ ಆರಂಭದಲ್ಲಿ ಒಂದಷ್ಟು ಪ್ರತಿರೋಧ ತೋರಿದರು. ಆದರೆ, ನಂತರ ಪಕ್ಷದ ಸಿದ್ಧಾಂತ ಎಂದು ಅಶೋಕ ಅವರೊಂದಿಗೆ ಸೇರಿಕೊಂಡಿರುವುದು ಮೇಲ್ನೋಟಕ್ಕೆ ಭಿನ್ನಮತ ಶಮನಗೊಂಡಂತಾಗಿದೆ. ಹೀಗಾಗಿ, ಕನಕಪುರ ವಿಧಾನಸಭೆ ಕ್ಷೇತ್ರದಲ್ಲಿ ಅಶೋಕ ಒಂದಷ್ಟು ಗಮನಹರಿಸಲು ಸಾಧ್ಯವಾಗಿದೆ.

ಪದ್ಮನಾಭನಗರದಲ್ಲಿ ಮೂರು ಬಾರಿ ಗೆಲುವು ಸಾಧಿಸಿ, ಉಪ ಮುಖ್ಯಮಂತ್ರಿ, ಗೃಹಮಂತ್ರಿ, ಕಂದಾಯ ಸಚಿವ ಸೇರಿದಂತೆ ಹಲವು ಖಾತೆಗಳನ್ನು ಹೊಂದಿದ್ದ ಅಶೋಕ ಅವರು ಕ್ಷೇತ್ರವನ್ನು ಮಾದರಿಯನ್ನಾಗಿ ರೂಪಿಸಿಲ್ಲ ಎಂಬ ಕೊರಗು ಮತ ದಾರರಲ್ಲಿ ಇನ್ನೂ ಇದೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಕಾಂಗ್ರೆಸ್ ಅಭ್ಯರ್ಥಿ ರಘುನಾಥ ನಾಯ್ಡು, ಮಾಡಬೇಕಾಗಿರುವ ಅಭಿವೃದ್ಧಿ ಕಾರ್ಯಗಳ ಪಟ್ಟಿಯನ್ನೇ ಜನರ ಮುಂದಿಟ್ಟು ಮತಯಾಚನೆ ಮಾಡುತ್ತಿದ್ದಾರೆ.

ಡಿ.ಕೆ. ಶಿವಕುಮಾರ್ ಸೋದರ ಸಂಸದ ಡಿ.ಕೆ. ಸುರೇಶ್ ಅವರು ಈ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಾರೆ ಎಂಬ ವದಂತಿ ಕೊನೆಕ್ಷಣದವರೆಗೂ ಇತ್ತು. ಕೊನೆಗೆ ರಘುನಾಥ ನಾಯ್ಡು ಕಣದಲ್ಲಿ ಉಳಿದರು. ಶಿವಕುಮಾರ್ ಅವರ ರ‍್ಯಾಲಿ ಸಂದರ್ಭದಲ್ಲಿ ಕಂಡು ಬಂದ ಜನಸಾಗರ ಬಿಜೆಪಿಯ ಕಾರ್ಯಕರ್ತರಲ್ಲಿ ಒಂದಷ್ಟು ಅಳಕು ಹುಟ್ಟಿಸಿದಂತೂ ನಿಜ ಎನ್ನುತ್ತಾರೆ ಸ್ಥಳೀಯರು. ಕಳೆದ ಬಾರಿ ಕ್ಷೇತ್ರದಲ್ಲಿ ನಾಯ್ಡು ಸಮುದಾಯದ ಜೆಡಿಎಸ್ ಅಭ್ಯರ್ಥಿ ಎರಡನೇ ಸ್ಥಾನ ಪಡೆದಿದ್ದರು. ಈ ಬಾರಿ ಕಾಂಗ್ರೆಸ್ ಅದರ ಲಾಭ ಪಡೆದುಕೊಳ್ಳಲು ಪ್ರಯತ್ನಿಸುತ್ತಿ-ದೆ. ಹೀಗಾಗಿ, ಪದ್ಮನಾಭನಗ-ರದಲ್ಲಿ ಅಶೋಕ ಅವರಿಗೆ ರಘುನಾಥ ನಾಯ್ಡು ಪ್ರಬಲ ಪೈಪೋಟಿ ನೀಡಲಿದ್ದಾರೆ.

‘30 ವರ್ಷದಿಂದ ಸ್ಥಳೀಯವಾಗಿ ಜನರೊಂದಿಗೆ ಕೆಲಸ ಮಾಡಿದ್ದೇನೆ. ಅವರ ಸಮಸ್ಯೆಗಳ ಅರಿವು ನನಗಿದೆ’ ಎನ್ನುವ ಜೆಡಿಎಸ್‌ನ ಮಂಜುನಾಥ್ ಬಂಜಾರಪಾಳ್ಯ ಕಣದಲ್ಲಿದ್ದಾರೆ. ಇವ ರಲ್ಲದೆ, ಆಮ್ ಆದ್ಮಿ ಪಾರ್ಟಿಯ ಅಜಯ್ ಗೌಡ, ಬಿಎಸ್‌ಪಿಯ ಮೊಹ ಮ್ಮದ್ ಇದ್ರಿಸ್ ಕೆ.ಎಸ್, ಸಮಾಜವಾದಿ ಪಾರ್ಟಿಯ ಅಫ್‌ಸರ್ ಖಾನ್ ಸೇರಿದಂತೆ 13 ಮಂದಿ ಕಣದಲ್ಲಿದ್ದಾರೆ.

ಸಾಕ್ಷಾತ್ ಸಮೀಕ್ಷೆ


ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ: ಸಮಸ್ಯೆಗಳದ್ದೇ ಚರ್ಚೆ

ಅಶ್ವತ್ಥ್–ಅನೂಪ್ ಹಣಾಹಣಿ

• ಎಸ್. ರವಿಪ್ರಕಾಶ್


ಅಶ್ವತ್ಥ ನಾರಾಯಣ


ಅನೂಪ್ ಅಯ್ಯಂಗಾರ್



ಫಲಿತಾಂಶದ ಹಿನ್ನೋಟ

ಕ್ಷೇತ್ರ	2008	2013	2018
ಮಲ್ಲೇಶ್ವರ	ಬಿಜೆಪಿ	ಬಿಜೆಪಿ	ಜೆಡಿಎಸ್

ಬೆಂಗಳೂರು: ಮಧ್ಯಮವರ್ಗ ಮತ್ತು ವಿದ್ಯಾವಂತ ಮತದಾರರೇ ಹೆಚ್ಚಾಗಿರುವ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ ಈ ಬಾರಿ ಕುತೂಹಲ ಕೆರಳಿಸಿದೆ. ಸಾಕಷ್ಟು ಅಭಿವೃದ್ಧಿ ಹೊಂದಿರುವ ಕ್ಷೇತ್ರವೆಂದು ಹೇಳಲಾಗಿದ್ದರೂ ಇಲ್ಲಿ ಸಮಸ್ಯೆಗಳಿಗೆ ಕೊರತೆ ಇಲ್ಲ. ಈಗ ಕ್ಷೇತ್ರದಲ್ಲಿ ಇದೇ ಚರ್ಚೆಯ ವಸ್ತು.

ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್. ಅಶ್ವತ್ಥನಾರಾಯಣ ವಿರುದ್ಧ ಕಾಂಗ್ರೆಸ್ ಪಕ್ಷ ಯುವ ಉದ್ಯಮಿ ಅನೂಪ್ ಅಯ್ಯಂಗಾರ್ ಅವರನ್ನು ಕಣಕ್ಕೆ ಇಳಿಸಿದೆ. ಜೆಡಿಎಸ್‌ನಿಂದ ಉತ್ಕರ್ಷ ಸ್ಪರ್ಧಿಸಿದ್ದಾರೆ. ಇಬ್ಬರೂ ಕ್ಷೇತ್ರಕ್ಕೆ ಹೊಸ ಮುಖಗಳು. ನಾಲ್ಕು ಬಾರಿ ಗೆದ್ದು, ಉಪಮುಖ್ಯಮಂತ್ರಿಯೂ ಆಗಿದ್ದ ಅಶ್ವತ್ಥನಾರಾಯಣ ಅವರನ್ನು ಮಣಿಸಲು ಕಾಂಗ್ರೆಸ್‌ನ ಅನೂಪ್ ತುರುಸಿನ ಸ್ಪರ್ಧೆ ನೀಡಿದ್ದಾರೆ. ಬಿಎಸ್‌ಪಿ ಯಿಂದ ಅಬ್ದುಲ್ ಸುಹೇಲ್ ಅಹ ಮದ್, ಕರ್ನಾಟಕ ರಾಷ್ಟ್ರ ಸಮಿತಿ ಯಿಂದ ರಾಜೇಶ್ ಬಿ; ಆಮ್ ಆದ್ಮಿ ಪಾರ್ಟಿ ಯಿಂದ ಸುಮನ್ ಸ್ಪರ್ಧಿ-ಸಿದ್ದಾರೆ.

ಅಶ್ವತ್ಥನಾರಾಯಣ ಅವರು ತಾವು ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಕೈಗೊಂಡ ಅಭಿವೃದ್ಧಿ ಮತ್ತು ಮುಂದೆ ಕೈಗೊಳ್ಳಲಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಜನರ ಬಳಿ ಹೇಳಿಕೊಂಡು ಮತಯಾಚಿಸುತ್ತಿ-ದ್ದರೆ, ಅನೂಪ್ ಅವರು ತಾವು ಗೆದ್ದರೆ ಮಾಡಲಿರುವ ವಿನೂತನ ಅಭಿವೃದ್ಧಿ ಕಾರ್ಯಗಳ ‘ಮಾರ್ವಲೆಸ್ ಮಲ್ಲೇಶ್ವರ’, ಪಕ್ಷದ ‘ಗ್ಯಾರಂಟಿ’ ಹೆಸರಿನಲ್ಲಿ ಮತ ಕೇಳುತ್ತಿದ್ದಾರೆ. ಜೆಡಿಎಸ್ ಅಭ್ಯರ್ಥಿ ಪಕ್ಷದ ‘ಪಂಚರತ್ನ’ ಕಾರ್ಯಕ್ರಮದ ಹೆಸರಿನಲ್ಲಿ ತಮ್ಮನ್ನು ಬೆಂಬಲಿಸುವಂತೆ ಮನವಿ ಮಾಡುತ್ತಿದ್ದಾರೆ. ಆದರೆ, ಇಲ್ಲಿ ಜೆಡಿಎಸ್‌ಗೆ ನೆಲೆ ಇಲ್ಲ.

‘ಕ್ಷೇತ್ರದಲ್ಲಿ ನಡೆದಿರುವ ಅಭಿವೃದ್ಧಿ ಕಾಮಗಾರಿಗಳಲ್ಲಿ ಭಾರಿ ಅಕ್ರಮಗಳು ನಡೆದಿದೆ ಮತ್ತು ಕಾಮಗಾರಿಗಳೂ ಕಳಪೆ ಮಟ್ಟದ್ದಾಗಿವೆ. ಸ್ಯಾಂಕಿ ಕೆರೆ ಅಭಿವೃದ್ಧಿ ಹೆಸರಲ್ಲಂತೂ ಹಲವು ವರ್ಷಗಳಿಂದ ಕಾಮಗಾರಿಗಳು ನಡೆಯುತ್ತಲೇ ಇವೆ. ಇದಕ್ಕೆ ಕೊನೆ ಎಂಬುದು ಇಲ್ಲವೇ’ ಎಂದು ಅನೂಪ್ ಅವರು ಮತದಾರರ ಮುಂದೆ ಪ್ರಶ್ನಿಸುತ್ತಿದ್ದಾರೆ.

ಅಲ್ಲದೇ, ಸ್ಯಾಂಕಿ ಕೆರೆಯ ಬಳಿ ಫ್ಲೈಓವರ್ ನಿರ್ಮಿಸುವ ಬಿಬಿಎಂಪಿ ನಿರ್ಧಾರಕ್ಕೆ ಕ್ಷೇತ್ರದಲ್ಲಿ ವ್ಯಾಪಕ ವಿರೋಧವಿದೆ. ಮಲ್ಲೇಶ್ವರಕ್ಕೆ ಅಗತ್ಯವೇ ಇಲ್ಲದ ಫ್ಲೈಓವರ್‌ನಿಂದ ಬಡಾವಣೆಯ ಸೌಂದರ್ಯವೂ ಕೆಟ್ಟು ಹೋಗುವುದರ ಜತೆಗೆ ಇನ್ನಷ್ಟು ಸಮಸ್ಯೆಗಳಿಗೂ ಕಾರಣವಾಗಲಿದೆ. ಸಂಚಾರದ ಒತ್ತಡ ಇಲ್ಲದಿದ್ದರೂ, ಫ್ಲೈಓವರ್ ನಿರ್ಮಾಣದ ಹಟವೇಕೆ? ಫ್ಲೈಓವರ್ ನಿರ್ಮಾಣ ಆದರೆ ಮರಗಳು ನಾಶವಾಗಲಿವೆ ಎಂಬುದು ಸ್ಯಾಂಕಿ ಕೆರೆ ಉಳಿಸಿ ಹೋರಾಟಗಾರರ ವಾದ. ಕಳೆದ ಚುನಾವಣೆ ಸಂದರ್ಭದಲ್ಲೂ ಫ್ಲೈಓವರ್ ವಿಷಯ ಜೀವಂತವಾಗಿತ್ತು. ಸಾಕಷ್ಟು ವಿರೋಧವಿದ್ದರೂ ಫ್ಲೈಓವರ್ ನಿರ್ಮಾಣಕ್ಕೆ ಬಿಬಿಎಂಪಿ ಮುಂದಾಗಿರು-ವುದರಿಂದ ಪರಿಸರ ಪ್ರಿಯರಲ್ಲಿ ಬೇಸರ ಉಂಟು ಮಾಡಿದೆ.

‘ಕ್ಷೇತ್ರದಲ್ಲಿ ರಸ್ತೆಗಳ ಸ್ಥಿತಿಗತಿ ಬಗ್ಗೆ ಜನರಲ್ಲಿ ಆಕ್ರೋಶವಿದೆ. ರಸ್ತೆ ಗುಂಡಿಗಳನ್ನು ಬಹಳ ಕಾಲ ಮುಚ್ಚಿರಲಿಲ್ಲ. ಇದರಿಂದ ಸಾಕಷ್ಟು ಅಪಘಾತಗಳೂ ಆಗಿವೆ’ ಎನ್ನುತ್ತಾರೆ ಅರಮನೆ ವಾರ್ಡ್‌ನ ವೆಂಕಟೇಶ್.

ಅಶ್ವತ್ಥನಾರಾಯಣ ಅವರು 2008 ರಿಂದ ಸತತವಾಗಿ ಮೂರು ಚುನಾವ-ಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಸೋಲಿಸಿದ್ದಾರೆ. 2008 ರಲ್ಲಿ ಎಂ.ಆರ್. ಸೀತಾರಾಮ್, 2013 ರಲ್ಲಿ ಬಿ.ಕೆ. ಶಿವರಾಮ್, 2018 ರಲ್ಲಿ ಕೆಂಗಲ್ ಶ್ರೀಪಾದರೇಣು ಅವರನ್ನು ಭಾರಿ ಮತಗಳ ಅಂತರದಿಂದ ಸೋಲಿಸಿದ್ದರು.

ಈ ಬಾರಿ ಮೇಲ್ನೋಟಕ್ಕೆ ಅಶ್ವ-ತ್ಥನಾರಾಯಣ ಅವರಿಗೆ ಗೆಲುವು ಸುಲಭದ ತುತ್ತು ಎನಿಸಿದರೂ, ಕ್ಷೇತ್ರದ ಮತದಾರರಲ್ಲಿ ಶಾಸಕರ ಬಗ್ಗೆ ಅಸಮಾಧಾನವೂ ಇದೆ. ಶಾಸಕರು ಹಿಂದೆಲ್ಲ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸು ತ್ತಿದ್ದರು. ಸಚಿವರಾದ ಬಳಿಕವಂತೂ ಸುಲಭವಾಗಿ ಯಾರ ಕೈಗೆ ಸಿಗುವುದಿಲ್ಲ ಎಂಬ ಭಾವನೆ ಸಾಮಾನ್ಯವಾಗಿದೆ.

ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ನೆಲೆ ಇದ್ದರೂ ಆ ಪಕ್ಷದ ಯಾವುದೇ ನಾಯಕರೂ ಪಟ್ಟಾಗಿ ಕುಳಿತು ಕ್ಷೇತ್ರದಲ್ಲಿ ತಮ್ಮ ಛಾಪು ಮೂಡಿಸುವ ಕೆಲಸ ಮಾಡಿಲ್ಲ. ಹೀಗಾಗಿ ಚುನಾವಣೆ ಬಂದಾಗಲಷ್ಟೇ ಸಕ್ರಿಯರಾಗು ತ್ತಾರೆ. ನಂತರ ಮರೆತು ಬಿಡುತ್ತಾರೆ. ಪ್ರತಿ ಬಾರಿಯೂ ಹೊಸ ಮುಖಗಳನ್ನು ಕಣಕ್ಕೆ ಇಳಿಸುತ್ತಾರೆ. ಚುನಾವಣೆ ಮುಗಿದ ಬಳಿಕ ಅವರು ನೇಪಥ್ಯಕ್ಕೆ ಸರಿದುಬಿ-ಡುತ್ತಾರೆ ಎಂಬ ಅಭಿಪ್ರಾಯ ಕಾಂಗ್ರೆಸ್ ಕಾರ್ಯಕರ್ತರದು.

ಅನೂಪ್ ಅಯ್ಯಂಗಾರ್ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರು. ಕ್ಷೇತ್ರ ದಲ್ಲಿ ಬ್ರಾಹ್ಮಣ, ಒಕ್ಕಲಿಗ ಮತ ಗಣ ನೀಯ ಸಂಖ್ಯೆಯಲ್ಲಿದೆ. ಬ್ರಾಹ್ಮಣರ-ಲ್ಲೂ ಅಯ್ಯಂಗಾರ್‌ಗಳ ಸಂಖ್ಯೆ ಅಧಿಕ. ಇವರು ಕಾಂಗ್ರೆಸ್ ಅಭ್ಯರ್ಥಿಯ ಕೈ ಹಿಡಿಯುವರೋ ಕಾದು ನೋಡಬೇಕು.


ಸರ್ವಜ್ಞ ನಗರ: ಕಾಂಗ್ರೆಸ್ ಹಿಡಿತದ ಕೋಟೆಯಲ್ಲಿ ‘ಕಮಲ’ ಅರಳಿಸಲು ಯತ್ನ

‘ಸರ್ವರ’ ತೋಟದಲ್ಲಿ ಜಾರ್ಜ್–ರೆಡ್ಡಿ ಗುದ್ದಾಟ

• ರಾಜೇಶ್ ರೈ ಚಟ್ಲ


ಕೆ.ಜೆ.ಜಾರ್ಜ್


ಪದ್ಮನಾಭ ರೆಡ್ಡಿ



ಫಲಿತಾಂಶದ ಹಿನ್ನೋಟ

ಕ್ಷೇತ್ರ	2008	2013	2018
ಸರ್ವಜ್ಞ ನಗರ	ಕಾಂಗ್ರೆಸ್	ಕಾಂಗ್ರೆಸ್	ಕಾಂಗ್ರೆಸ್

ಬೆಂಗಳೂರು: ವಲಸಿಗರು, ಹಲವು ಭಾಷಿಕರು, ಬಹು ಧರ್ಮೀಯರು, ವಿವಿಧ ಸಂಸ್ಕೃತಿ, ಸಮುದಾಯದವರು ಇರುವ ‘ಸರ್ವರ’ ತೋಟ ‘ಸರ್ವಜ್ಞ ನಗರ’ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನಿಂದ ಮತ್ತೊಮ್ಮೆ ಶಾಸಕ ಕೆ.ಜೆ. ಜಾರ್ಜ್, ಬಿಜೆಪಿಯಿಂದ ಪದ್ಮನಾಭ ರೆಡ್ಡಿ ಗುದ್ದಾಟಕ್ಕಿಳಿದಿದ್ದಾರೆ. ಜೆಡಿಎಸ್‌ನಿಂದ ಮೊಹಮ್ಮದ್ ಮುಸ್ತಫಾ, ಎಎಪಿಯಿಂದ ಮೊಹಮ್ಮದ್ ಇಬ್ರಾಹಿಂ, ಎಸ್‌ಡಿಪಿಐಯಿಂದ ಅಬ್ದುಲ್ ಹನ್ನಾನ್ ಸೇರಿ ಒಟ್ಟು 15 ಕಲಿಗಳು ಕಣದಲ್ಲಿದ್ದ-ರೂ ಇಲ್ಲಿ ಜಾರ್ಜ್– ರೆಡ್ಡಿ ನಡುವೆಯೇ ನೇರ ಸ್ಪರ್ಧೆ.

ಕ್ಷೇತ್ರ ಪುನರ್ ವಿಂಗಡಣೆ (2008ರಲ್ಲಿ) ನಂತರ ಅಸ್ತಿತ್ವಕ್ಕೆ ಬಂದ ಈ ಕ್ಷೇತ್ರದಲ್ಲಿ ಈವರೆಗೆ ನಡೆದ ಮೂರೂ ಚುನಾವಣೆಗಳಲ್ಲಿ ಗೆದ್ದು, ತನ್ನ ಭದ್ರಕೋಟೆಯಾಗಿ ಮಾಡಿಕೊಂಡಿರುವ ಜಾರ್ಜ್, ಕಾಂಗ್ರೆಸ್‌ನ ಪ್ರಭಾವಿ ರಾಜಕಾರಣಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ನಾಗವಾರ, ಎಚ್‌ಬಿಆರ್ ಬಡಾವಣೆ, ಬಾಣಸವಾಡಿ, ಕಮ್ಮನಹಳ್ಳಿ, ಕಾಚರಕನಹಳ್ಳಿ, ಕಾಡು-ಗೊಂಡನಹಳ್ಳಿ, ಲಿಂಗರಾಜಪುರ ಮತ್ತು ಮಾರುತಿಸೇವಾ ನಗರ ಸೇರಿ ಎಂಟು ವಾರ್ಡ್‌ಗಳು ಈ ಕ್ಷೇತ್ರ ವ್ಯಾ-ಪ್ತಿಯಲ್ಲಿವೆ. ದೊಡ್ಡಮಟ್ಟದ ವ್ಯಾಪಾರ ವಹಿವಾಟಿಗೆ ಈ ಕ್ಷೇತ್ರ ಸಾಕ್ಷಿಯಾಗಿದ್ದು, ನೆರೆಯ ರಾಜ್ಯಗಳಿಂದ ಕೆಲಸ ಅರಸಿ ಬರುವ ಹೆಚ್ಚಿನ ಮಂದಿ ಇಲ್ಲಿ ಆಶ್ರಯ ಪಡೆದಿದ್ದಾರೆ. ಈ ಕಾರಣಕ್ಕಾಗಿಯೇ ತಮಿಳು ಮತ್ತು ಉರ್ದು ಭಾಷಿಕರು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅಭಿವೃದ್ಧಿ ಕಡಿಮೆ, ಸಮಸ್ಯೆಗಳು ಜಾಸ್ತಿ ಎನ್ನುವುದು ಇಲ್ಲಿನ ಮತದಾರರ ಆರೋಪ. ಹಲವು ಸೂಕ್ಷ್ಮಪ್ರದೇಶಗಳ-ನ್ನು ಹೊಂದಿರುವುದರಿಂದ ಕ್ಷೇತ್ರದಲ್ಲಿ ಅಪರಾಧ ಚಟುವಟಿಕೆಯೂ ಹೆಚ್ಚು.

ಚುನಾವಣೆಯಿಂದ ಚುನಾವಣೆಗೆ ಗೆಲುವಿನ ಅಂತರ ಹೆಚ್ಚಿಸುತ್ತಾ ಬಂದಿರುವುದು ಜಾರ್ಜ್ ಅವರು ಕ್ಷೇತ್ರದಲ್ಲಿ ಹೊಂದಿರುವ ಪಾರಮ್ಯಕ್ಕೆ ಸಾಕ್ಷಿ. 2008ರಲ್ಲಿ, ಅವರು ಇಲ್ಲಿಂದ ಮೊದಲ ಬಾರಿಗೆ ಗೆದ್ದಾಗ ಅಂತರ 22,608 ಇತ್ತು. 2013ರಲ್ಲಿ 22,853 ಏರಿಕೆಯಾದರೆ, 2018ರಲ್ಲಿ ಇಮ್ಮಡಿ (53,355) ಆಗಿತ್ತು. ಜಾರ್ಜ್ ಅವರು ಸಿದ್ದರಾಮಯ್ಯ ಸರ್ಕಾರದಲ್ಲಿ ಗೃಹ, ಬೆಂಗಳೂರು ಅಭಿವೃದ್ಧಿ ಖಾತೆಗಳನ್ನು ನಿಭಾಯಿಸಿದ್ದಾರೆ.

‘ಕಾಂಗ್ರೆಸ್ ಸಾಂಪ್ರದಾಯಿಕ ಮತಬ್ಯಾಂಕ್ ಎಂದೇ ಪರಿಗಣಿಸಲಾದ ಮುಸ್ಲಿಮರು, ತೆಲುಗು, ಮಲಯಾಳಿ, ತಮಿಳು ಭಾಷಿಕರು ಪ್ರತಿ ಚುನಾವಣೆಯಲ್ಲೂ ಜಾರ್ಜ್ ಬೆನ್ನಿಗೆ ನಿಲ್ಲುತ್ತಲೇ ಬಂದಿದ್ದಾರೆ. ಬಡ, ಮಧ್ಯಮ ವರ್ಗದವರೂ ಅವರ ಕೈಹಿಡಿದಿದ್ದಾರೆ. ಈ ಅಂಶಗಳ ಜೊತೆಗೆ, ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳ ಮೂಲಕ ಅವರು ಹೊಂದಿರುವ ಬಿಗಿಹಿಡಿತವ-ನ್ನು ಸಡಿಲಿಸಬೇಕಿದ್ದರೆ ಎದುರಾಳಿಗಳು ಸಾಕಷ್ಟು ಬೆವರು ಸುರಿಸಲೇಬೇಕು’ ಎನ್ನುತ್ತಾರೆ ಬಾಣಸವಾಡಿ ಅಬ್ದುಲ್ ರಹಿಮಾನ್.

‘ಶಾಲೆಗಳು, ಆಸ್ಪತ್ರೆಗಳು, ಕೌಶಲ ಅಭಿವೃದ್ಧಿ ಕೇಂದ್ರಗಳವರೆಗೆ ಕ್ಷೇತ್ರ-ದಾದ್ಯಂತ ಜನರ ಆಕಾಂಕ್ಷೆಗಳನ್ನು ಅವರು ಪೂರೈಸಿದ್ದಾರೆ. ಶಾಸಕರ ನಿಧಿ ಮತ್ತು ಸರ್ಕಾರಿ ಯೋಜನೆಗಳ ಅಡಿ ನಡೆಯುತ್ತಿರುವ ಕಾಮಗಾರಿ ಹೊರತುಪಡಿಸಿ, ತಮ್ಮ ಒಡೆತನದ ಕಂಪನಿಯ ಸಿಎಸ್‌ಆರ್ ನಿಧಿಯಿಂದ ಕೆಲಸಗಳನ್ನು ಮಾಡುತ್ತಿದ್ದಾರೆ’ ಎಂದು ಅವರ ಆಪ್ತರು ಹೇಳುತ್ತಾರೆ. ಜಾರ್ಜ್ ಬೆನ್ನಿಗಿರುವ ತಂಡ, ಕ್ಷೇತ್ರದಲ್ಲಿನ ಅಭಿವೃದ್ಧಿಯ ಪ್ರಚಾರದ ಜೊತೆಗೆ, ಇಲ್ಲಿನ ವಿವಿಧ ಸಮುದಾಯಗಳ-ನ್ನು ಓಲೈಸುತ್ತಲೇ ಮತಬೇಟೆಯಲ್ಲಿ ತಲ್ಲೀನವಾಗಿದೆ.

ಜಾರ್ಜ್ ಅಧಿಪತ್ಯ ಕೊನೆಗಾಣಿಸ-ಬೇಕೆಂದು ಬಿಜೆಪಿಯ ಪದ್ಮನಾಭ ರೆಡ್ಡಿ ಕ್ಷೇತ್ರವಿಡೀ ಓಡಾಡುತ್ತಿದ್ದಾರೆ. ರೆಡ್ಡಿ 2013ರ ಚುನಾವಣೆಯಲ್ಲಿ ಜಾರ್ಜ್ ವಿರುದ್ಧ ಸೋಲು ಕಂಡವರು. ಪ್ರತಿ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಬದಲಿಸುತ್ತ ಬಂದಿರುವ ಬಿಜೆಪಿ, 2018ರಲ್ಲಿ ಎಂ. ಎನ್. ರೆಡ್ಡಿ ಅವರಿಗೆ ಟಿಕೆಟ್ ನೀಡಿತ್ತು.

‘15 ವರ್ಷಗಳ ಜಾರ್ಜ್ ಆಳ್ವಿಕೆಯಲ್ಲಿ ಕ್ಷೇತ್ರ ಯಾವುದೇ ಅಭಿವೃದ್ಧಿ ಕಂಡಿಲ್ಲ. ಅವರ ವಿರುದ್ಧ ಪ್ರಬಲವಾದ ಆಡಳಿತ ವಿರೋಧಿ ಅಲೆಯಿದೆ. ಕೆಂಪೇಗೌಡ ಅಂತರರಾ-ಷ್ಟ್ರೀಯ ವಿಮಾನ ನಿಲ್ದಾಣಕ್ಕೆ (ಕೆಐಎ) ಸಮೀಪದ ಬಾಣಸವಾಡಿ, ಕಮ್ಮನಹಳ್ಳಿ, ಎಚ್‌ಬಿಆರ್ ಬಡಾವಣೆಯಂಥ ವಸತಿ ಪ್ರದೇಶಗಳು ವಾಣಿಜ್ಯಿಕವಾಗಿ ಸ್ವಾವಲಂಬಿ ಪ್ರದೇಶಗಳಾಗಿ ಅಭಿವೃದ್ಧಿ ಹೊಂದುತ್ತಿದ್ದರೂ, ಬಡ–ಮಧ್ಯಮ ವರ್ಗದ ಜನರಿರುವ ಪ್ರದೇಶಗಳು ಕುಡಿಯುವ ನೀರಿನ ಕೊರತೆ ಮತ್ತು ಕಳಪೆ ಒಳಚರಂಡಿ ಸೇರಿದಂತೆ ಮೂಲಸೌಕರ್ಯ ಸಮಸ್ಯೆಗಳನ್ನು ಎದುರಿಸುತ್ತಿವೆ’ ಎನ್ನುವುದು ಪದ್ಮನಾಭ ರೆಡ್ಡಿ ಆರೋಪ.

ಇದರಿಂದ ರೋಸಿ ಹೋಗಿರುವ ಮತದಾರರು ಈ ಬಾರಿ ತಮ್ಮನ್ನು ಚುನಾಯಿಸುತ್ತಾರೆ. ಅಷ್ಟೇ ಅಲ್ಲ, ಕ್ಷೇತ್ರದಲ್ಲಿ ಪ್ರಾಬಲ್ಯ ಹೊಂದಿರುವ ಮುಸ್ಲಿಂ ಮತಗಳು ವಿಭಜನೆಯಾಗಿ, ಹಿಂದೂ ಮತಗಳ ಧ್ರುವೀಕರಣಗೊಂ-ಡರೆ ಜಾರ್ಜ್ ಅವರ ಗೆಲುವಿನ ಓಟಕ್ಕೆ ಈ ಬಾರಿ ಬ್ರೇಕ್ ಹಾಕಬಹುದೆಂಬ ಬಲವಾದ ವಿಶ್ವಾಸ ಅವರದ್ದು.


ಜೆಡಿಎಸ್ ಸಮಾವೇಶದಲ್ಲಿ ಎಚ್‌.ಡಿ.ಕುಮಾರಸ್ವಾಮಿ ಮಾತನಾಡಿದರು

‘ಮಾತು ತಪ್ಪಿದರೆ ಪಕ್ಷ ವಿಸರ್ಜಿಸುವೆ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ಪೂರ್ಣ ಬಹುಮತದೊಂದಿಗೆ 5 ವರ್ಷ ಜೆಡಿಎಸ್‌ಗೆ ಅಧಿಕಾರ ನಡೆಸಲು ಕೊಡಿ. ನಮ್ಮ ಪಂಚರತ್ನ ಕಾರ್ಯ-ಕ್ರಮಗಳ ಮೂಲಕ ಜನರು ನೆಮ್ಮದಿಯಿಂದ ಬದುಕುವಂತೆ ಮಾಡುತ್ತೇನೆ. ಮಾತು ತಪ್ಪಿದರೆ ಪಕ್ಷವನ್ನು ವಿಸರ್ಜಿಸುತ್ತೇ-ನೆ. ಇನ್ನೆಂದೂ ಮತ ಕೇಳಲು ಬರುವುದಿಲ್ಲ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್. ಡಿ.ಕುಮಾರಸ್ವಾಮಿ ಹೇಳಿದರು.

ಜೆಡಿಎಸ್ ಸಮಾವೇಶದಲ್ಲಿ ಮಾತನಾಡಿದ ಅವರು, ಕಳೆದ ಚುನಾವಣೆ ಪೂರ್ವದಲ್ಲಿ ರೈತರ ಸಾಲ ಮನ್ನಾ ಮಾಡುವ ಮಾತು ಕೊಟ್ಟಿದ್ದರಿಂದ ಸರ್ಕಾರದಲ್ಲಿ ಭಾಗಿಯಾದೆ. ಸರ್ಕಾರ ನಡೆಸಲು ಕಾಂಗ್ರೆಸ್ ಷರತ್ತು ವಿಧಿಸಿದರೂ 26 ಲಕ್ಷ ರೈತ ಕುಟುಂಬಗಳ ₹ 25 ಸಾವಿರ ಕೋಟಿ ಸಾಲ ಮನ್ನಾ ಮಾಡಿದೆ. ನಂತರ ಆಡಳಿತಕ್ಕೆ ಬಂದ ಬಿಜೆಪಿ ಉಳಿದ 2.35 ಲಕ್ಷ ರೈತ ಕುಟುಂಬಗಳ ₹ 1,800 ಕೋಟಿ ಸಾಲ ಮನ್ನಾ ಮಾಡದೇ ಮೀಸಲಿರಿಸಿದ್ದ ಹಣವನ್ನು ಬೇರೆ ಯೋಜನೆಗಳಿಗೆ ಬಳಸಿ ಅನ್ಯಾಯ ಮಾಡಿತು ಎಂದು ದೂರಿದರು.

ಶಾಸಕ ಡಾ.ಕೆ.ಶ್ರೀನಿವಾಸ-ಮೂರ್ತಿ ಮಾತನಾಡಿ, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಟಿ.ತಿಮ್ಮರಾಯಪ್ಪ, ವಿಧಾನ ಪರಿಷತ್ ಮಾಜಿ ಸದಸ್ಯ ಇ.ಕೃಷ್ಣಪ್ಪ, ಪುಷ್ಪ ಸಂಪತ್‌ಬಾಬು, ಮುಖಂಡರಾದ ಗುರುಪ್ರಕಾಶ್, ಟಿ.ಆರ್.ರಾಜು, ಭವಾನಿಶಂಕರ್ ಬೈರೇಗೌಡ, ಮಂಜುನಾಥ್, ಎಸ್‌ಎಂಟಿ ಪ್ರಕಾಶ್, ಸಿದ್ದರಾಮು ಇದ್ದರು.

ಸಂಕ್ಷಿಪ್ತ ಸುದ್ದಿ

ಮತ ಹಾಕಿ, ಉಚಿತ ತಿಂಡಿ ತಿನ್ನಿ

ಬೆಂಗಳೂರು: ನಗರದಲ್ಲಿ ಮತದಾನ ಉತ್ತೇಜಿಸುವ ಉದ್ದೇಶದಿಂದ ನೃಪತುಂಗ ರಸ್ತೆಯಲ್ಲಿರುವ ಭಾರತೀಯ ರಿಸರ್ವ್ ಬ್ಯಾಂಕ್ ಬಳಿಯ ಹೋಟೆಲ್ ನಿಸರ್ಗ ಗ್ರ್ಯಾಂಡ್, ಮತದಾನ ಮಾಡಿದವರಿಗೆ ಉಚಿತ ತಿಂಡಿ ಮತ್ತು ಮೊದಲ ಬಾರಿ ಮತ ಚಲಾಯಿಸುವ ಮೊದಲ 100 ಜನರಿಗೆ ಕನ್ನಡ ಸಿನಿಮಾಗೆ ಉಚಿತ ಟಿಕೆಟ್ ನೀಡುವುದಾಗಿ ಘೋಷಿಸಿದೆ.

‘ಮೇ 10ರಂದು ನಡೆಯುವ ವಿಧಾನಸಭೆ ಚುನಾವಣೆಯಲ್ಲಿ ಮತ ದಾರರು ಮತದಾನ ಮಾಡಿದ ಗುರುತು ತೋರಿಸಿ ನಿಸರ್ಗ ಗ್ರ್ಯಾಂಡ್‌ನಲ್ಲಿ ಉಚಿತವಾಗಿ ಬೆಣ್ಣೆ ಖಾಲಿ ದೋಸೆ, ಮೈಸೂರು ಪಾಕ್ ಮತ್ತು ತಂಪು ಪಾನಕ ಸವಿಯಬಹುದು. ಇದೊಂದು ಅಪ್ಪಟ ಸಾಮಾಜಿಕ ಕಳಕಳಿಯುಳ್ಳ ರಾಜಕೀಯೇತರ ಕಾರ್ಯಕ್ರಮವಾಗಿದೆ’ ಎಂದು ಹೋಟೆಲ್‌ನ ಮಾಲೀಕ ಎಸ್. ಪಿ. ಕೃಷ್ಣರಾಜು ತಿಳಿಸಿದರು.

ಈ ಕುರಿತು ಹೋಟೆಲ್ ಎದುರಿರುವ ದೊಡ್ಡ ಫಲಕದಲ್ಲಿ ‘ಮತದಾನದ ಹಕ್ಕು ಚಲಾಯಿಸಿ ಸಮೃದ್ಧ ಭಾರತವನ್ನು ನಿರ್ಮಿಸಿ’, ‘ಮತದಾನ ಸಂಭ್ರಮ ಆದಾಗ ದೇಶ ಬದಲಾಗುತ್ತದೆ’ ಎಂಬ ಘೋಷಣೆಗಳಿವೆ.

ರಾಮನಗರದಲ್ಲಿ ದೇವೇಗೌಡರ ಕಣ್ಣೀರು

ರಾಮನಗರ: ತಾಲ್ಲೂಕಿನ ಸುಗ್ಗನಹಳ್ಳಿಯಲ್ಲಿ ಶುಕ್ರವಾರ ರಾತ್ರಿ ನಡೆದ ಜೆಡಿಎಸ್ ಪ್ರಚಾರ ಸಭೆಯಲ್ಲಿ ಮಾಜಿ ಪ್ರಧಾನಿ ಎಚ್. ಡಿ.ದೇವೇಗೌಡರು ಗದ್ಗದಿತರಾಗಿ ಕಣ್ಣೀರು ಹಾಕಿದ ಪ್ರಸಂಗ ನಡೆಯಿತು.

ಸಭೆಯಲ್ಲಿ ಮಾತನಾಡಿದ ಅವರು ‘ರಾಮನಗರದ ಅನೇಕ ತಾಯಂದಿರು ಅಂದು ನನಗೆ ತಮ್ಮ ಮನೆ ಮಗನಂತೆ ಅನ್ನ ಉಣಬಡಿಸಿದ್ದಾರೆ. ಇಂದು ಅವರಲ್ಲಿ ಬಹುತೇಕರು ಇಲ್ಲ. ಆದರೂ, ಅವರ ಋಣವನ್ನು ನೆನೆಯುವೆ’ ಎಂದು ಗದ್ಗದಿತ-ರಾದರು. ‘ಯಾವ ಜನರು ಈ ದೇವೇಗೌಡನನ್ನು ಮುಖ್ಯಮಂತ್ರಿ, ಪ್ರಧಾನಮಂತ್ರಿ ಮಾಡಿದರೋ ಅದೇ ಜನರ ಮುಂದೆ ಇಂದು ಕೈ ಒಡ್ಡಿ ಬಂದಿದ್ದೇನೆ. ಮಂಡ್ಯದಲ್ಲಿ ನಿಖಿಲ್‌ರನ್ನು ಕರೆದುಕೊಂಡು ಹೋಗಿ ಮೋಸದಿಂದ ಸೋಲಿಸಿದರು. ಆದರೆ, ರಾಮನಗರದ ಜನ ಹಾಗೆ ಮಾಡಬೇಡಿ. ಮುಂದೆ ರಾಜ್ಯದಲ್ಲಿ ಒಬ್ಬ ಶ್ರೇಷ್ಠ ನಾಯಕನಾಗುವ ಶಕ್ತಿ ಅವನಲ್ಲಿ ಇದೆ. ದಯವಿಟ್ಟು ಗೆಲ್ಲಿಸಿ’ ಎಂದು ಕೈ ಮುಗಿದರು.

‘ನಿರ್ವಾಹಕ ವೃತ್ತಿಯ ಅವಮಾನ ಸರಿಯಲ್ಲ’

ರಾಜರಾಜೇಶ್ವರಿನಗರ: ‘ನಿರ್ವಾಹಕರು ಎಂದರೆ ಸ್ವಾಭಿಮಾನ, ದುಡಿಮೆಯಿಂದ ಬೆವರು ಸುರಿಸಿ ಜೀವನ ಸಾಗಿಸುವ ಕಾರ್ಮಿಕವರ್ಗ. ನನ್ನ ತಂದೆಯ ಬಗ್ಗೆ ಹೀನಾಯವಾಗಿ ಮಾತನಾಡಿ ಒಬ್ಬ ಕಂಡಕ್ಟರ್ ಎಂದಿರುವ ಬಿಜೆಪಿ ಅಭ್ಯರ್ಥಿ ಮುನಿರತ್ನ, ಕಾರ್ಮಿಕರನ್ನು ಯಾವ ರೀತಿ ನಡೆಸಿಕೊಳ್ಳುತ್ತಾರೆ ಎಂಬುದನ್ನು ಸ್ವಾಭಿಮಾನಿ ಮತದಾರರು ಅರ್ಥ ಮಾಡಿಕೊಳ್ಳಬೇಕು’ ಎಂದು ಕಾಂಗ್ರೆಸ್ ಅಭ್ಯರ್ಥಿ ಎಚ್.ಕುಸುಮಾ ಹೇಳಿದರು.

ಮೋಹನ್‌ಕುಮಾರ್, ಅಕ್ಕಯಪ್ಪ ಗಾರ್ಡನ್, ಯಶವಂತಪುರ ವ್ಯಾಪ್ತಿಯಲ್ಲಿ ಮತಯಾಚನೆ ಮಾಡಿ ಮುನಿರತ್ನ ಅವರಂತೆ ನಕಲಿ ವೋಟರ್ ಐಡಿ ಮಾಡಿಸಿಲ್ಲ. ನಕಲಿ ಬಿಲ್ಲು ತಯಾರಿಸಿ ಕೆಲಸ ಮಾಡದೆ ಕೋಟಿ ಕೋಟಿ ಹಣ ಲೂಟಿ ಮಾಡಿರುವ ಬಗ್ಗೆ ಲೋಕಾಯುಕ್ತ ಸಾಬೀತು ಮಾಡಿದೆ ಎಂದರು.

‘ಮಠಾಧೀಶರಿಗೆ ಧೈರ್ಯವಿಲ್ಲ’

ಹುಬ್ಬಳ್ಳಿ: ‘ಲಿಂಗಾಯತ ವಿಚಾರ ಬಂದಾಗಲೆಲ್ಲ ಲಿಂಗಾಯತ ಮಠದ ಸ್ವಾಮೀಜಿಗಳು ಒಗ್ಗಟ್ಟು ಪ್ರದರ್ಶಿಸುತ್ತಿದ್ದರು. ಆದರೆ, ಜಗದೀಶ ಶೆಟ್ಟರ್ ವಿಷಯದಲ್ಲಿ ಮಾತನಾಡಲು ಧೈರ್ಯವಿಲ್ಲದೆ ಅವರೆಲ್ಲ ಮೌನವಾಗಿದ್ದಾರೆ’ ಎಂದು ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಟೀಕಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಫಲಾಪೇಕ್ಷೆ-ಯಲ್ಲಿರುವ ಮಠಾಧೀಶರು, ಅದನ್ನು ತಪ್ಪಿಸಿಕೊಳ್ಳಲು ಸಿದ್ಧರಿಲ್ಲ. ಅವರು ಎಲ್ಲ ಸಂದರ್ಭದಲ್ಲಿಯೂ ನ್ಯಾಯಪ-ರವಾಗೇನೂ ನಿಂತಿಲ್ಲ. ಯಾವ ಪಕ್ಷ ಅಧಿಕಾರ ಬರುತ್ತದೆಯೋ ತಿಳಿಯದ ಅವರು, ಶೆಟ್ಟರ್ ವಿಚಾರದಲ್ಲಿ ಮೌನಕ್ಕೆ ಜಾರಿದ್ದಾರೆ’ ಎಂದು ಹೇಳಿದರು.



ಬೆಂಗಳೂರಿನಲ್ಲಿ ಶುಕ್ರವಾರ ಆಮ್ ಆದ್ಮಿ ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ, ಪ್ರಣಾಳಿಕೆ ಸಮಿತಿ ಅಧ್ಯಕ್ಷ ಡಾ.ಅಶ್ವಿನ್ ಮಹೇಶ್, ರಾಜ್ಯ ಮಾಧ್ಯಮ ಸಂಚಾಲಕಿ ಉಷಾ ಮಹೇಶ್ ಬಿಡುಗಡೆ ಮಾಡಿದರು

ಶೂನ್ಯ ಕಮಿಷನ್: ಎಎಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶೇ 100ರಷ್ಟು ಕೆಲಸ, ಶೂನ್ಯ ಕಮಿಷನ್’ –ಇದು ಆಮ್ ಆದ್ಮಿ ಪಕ್ಷ ಶುಕ್ರವಾರ ಬಿಡುಗಡೆ ಮಾಡಿದ ಚುನಾವಣಾ ಪ್ರಣಾಳಿಕೆಯ ಪ್ರಮುಖ ಘೋಷಣೆ.

ಲಂಚಕ್ಕಾಗಿ ಬೇಡಿಕೆ ಸಹಿಸುವುದಿಲ್ಲ. ಸರ್ಕಾರಿ ಸೇವೆ, ನೇಮಕಾತಿ, ಅಭಿವೃದ್ಧಿ ಕಾಮಗಾರಿಗಳಲ್ಲಿ ಶೇ 100ರಷ್ಟು ಪಾರದರ್ಶಕತೆ ತರಲಾಗುವುದು. ಸಣ್ಣ ಭ್ರಷ್ಟಾಚಾರಕ್ಕೂ ಆಸ್ಪದ ನೀಡುವುದಿಲ್ಲ. ಆರ್‌ಟಿಐ ಕಾಯ್ದೆ ಇನ್ನಷ್ಟು ಬಲಪಡಿ-ಸಲಾಗುವುದು. ಸ್ಥಳೀಯ ಸಂಸ್ಥೆಗಳಿಗೆ ಸಂಪೂರ್ಣ ಅಧಿಕಾರ, ರಾಜ್ಯದ ಎಲ್ಲ ಪ್ರದೇಶಗಳಲ್ಲಿ ಸಮಾನ ಆರ್ಥಿಕ ಬೆಳವಣಿಗೆಗೆ ಒತ್ತು ನೀಡಲಾಗಿದೆ ಎಂದು ಪ್ರಣಾಳಿಕೆ ಬಿಡುಗಡೆ ಮಾಡಿದ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಮಾಹಿತಿ ನೀಡಿದರು.

ಲೋಕಾಯುಕ್ತಕ್ಕೆ ಸಂಪೂರ್ಣ ಅಧಿಕಾರ, ಮೊಬೈಲ್ ಸೇವೆಗೆ ಆದ್ಯತೆ, ಮನೆ ಬಾಗಿಲಿಗೆ ಪಡಿತರ ವಿತರಣೆ, ಜನರ ಬಳಿಗೆ ಸರ್ಕಾರಿ ಸೇವೆಗಳು, ಗುತ್ತಿಗೆ ಶಿಕ್ಷಕರ ಸೇವೆ ಕಾಯಂ, ವಿದ್ಯಾರ್ಥಿಗಳಿಗೆ ಉಚಿತ ಬಸ್ ಸೇವೆ, ದ್ವಿಭಾಷಾ ನೀತಿಯ ಅಳವಡಿಕೆ, ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣ, ಕನ್ನಡಿಗರಿಗೆ ಉದ್ಯೋಗದಲ್ಲಿ ಆದ್ಯತೆ. ಪ್ರತಿ ವರ್ಷ 2 ಲಕ್ಷ ಉದ್ಯೋಗ ಸೃಷ್ಟಿಸುವ ಭರವಸೆಯನ್ನು ಪ್ರಣಾಳಿಕೆಯಲ್ಲಿ ನೀಡಲಾಗಿದೆ.ಜಿಲ್ಲಾವಾರು ಪ್ರಣಾಳಿಕೆ-ಯನ್ನೂ ರೂಪಿಸಲಾಗಿದೆ.

ಪ್ರಣಾಳಿಕೆ ಸಮಿತಿ ಅಧ್ಯಕ್ಷ ಡಾ.ಅಶ್ವಿನ್ ಮಹೇಶ್, ರಾಜ್ಯ ಮಾಧ್ಯಮ ಸಂಚಾಲಕರಾದ ಉಷಾ ಮಹೇಶ್, ಜಗದೀಶ್ ವಿ. ಸದಂ ಉಪಸ್ಥಿತರಿದ್ದರು.

ಟೋಲ್ ಶುಲ್ಕ ಸ್ಥಗಿತ

ರಾಜ್ಯದ ಎಲ್ಲ ರಸ್ತೆಗಳಲ್ಲೂ ಟೋಲ್ ಸಂಗ್ರಹ ಸ್ಥಗಿತ ಗೊಳಿಸುವ ಭರವಸೆಯನ್ನು ಎಎಪಿ ನೀಡಿದೆ. ಗುತ್ತಿಗೆ ಪಡೆದವರಿಗೆ ಹಣ ಪಾವತಿಸಲು ಪರ್ಯಾಯ ವ್ಯವಸ್ಥೆ ರೂಪಿಸಲಾಗುವುದು. ಲಕ್ಷಾಂತರ ಜನರು ಅಗತ್ಯ ಕಾರ್ಯಗಳಿಗಾಗಿ ನಿತ್ಯವೂ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಂಚರಿಸುತ್ತಾರೆ. ಹಾಗಾಗಿ, ಎಲ್ಲರಿಗೂ ಗುಣಮಟ್ಟದ ಸಾರಿಗೆ ವ್ಯವಸ್ಥೆಯನ್ನು ಕಡಿಮೆ ದರದಲ್ಲಿ ನೀಡಲಾಗುವುದು ಎಂದು ಹೇಳಿದೆ.




ಬೆಂಗಳೂರು ದಕ್ಷಿಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂ.ಕೃಷ್ಣಪ್ಪ ಪರವಾಗಿ ಕಾರ್ಯಕರ್ತರು ಮತ ಯಾಚಿಸಿದರು (ಎಡಚಿತ್ರ) ಮಹಾಲಕ್ಷ್ಮಿಲೇಔಟ್ ಕಾಂಗ್ರೆಸ್ ಅಭ್ಯರ್ಥಿ ಕೇಶವಮೂರ್ತಿ ಅವರು ಮಹಾಲಕ್ಷ್ಮಿಪುರದಲ್ಲಿ ಮನೆ ಮನೆಗೆ ಭೇಟಿ ನೀಡಿ ಮತ ಯಾಚಿಸಿದರು ಪ್ರಜಾವಾಣಿ ಚಿತ್ರಗಳು

3 ದಿನ ಬಾಕಿ: ಪ್ರಚಾರ ಬಿರುಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹಿರಂಗ ಪ್ರಚಾರಕ್ಕೆ ಮೂರು ದಿನಗಳಷ್ಟೇ ಬಾಕಿ ಇದ್ದು, ಅಭ್ಯರ್ಥಿಗಳು ಬಿರುಸಿನಿಂದ ಪ್ರಚಾರ ನಡೆಸುತ್ತಿದ್ದಾರೆ. ಬೀದಿ ಬೀದಿ, ಗಲ್ಲಿ-ಗಲ್ಲಿಗಳಲ್ಲಿ ಸುತ್ತಾಡಿ ಮತದಾರರ ಮನವೊಲಿಸುವ ಪ್ರಯತ್ನ ಮಾಡುತ್ತಿದ್ದಾರೆ.

ಮಹಾಲಕ್ಷ್ಮೀ ಲೇಔಟ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್. ಕೇಶವಮೂರ್ತಿ ಅವರು ಮಹಾಲಕ್ಷ್ಮೀ-ಪುರ ವಾರ್ಡ್‌ನಲ್ಲಿ ಶುಕ್ರವಾರ ಮನೆ, ಮನೆಗೆ ತೆರಳಿ ಮತಯಾಚಿಸಿದರು. ಕಾಂಗ್ರೆಸ್ ಪಕ್ಷದ ಸಾಧನೆಗಳು ಮತ್ತು ಎರಡು ಬಾರಿ ಪಾಲಿಕೆ ಸದಸ್ಯರಾಗಿ ಮಾಡಿರುವ ಅಭಿವೃದ್ಧಿ ಸಾಧನೆಗಳ ಪುಸ್ತಕಗಳನ್ನು ವಿತರಿಸಿದರು. ‘ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕ್ಷೇತ್ರದಲ್ಲಿ ನಡೆಸಿದ ರೋಡ್ ಶೋ ಕಾಂಗ್ರೆಸ್ ಪಕ್ಷಕ್ಕೆ ಆತ್ಮವಿಶ್ವಾಸದ ಜೊತೆಯಲ್ಲಿ ಆನೆಬಲ ಸಿಕ್ಕಂತಾಗಿದೆ’ ಎಂದರು.

ಬೆಂಗಳೂರು ದಕ್ಷಿಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂ.ಕೃಷ್ಣಪ್ಪ ಪರ ಬನ್ನೇರುಘಟ್ಟ, ರಾಗಿಹಳ್ಳಿ ಹಾಗೂ ಮಂಟಪ ಗ್ರಾಮ ಪಂಚಾಯಿತಿ ಬಿಜೆಪಿ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಮತಯಾಚಿಸಿದರು.

‘ಕೃಷ್ಣಪ್ಪ ಅವರಿಗೆ ಮತ ನೀಡುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ದಾರಿ ಮಾಡಿಕೊಡಬೇಕು’ ಎಂದು ಕೋರಿದರು.

ಹೆಬ್ಬಾಳ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಬೈರತಿ ಸುರೇಶ್ ಅವರು ಗಂಗಾನಗರ, ಗಂಗೇನಹಳ್ಳಿ, ಮನೋರಾಯನಪಾಳ್ಯ ವಾರ್ಡ್ ಮುಖ್ಯರಸ್ತೆಗಳಲ್ಲಿ ರೋಡ್ ಶೋ ಮೂಲಕ ಮತಯಾಚಿಸಿದರು.

ಮಲ್ಲೇಶ್ವರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅನೂಪ್ ಅಯ್ಯಂಗಾರ್ ಅವರು ಗಾಯಿತ್ರಿನಗರ, ಸುಬ್ರಮಣ್ಯನ-ಗರ ಹಾಗೂ ಮಲ್ಲೇಶ್ವರ ಕೆಲ ಬಡಾವಣೆ-ಗಳಲ್ಲಿ ಪ್ರಚಾರ ನಡೆಸಿದರು.

ಚಿಕ್ಕಪೇಟೆ ಕ್ಷೇತ್ರದಲ್ಲಿ ಉದಯ್ ಬಿ. ಗರುಡಾಚಾರ್ ಪರವಾಗಿ ಬಿಜೆಪಿ ರಾಜ್ಯ ಚುನಾವಣಾ ಸಹ ಉಸ್ತುವಾರಿ ಅಣ್ಣಾಮಲೈ ರೋಡ್ ಶೋ ನಡೆಸಿದರು.


ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಉದಯ್‌ಬಿ ಗರುಡಾಚಾರ್ ಪರ ತಮಿಳುನಾಡಿನ ಬಿಜೆಪಿ ರಾಜ್ಯ ಅಧ್ಯಕ್ಷ ಅಣ್ಣಾಮಲೈ ಅವರು ಸುಧಾಮ ನಗರದಲ್ಲಿ ರೋಡ್ ಶೋ ನಡೆಸಿ ಮತಯಾಚನೆ ಮಾಡಿದರು.

‘ಬಜರಂಗದಳ ನಿಷೇಧ ಸಾಧ್ಯ ಇಲ್ಲ’

ಕೆ.ಆರ್.ಪುರ: ಮತ್ತೊಬ್ಬ ರಾವಣ ಹುಟ್ಟಿ ಬಂದರು ಬಜರಂಗದಳವನ್ನು ನಿಷೇಧಿಸಲು ಸಾಧ್ಯವಿಲ್ಲ ಎಂದು ಶಾಸಕ ಅರವಿಂದ ಲಿಂಬಾವಳಿ ಹೇಳಿದರು.

ಮಹದೇವಪುರ ಕ್ಷೇತ್ರದ ಗ್ರಾಮಾಂತರ ಭಾಗದಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿ ಮಂಜುಳಾ ಲಿಂಬಾವಳಿ ಪರ ಚುನಾವಣಾ ಪ್ರಚಾರದಲ್ಲಿ ಅವರು ಮಾತನಾಡಿದರು.

ಯುವ ರಾಹುಲ್ ಆಲೋಚನೆಗಳಲ್ಲಿ 'ತಾರುಣ್ಯ'ವಿಲ್ಲ!

● ಎಸ್.ರವಿಪ್ರಕಾಶ್

ಪ್ರಜಾವಾಣಿ ಸಂದರ್ಶನ

ತೇಜಸ್ವಿ ಸೂರ್ಯ, ಸಂಸದ

ಬೆಂಗಳೂರು: ಕರ್ನಾಟಕಕ್ಕೆ ವಿಶಿಷ್ಟ ಶಕ್ತಿ ಇದೆ. ಈ ರಾಜ್ಯಕ್ಕೆ ಜಾಗತಿಕವಾಗಿ ಮುನ್ನಡೆಸುವ ಶಕ್ತಿಯೂ ಇದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ನಂಬಿದ್ದಾರೆ. ಇದಕ್ಕಾಗಿ ಮುಂದಿನ 25 ವರ್ಷ ಕರ್ನಾಟಕವನ್ನು ಮುನ್ನಡೆಸುವ ಯುವ ಪ್ರತಿಭಾವಂತ ತಂಡವನ್ನು ಕೊಡುತ್ತೇನೆ ಎಂದಿದ್ದಾರೆ. ಮೋದಿಯವರು ವಯಸ್ಸಿನಲ್ಲಿ ಹಿರಿಯರಾದರೂ ನವೀನ ಆಲೋಚನೆಗಳನ್ನು ಹೊಂದಿದ್ದಾರೆ. ರಾಹುಲ್ ಗಾಂಧಿ ಯುವಕರಾದರೂ ಅವರ ಚಿಂತನೆಗಳಲ್ಲಿ ನವೀನತೆ ಇಲ್ಲ ಎಂದು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ 'ಪ್ರಜಾವಾಣಿ'ಗೆ ಸಂದರ್ಶನದಲ್ಲಿ ತಿಳಿಸಿದ್ದಾರೆ.

● ಕರ್ನಾಟಕ ಐಟಿ, ಬಿಟಿ, ವಿಜ್ಞಾನ- ತಂತ್ರಜ್ಞಾನ ಕ್ಷೇತ್ರದ ಕೇಂದ್ರ ಬಿಂದುವಾಗಿದೆ. ಇದರ ಬೆಳವಣಿಗೆಯಲ್ಲಿ ಯುವಕರ ಪಾತ್ರವೇ ಹೆಚ್ಚು. ಆದರೆ ಎಲ್ಲ ಪಕ್ಷಗಳ ಮುಖ್ಯಮಂತ್ರಿ ಅಭ್ಯರ್ಥಿಗಳು 65- 70 ವರ್ಷ ಮೇಲ್ಪಟ್ಟವರೇ. ಕರ್ನಾಟಕ ಇನ್ನಷ್ಟು ವೇಗವಾಗಿ ಅಭಿವೃದ್ಧಿ ಹೊಂದಲು ಹೊಸ ಆಲೋಚನೆಗಳನ್ನು ಹೊಂದಿರುವ ಯುವಕರು ಮುಖ್ಯಮಂತ್ರಿ ಆದರೆ ಸೂಕ್ತ ಎನಿಸುವುದಿಲ್ಲವೇ?

ಈ ಸಲ ಬಿಜೆಪಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಹೊಸಬರಿಗೆ, ಯುವಕರಿಗೆ, ಮಹಿಳೆಯರಿಗೆ ಟಿಕೆಟ್ ನೀಡಿದೆ. ಕಾಂಗ್ರೆಸ್ ಮತ್ತು ಜೆಡಿಎಸ್‌ಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಹೊಸಬರಿಗೆ ಅವಕಾಶ ನೀಡಲಾಗಿದೆ.

ಪ್ರಧಾನಿ ಮೋದಿಯವರು ಇತ್ತೀಚೆಗೆ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುವಾಗ ಮುಂದಿನ 25 ವರ್ಷ ಕರ್ನಾಟಕವನ್ನು ಮುನ್ನಡೆಸುವ ಪ್ರತಿಭಾವಂತ ತಂಡವನ್ನು ಕೊಡುತ್ತೇನೆ ಎಂದು ಹೇಳಿದ್ದರು. ಯುವ ವಯಸ್ಸು ಎನ್ನುವುದಕ್ಕಿಂತ ಹೊಸತನದ ಆಲೋಚನೆಗಳನ್ನು ಹೊಂದಿರುವುದು ಮುಖ್ಯ. ಮೋದಿಯವರು ಹಿರಿಯರು. ಆದರೆ, ಅವರ ಆಲೋಚನೆಗಳು ಯುವಕರನ್ನು ಮೀರಿದ್ದು. ಮತ್ತೊಂದು ಕಡೆ ರಾಹುಲ್‌ಗಾಂಧಿ, ಅವರು ಯುವಕರೇನೋ ಹೌದು. ಆದರೆ, ಅವರ ಆಲೋಚನೆಗಳಲ್ಲಿ ಯೌವನ ಕಂಡು ಬರುತ್ತದೆಯೇ?



● ಜನ ಬಿಜೆಪಿಗೆ ಏಕೆ ಮತ ಹಾಕಬೇಕು, ಚುನಾವಣೆಯಲ್ಲಿ ಗೆಲ್ಲಿಸಬೇಕು?

ನಾವು ನುಡಿದಂತೆ ನಡೆದಿದ್ದೇವೆ. ಕಳೆದ ನಾಲ್ಕು ವರ್ಷಗಳಲ್ಲಿ ಶತಮಾನ ಕಂಡರಿಯದ ಪ್ರವಾಹ, ಆ ಬಳಿಕ ಕೋವಿಡ್ ಸಂಕಷ್ಟ ಮತ್ತು ಆರ್ಥಿಕ ದುಃಸ್ಥಿತಿ ಇತ್ತು. ಅವೆಲ್ಲವನ್ನೂ ಚೆನ್ನಾಗಿ ನಿಭಾಯಿಸಿದ್ದೂ ಅಲ್ಲದೆ ಆರ್ಥಿಕ ಸ್ಥಿತಿ ಉತ್ತಮಗೊಳಿಸಿದ ಕೀರ್ತಿ ಬಿಜೆಪಿ ಸರ್ಕಾರಕ್ಕೆ ಸಲ್ಲುತ್ತದೆ.

ದಶಕಗಳಿಂದ ನನೆಗುದಿಯಲ್ಲಿದ್ದ ನೀರಾವರಿ ಯೋಜನೆಗಳಿಗೆ ಚಾಲನೆ ನೀಡಲಾಯಿತು. ಎಲ್ಲದ್ದಕ್ಕಿಂತ ಮುಖ್ಯವಾಗಿ ಒಳಮೀಸಲಾತಿ ಕಲ್ಪಿಸಿದ್ದೇವೆ. ಮೀಸಲಾತಿ ಪ್ರಮಾಣವನ್ನೂ ಹೆಚ್ಚಿಸಲಾಗಿದೆ. ಕೇಂದ್ರದಲ್ಲಿ ಬಿಜೆಪಿ, ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗ ಮಾತ್ರ ಕರ್ನಾಟಕ ಇನ್ನಷ್ಟು ವೇಗವಾಗಿ ಅಭಿವೃದ್ಧಿ ಹೊಂದಲಿದೆ.

● ಜನ ಸಾಮಾನ್ಯರನ್ನು ತೀವ್ರವಾಗಿ ಕಾಡುತ್ತಿರುವ ಸರ್ಕಾರಿ ಕಚೇರಿಗಳೂ ಸೇರಿ ತಳಮಟ್ಟದ ಭ್ರಷ್ಟಾಚಾರವನ್ನು ತಪ್ಪಿಸಲು ನಿಮ್ಮ ಸರ್ಕಾರ ಬಂದರೆ ಏನು ಮಾಡುತ್ತೀರಿ?

ತಂತ್ರಜ್ಞಾನದ ನೆರವಿನಿಂದ ಈ ಸಮಸ್ಯೆಗಳನ್ನು ಎಷ್ಟು ಸಾಧ್ಯವೋ ಅಷ್ಟು ಬಗೆಹರಿಸಲು ಸಾಧ್ಯವಿದೆ. ಸರ್ಕಾರಿ ಕಚೇರಿಗಳ ಜತೆ ನೇರವಾಗಿ ವ್ಯವಹರಿಸುವುದನ್ನು ಕಡಿಮೆ ಮಾಡಲು ತಂತ್ರಜ್ಞಾನವೊಂದೇ ಪರಿಹಾರವಾಗ ಬಲ್ಲದು. ಅದರಲ್ಲಿ ಡಿಬಿಟಿ ಉತ್ತಮ ಉದಾಹರಣೆ. ರಾಜೀವ್‌ಗಾಂಧಿ ಕಾಲದಲ್ಲಿ ದೆಹಲಿಯಿಂದ ನೂರು ರೂಪಾಯಿ ಕಳಿಸಿದರೆ ಫಲಾನುಭವಿಗೆ ಹದಿನೈದು ರೂಪಾಯಿ ಮಾತ್ರ ಸಿಗುತ್ತಿತ್ತು. ಈಗ ನೂರು ರೂಪಾಯಿಯೂ ಫಲಾನುಭವಿಗೆ ಸಿಗುತ್ತದೆ. ದೈನಂದಿಂದ ಆಡಳಿತದಲ್ಲಿ ಜನರಿಗೆ ಬಾಧಕ ಆಗದಂತೆ ವ್ಯವಸ್ಥೆ ರೂಪಿಸುತ್ತೇವೆ.

ಸೋಮಶೇಖರ್ ಹಿಡಿತ ಸಡಿಲಕ್ಕೆ ಅನುಕಂಪದ ಎರಕ

● ವಿಜಯಕುಮಾರ್ ಎಸ್.ಕೆ



ಎಸ್.ಟಿ. ಸೋಮಶೇಖರ್



ಬಾಲರಾಜ್ ಗೌಡ



ಜವರಾಯಿಗೌಡ

ಬೆಂಗಳೂರು: ಗ್ರಾಮೀಣ ಮತ್ತು ನಗರ ಪ್ರದೇಶ ಒಳಗೊಂಡ ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ಎಸ್.ಟಿ. ಸೋಮಶೇಖರ್ ಬಿಗಿ ಹಿಡಿತವನ್ನು ಅನುಕಂಪದ ಎರಕದ ಮೂಲಕ ಸಡಿಲಗೊಳಿಸಲು ಜೆಡಿಎಸ್ ಪ್ರಯತ್ನಿಸುತ್ತಿದೆ.

ಕಾಂಗ್ರೆಸ್ ತೆಕ್ಕೆಯಿಂದ ಬಿಜೆಪಿಗೆ ಹೊರಳಿರುವ ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲೀಗ ಪಕ್ಷಕ್ಕಿಂತ ಶಾಸಕ ಎಸ್.ಟಿ. ಸೋಮಶೇಖರ್ ಹಿಡಿತ ಹೆಚ್ಚಿದೆ. ಮೂರು ಬಾರಿ ಪೈಪೋಟಿ ನೀಡಿ ಸೋತಿರುವ ಜೆಡಿಎಸ್ ಅಭ್ಯರ್ಥಿ ಟಿ.ಎನ್.ಜವರಾಯಿಗೌಡ ಈ ಬಾರಿ ಪುಟಿದೇಳುವ ತವಕದಲ್ಲಿದ್ದಾರೆ.

ತುಮಕೂರು ರಸ್ತೆಯ ಚಿಕ್ಕಬಿದರಕಲ್ಲಿನಿಂದ ಆರಂಭವಾಗಿ ಮೈಸೂರು ರಸ್ತೆ ದಾಟಿ ಕನಕಪುರ ರಸ್ತೆಯ ಕಗ್ಗಲಿಪುರ ತನಕ, ಇತ್ತ ಮೈಸೂರು ರಸ್ತೆಯಲ್ಲಿ ಬಿಡದಿವರೆಗೆ, ಮಾಗಡಿ ರಸ್ತೆಯಲ್ಲಿ ತಿಪ್ಪಗೊಂಡನಹಳ್ಳಿ ಹತ್ತಿರಕ್ಕೆ ಈ ಕ್ಷೇತ್ರ ವ್ಯಾಪಿಸಿದೆ. ನಗರ ಹಾಗೂ ಗ್ರಾಮೀಣ ಪ್ರದೇಶಗಳನ್ನು ಕ್ಷೇತ್ರ ಒಳಗೊಂಡಿದೆ.


2008ರಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಬಳಿಕ ಮೊದಲ ಚುನಾವಣೆಯಲ್ಲಿ ಬಿಜೆಪಿಯ ಶೋಭಾ ಕರಂದ್ಲಾಜೆ ವಿರುದ್ಧ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಎಸ್.ಟಿ. ಸೋಮಶೇಖರ್ ಸೋಲು ಕಂಡಿದ್ದರು. 2013ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಗೆದ್ದ ಬಳಿಕ ಸೋಲು ಕಂಡಿಲ್ಲ. 2018ರಲ್ಲಿ ಕಾಂಗ್ರೆಸ್‌ನಿಂದ ಗೆದ್ದು, 'ಆಪರೇಷನ್ ಕಮಲ'ಕ್ಕೆ ಒಳಗಾದರು. ಬಿಜೆಪಿ ಸೇರಿ ಸಚಿವರಾಗಿ 2019ರ ಆಗಸ್ಟ್‌ನಲ್ಲಿ ಎದುರಿಸಿದ ಚುನಾವಣೆಯಲ್ಲೂ ಗೆದ್ದರು.

ಮೂರು ಬಾರಿಯೂ ಪ್ರಬಲ ಪೈಪೋಟಿ ನೀಡಿರುವ ಜೆಡಿಎಸ್‌ನ ಟಿ.ಎನ್. ಜವರಾಯಿಗೌಡ ಈಗ ನಾಲ್ಕನೇ ಬಾರಿ ಎದುರಾಳಿಯಾಗಿದ್ದಾರೆ. ಸತತ ಸೋಲಿನಿಂದ ಬೇಸರಗೊಂಡಿದ್ದ ಅವರಿಗೆ ಕಾರ್ಯಕರ್ತರ ಜತೆಗೆ ಸ್ವತಃ ಎಚ್.ಡಿ.ಕುಮಾರಸ್ವಾಮಿ ಅವರೇ ಆತ್ಮವಿಶ್ವಾಸ ತುಂಬಿ ಸ್ಪರ್ಧೆಗೆ ಇಳಿಸಿದ್ದಾರೆ.

ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಒಕ್ಕಲಿಗ ಸಮುದಾಯದ ಮತದಾರರಿದ್ದಾರೆ. ಕಣದಲ್ಲಿರುವ ಪ್ರಮುಖ ಮೂರು ಪಕ್ಷಗಳ ಅಭ್ಯರ್ಥಿಗಳೂ ಒಂದೇ ಸಮುದಾಯದವರಾಗಿದ್ದಾರೆ. ಜೆಡಿಎಸ್ ಸರ್ಕಾರ ಬೀಳಿಸಲು ಕಾರಣವಾದ 17 ಶಾಸಕರಲ್ಲಿ ಎಸ್.ಟಿ.ಸೋಮಶೇಖರ್ ಕೂಡ ಒಬ್ಬರು. ಎಚ್.ಡಿ.ಕುಮಾರಸ್ವಾಮಿ ಪರ ಅಲೆಯ ಜತೆಗೆ ಜವರಾಯಿಗೌಡ ಅವರ ಬಗ್ಗೆ ಇರುವ ಅನುಕಂಪ ವರವಾಗಬಹುದು ಎಂಬ ಲೆಕ್ಕಾಚಾರವನ್ನು ಜೆಡಿಎಸ್ ಹೊಂದಿದೆ. ಕೋವಿಡ್ ಸಂದರ್ಭದಲ್ಲಿ ಜನರೊಟ್ಟಿಗೆ ನಿಲ್ಲಲಿಲ್ಲ ಎಂಬ ಆರೋಪವೂ ಜವರಾಯಿಗೌಡ ಅವರ ಮೇಲಿದೆ.

'ಜನರ ಕಷ್ಟ ಸುಖಗಳಿಗೆ ಸದಾ ಸ್ಪಂದಿಸಿದ್ದೇನೆ. ಕೋವಿಡ್ ಕಷ್ಟ ಕಾಲದಲ್ಲಿ ಅವರ ಜೊತೆಯಲ್ಲಿದ್ದೆ. ಅಭಿವೃದ್ಧಿ ಕೆಲಸಗಳಿಗೆ ಜನ ಮತ ಹಾಕಲಿದ್ದಾರೆ' ಎಂಬ ವಿಶ್ವಾಸದಲ್ಲಿ ಸೋಮಶೇಖರ್ ಇದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರೂ ಈ ಕ್ಷೇತ್ರದಲ್ಲಿ ರೋಡ್ ಶೋ ನಡೆಸಿ ಕಾರ್ಯಕರ್ತರ ಹುರುಪು ಹೆಚ್ಚಿಸಿದ್ದಾರೆ.

ಮೇಲ್ನೋಟಕ್ಕೆ ಎರಡು ಪಕ್ಷಗಳ ನಡುವೆ ನೇರ ಹಣಾಹಣಿ ಎಂಬಂತೆ ಕಾಣಿಸುತ್ತಿದೆ. ಆದರೆ, ರಾಜ್ಯದಲ್ಲಿರುವ ಕಾಂಗ್ರೆಸ್ ಪರವಾದ ಅಲೆಯಲ್ಲಿ ತೇಲುವ ವಿಶ್ವಾಸವನ್ನು ಕಾಂಗ್ರೆಸ್ ಅಭ್ಯರ್ಥಿ ಬಾಲರಾಜ್‌ಗೌಡ ಹೊಂದಿದ್ದಾರೆ. ಮೂರು ಪಕ್ಷಗಳ ಕಾರ್ಯಕರ್ತರ ಪಡೆಗಳು ಕೆಲಸ ಮಾಡುತ್ತಿವೆ. ಎಎಪಿ, ಬಿಎಸ್‌ಪಿ, ಉತ್ತಮ ಪ್ರಜಾಕೀಯ ಪಕ್ಷದ ಅಭ್ಯರ್ಥಿಗಳೂ ಕಣದಲ್ಲಿ ಇದ್ದಾರೆ.



ಫಲಿತಾಂಶದ ಹಿನ್ನೋಟ

ಕ್ಷೇತ್ರ	2008	2013	2018	2019 (ಉಪಚುನಾವಣೆ)
ಯಶವಂತಪುರ	ಬಿಜೆಪಿ	ಕಾಂಗ್ರೆಸ್	ಕಾಂಗ್ರೆಸ್	ಬಿಜೆಪಿ


ಸಾಕ್ಷಾತ್ ಸಮೀಕ್ಷೆ

ಮಹದೇವಪುರ: ಬಿಜೆಪಿ-ಕಾಂಗ್ರೆಸ್‌ನ ಹೊಸಬರ ಮಧ್ಯೆ ನೇರ ಸ್ಪರ್ಧೆ

● ಚಂದ್ರಹಾಸ ಹಿರೇಮಳಲಿ



ಮಂಜುಳಾ ಲಿಂಬಾವಳಿ



ಎಚ್.ನಾಗೇಶ್

ಬೆಂಗಳೂರು: ಬಿಜೆಪಿ ಹಾಗೂ ಕಾಂಗ್ರೆಸ್ ಎರಡೂ ಪಕ್ಷಗಳು ಹೊಸಮುಖಗಳನ್ನು ಕಣಕ್ಕೆ ಇಳಿಸಿರುವುದರಿಂದ ಮಹದೇವಪುರ ವಿಧಾನಸಭಾ ಕ್ಷೇತ್ರ ಸಾಕಷ್ಟು ಕುತೂಹಲ ಮೂಡಿಸಿದೆ.

2008ರಿಂದಲೂ ಬಿಜೆಪಿ ಭದ್ರಕೋಟೆಯಾಗಿರುವ ಕ್ಷೇತ್ರವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಶತಾಯಗತಾಯ ಪ್ರಯತ್ನಿಸುತ್ತಿರುವ ಕಾಂಗ್ರೆಸ್, ಎರಡು ಬಾರಿ ಸೋಲು ಅನುಭವಿಸಿದ್ದ ಎ.ಸಿ. ಶ್ರೀನಿವಾಸ್ ಅವರ ಬದಲು ಕಳೆದ ಚುನಾವಣೆಯಲ್ಲಿ ಮುಳಬಾಗಿಲು ಕ್ಷೇತ್ರದಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ ಗೆಲುವು ಕಂಡಿದ್ದ ಎಚ್.ನಾಗೇಶ್ ಅವರನ್ನು ಮಹದೇವಪುರ ಕ್ಷೇತ್ರದಿಂದ ಕಣಕ್ಕೆ ಇಳಿಸಿದೆ.

ಮೂರು ಅವಧಿ ಶಾಸಕರಾಗಿ, ಸಚಿವರೂ ಆಗಿದ್ದ ಅರವಿಂದ ಲಿಂಬಾವಳಿ ಬದಲು ಅವರ ಪತ್ನಿ ಮಂಜುಳಾ ಲಿಂಬಾವಳಿ ಅವರಿಗೆ ಟಿಕೆಟ್ ನೀಡುವ ಮೂಲಕ ಬಿಜೆಪಿ ಹೊಸ ದಾಳ ಉರುಳಿಸಿದೆ.

ಆಮ್ ಆದ್ಮಿ ಪಕ್ಷದಿಂದ ಸಿ.ಆರ್.ನಟರಾಜ್, ಬಹುಜನ ಸಮಾಜ ಪಕ್ಷದಿಂದ ಕೆ.ಸಿ.ಪ್ರಸಾದ್, ಜೆಡಿಯುನಿಂದ ಎಂ.ವಿ.ಗೋಪಾಲಕೃಷ್ಣ, ಉತ್ತಮ ಪ್ರಜಾಕೀಯ ಪಕ್ಷದಿಂದ ಆರ್.ನಾಗರಾಜ್, ಕರ್ನಾಟಕ ರಾಷ್ಟ್ರ ಸಮಿತಿಯಿಂದ ಶಿವಾಜಿ ಲಮಾಣಿ ಹಾಗೂ ಎಂಟು ಪಕ್ಷೇತರರು ಕಣದಲ್ಲಿ ಇದ್ದರೂ ಬಿಜೆಪಿ ಹಾಗೂ ಕಾಂಗ್ರೆಸ್ ಮಧ್ಯೆ ನೇರ ಹಣಾಹಣಿ ಕಾಣುತ್ತಿದೆ.

ಮಹದೇವಪುರ ಕ್ಷೇತ್ರದ ಬೆಳತೂರಿನ ಎಚ್.ನಾಗೇಶ್ ಅವರನ್ನು ಸ್ಥಳೀಯ ಅಭ್ಯರ್ಥಿ ಎಂದು ಬಿಂಬಿಸಲಾಗುತ್ತಿದೆ. ಹಲವು ದಲಿತ ಸಂಘಟನೆಗಳು ಅವರಿಗೆ ನೇರ ಬೆಂಬಲ ಘೋಷಿಸಿರುವುದು, ಜೆಡಿಎಸ್ ಅಭ್ಯರ್ಥಿಯನ್ನು ಹಾಕದೇ ಇರುವುದು ಕಾಂಗ್ರೆಸ್‌ಗೆ ಬಲ ತಂದಿದೆ. ಮುಳಬಾಗಿಲು ಕ್ಷೇತ್ರದಂತೆ ಅಭಿವೃದ್ಧಿಗೊಳಿಸುವ ಭರವಸೆ ನೀಡುತ್ತಾ ಜನರ ಮನಸ್ಸು ಗೆಲ್ಲಲು ಪ್ರಯತ್ನಿಸುತ್ತಿದ್ದಾರೆ.


ಶಾಸಕ ಅರವಿಂದ ಲಿಂಬಾವಳಿ ಅವರು ಕ್ಷೇತ್ರದಲ್ಲಿ ರಚಿಸಿರುವ 'ಜನರ ಕಾರ್ಯಪಡೆ' ಬಿಜೆಪಿ ಅಭ್ಯರ್ಥಿ ಮಂಜುಳಾ ಅವರ ಪರ ಕೆಲಸ ಮಾಡುತ್ತಿದೆ. ಸಾಮಾನ್ಯ ಗೃಹಿಣಿಯಾಗಿದ್ದ ತಮ್ಮನ್ನು ಶಾಸಕಿ ಮಾಡಬೇಕು ಎನ್ನುವ ಪಕ್ಷದ ಆಶಯ ಈಡೇರಿಸಲು, ಕ್ಷೇತ್ರದ ಜನಸೇವೆ ಮಾಡಲು ಇನ್ನೊಂದು ಅವಕಾಶ ಕೊಡಿ ಎಂದು ಮಹಿಳಾ ಮತಗಳನ್ನು ಸೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ.

ಮಹದೇವಪುರ ವಿಧಾನಸಭಾ ಕ್ಷೇತ್ರ ಬೆಳ್ಳಂದೂರು, ಮಾರತಹಳ್ಳಿ, ದೊಡ್ಡನೆಕ್ಕುಂದಿ ಮತ್ತು ಗರುಡಾಚಾರ್ ಪಾಳ್ಯ ವ್ಯಾಪ್ತಿ ಒಳಗೊಂಡಿದೆ. ಸಂಚಾರ ದಟ್ಟಣೆ ಸಮಸ್ಯೆ, ದೂಳು, ನೀರಿನ ಬವಣೆ, ರಸ್ತೆಗುಂಡಿ ಸಮಸ್ಯೆಗಳನ್ನು ಕಾಂಗ್ರೆಸ್ ಪ್ರಧಾನವಾಗಿ ಪ್ರಸ್ತಾಪಿಸುತ್ತಿದೆ. ಮೂರು ಅವಧಿ ಕೆಲಸವನ್ನೇ ಮಾಡದವರಿಗೆ ಮತ್ತೊಂದು ಅವಕಾಶ ಏಕೆ? ಕ್ಷೇತ್ರವನ್ನು ಸರ್ವ ಜನಾಂಗದ ಶಾಂತಿಯ ತೋಟ ಮಾಡೋಣ ಎನ್ನುವ ಮೂಲಕ ಕಾಂಗ್ರೆಸ್ ಪಕ್ಷವು ಬಿಜೆಪಿ ವಿರೋಧಿ ಮತಗಳು, ಜಾತ್ಯತೀತ ಮತಗಳ ಕ್ರೋಡೀಕರಣಕ್ಕೆ ಪ್ರಯತ್ನಿಸುತ್ತಿದೆ.

ಕಾವೇರಿ ನೀರಿನ ಪೈಪ್‌ಲೈನ್ ಕಾಮಗಾರಿ ಬಹುತೇಕ ಮುಗಿದಿದೆ. ಕಾವೇರಿ ಸಂಪರ್ಕ ಪೂರ್ಣಗೊಂಡರೆ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ದೊರಕಲಿದೆ. ಹಲವು ಅಭಿವೃದ್ಧಿ ಕಾಮಗಾರಿಗಳಾಗಿವೆ. ಕೆರೆಗಳ ಪುನರುಜ್ಜೀವನ ಮಾಡಲಾಗಿದೆ.

ಜನರ ಎಲ್ಲ ಸಮಸ್ಯೆಗಳಿಗೂ ಸ್ಪಂದಿಸಲಾಗಿದೆ ಎನ್ನುವ ವಿಷಯಗಳನ್ನು ಬಿಜೆಪಿ ಮನವರಿಕೆ ಮಾಡಿ ಕೊಡುತ್ತಿದೆ.

ಮಂಜುಳಾ ಅವರ ಪತಿ ಅರವಿಂದ ಲಿಂಬಾವಳಿ ಕ್ಷೇತ್ರ ಸುತ್ತಿ ಬಿರುಸಿನ ಪ್ರಚಾರ ನಡೆಸುತ್ತಿದ್ದಾರೆ. ಹಿಂದುತ್ವದ ವಿಷಯಗಳು ಹಿಂದೆ ಸರಿದು, ಮೋದಿ ಹೆಸರು, ರಾಜ್ಯ, ಕೇಂದ್ರ ಸರ್ಕಾರಗಳ ಸಾಧನೆಗಳು ಮುನ್ನೆಲೆಗೆ ಬಂದಿವೆ.



ಫಲಿತಾಂಶದ ಹಿನ್ನೋಟ

ಕ್ಷೇತ್ರ	2008	2013	2018
ಮಹದೇವಪುರ	ಬಿಜೆಪಿ	ಬಿಜೆಪಿ	ಬಿಜೆಪಿ

'ಬಿಜೆಪಿಯ ಭ್ರಷ್ಟಾಚಾರದಿಂದ ಜನರು ಭಯಗೊಂಡಿದ್ದಾರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದಲ್ಲಿ ಬಿಜೆಪಿ ಸರ್ಕಾರದ ಭ್ರಷ್ಟಾಚಾರದಿಂದ ಜನರು ಭಯಗೊಂಡಿದ್ದಾರೆ. ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ಭ್ರಷ್ಟಾಚಾರದ ಪ್ರಮಾಣ ಶೇಕಡ 40ರಿಂದ ಶೇ 80ಕ್ಕೆ ಏರಬಹುದು ಎಂಬ ಆತಂಕದಲ್ಲಿದ್ದಾರೆ' ಎಂದು ಎಐಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಚುನಾವಣೆಯಲ್ಲಿ ರಾಜ್ಯದ ಜನರು ಭಾವನಾತ್ಮಕ ವಿಚಾರಗಳಿಗೆ ಆದ್ಯತೆ ನೀಡುವುದಿಲ್ಲ. ಬಿಜೆಪಿಯ ಭ್ರಷ್ಟಾಚಾರದ ಬಗ್ಗೆಯೇ ಭಾವುಕರಾಗಿದ್ದಾರೆ. ಮೇ 10ರಂದು ಮತ ಚಲಾಯಿಸುವಾಗ ಬಿಜೆಪಿ ವಿರುದ್ಧದ ಆಕ್ರೋಶವನ್ನು ಹೊರಹಾಕಲಿದ್ದಾರೆ' ಎಂದರು.

'ಶೇಕಡಾ 40ರ ಕಮಿಷನ್ ಸರ್ಕಾರದ ವಿರುದ್ಧ ಜನರು ಮತ ಚಲಾಯಿಸಲಿದ್ದಾರೆ. ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಅಧಿಕಾರ ಹಿಡಿಯಲಿದೆ' ಎಂದೂ ಪವನ್ ಖೇರಾ ವಿಶ್ವಾಸ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಕೆಪಿಸಿಸಿ ವಕ್ತಾರರಾದ ರಮೇಶ್ ಬಾಬು ಮತ್ತು ಐಶ್ವರ್ಯಾ ಮಹದೇವ್ ಅವರು ಪತ್ರಿಕಾಗೋಷ್ಠಿಯಲ್ಲಿದ್ದರು.

ಮನೆ ಮತದಾನ: ಶೇ 92 ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯಿಂದ ಮತದಾನಕ್ಕೆ ನೋಂದಾಯಿಸಿಕೊಂಡಿದ್ದವರ ಪೈಕಿ ಶೇಕಡ 92.12ರಷ್ಟು ಜನರು ಶುಕ್ರವಾರ ಸಂಜೆಯ ವೇಳೆಗೆ ಮತದಾನ ಮಾಡಿದ್ದಾರೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

80 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯಸ್ಸಾದ ಹಿರಿಯ ನಾಗರಿಕರು ಹಾಗೂ ಅಂಗವಿಕಲರಿಗೆ ಈ ಚುನಾವಣೆಯಲ್ಲಿ ಮನೆಯಿಂದಲೇ ಮತ ಚಲಾಯಿಸಲು ಅವಕಾಶ ನೀಡಲಾಗಿದೆ.

80,250 ಹಿರಿಯ ಮತದಾರರು ಮತ್ತು 19,279 ಅಂಗವಿಕಲರು ಸೇರಿದಂತೆ ಒಟ್ಟು 99,529 ಮಂದಿ ಮನೆಯಿಂದ ಮತದಾನಕ್ಕೆ ಹೆಸರು ನೋಂದಾಯಿಸಿಕೊಂಡಿದ್ದರು.

ಮನೆಯಿಂದ ಮತ ಚಲಾಯಿಸುವ ಪ್ರಕ್ರಿಯೆ ಏಪ್ರಿಲ್ 29ರಿಂದ ಆರಂಭವಾಗಿದ್ದು, ಶನಿವಾರ ಕೊನೆಗೊಳ್ಳಲಿದೆ. 80,250 ಹಿರಿಯ ನಾಗರಿಕರ ಪೈಕಿ 73,743 ಮಂದಿ (ಶೇ 91.89) ಶುಕ್ರವಾರದವರೆಗೆ ಮತ ಚಲಾಯಿಸಿದ್ದಾರೆ. ನೋಂದಾಯಿಸಿಕೊಂಡಿದ್ದ 19,279 ಅಂಗವಿಕಲರಲ್ಲಿ 17,943 ಮಂದಿ (ಶೇ 93.07) ಜನರು ಮತದಾನ ಮಾಡಿದ್ದಾರೆ ಎಂದು ಮೀನಾ ಮಾಹಿತಿ ನೀಡಿದ್ದಾರೆ.

‘ಮೋದಿ ಚಾಲೀಸ ಈ ಬಾರಿ ನಡೆಯಲ್ಲ’

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ಸಂದರ್ಶನ

ಜೈರಾಮ್ ರಮೇಶ್

ಬೆಂಗಳೂರು: ‘ಈ ಬಾರಿ ಚುನಾವಣೆಯಲ್ಲಿ ನಮ್ಮದು (ಕಾಂಗ್ರೆಸ್) ‘ವೋಕಲ್ ಫಾರ್ ಲೋಕಲ್’. ಅವರದ್ದು (ಬಿಜೆಪಿ) ಬರೀ ಮೋದಿ ಪ್ರಚಾರ. ಮೋದಿ ಚಾಲೀಸ ಅಥವಾ ಜಪವೊ ಗೊತ್ತಿಲ್ಲ. ಆ ನಾಟಕ ನಡೆಯುವುದಿಲ್ಲ. ಜನ ಮನಸ್ಸು ಮಾಡಿ ಆಗಿದೆ. ನಮಗೆ ಸ್ಪಷ್ಟ ಬಹುಮತ ಖಚಿತ’ ಎನ್ನುತ್ತಾರೆ ಎಐಸಿಸಿ ಪ್ರಧಾನ ಕಾರ್ಯದರ್ಶಿ, ಕಾಂಗ್ರೆಸ್ಸಿನ ತಾರಾ ಪ್ರಚಾರಕ ಜೈರಾಮ್ ರಮೇಶ್. ‘ಪ್ರಜಾವಾಣಿ’ಗೆ ಅವರು ನೀಡಿದ ವಿಶೇಷ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

• ಈ ಚುನಾವಣೆಯನ್ನು ನೀವು ಯಾವ ರೀತಿ ನೋಡುತ್ತೀರಿ?

ಇದು ವಿಧಾನಸಭೆ ಚುನಾವಣೆ. ರಾಜ್ಯಕ್ಕೆ ಸಂಬಂಧಿಸಿದ ವಿಷಯ ಮುಖ್ಯವೇ ಹೊರತು ರಾಷ್ಟ್ರೀಯ ವಿಚಾರವಲ್ಲ. ಹೀಗಾಗಿ, ನಾವು ಮೊದಲ ಬಾರಿಗೆ ವೋಕಲ್ ಫಾರ್ ಲೋಕಲ್ ಪರಿಕಲ್ಪನೆಯಲ್ಲಿ ಚುನಾವಣೆ ಎದುರಿಸುತ್ತಿದ್ದೇವೆ. ಆದರೆ, ಅವರಲ್ಲಿ (ಬಿಜೆಪಿ) ಸ್ಥಳೀಯ ನಿರೂಪಣೆ ಇಲ್ಲ. ಬರೀ ಮೋದಿ. ಅಮಿತ್ ಶಾ ಬರುತ್ತಾರೆ ಮೋದಿ ಬಗ್ಗೆ ಹೇಳ್ತಾರೆ. ನಡ್ಡಾ ಬರುತ್ತಾರೆ ಮೋದಿ ಬಗ್ಗೆ ಮಾತನಾಡ್ತಾರೆ. ಮೋದಿ ಆಶೀರ್ವಾದ ಇಲ್ಲದಿದ್ದರೆ ನಿಮಗೆ ಅಭಿವೃದ್ಧಿ ಹೇಗೆ ಆಗುತ್ತದೆ ಎನ್ನುತ್ತಾರೆ. ಇದು ಮೋದಿ ಚಾಲೀಸ ಅಥವಾ ಮೋದಿ ಸಹಸ್ರ ನಾಮವೊ ಗೊತ್ತಿಲ್ಲ.

• ಹಾಗಾದರೆ, ‘ಮೋದಿ’ ನಾಮಬಲ ಬಿಜೆಪಿಗೆ ಅನುಕೂಲ ಆಗುವುದಿಲ್ಲವೇ?

ಅವರೊಬ್ಬ ‘ಕಲಾಕರ’. ಏನೇನೊ ಮಾಡುತ್ತಾರೆ. ಅದು ಮತಗಳಾಗಿ ಪರಿವರ್ತನೆಯಾಗುತ್ತೊ, ಇಲ್ಲವೊ ಗೊತ್ತಿಲ್ಲ. ಆದರೆ, ಈ ಬಾರಿ ಅವರ ಮಾತಿನಲ್ಲಿ, ಮುಖದಲ್ಲಿ ಹತಾಶೆ ಕಾಣುತ್ತಿದೆ. ಅವರೊಂದು ಶೈಲಿಯಾದರೆ, ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಮತ ಧ್ರುವೀಕರಣ ಮಾಡುತ್ತಾರೆ. ಆದರೆ, ಇಲ್ಲಿ ಅದು ನಡೆಯುವುದಿಲ್ಲ.

• ಮತದಾರರ ಮನಸ್ಸು ಗೆಲ್ಲುವಲ್ಲಿ ಕಾಂಗ್ರೆಸ್ ಸಫಲವಾಗಿದೆಯೇ?

ನಮ್ಮ ‘ಭಾರತ್ ಜೋಡೊ’ ಯಾತ್ರೆ ಪಕ್ಷ ಸಂಘಟನೆಗೆ ಸಂಜೀವಿನಿಯಾಗಿದೆ. 23 ದಿನಗಳ ಆ ಯಾತ್ರೆ ಕಾರ್ಯಕರ್ತರಲ್ಲಿ ಹೊಸ ಉತ್ಸಾಹ, ಎಲ್ಲ ನಾಯಕರ ಒಗ್ಗಟ್ಟಿಗೆ ಬಲ ತುಂಬಿದೆ. ಗ್ಯಾರಂಟಿ ಘೋಷಣೆಗಳು, ರಾಜ್ಯ ಸರ್ಕಾರದ ಮೇಲಿನ ಶೇ 40 ಕಮಿಷನ್ ಆರೋಪ ಜನರ ಮನಸ್ಸು ತಟ್ಟಿದೆ. ಇದರಿಂದ ಮಾನಸಿಕವಾಗಿ ನಮಗೆ ಲಾಭ ಆಗಿದೆ.

• ಪಕ್ಷದ ಮುಂದಿರುವ ದೊಡ್ಡ ಸವಾಲು ಏನು?

ಮೊದಲ ಬಾರಿ ನಮ್ಮ ಪ್ರಚಾರ ರಚನಾತ್ಮಕವಾಗಿ, ವ್ಯವಸ್ಥಿತವಾಗಿ ನಡೆದಿದೆ. ಇನ್ನಿರುವ 3–4 ದಿನಗಳೂ ತುಂಬ ನಿರ್ಣಾಯಕ. ಆದರೆ, ಏನೇ ಪ್ರಚಾರ ಮಾಡಿದರೂ ಮತದಾನದ ದಿನ (ಮೇ 10) ಬೂತ್ ನಿರ್ವಹಣೆ ಎಲ್ಲದಕ್ಕಿಂತಲೂ ಮುಖ್ಯ. ಅದೇ ದೊಡ್ಡ ಸವಾಲು.


• ಟಿಕೆಟ್ ಹಂಚಿಕೆಯಲ್ಲಿನ ಜಾಣ್ಮೆ ನಿಮಗೆ ಅನುಕೂಲವಾಗಿದೆ ಎಂದು ಅನಿಸಿದೆಯೇ?

ಈ ಹಿಂದಿನ ಚುನಾವಣೆಗೆ ಹೋಲಿಸಿದರೆ ನಮ್ಮಲ್ಲಿ ಈ ಬಾರಿ 10–12 ಕ್ಷೇತ್ರಗಳಲ್ಲಷ್ಟೆ ಬಂಡಾಯವಿದೆ. ನಮಗಿಂತಲೂ ಬಿಜೆಪಿಯಲ್ಲಿ ಭಿನ್ನಮತದ ವೈರಸ್ ಜಾಸ್ತಿಯಿದೆ. ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿಯಂಥ ಹಿರಿಯ ನಾಯಕರಷ್ಟೇ ಅಲ್ಲದೆ, ಸ್ಥಳೀಯಮಟ್ಟದಲ್ಲಿಯೂ ಅನೇಕರು ಕಾಂಗ್ರೆಸ್‌ಗೆ ಬಂದಿರುವುದರಿಂದ 25ರಿಂದ 30 ಸೀಟುಗಳಲ್ಲಿ ನಮಗೆ ಲಾಭ ಆಗಲಿದೆ.

• ಡಬಲ್ ಎಂಜಿನ್ ಸರ್ಕಾರದಿಂದ ಚುನಾವಣೆಯಲ್ಲಿ ಬಿಜೆಪಿಗೆ ಅನುಕೂಲ ಅಲ್ಲವೇ?

ಕರ್ನಾಟಕದಲ್ಲಿ ಎಲ್ಲಿದೆ ಡಬಲ್ ಎಂಜಿನ್? ಇಲ್ಲಿ ಡಬಲ್ ಅಲ್ಲ, ಟ್ರಬಲ್ ಎಂಜಿನ್ ಸರ್ಕಾರ. ಕರ್ನಾಟಕ ರಾಜ್ಯದ ಶೇ 94 ಆದಾಯವು ಸ್ವಯಂ ಸಂಪಾದನೆ ಮತ್ತು ಕೇಂದ್ರದಲ್ಲಿನ ರಾಜ್ಯದ ಪಾಲಿನ ತೆರಿಗೆಗಳಿಂದ ಕೂಡಿದೆ. ಇದು ‘ಮೋದಿ ಆಶೀರ್ವಾದ’ವಲ್ಲ. ಹಳಿ ತಪ್ಪಿರುವ ಕರ್ನಾಟಕದ ಎಂಜಿನ್‌ನನ್ನು ಸರಿದಾರಿಗೆ ಮರಳಿಸಲು ಮೇ 10ರ ಚುನಾವಣೆ ಸಾಕ್ಷಿಯಾಗಲಿದೆ.

‘ಬಜರಂಗಬಲಿ ಬೇರೆ, ಬಜರಂಗ ದಳ ಬೇರೆ’



• ಬಿಜೆಪಿಗೆ ಬಜರಂಗಬಲಿಯನ್ನು ನಿಮ್ಮ ಪಕ್ಷವೇ ಅಸ್ತ್ರವಾಗಿ ಕೊಟ್ಟಿದೆಯಲ್ಲ?

ಬಜರಂಗಬಲಿ ಬೇರೆ, ಬಜರಂಗದಳ ಬೇರೆ. ಬಜರಂಗದಳ ವೆಂದರೆ ಹಿಂಸೆ, ದ್ವೇಷ, ಕೋಮುವಾದಿ ಆತಂಕ. ನಾವು ಪ್ರಣಾಳಿಕೆಯಲ್ಲಿ ಹೇಳಿರುವುದನ್ನು ಅವರು ತಿರುಚಿದ್ದಾರೆ. ಮತ ಯಂತ್ರದ ಬಟನ್ ಒತ್ತುವಾಗ ಜೈ ಬಜರಂಗಬಲಿ ಎಂದು ಹೇಳುವಂತೆ ಮೋದಿ ಕರೆ ನೀಡಿರುವುದು ಚುನಾವಣಾ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆ. ಈ ಬಗ್ಗೆ ಚುನಾವಣಾ ಆಯೋಗಕ್ಕೆ ನಾವು ದೂರು ನೀಡಿದ್ದೇವೆ.

ಈ ಹಿಂದೆ ಗೋವಾ ಬಿಜೆಪಿ ಸರ್ಕಾರ ಶ್ರೀರಾಮ ಸೇನೆಯನ್ನು ನಿಷೇಧಿಸಿತ್ತು. ಆಗಲೂ ಪ್ರಧಾನಿಯಾಗಿದ್ದ ಮೋದಿ ಅವರು ಮೌನವಹಿಸಿದ್ದರಲ್ಲ? ಈಗ ಬಜರಂಗಬಲಿ ವಿಷಯ ಎತ್ತಿದ್ದಾರೆ. ಹಾಗೆಂದು, ಮೋದಿ ಅವರನ್ನು ಅಂಡರ್ ಎಸ್ಟಿಮೇಟ್ ಮಾಡಬಾರದು. ನಾವೂ ಕೌಂಟರ್ ಮಾಡಬೇಕಿದೆ.

ಅಡ್ಡಂಡ ವಿರುದ್ಧ 3ನೇ ಪ್ರಕರಣ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಚುನಾವಣಾ ಪ್ರಚಾರ ಭಾಷಣದಲ್ಲಿ ಪ್ರಚೋದನಾಕಾರಿಯಾಗಿ ಮಾತನಾಡಿದ ಆರೋಪದ ಮೇರೆಗೆ ಮೈಸೂರಿನ ರಂಗಾಯಣದ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ವಿರುದ್ಧ ಮತ್ತೊಂದು ಪ್ರಕರಣ ಇಲ್ಲಿನ ಶ್ರೀಮಂಗಲ ಠಾಣೆಯಲ್ಲಿ ದಾಖಲಾಗಿದೆ. ಇಲ್ಲಿಗೆ ಒಟ್ಟು ಕೊಡಗು ಜಿಲ್ಲೆಯಲ್ಲಿ ಅವರ ವಿರುದ್ಧ ದಾಖಲಾದ ಪ್ರಕರಣಗಳ ಸಂಖ್ಯೆ 3ಕ್ಕೇರಿದೆ.

‘ಟಿ.ಶೆಟ್ಟಿಗೇರಿ ಗ್ರಾಮದಲ್ಲಿ ಮೇ 4ರಂದು ಬಿಜೆಪಿ ಪ್ರಚಾರ ಸಭೆಯಲ್ಲಿ ಕಾರ್ಯಪ್ಪ ಅವರು ಕೊಡವ ಮತ್ತು ಕನ್ನಡ ಭಾಷೆಯಲ್ಲಿ ಧರ್ಮ ಧರ್ಮಗಳ ನಡುವೆ ಸಾಮರಸ್ಯ ಕದಡಿ, ಶತೃತ್ವ ಉಂಟು ಮಾಡುವ, ಜನರ ನೆಮ್ಮದಿಗೆ ಭಂಗ ಉಂಟು ಮಾಡುವ ಮಾತುಗಳನ್ನಾಡಿದ್ದಾರೆ. ಜತೆಗೆ, ಅವರ ಭಾಷಣವು ಸುಳ್ಳಿನಿಂದ ಕೂಡಿದೆ’ ಎಂದು ಆರೋಪಿಸಿ ಸ್ಥಳದಲ್ಲಿದ್ದ ಕ್ಷಿಪ್ರ ಪರಿಶೀಲನಾ ತಂಡದ ಅಧಿಕಾರಿ ಕುಮಾರಸ್ವಾಮಿ ದೂರು ನೀಡಿದ್ದಾರೆ. ತನಿಖೆ ನಡೆದಿದೆ.

‘ಫೇಸ್‌ಬುಕ್ ಖಾತೆಯಲ್ಲಿ ಮತೀಯ ಸಂಘರ್ಷ ಉಂಟು ಮಾಡುವ ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ’ ಎಂದು ಆರೋಪಿಸಿ ಏ. 26ರಂದು ಪೊನ್ನಂಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರೆ, ಕಾಂಗ್ರೆಸ್ ಅಭ್ಯರ್ಥಿ ಎ.ಎಸ್.ಪೊನ್ನಣ್ಣ ವಿರುದ್ಧ ಚಾರಿತ್ರ್ಯ ನಾಶ ಮಾಡುವ ಹೇಳಿಕೆ ನೀಡಿದ್ದಾರೆ’ ಎಂದು ಆರೋಪಿಸಿ ಸಿದ್ದಾಪುರ ಠಾಣೆ ಯಲ್ಲಿ ಮೇ 2ರಂದು ಪ್ರಕರಣ ದಾಖಲಾಗಿದೆ.

ಮತದಾನ ಮಾಡದವರಿಗೆ ಪ್ರವಾಸಿ ತಾಣ ಪ್ರವೇಶಿಸದಂತೆ ನಿರ್ಬಂಧ

ಮಡಿಕೇರಿ: ಮೇ 10ರಂದು ಮತದಾನ ಮಾಡದವರಿಗೆ ಜಿಲ್ಲೆಯ ಎಲ್ಲ ಪ್ರವಾಸಿ ತಾಣಗಳಿಗೆ ಪ್ರವೇಶ ನಿರ್ಬಂಧಿಸಿ ಜಿಲ್ಲಾಡಳಿತ ಶನಿವಾರ ಆದೇಶ ಹೊರಡಿಸಲಿದೆ.

‘ಅಂದು ಬೆಳಿಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯ ತನಕ ನಿರ್ಬಂಧ ಜಾರಿಯಲ್ಲಿರುತ್ತದೆ. ಮತದಾನ ಮಾಡಿದವರಿಗೆ, ಮಕ್ಕಳಿಗೆ ಹಾಗೂ ಹೊರರಾಜ್ಯದ ಪ್ರವಾಸಿಗರಿಗೆ ನಿರ್ಬಂಧ ಅನ್ವಯಿಸುವುದಿಲ್ಲ’ ಎಂದು ಪ್ರವಾಸೋದ್ಯಮ ಇಲಾಖೆಯ ಪ್ರಭಾರ ಉಪನಿರ್ದೇಶಕ ಹಾಗೂ ಉಪವಿಭಾಗಾಧಿಕಾರಿ ಯತೀಶ್ ಉಳ್ಳಾಲ್ ‘ಪ್ರಜಾವಾಣಿ’ಗೆ ತಿಳಿಸಿದರು.



ಬಿಎಸ್‌ಪಿ ರಾಜ್ಯಮಟ್ಟದ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡಿದ್ದ ಪಕ್ಷದ ರಾಷ್ಟ್ರೀಯ ಘಟಕದ ಅಧ್ಯಕ್ಷೆ ಮಾಯಾವತಿ ಅವರಿಗೆ ಪಕ್ಷದ ರಾಜ್ಯ ಘಟಕದಿಂದ ಅಭಿನಂದಿಸಲಾಯಿತು. ಉಸ್ತುವಾರಿ ಮಾರಸಂದ್ರ ಮುನಿಯಪ್ಪ, ಪುಲಕೇಶಿನಗರ ಕ್ಷೇತ್ರದ ಬಿಎಸ್‌ಪಿ ಅಭ್ಯರ್ಥಿ ಅಖಂಡ ಶ್ರೀನಿವಾಸಮೂರ್ತಿ, ಬಿಎಸ್‌ಪಿ ಕೇಂದ್ರೀಯ ಸಂಯೋಜಕ ಅಶೋಕ್ ಸಿದ್ಧಾರ್ಥ, ರಾಜ್ಯ ಘಟಕದ ಅಧ್ಯಕ್ಷ ಕೃಷ್ಣಮೂರ್ತಿ ಇದ್ದರು —ಪ್ರಜಾವಾಣಿ ಚಿತ್ರ

‘ಕೋಮುದ್ವೇಷ ಹೆಚ್ಚಾಗಲು ಬಿಜೆಪಿ, ಕಾಂಗ್ರೆಸ್ ಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ಆಡಳಿತದಲ್ಲಿ ಭ್ರಷ್ಟಾಚಾರ ಮತ್ತು ಕೋಮುಗಲಭೆ ಹೆಚ್ಚಾಗಿದೆ. ಧಾರ್ಮಿಕ ಭಾವನೆ ಕೆಡಿಸುವುದಷ್ಟೇ ಬಿಜೆಪಿಯ ಕಾರ್ಯಸೂಚಿ. ಕೋಮುದ್ವೇಷ ಹೆಚ್ಚಾಗಲು ಕಾಂಗ್ರೆಸ್ ಕೊಡುಗೆಯೂ ಇದೆ’ ಬಿಎಸ್‌ಪಿ ರಾಷ್ಟ್ರೀಯ ಅಧ್ಯಕ್ಷೆ ಮಾಯಾವತಿ ಹೇಳಿದರು.

ಬಿಎಸ್‌ಪಿ ರಾಜ್ಯ ಘಟಕದಿಂದ ಶುಕ್ರವಾರ ಆಯೋಜಿಸಿದ್ದ ರಾಜ್ಯಮಟ್ಟದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ಚುನಾವಣೆ ಕಾಲದಲ್ಲಿ ಹಣ ಕೊಟ್ಟವರ ಪರವಾಗಿ ನೀತಿಗಳನ್ನು ಕಾಂಗ್ರೆಸ್ ಮತ್ತು ಬಿಜೆಪಿ ರೂಪಿಸಿಕೊಂಡು ಬಂದಿವೆ. ಇದರಿಂದಾಗಿ ಬಡತನ, ಅನಕ್ಷರತೆ ಮತ್ತು ಹಸಿವಿನಿಂದ ಜನ ಈಗಲೂ ಕಂಗಾಲಾಗುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ನಾಲ್ಕು ಬಾರಿ ಆಡಳಿತ ನಡೆಸಿದ ಬಿಎಸ್‌ಪಿ, ಎಂದಿಗೂ ಶ್ರೀಮಂತರಿಂದ ಹಣ ಪಡೆದಿಲ್ಲ. ಬಡಜನರ ಕಾಣಿಕೆ ಮತ್ತು ಕಾರ್ಯಕರ್ತರ ಸದಸ್ಯತ್ವ ಶುಲ್ಕದಿಂದ ಬಂದ ಹಣದಿಂದ ಚುನಾವಣೆ ನಡೆಸಿದ್ದೇವೆ. ಅಧಿಕಾರಕ್ಕೆ ಬಂದಾಗ ಬಡವರ ಪರ ನೀತಿ ರೂಪಿಸಿದ್ದೇವೆ’ ಎಂದರು.

‘ಮೀಸಲಾತಿ ಜಾರಿಗೆ ತಂದಿದ್ದು ನಾವು ಎಂದು ಕಾಂಗ್ರೆಸ್ ಹೇಳಿಕೊಳ್ಳುತ್ತಿದೆ. ಅದು ಸಂಪೂರ್ಣ ಸುಳ್ಳು. ಸಂವಿಧಾನವನ್ನು ಯಥಾವತ್ತಾಗಿ ಜಾರಿ ಮಾಡಿದ್ದರೆ ಪರಿಶಿಷ್ಟರು ಮತ್ತು ಹಿಂದುಳಿದ ವರ್ಗಗಳ ಸ್ಥಿತಿ ಈಗಲೂ ಹೀನಾಯವಾಗಿ ಇರುತ್ತಿರಲಿಲ್ಲ’ ಎಂದು ಹೇಳಿದರು.

‘ಮತ ಯಂತ್ರದ ಮೂಲಕ ಚುನಾವಣೆ ನಡೆಸುತ್ತಿದ್ದಾಗ ಬಿಎಸ್‌ಪಿಗೆ ಹೆಚ್ಚಿನ ಮತಗಳು ಬರುತ್ತಿದ್ದವು. ಎಲೆಕ್ಟ್ರಾನಿಕ್ ಮತಯಂತ್ರ ಬಳಕೆಯಾದ ನಂತರ ಮತಗಳ ಪ್ರಮಾಣ ಕಡಿಮೆಯಾಗಿವೆ. ಜನ ಬೆಂಬಲ ಕಡಿಮೆಯಾಗಿಲ್ಲ. ಕಳ್ಳದಾರಿ ಮೂಲಕ ಬಿಜೆಪಿ ಅಧಿಕಾರಕ್ಕೆ ಬರುತ್ತಿದೆ. ಮತಪತ್ರದ ಮೂಲಕ ಚುನಾವಣೆ ನಡೆದರೆ ಉತ್ತರ ಪ್ರದೇಶ ಮಾತ್ರವಲ್ಲ, ಇಡೀ ದೇಶದಲ್ಲಿ ಬಿಎಸ್‌ಪಿ ಅಧಿಕಾರಕ್ಕೆ ಬರಲಿದೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

‘ಪುಲಕೇಶಿನಗರದಲ್ಲಿ ಕಾಂಗ್ರೆಸ್ ಟಿಕೆಟ್ ವಂಚಿತ ಅಂಖಡ ಶ್ರೀನಿವಾಸಮೂರ್ತಿ ಮತ್ತು ಗಾಂಧಿನಗರದಲ್ಲಿ ಬಿಜೆಪಿ ಟಿಕೆಟ್ ವಂಚಿತ ಕೃಷ್ಣಯ್ಯಶೆಟ್ಟಿ ಬಿಎಸ್‌ಪಿಯಿಂದ ಕಣದಲ್ಲಿದ್ದಾರೆ. ಇಡೀ ರಾಜ್ಯದಲ್ಲಿ ಯಾವ ಪಕ್ಷದೊಂದಿಗೂ ಹೊಂದಾಣಿಕೆ ಮಾಡಿಕೊಳ್ಳದೆ 130 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದೇವೆ. ಎಲ್ಲಾ ಅಭ್ಯರ್ಥಿಗಳನ್ನು ಗೆಲ್ಲಿಸಲು ಕಾರ್ಯಕರ್ತರು ಶ್ರಮಿಸಬೇಕು’ ಎಂದು ಮನವಿ ಮಾಡಿದರು.

ಪ್ರಬಲ ಅಭ್ಯರ್ಥಿ ಕಣಕ್ಕಿಳಿಸುವಲ್ಲಿ ಎಡವಿದ ಕಾಂಗ್ರೆಸ್: ‘ಬೊಮ್ಮಾಯಿ ಮಾಮ’ನಿಗೆ ಕಿಚ್ಚನ ಬೆಂಬಲ

‘ತ್ರಿಕೋನ ಸ್ಪರ್ಧೆ’: ಬೊಮ್ಮಾಯಿಗೆ ಸವಾಲು

• ಸಿದ್ದು ಆರ್.ಜಿ.ಹಳ್ಳಿ

ಶಿಗ್ಗಾವಿ ಗಮನ ಸೆಳೆದ ಕಣ

ಸಾಕ್ಷಾತ್ ಸಮೀಕ್ಷೆ

ಹಾವೇರಿ: ಕಳೆದ ಮೂರು ಚುನಾವಣೆಗಳಲ್ಲಿ ‘ಹ್ಯಾಟ್ರಿಕ್’ ಜಯ ಪಡೆದಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಗೆಲುವಿನ ಓಟಕ್ಕೆ ಕಡಿವಾಣ ಹಾಕಲು ಕಾಂಗ್ರೆಸ್ ಪಣ ತೊಟ್ಟಿದೆ. ಕಾಂಗ್ರೆಸ್ ಟಿಕೆಟ್ ಸಿಗದೇ ಬಂಡೆದ್ದಿರುವ ಪಂಚಸಾಲಿ ಸಮುದಾಯದ ಶಶಿಧರ ಯಲಿಗಾರ ಜೆಡಿಎಸ್‌ನಿಂದ ಕಣಕ್ಕಿಳಿದಿದ್ದಾರೆ. ಹೀಗಾಗಿ ಕ್ಷೇತ್ರದಲ್ಲಿ ‘ತ್ರಿಕೋನ ಸ್ಪರ್ಧೆ’ ಉಂಟಾಗಿದ್ದು, ಕಣ ರಂಗೇರಿದೆ.

‘ಶಿಗ್ಗಾವಿ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿರುವ ಇತಿಹಾಸ ಇದೆ. ಆದರೆ, ನನಗೆ ಅವಿರೋಧ ಆಯ್ಕೆ ಬೇಡ. ಕುಸ್ತಿನೇ ಬೇಕು. ನನ್ನ ಕುಸ್ತಿ ಹೊಸ ಪಟ್ಟುಗಳಿಂದ ಕೂಡಿರುತ್ತದೆ. ಯಾರು ಬೇಕಾದರೂ ಕಣಕ್ಕೆ ಬನ್ನಿ’ ಎಂದು ಬಸವರಾಜ ಬೊಮ್ಮಾಯಿ ನೀಡಿದ ಪಂಥಾಹ್ವಾನ ಕಾಂಗ್ರೆಸ್ ನಾಯಕರನ್ನು ತೀವ್ರವಾಗಿ ಕೆರಳಿಸಿದೆ.

ಈ ಬಾರಿ ಬೊಮ್ಮಾಯಿ ವಿರುದ್ಧ ಗೆಲ್ಲುವ ಕುದುರೆಯನ್ನು ಕಣಕ್ಕಿಳಿಸಬೇಕು ಎಂದು ಕಾಂಗ್ರೆಸ್ ತೀವ್ರ ಕಸರತ್ತು ನಡೆಸಿತು. 2008ರಿಂದ 2018ರವರೆಗೆ ಮೂರು ಬಾರಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಅಜ್ಜಂಪೀರ್ ಖಾದ್ರಿ ಅವರು ಬೊಮ್ಮಾಯಿ ವಿರುದ್ಧ ಸೋತಿದ್ದಾರೆ. ಹೀಗಾಗಿ ಈ ಬಾರಿ ಮಾಜಿ ಸಚಿವ ವಿನಯ ಕುಲಕರ್ಣಿ ಅವರನ್ನು ಸಿಎಂ ವಿರುದ್ಧ ಕಣಕ್ಕಿಳಿಸಲು ಯತ್ನಿಸಲಾಯಿತು. ಆದರೆ, ವಿನಯ ಕುಲಕರ್ಣಿ ಧಾರವಾಡ ಗ್ರಾಮೀಣ ಕ್ಷೇತ್ರ ಬಿಟ್ಟು ಬರಲು ಒಪ್ಪಲಿಲ್ಲ.


ದಿಢೀರ್ ಬದಲಾವಣೆ: ತೀವ್ರ ಕುತೂಹಲ ಕೆರಳಿಸಿದ್ದ ಈ ಕ್ಷೇತ್ರಕ್ಕೆ ಕಾಂಗ್ರೆಸ್ ತನ್ನ 4ನೇ ಪಟ್ಟಿಯಲ್ಲಿ ಹುಬ್ಬಳ್ಳಿ ಅಂಜುಮನ್ ಕಮಿಟಿ ಅಧ್ಯಕ್ಷ ಮೊಹಮ್ಮದ್ ಯೂಸುಫ್ ಸವಣೂರ ಹೆಸರನ್ನು ಘೋಷಿಸಿ, ಅಚ್ಚರಿ ಉಂಟು ಮಾಡಿತ್ತು. ಆದರೆ, ಯೂಸುಫ್ ಅವರನ್ನು ಒಂದೇ ದಿನದಲ್ಲಿ ಬದಲಿಸಿ, ಯಾಸಿರ್ ಖಾನ್ ಪಠಾಣ್ ಅವರಿಗೆ ಟಿಕೆಟ್ ಘೋಷಿಸಿತು. ಹಾನಗಲ್ ತಾಲ್ಲೂಕು ಬೊಮ್ಮನಹಳ್ಳಿಯ ಯಾಸಿರ್ ಖಾನ್ ಪಠಾಣ್ ರಿಯಲ್ ಎಸ್ಟೇಟ್ ಉದ್ಯಮಿಯಾಗಿ ಗುರುತಿಸಿಕೊಂಡಿದ್ದಾರೆ.

ಶಿಗ್ಗಾವಿ ಅತಿ ಹೆಚ್ಚು ಲಿಂಗಾಯತ ಹಾಗೂ ಮುಸ್ಲಿಂ ಮತದಾರರಿರುವ ಕ್ಷೇತ್ರ. ಆದ್ದರಿಂದಲೇ, ಬೊಮ್ಮಾಯಿ ವಿರುದ್ಧ ಕಾಂಗ್ರೆಸ್ ಪಕ್ಷ ಮುಸ್ಲಿಂ ಅಭ್ಯರ್ಥಿಯನ್ನೇ ಎಂದಿನಂತೆ ಕಣಕ್ಕಿಳಿಸಿದೆ. ಇತ್ತ, ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಲ್ಲಿ ಒಬ್ಬರಾಗಿದ್ದ ಪಂಚಮಸಾಲಿ ಸಮುದಾಯದ ಶಶಿಧರ ಯಲಿಗಾರ ಕೊನೇ ಕ್ಷಣದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಈ ಮೂವರ ನಡುವೆ ‘ತ್ರಿಕೋನ ಸ್ಪರ್ಧೆ’ ಏರ್ಪಟ್ಟಿದೆ.

ಸಿಎಂ ಪರ ಪತ್ನಿ, ಪುತ್ರ ಪ್ರಚಾರ: ಬೊಮ್ಮಾಯಿ ಅವರ ಪರವಾಗಿ ಪತ್ನಿ ಚನ್ನಮ್ಮ ಮತ್ತು ಪುತ್ರ ಭರತ್ ಪ್ರಚಾರ ಮಾಡುತ್ತಿದ್ದಾರೆ. ರಾಜ್ಯ ಪ್ರವಾಸದ ನಡುವೆ ಸ್ವಲ್ಪ ಬಿಡುವು ಸಿಕ್ಕರೆ ಸಾಕು, ಬೊಮ್ಮಾಯಿ ಕ್ಷೇತ್ರಕ್ಕೆ ಓಡೋಡಿ ಬರುತ್ತಿದ್ದಾರೆ. ರಾಜ್ಯದಲ್ಲಿ ಭುಗಿಲೆದ್ದಿದ್ದ ಪಂಚಮಸಾಲಿ ಸಮುದಾಯದ 2ಎ ಮೀಸಲಾತಿ ಹೋರಾಟದ ನೇರ ಪರಿಣಾಮ ಬೊಮ್ಮಾಯಿ ಪ್ರತಿನಿಧಿಸುವ ಕ್ಷೇತ್ರದ ಮೇಲಾಗಲಿದೆ ಎಂಬ ಮಾತುಗಳು ಈ ಹಿಂದೆ ಕೇಳಿಬಂದಿದ್ದವು. ಬಿಜೆಪಿಗೆ ನಿರ್ಣಾಯಕರಾಗಿರುವ ಪಂಚಮಸಾಲಿ ಸಮುದಾಯ ತಿರುಗಿಬಿದ್ದರೆ, ಸಾದರ ಲಿಂಗಾಯತ ಪಂಗಡದ ಬಸವರಾಜ ಬೊಮ್ಮಾಯಿ ಸಂಕಷ್ಟಕ್ಕೆ ಸಿಲುಕುತ್ತಾರೆ ಎಂಬ ಅಭಿಪ್ರಾಯ ಕೇಳಿಬಂದಿತ್ತು.

ಮೀಸಲಾತಿಗೆ ಸಮ್ಮತಿ: ಬೊಮ್ಮಾಯಿ ನೀಡಿದ ‘2ಡಿ’ ಮೀಸಲಾತಿಗೆ ಹರಿಹರ ಮತ್ತು ಕೂಡಲಸಂಗಮದ ಪಂಚಮಸಾಲಿ ಪೀಠಗಳ ಸ್ವಾಮೀಜಿಗಳು ಸಮ್ಮತಿ ನೀಡಿರುವುದು ಬೊಮ್ಮಾಯಿ ಅವರಿಗೆ ‘ಆನೆಬಲ’ ಬಂದಂತಾಗಿದೆ.

‘ಕೆರೆಗಳಿಗೆ ನೀರು ತುಂಬಿಸಿರುವುದು, ಜವಳಿ ಪಾರ್ಕ್, ಕನಕ ಮತ್ತು ಶರೀಫರ ತಾಣಗಳ ಅಭಿವೃದ್ಧಿ, ನವಾಬರ ಅರಮನೆ ಅಭಿವೃದ್ಧಿ, ಶೈಕ್ಷಣಿಕ ಮತ್ತು ಆರೋಗ್ಯ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಗಳು’ ಗೆಲುವು ತಂದುಕೊಡುತ್ತವೆ ಎಂಬ ವಿಶ್ವಾಸದಲ್ಲಿ ಬೊಮ್ಮಾಯಿ ಇದ್ದಾರೆ. ‘ಬೊಮ್ಮಾಯಿ ಮಾಮ’ನ ಪರ ಚಿತ್ರನಟ ಸುದೀಪ್ ಪ್ರಚಾರ ಗೆಲುವಿಗೆ ಸಹಕಾರಿಯಾಗಬಲ್ಲವು ಎಂಬ ನಿರೀಕ್ಷೆ ಇದೆ.



ಬಸವರಾಜ ಬೊಮ್ಮಾಯಿ



ಯಾಸಿರ್ ಖಾನ್ ಪಠಾಣ್



ಶಶಿಧರ ಯಲಿಗಾರ



2,24,986 ಒಟ್ಟು ಮತದಾರರು

1,16,049 ಪುರುಷರು

1,08,926 ಮಹಿಳೆಯರು

11 ಲೈಂಗಿಕ ಅಲ್ಪಸಂಖ್ಯಾತರು

10 ಕಣದಲ್ಲಿರುವ ಒಟ್ಟು ಅಭ್ಯರ್ಥಿಗಳು

ಪಕ್ಷವಾರು ಮತಗಳಿಕೆ ಪ್ರಮಾಣ

ಪಕ್ಷ	2018	2013	2008
ಬಿಜೆಪಿ	83,868	73,007	63,780
ಕಾಂಗ್ರೆಸ್	74,603	63,504	50,918
ಜೆಡಿಎಸ್	1,353	1,531	2,149

ಇತ್ತ, ಕಾಂಗ್ರೆಸ್ ಅಭ್ಯರ್ಥಿ ಯಾಸಿರ್ ಖಾನ್ ಪಠಾಣ್, ‘ಮೂರು ಬಾರಿ ಗೆದ್ದ ಬೊಮ್ಮಾಯಿ ಜಲಸಂಪನ್ಮೂಲ ಸಚಿವ, ಗೃಹ ಸಚಿವ ಹಾಗೂ ಮುಖ್ಯಮಂತ್ರಿಯಾಗಿ ಎಲ್ಲ ಅಧಿಕಾರ ಅನುಭವಿಸಿದ್ದಾರೆ. ನಿಮ್ಮ ಸೇವೆ ಮಾಡಲು ನನಗೂ ಒಮ್ಮೆ ಅವಕಾಶ ಕೊಡಿ’ ಎಂದು ಕೇಳುತ್ತಿದ್ದಾರೆ.

‘ಕೋವಿಡ್ ಸಂದರ್ಭದಲ್ಲಿ ನೀಡಿರುವ ನೆರವು, ಸಮಾಜ ಸೇವೆ ಮತ್ತು ಜೆಡಿಎಸ್ ಸರ್ಕಾರದ ಸಾಧನೆ ನೋಡಿ ಮತದಾರರು ನನ್ನನ್ನು ಬೆಂಬಲಿಸುತ್ತಾರೆ’ ಎನ್ನುವ ವಿಶ್ವಾಸದಲ್ಲಿ ಜೆಡಿಎಸ್ ಅಭ್ಯರ್ಥಿ ಶಶಿಧರ ಯಲಿಗಾರ ಇದ್ದಾರೆ.

ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸುವ ಕುರುಬರು, ಎಸ್‌ಸಿ, ಎಸ್‌ಟಿ ಮತಗಳನ್ನು ಸೆಳೆಯಲು ಎಲ್ಲ ಅಭ್ಯರ್ಥಿಗಳು ಕಸರತ್ತು ನಡೆಸುತ್ತಿದ್ದಾರೆ. ಕಾಂಗ್ರೆಸ್ ಈ ಬಾರಿ ಪ್ರಬಲ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದರೆ, ಕ್ಷೇತ್ರದ ಚಿತ್ರಣವೇ ಬದಲಾಗುತ್ತಿತ್ತು ಎಂದು ಮತದಾರರು ಮಾತನಾಡುತ್ತಿದ್ದಾರೆ.

ರೋಡ್ ಶೋ, ಆಯತಪ್ಪಿದ ಸೋಮಣ್ಣ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ನಗರದ ಸಂತೇಮರಹಳ್ಳಿ ವೃತ್ತದಲ್ಲಿ ಶುಕ್ರವಾರ ಪ್ರಚಾರದಲ್ಲಿದ್ದಾಗ ವಾಹನದಿಂದ ಆಯತಪ್ಪಿ ಬೀಳಲಿದ್ದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಅವರನ್ನು ಚಿತ್ರನಟ ಸುದೀಪ್ ಕೈ ಹಿಡಿದು ಮೇಲೆತ್ತಿದರು.

ಸುದೀಪ್ ಪ್ರಚಾರ ವಾಹನ ಏರಿ, ಸೋಮಣ್ಣ ಅವರ ಕೈ ಎತ್ತಿ ಹಿಡಿದು ಬೆಂಬಲಿಸುವಂತೆ ಅಭಿಮಾನಿಗಳಿಗೆ ಕರೆ ನೀಡುತ್ತಿದ್ದಾಗ ಘಟನೆ ನಡೆಯಿತು. ಇಬ್ಬರೂ ಕೈಹಿಡಿದು ಮಾತನಾಡುತ್ತಿದ್ದಾಗ ಅಭಿಮಾನಿಯೊಬ್ಬ ವಾಹನ ಏರಿ, ತಾನು ಆಯತಪ್ಪಿ ಬೀಳುವುದನ್ನು ತಡೆಯುವುದಕ್ಕಾಗಿ ಸೋಮಣ್ಣ ಅವರನ್ನು ಹಿಡಿದುಕೊಂಡಾಗ ಅವರು ಆಯತಪ್ಪಿ ಬೀಳುವಂತಾದರು. ಅವರ ಕೈ ಹಿಡಿದುಕೊಂಡಿದ್ದ ಸುದೀಪ್, ಗಟ್ಟಿಯಾಗಿ ಹಿಡಿದು ಕೆಳಕ್ಕೆ ಬೀಳುವುದನ್ನು ತಪ್ಪಿಸಿದರು. ಸುದೀಪ್ ಅಂಗರಕ್ಷಕ ಕೂಡ ಸೋಮಣ್ಣ ಅವರನ್ನು ಹಿಡಿದು ರಕ್ಷಿಸಿದರು. ಆ ಸಂದರ್ಭದ ವಿಡಿಯೊ ಎಲ್ಲೆಡೆ ಹರಿದಾಡಿತ್ತು.

ಗುಂಡ್ಲುಪೇಟೆ, ಕೊಳ್ಳೇಗಾಲ ಕ್ಷೇತ್ರದ ಯಳಂದೂರು, ಹನೂರಿನಲ್ಲಿ ಸುದೀಪ್ ರೋಡ್ ಶೋ ನಡೆಸಿದರು. ಚಾಮರಾಜನಗರದ ಎರಡು ವೃತ್ತಗಳಲ್ಲಿ ಕಾಣಿಸಿಕೊಂಡು ಮತ ಯಾಚಿಸಿದರು. ಎಲ್ಲೆಡೆ ಕಿಕ್ಕಿರಿದು ಸೇರಿದ್ದ ಅಭಿಮಾನಿಗಳು ನೆಚ್ಚಿನ ನಟನನ್ನು ಕಂಡು ಕುಣಿದು ಕುಪ್ಪಳಿಸಿದರು.



ಆಯತಪ್ಪಿ ಬೀಳುತ್ತಿದ್ದ ಸೋಮಣ್ಣ ಅವರನ್ನು ಸುದೀಪ್ ಹಿಡಿದುಕೊಂಡರು

‘ಅಭಿವೃದ್ಧಿಗೆ ತ್ರಿವಿಧ ದಾಸೋಹ’

ಪ್ರಜಾವಾಣಿ ವಾರ್ತೆ

ತುಮಕೂರು: ‘ಅನ್ನ, ಅಕ್ಷರ, ಆಶ್ರಯದ ಮೂಲಕ ಸಿದ್ಧಗಂಗಾ ಮಠದ ಲಿಂಗೈಕ್ಯ ಶಿವಕುಮಾರ ಸ್ವಾಮೀಜಿ ನಮಗೆಲ್ಲ ಬದುಕಿನ ದಾರಿ ತೋರಿಸಿಕೊಟ್ಟಿದ್ದಾರೆ. ಅವರ ಆಶಯದಂತೆ ತ್ರಿವಿಧ ದಾಸೋಹದ ಕಲ್ಪನೆಯೊಂದಿಗೆ ರಾಜ್ಯದ ಅಭಿವೃದ್ಧಿಗೆ ಸಂಕಲ್ಪ ಮಾಡಿದ್ದೇವೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಶುಕ್ರವಾರ ಬಿಜೆಪಿ ಅಭ್ಯರ್ಥಿಗಳ ಪರ ನಡೆದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

ಕಾಂಗ್ರೆಸ್, ಜೆಡಿಎಸ್ ವಿರುದ್ಧ ವಾಗ್ದಾಳಿ ಮುಂದುವರಿಸಿದ ಅವರು, ‘ಜೆಡಿಎಸ್‌ನ ಎಲ್ಲ ಅಭ್ಯರ್ಥಿಗಳು ಕಾಂಗ್ರೆಸ್‌ನ ಅಭ್ಯರ್ಥಿಗಳಿದ್ದಂತೆ. ಈ ಎರಡು ಪಕ್ಷಗಳಿಗೆ ಮತ ನೀಡಿದರೆ ಅಸ್ಥಿರ ಸರ್ಕಾರಕ್ಕೆ ದಾರಿಯಾಗಲಿದೆ. ಇದರಿಂದ ರಾಜ್ಯ, ದೇಶದ ಅಭಿವೃದ್ಧಿ ಕುಂಠಿತವಾಗಲಿದೆ. ಅವರಿಂದ ಸಮರ್ಥ ಸರ್ಕಾರ ನಿರ್ಮಾಣ ಸಾಧ್ಯವಿಲ್ಲ. ಒಂದು ಕುಟುಂಬದ ಉದ್ಧಾರಕ್ಕಾಗಿ ಮತ ನೀಡಬೇಡಿ. ಬಿಜೆಪಿಗೆ ವೋಟು ಕೊಟ್ಟರೆ ವ್ಯರ್ಥವಾಗುವುದಿಲ್ಲ. ನೀವು ಕೊಡುವ ಒಂದೊಂದು ಮತವೂ ದೇಶದ ಪ್ರಗತಿಗೆ ಬಳಕೆಯಾಗಲಿದೆ’ ಎಂದರು.

ಜೈ ಬಜರಂಗಬಲಿ ಎಂದು ಕೂಗಿದರೂ ಕಾಂಗ್ರೆಸ್‌ನವರಿಗೆ ತೊಂದರೆಯಾಗುತ್ತದೆ. ದೇಶ ಮರೆತು ವೋಟ್ ಬ್ಯಾಂಕ್‌ನ ಗುಲಾಮರಾಗಿದ್ದಾರೆ. ನಮ್ಮನ್ನು ಕಮಿಷನ್ ಸರ್ಕಾರ ಎನ್ನುತ್ತಾರೆ. ಇವರೇ ಶೇ 85ರಷ್ಟು ಕಮಿಷನ್ ಪಡೆಯುವುದನ್ನು ಒಪ್ಪಿಕೊಂಡಿದ್ದಾರೆ. ಹಿಂದಿನ ಪ್ರಧಾನಿ ದಿ.ರಾಜೀವ್ ಗಾಂಧಿ ಅವರು ದೆಹಲಿಯಲ್ಲಿ 100 ಪೈಸೆ ನೀಡಿದರೆ, ಹಳ್ಳಿಯ ಫಲಾನುಭವಿಗೆ 15 ಪೈಸೆ ಮುಟ್ಟುತ್ತದೆ ಎಂದು ಹೇಳಿದ್ದರು. ಕಾಂಗ್ರೆಸ್‌ನವರಿಗೆ ದೇಶವನ್ನು ಲೂಟಿಮಾಡಿ ಗೊತ್ತಿದೆಯೇ ಹೊರತು ಅಭಿವೃದ್ಧಿ ವಿಚಾರ ಗೊತ್ತಿಲ್ಲ. ಕಳೆದ 75 ವರ್ಷಗಳಲ್ಲಿ ಮಾಡಿದ ಸಾಧನೆಯನ್ನು ಕೇವಲ 9 ವರ್ಷಗಳಲ್ಲಿ ಮಾಡಿ ತೋರಿಸಿದ್ದೇವೆ. ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ಅಭಿವೃದ್ಧಿ ವೇಗ ಹೆಚ್ಚಾಗಲಿದೆ ಎಂದರು.

ಶೈಕ್ಷಣಿಕವಾಗಿಯೂ ಮುನ್ನಡೆ ಸಾಧಿಸಲು ನೂತನ ಶಿಕ್ಷಣ ನೀತಿಯನ್ನು ಜಾರಿಗೆ ತಂದರೆ ಅದಕ್ಕೆ ಕಾಂಗ್ರೆಸ್‌ನವರು ವಿರೋಧ ವ್ಯಕ್ತಪಡಿಸುತ್ತಾರೆ. ಬಡವರ ಮಕ್ಕಳು ವೈದ್ಯರು, ಎಂಜಿನಿಯರ್ ಆಗುವುದನ್ನು ಬಯಸುತ್ತಿಲ್ಲ. ಮಾತೃಭಾಷೆಯಲ್ಲಿ ಕಲಿಯಲು ಅವಕಾಶ ಕಲ್ಪಿಸಲಾಗಿದೆ. ಆದರೆ, ಕಾಂಗ್ರೆಸ್‌ನವರಿಗೆ ಇಂಗ್ಲಿಷ್ ಭಾಷೆ ಮೇಲೆಯೇ ಪ್ರೀತಿ ಎಂದು ಕುಟುಕಿದರು.

ಏಷ್ಯಾದಲ್ಲೇ ಅತಿ ದೊಡ್ಡದಾದ ಎಚ್‌ಎಎಲ್ ಘಟಕವನ್ನು ಜಿಲ್ಲೆಯಲ್ಲಿ ಆರಂಭಿಸಲಾಗಿದೆ. ಇಂತಹ ಕೆಲಸಗಳ ಮೂಲಕ ಮುಂದಿನ ದಿನಗಳಲ್ಲಿ ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧ್ಯವಾಗಲಿದೆ. ಕಾಂಗ್ರೆಸ್ ಆಡಳಿತ ನಡೆಸಿದ ಸಮಯದಲ್ಲಿ ಎಚ್‌ಎಎಲ್ ಲಾಭ ಕಂಡಿದ್ದೇ ಇಲ್ಲ. ಬಿಜೆಪಿ ಅಧಿಕಾರಕ್ಕೆ ಬಂದ ನಂತರ ನಷ್ಟದಿಂದ ಲಾಭದ ದಾರಿ ಹಿಡಿದಿದೆ ಎಂದು ಹೇಳಿದರು.



ತುಮಕೂರಿನ ಜೂನಿಯರ್ ಕಾಲೇಜು ಮೈದಾನದಲ್ಲಿ ಶುಕ್ರವಾರ ನಡೆದ ಬಿಜೆಪಿ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಜನರಿಗೆ ನಮಿಸಿದರು

₹ 9.21 ಕೋಟಿ ಮೌಲ್ಯದ ಸ್ವತ್ತು ವಶ

ಪ್ರಜಾವಾಣೀ ವಾರ್ತೆ

ಬೆಂಗಳೂರು: ಚುನಾವಣಾ ಅಕ್ರಮ ತಡೆಗೆ ರಾಜ್ಯದ ವಿವಿಧೆಡೆ ಗುರುವಾರ ನಡೆಸಿದ ಕಾರ್ಯಾಚರಣೆಗಳಲ್ಲಿ ₹ 5.38 ಕೋಟಿ ನಗದು ಸೇರಿದಂತೆ ₹ 9.21 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

₹ 2.84 ಕೋಟಿ ಮೌಲ್ಯದ 45,170 ಲೀಟರ್ ಮದ್ಯ, ₹ 91.48 ಲಕ್ಷ ಮೌಲ್ಯದ 86.99 ಕೆ.ಜಿ. ಮಾದಕ ವಸ್ತು ಮತ್ತು ₹ 7.12 ಲಕ್ಷ ಮೌಲ್ಯದ ಉಚಿತ ಕೊಡುಗೆಗಳನ್ನು ಗುರುವಾರ ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಚುನಾವಣಾ ನೀತಿಸಂಹಿತೆ ಜಾರಿಯಾದ ದಿನದಿಂದ ಈವರೆಗೆ ಒಟ್ಟು ₹ 340.23 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಚುನಾವಣಾ ಅಕ್ರಮದ ಆರೋಪದಡಿ 2,672 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಅಬಕಾರಿ ಕಾಯ್ದೆ ಉಲ್ಲಂಘನೆ ಆರೋಪದಡಿ 38,000ಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

‘ಚುನಾವಣೆ ಯುದ್ಧ ಅಲ್ಲ, ಸ್ಪರ್ಧೆ ಅಷ್ಟೇ’

ಪ್ರಜಾವಾಣಿ ವಾರ್ತೆ



ಶಿವರಾಜ್ ಕುಮಾರ್

ಶಿವಮೊಗ್ಗ: ‘ಚುನಾವಣೆ ಯುದ್ಧ ಅಲ್ಲ. ಅದೊಂದು ಸ್ಪರ್ಧೆ ಅಷ್ಟೇ. ನಾನು ಯಾವ ಪಕ್ಷದ ಪರವಾಗಿಯೂ ಇಲ್ಲ. ಆದರೆ, ಕೆಲವು ಅಭ್ಯರ್ಥಿಗಳ ಪರ ಪ್ರಚಾರ ಮಾಡಲು ಬಂದಿದ್ದೇನೆ. ನಾನು ಎಲ್ಲರನ್ನೂ ಗೌರವಿಸುತ್ತೇನೆ’ ಎಂದು ನಟ ಶಿವರಾಜ್‌ಕುಮಾರ್ ಹೇಳಿದರು.

ವರುಣ ಕ್ಷೇತ್ರದಲ್ಲಿ ಪ್ರಚಾರ ನಡೆಸಿದ್ದಕ್ಕೆ, ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ಮತ್ತು ಸಂಸದ ಪ್ರತಾಪ ಸಿಂಹ ಅಸಮಾಧಾನ ವ್ಯಕ್ತಪಡಿಸಿದ್ದರು. ಇದಕ್ಕೆ ಶುಕ್ರವಾರ ಇಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಇಲ್ಲಿ ಅಸಮಾಧಾನ ವ್ಯಕ್ತಪಡಿಸುವುದೇನಿದೆ? ಪುನೀತ್ ರಾಜ್‌ಕುಮಾರ್ ಹೆಸರಲ್ಲಿ ಸೇವೆ ಮಾಡುವವರು ಅದನ್ನು ಹೇಳಿಕೊಳ್ಳುವುದಿಲ್ಲ. ಇನ್ನೊಬ್ಬರ ಬಗ್ಗೆ ಮಾತನಾಡುವಾಗ ಸ್ವಲ್ಪ ಯೋಚಿಸಬೇಕಿತ್ತು’ ಎಂದು ಹೇಳಿದರು.

‘ಸೋಮಣ್ಣ, ಪ್ರತಾಪ ಸಿಂಹ ಬಗ್ಗೆ ನನಗೆ ಗೌರವವಿದೆ. ಬಿಜೆಪಿಯವರು ನನ್ನನ್ನು ಸಂಪರ್ಕ ಮಾಡಿಲ್ಲ. ಕರೆದರೆ ಹೋಗುತ್ತಿದ್ದೆ. ಸುದೀಪ್ ಕೂಡ ಪ್ರಚಾರ ಮಾಡುತ್ತಿದ್ದಾರೆ. ನಾವಿಬ್ಬರೂ ಸ್ನೇಹಿತರು. ಅವರು ಪ್ರಚಾರಕ್ಕೆ ಹೋಗಿದ್ದಾರೆ ಅಂದರೆ ಮಾತನಾಡಿಸದೇ ಇರಲು ಸಾಧ್ಯವಾ? ನನಗೆ 61 ವರ್ಷ. ನಾನೇನು ಚಿಕ್ಕ ಹುಡುಗನಾ’ ಎಂದು ಪ್ರಶ್ನಿಸಿದರು.

ಹಗುರ ಮಾತು ಸಲ್ಲದು: ವಿಜಯ್



ದುನಿಯಾ ವಿಜಯ್

ಮೈಸೂರು: ‘ದೊಡ್ಡಮನೆಯ ಮಗ ನಟ ಶಿವರಾಜ್ ಕುಮಾರ್ ಅವರ ಬಗ್ಗೆ ಯಾರೂ ಹಗುರವಾಗಿ ಮಾತನಾಡಬಾರದು’ ಎಂದು ನಟ ದುನಿಯಾ ವಿಜಯ್ ಹೇಳಿದರು.

ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಪರವಾಗಿ ಪ್ರಚಾರಕ್ಕೆಂದು ಶುಕ್ರವಾರ ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ‘ಶಿವರಾಜ್ ಕುಮಾರ್ ಎಲ್ಲರನ್ನೂ ಪ್ರೀತಿಸುವವರು. ಯಾರು ಕರೆದರೂ ಪ್ರಚಾರಕ್ಕೆ ಹೋಗುತ್ತಾರೆ. ಅಣ್ಣಾವ್ರ ಮನೆಯವರು, ದೊಡ್ಡತನ ಹೊಂದಿರುವವರು. ದೇವರಂತಹ ಮನಸ್ಸಿವರು. ಯಾವುದೇ ಕಾರಣಕ್ಕೂ ದೊಡ್ಡತನವನ್ನು ಕಳೆದುಕೊಂಡವರಲ್ಲ. ಅವರ ಬಗ್ಗೆ ಮಾತನಾಡುವುದು ತಪ್ಪು’ ಎಂದರು.

‘ವರುಣ ಜನ ಮನೆ ಮಗನನ್ನು ಗೆಲ್ಲಿಸುತ್ತಾರೆ. ಸಿದ್ದರಾಮಯ್ಯ ಅವರು ಮತ್ತೊಮ್ಮೆ ಮುಖ್ಯಮಂತ್ರಿ ಆಗುತ್ತಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ವಿರುದ್ಧ ಬಿಜೆಪಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಪಕ್ಷ ನೀಡಿರುವ ಜಾಹೀರಾತುಗಳಲ್ಲಿ ಬಿಜೆಪಿ ಸರ್ಕಾರದ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿದ್ದು, ಇದರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಚುನಾವಣಾ ಆಯೋಗಕ್ಕೆ ಬಿಜೆಪಿ ದೂರು ನೀಡಿದೆ.

ಕೆಲವು ಪತ್ರಿಕೆಗಳಲ್ಲಿ ಜಾಹೀರಾತು ಕೊಟ್ಟಿರುವ ಕಾಂಗ್ರೆಸ್ ಪಕ್ಷವು ಸುಳ್ಳು ರೇಟ್ ಕಾರ್ಡ್, ಭ್ರಷ್ಟಾಚಾರದ ಆರೋಪ ಮಾಡಿದೆ. ಇದರ ವಿರುದ್ಧ ಕ್ರಮಕೈಗೊಳ್ಳಬೇಕು. ಬಿಜೆಪಿ ಸರ್ಕಾರವನ್ನು ಟ್ರಬಲ್ ಎಂಜಿನ್ ಸರ್ಕಾರ, ಶೇ 40 ಸರ್ಕಾರ ಎಂದು ಸಂಬೋಧಿಸಿದೆ. ಇದರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದೆ.

‘ಆರ್‌.ಡಿ. ಪಾಟೀಲ ಗೆದ್ದರೆ ಸಚಿವ’

ಪ್ರಜಾವಾಣಿ ವಾರ್ತೆ

ಅಫಜಲಪುರ (ಕಲಬುರಗಿ): ಪಿಎಸ್‌ಐ ಹಗರಣದಲ್ಲಿ ಜೈಲುವಾಸ ಅನುಭವಿಸಿ ಜಾಮೀನಿನ ಮೇಲೆ ಬಿಡುಗಡೆಯಾಗಿ ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಿರುವ ಆರ್‌.ಡಿ. ಪಾಟೀಲ ಪರ ಶುಕ್ರವಾರ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಅಖಿಲೇಶ್ ಯಾದವ್ ಪ್ರಚಾರ ಮಾಡಿದರು. ‘ಪಾಟೀಲ ಗೆದ್ದರೆ ಸಮ್ಮಿಶ್ರ ಸರ್ಕಾರದಲ್ಲಿ ಸಚಿವರಾಗುವರು’ ಎಂದು ಭರವಸೆ ನೀಡಿದರು.

ಶುಕ್ರವಾರ ಆಯೋಜಿಸಿದ್ದ ಆರ್‌.ಡಿ. ಪಾಟೀಲ ಪರ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಮತ್ತು ಅಫಜಲಪುರ ಮತಕ್ಷೇತ್ರದಲ್ಲಿ ಸಮಾಜವಾದಿ ಪಕ್ಷದ ಪರ ಅಲೆ ಎದ್ದಿದೆ. ಹೀಗಾಗಿ ಆರ್‌.ಡಿ.ಪಾಟೀಲ್ ಅವರಿಗೆ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸಿದರೆ, ಸಮ್ಮಿಶ್ರ ಸರ್ಕಾರದಲ್ಲಿ ಸಚಿವರನ್ನಾಗಿ ಮಾಡುತ್ತೇವೆ’ ಎಂದರು.

‘ದೇಶದ ಪ್ರಧಾನಿಯಾಗಲು ಉತ್ತರ ಪ್ರದೇಶಕ್ಕೆ ಬರುತ್ತಾರೆ. ಆದರೆ, ನಾನು ಆರ್‌.ಡಿ. ಪಾಟೀಲ ಗೆಲುವಿಗೆ ಅಫಜಲಪುರಕ್ಕೆ ಬಂದಿದ್ದೇನೆ. ಕಾಂಗ್ರೆಸ್ ಮತ್ತು ಬಿಜೆಪಿಗೆ ಈ ಚುನಾವಣೆಯಲ್ಲಿ ತಕ್ಕ ಉತ್ತರ ನೀಡಿ. ನಾನು ಯಾವತ್ತೂ ನಿಮ್ಮ ಪರವಾಗಿ ಇರುತ್ತೇನೆ’ ಎಂದರು.

ಅಭ್ಯರ್ಥಿ ಆರ್‌.ಡಿ. ಪಾಟೀಲ ಮಾತನಾಡಿ, ‘ನನ್ನ ಮೇಲೆ ರಾಜಕೀಯ ಕುತಂತ್ರದಿಂದ 13 ಪ್ರಕರಣಗಳು ದಾಖಲಾಗಿವೆ. ಇದಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ನಾನು ಕಾನೂನನ್ನು ಗೌರವಿಸುತ್ತೇನೆ. ಚುನಾವಣೆಯಲ್ಲಿ ಸೋತರೂ ಅಥವಾ ಗೆದ್ದರೂ ನಾನು ನಿರಂತರವಾಗಿ ಜನರ ಜತೆ ಇರುತ್ತೇನೆ’ ಎಂದರು.



ಅಖಿಲೇಶ್ ಯಾದವ್



ಆರ್‌.ಡಿ. ಪಾಟೀಲ

ಬಹುತೇಕ ಶಾಂತಗೊಂಡ ಮಣಿಪುರ

ಬಂಡುಕೋರರು, ಭದ್ರತಾ ಪಡೆಗಳ ನಡುವೆ ಸಂಘರ್ಷ • ಸಾವಿನ ಮಾಹಿತಿ ಕೊಡದ ಪೊಲೀಸರು



ಇಂಫಾಲ್‌ದ ರಸ್ತೆಯೊಂದರಲ್ಲಿ ಶುಕ್ರವಾರ ಸುಟ್ಟು ಕರಕಲಾಗಿ ಬಿದ್ದಿರುವ ಕಾರು —ಪಿಟಿಐ ಚಿತ್ರ

ಇಂಫಾಲ್ (ಪಿಟಿಐ/ರಾಯಿಟರ್ಸ್): ಕಳೆದ ಎರಡು ದಿನ ನಡೆದ ಗಲಭೆಯಿಂದಾಗಿ ಪ್ರಕ್ಷುಬ್ಧಗೊಂಡಿದ್ದ ಮಣಿಪುರವು, ಶುಕ್ರವಾರ ತುಸುಮಟ್ಟಿಗೆ ಶಾಂತವಾದಂತೆ ಕಂಡುಬಂತು.

ಮಣಿಪುರವು ಬಹುತೇಕ ಶಾಂತಿಯುತವಾಗಿದೆ ಎಂದು ತೋರಿದರೂ, ಗುಡ್ಡಗಾಡು ಪ್ರದೇಶಗಳಲ್ಲಿ ನೆಲೆಯೂರಿರುವ ಬಂಡುಕೋರರು ಹಾಗೂ ಭದ್ರತಾ ಪಡೆಗಳ ನಡುವೆ ಶುಕ್ರವಾರ ಗುಂಡಿನ ದಾಳಿ ನಡೆದಿದೆ. ಚುರ್ಚಾಂದ್‌ಪುರ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಘರ್ಷಣೆ ನಡೆದಿದೆ.

ಶುಕ್ರವಾರ ನಡೆದ ಗುಂಡಿನ ದಾಳಿಗಳಲ್ಲಿ ಸಾವು-ನೋವು ಸಂಭವಿಸಿರುವ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ಎರಡು ದಿನಗಳಿಂದ ನಡೆಯುತ್ತಿರುವ ಗಲಭೆಯಲ್ಲಿ ಎಷ್ಟು ಜನರು ಮೃತಪಟ್ಟಿದ್ದಾರೆ ಎನ್ನುವ ಮಾಹಿತಿಯನ್ನೂ ಪೊಲೀಸರು ನೀಡುತ್ತಿಲ್ಲ. ಹಲವರು ಮೃತಪಟ್ಟು, ನೂರಾರು ಜನರಿಗೆ ಗಾಯಗಳಾಗಿವೆ ಎಂದು ಕೆಲವು ಸ್ಥಳೀಯ ಸಂಘಟನೆಗಳು ಮಾಹಿತಿ ನೀಡಿವೆ.

'ಕೆಲವು ದುಷ್ಕರ್ಮಿಗಳು ಪೊಲೀಸ್ ಠಾಣೆಗಳಿಗೆ ನುಗ್ಗಿ, ಶಸ್ತ್ರಾಸ್ತ್ರಗಳನ್ನು ಕಳವು ಮಾಡಿದ್ದಾರೆ. ಬೀದಿ ಬದಿಯಲ್ಲಿ ನಿಲ್ಲಿಸಿದ ಕೆಲವು ವಾಹನಗಳಿಗೆ ಕೆಲವರು ಬೆಂಕಿ ಹಚ್ಚಿದ್ದು ಬಿಟ್ಟರೆ, ಬೇರೆ ಅಹಿತಕರ ಘಟನೆ ನಡೆದಿಲ್ಲ' ಎಂದು ಪೊಲೀಸ್ ಮಹಾನಿರ್ದೇಶಕ ಪಿ. ಡೌಂಗಲ್ ತಿಳಿಸಿದರು.

ಭದ್ರತೆ: ಮೇ 4 ಮತ್ತು 5ರಂದು ಗಲಭೆ ನಡೆದ ಪ್ರದೇಶಗಳಿಂದ ಎಲ್ಲಾ ಸಮುದಾಯದ ಜನರನ್ನು ತೆರವು ಮಾಡುವ ಕಾರ್ಯಾಚರಣೆಯು ಗುರುವಾರ ಇಡೀ ರಾತ್ರಿ ನಡೆದಿದೆ. ಜೊತೆಗೆ ಚುರ್ಚಾಂದ್‌ಪುರ ಸೇರಿದಂತೆ ಇತರೆ ಸೂಕ್ಷ್ಮ ಪ್ರದೇಶಗಳಲ್ಲಿ ಪಥ ಸಂಚಲನ ನಡೆಸುತ್ತಿದ್ದೇವೆ' ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಸೂಕ್ಷ್ಮ ಪ್ರದೇಶಗಳಿಂದ ರಕ್ಷಣೆ ಮಾಡಿದ ಸುಮಾರು 20 ಸಾವಿರ ಜನರನ್ನು ಭದ್ರತಾ ಪಡೆಗಳು ಇರುವ ಶಿಬಿರಗಳಲ್ಲಿ ಇರಿಸಲಾಗಿದೆ.

ಶುಕ್ರವಾರದ ಬೆಳವಣಿಗೆ...

- ಕರ್ನಾಟಕದಲ್ಲಿ ನಡೆಸಬೇಕಿದ್ದ ಚುನಾವಣಾ ಪ್ರಚಾರವನ್ನು ಕೈಬಿಟ್ಟು, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಣಿಪುರದ ಗಲಭೆ ಸಂಬಂಧ ಕಾರ್ಯಪ್ರವೃತ್ತರಾಗಿದ್ದಾರೆ. ಗಲಭೆಯ ಬಗ್ಗೆ ಶಾ ಅವರು ತೀವ್ರ ನಿಗಾ ಇರಿಸಿದ್ದು, ಹಿರಿಯ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದಾರೆ
- ಗುರುವಾರ ನಡೆದ ಗಲಭೆಯಲ್ಲಿ ಬಿಜೆಪಿ ಶಾಸಕ ವುನ್‌ಜಾಗಿನ್ ವಾಲ್ಟೆ ಅವರಿಗೆ ಗಂಭೀರ ಗಾಯವಾಗಿತ್ತು. ಶುಕ್ರವಾರವೂ ಅವರ ಆರೋಗ್ಯದಲ್ಲಿ ಯಾವುದೇ ಸುಧಾರಣೆ ಕಂಡುಬಂದಿಲ್ಲ ಎನ್ನಲಾಗಿದೆ
- ಕ್ಷಿಪ್ರ ಕಾರ್ಯಪಡೆಯ (ಆರ್‌ಎಎಫ್) 700 ಸಿಬ್ಬಂದಿಯನ್ನು ವಾಯು ಮಾರ್ಗದ ಮೂಲಕ ಮಣಿಪುರಕ್ಕೆ ಕರೆತರಲಾಯಿತು

'ಅರಣ್ಯದಿಂದ ಒಕ್ಕಲೆಬ್ಬಿಸಿದ್ದೇ ಕಾರಣ'

ಮೈತೇಯಿ ಸಮುದಾಯದವರು ತಮ್ಮನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿ ಎಂದು ಕೇಳಿದ್ದು, ಈ ಸಂಬಂಧ ನಾಲ್ಕು ವಾರಗಳಲ್ಲಿ ವರದಿ ನೀಡಿ ಎಂದು ಮಣಿಪುರ ಹೈಕೋರ್ಟ್ ಸರ್ಕಾರಕ್ಕೆ ಸೂಚನೆ ನೀಡಿದ್ದು ಮಣಿಪುರದಲ್ಲಿನ ಸಂಘರ್ಷಕ್ಕೆ ತಕ್ಷಣದ ಕಾರಣ ಎನ್ನಲಾಗುತ್ತಿದೆ. ಆದರೆ, ಬುಡಕಟ್ಟು ಸಮುದಾಯಗಳನ್ನು ಅರಣ್ಯ ಪ್ರದೇಶಗಳಿಂದ ತೆರವು ಮಾಡಲು ಸರ್ಕಾರ ಈಚೆಗೆ ತೆಗೆದುಕೊಂಡಿರುವ ಕ್ರಮಗಳೇ ಈ ಸಂಘರ್ಷಕ್ಕೆ ಪ್ರಮುಖ ಕಾರಣ ಎಂದು ವಿಶ್ಲೇಷಿಸಲಾಗಿದೆ.

ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಗುಡ್ಡಗಾಡು ಪ್ರದೇಶದ ವ್ಯಾಪ್ತಿಯು ಶೇ 90ರಷ್ಟಾಗುತ್ತದೆ. ಈ ಗುಡ್ಡಗಾಡು ಪ್ರದೇಶಗಳನ್ನು ಮೀಸಲು ಅರಣ್ಯ ಪ್ರದೇಶಗಳು ಎಂದು ಗುರುತಿಸಲು ರಾಜ್ಯದ ಬಿಜೆಪಿ ಸರ್ಕಾರ ಕ್ರಮ ತೆಗೆದುಕೊಂಡಿದೆ. ಇದರಿಂದಾಗಿ ಬುಡಕಟ್ಟು ಸಮುದಾಯಗಳಾದ ಕುಕಿ ಮತ್ತು ನಾಗಾ ಜನರ 700ಕ್ಕೂ ಹೆಚ್ಚು ಕುಟುಂಬಗಳನ್ನು ಅರಣ್ಯ ಪ್ರದೇಶಗಳಿಂದ ತೆರವು ಮಾಡಲಾಗಿದೆ. ಬುಡಕಟ್ಟು ಜನರು ಅರಣ್ಯಗಳನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿ ಮೈತೇಯಿ ಜನರು ಈಚೆಗೆ ರಾಜ್ಯದ ಹಲವೆಡೆ ಪ್ರತಿಭಟನೆ ನಡೆಸಿದ್ದರು. ಇದು ತಮ್ಮ ಹಕ್ಕನ್ನು ಮೊಟಕುಗೊಳಿಸುವ ಯತ್ನ ಎಂದು ಕುಕಿ ಮತ್ತು ನಾಗಾ ಜನರು ಆರೋಪಿಸಿದ್ದಾರೆ.

'ಬುಡಕಟ್ಟು ಗ್ರಾಮಗಳು ವ್ಯಾಪಕವಾಗಿರುವ ರಾಜ್ಯದ ಹತ್ತಾರು ಅರಣ್ಯ ಪ್ರದೇಶಗಳನ್ನು ಸಂರಕ್ಷಿತ ಅರಣ್ಯ ಪ್ರದೇಶ, ಮೀಸಲು ಅರಣ್ಯ ಪ್ರದೇಶ ಎಂದು ಘೋಷಿಸಲಾಗಿದೆ. ಅಲ್ಲಿದ್ದ ಕುಕಿ ಜನರನ್ನು ತೆರವು ಮಾಡಲಾಗಿದೆ. ಅವರಿಗೆ ಅಗತ್ಯ ಪರಿಹಾರಗಳನ್ನು ನೀಡಿಲ್ಲ. ಅವರಿಗೆ ಪುನರ್ವಸತಿ ಕಲ್ಪಿಸಿಲ್ಲ. ಈ ಜನರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರವು ಇಚ್ಛಾಶಕ್ತಿಯನ್ನೇ ತೋರುತ್ತಿಲ್ಲ. ಕುಕಿ ಜನರ ಆಕ್ರೋಶಕ್ಕೆ ಇದೇ ಪ್ರಧಾನ ಕಾರಣ' ಎಂದು ಕುಕಿ ವಿದ್ಯಾರ್ಥಿ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಡಿ.ಜೆ.ಹಾಕಿಪ್ ಆರೋಪಿಸಿದ್ದಾರೆ.

> **'ಕಂಡಲ್ಲಿ ಗುಂಡು' ಆದೇಶ ನೀಡಲು ಖುಷಿ ಪಡುತ್ತೇವೆ ಎಂದು ಸರ್ಕಾರ ಸುತ್ತೋಲೆಯಲ್ಲಿ ಹೇಳಿದೆ. ಇದು ಬ್ರಿಟಿಷ್ ಸರ್ಕಾರದ ತದ್ರೂಪು**
> **ರಣದೀಪ್ ಸಿಂಗ್ ಸುರ್ಜೇವಾಲಾ,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ನ್ಯಾಯಾಧೀಶರ ಬಡ್ತಿ ವಿವಾದ: 8ರಂದು ವಿಚಾರಣೆ



ನವದೆಹಲಿ(ಪಿಟಿಐ): ಮಾನನಷ್ಟ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಶಿಕ್ಷೆ ವಿಧಿಸಿದ್ದ ಸೂರತ್‌ನ ಚೀಫ್ ಜ್ಯುಡಿಶಿಯಲ್ ಮ್ಯಾಜಿಸ್ಟ್ರೇಟ್ ಹರೀಶ್ ಹಸ್ಮುಖ್ ಭಾಯಿ ವರ್ಮಾ ಸೇರಿದಂತೆ ಗುಜರಾತ್‌ನ 68 ಮಂದಿ ಕೆಳ ಹಂತದ ನ್ಯಾಯಾಂಗ ಅಧಿಕಾರಿಗಳ ಪದೋನ್ನತಿ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆಯನ್ನು ಮೇ 8ರಂದು ಸುಪ್ರೀಂ ಕೋರ್ಟ್ ನಡೆಸಲಿದೆ.

ಸೇವಾ ಹಿರಿತನದ ಮಾನದಂಡಗಳನ್ನು ಕಡೆಗಣಿಸಿ ಇವರಿಗೆ ಪದೋನ್ನತಿ ನೀಡಲಾಗಿದೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ಹಿರಿಯ ಸಿವಿಲ್ ನ್ಯಾಯಾಧೀಶ ಕೇಡರ್‌ನ ಅಧಿಕಾರಿಗಳಾದ ರವಿಕುಮಾರ್ ಮೆಹ್ತಾ ಮತ್ತು ಸಚಿನ್ ಪ್ರತಾಪ್‌ರಾಯ್ ಮೆಹ್ತಾ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಲು ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಮತ್ತು ಅಸನುದ್ದಿನ್ ಅಮಾನುಲ್ಲಾ ಅವರನ್ನೊಳಗೊಂಡ ನ್ಯಾಯಪೀಠವು ದಿನಾಂಕ ನಿಗದಿಪಡಿಸಿದೆ.

ಈ ಕುರಿತು ಗುಜರಾತ್ ಸರ್ಕಾರಕ್ಕೆ ಮತ್ತು ಗುಜರಾತ್ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್‌ಗೆ ಏಪ್ರಿಲ್ 13ರಂದು ಸುಪ್ರೀಂ ಕೋರ್ಟ್ ನೋಟಿಸ್ ಜಾರಿ ಮಾಡಿತ್ತು.



ರಥೋತ್ಸವ...

ಗದಗ ಜಿಲ್ಲೆ ಶಿರಹಟ್ಟಿ ತಾಲ್ಲೂಕಿನ ಆರಾಧ್ಯ ದೈವ ಫಕ್ಕೀರೇಶ್ವರರ ರಥೋತ್ಸವ ಶುಕ್ರವಾರ ಅಪಾರ ಭಕ್ತ ಸಮೂಹದ ನಡುವೆ ಸಂಭ್ರಮದಿಂದ ನಡೆಯಿತು

ಪ್ರಜಾವಾಣಿ ಚಿತ್ರ/ನಿಂಗರಾಜ ಹಮ್ಮಿಗಿ

ಕುಸ್ತಿಪಟುಗಳ ಧರಣಿ, ಪಕ್ಷಗಳ 'ಪಟ್ಟು'

ಒಂದನೇ ಪುಟದಿಂದ...

ಅಂತರರಾಷ್ಟ್ರೀಯ ಕುಸ್ತಿಪಟುಗಳಾದ ಬಜರಂಗ್ ಪೂನಿಯಾ, ವಿನೇಶಾ ಫೋಗಟ್, ಸಾಕ್ಷಿ ಮಲ್ಲಿಕ್ ಮತ್ತಿತರರು ಇಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ.

ಪ್ರತಿಪಕ್ಷಗಳ ನಾಯಕರ ಈ ನಡೆಗೆ ಪ್ರತಿಯಾಗಿ ಬಿಜೆಪಿ, ಭ್ರಷ್ಟಾಚಾರ ಪ್ರಕರಣಗಳಿರುವ ರಾಜಕಾರಣಿಗಳ ಭೇಟಿಗೆ ಕುಸ್ತಿಪಟುಗಳು ಅವಕಾಶ ನೀಡಿದಲ್ಲಿ ಅವರ ಹೋರಾಟದ ವಿಶ್ವಾಸಾರ್ಹತೆಯೇ ಕುಂದಲಿದೆ ಎಂದು ಪಟ್ಟುಹಾಕಿದೆ.

ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರೂ, ದೆಹಲಿ ಪೊಲೀಸರು ಪ್ರತಿಭಟನನಿರತ ಕುಸ್ತಿಪಟುಗಳಿಗೆ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿದ್ದರು. ಕಾಂಗ್ರೆಸ್ ಮತ್ತು ಎಎಪಿ ಹರಿಯಾಣವನ್ನು ಮನದಲ್ಲಿಟ್ಟುಕೊಂಡು ಈ ನಡೆ ಇರಿಸಿದ್ದವು.

ಒಟ್ಟು ಬೆಳವಣಿಗೆ ಎದುರಿಸಲು ಬಿಜೆಪಿ, ಕೇಂದ್ರ ಸಚಿವರಾದ ಅನುರಾಗ್ ಠಾಕೂರ್ ಮತ್ತು ಮೀನಾಕ್ಷಿ ಲೇಖಿ ಅವರನ್ನೇ ನಿಯೋಜಿಸಿದೆ. ಲಖನೌದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಕ್ರೀಡಾ ಸಚಿವರೂ ಆದ ಠಾಕೂರ್, 'ಸರ್ಕಾರ ನಿಮ್ಮ ಬೇಡಿಕೆಗಳನ್ನು ಆಲಿಸುತ್ತಿದೆ. ಪ್ರತಿಭಟನೆ ಕೈಬಿಡಬೇಕು' ಎಂದು ಮನವಿ ಮಾಡಿದ್ದಾರೆ.

'ಸುಪ್ರೀಂ ಕೋರ್ಟ್ ಕೂಡಾ ನಿರ್ದೇಶನ ನೀಡಿದೆ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಧರಣಿ ಕೈಬಿಟ್ಟು ನ್ಯಾಯಯುತ ತನಿಖೆಗೆ ಸಹಕರಿಸಬೇಕು. ನ್ಯಾಯ ಒದಗಿಸಲು ಬದ್ಧರಾಗಿದ್ದೇವೆ' ಎಂದು ಹೇಳುವ ಮೂಲಕ ಠಾಕೂರ್ ಅವರು ಪರಿಸ್ಥಿತಿ ತಿಳಿಗೊಳಿಸಲು ಯತ್ನಿಸುತ್ತಿದ್ದಾರೆ.

ಇದಕ್ಕೂ ಹಿಂದೆ ಲೇಖಿ ಅವರು, 'ಕುಸ್ತಿಪಟುಗಳು ಭ್ರಷ್ಟಾಚಾರದ ಆರೋಪವುಳ್ಳ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಭೇಟಿಗೆ ಅವಕಾಶ ನೀಡುವ ಮೂಲಕ ತನ್ನ ವಿಶ್ವಾಸಾರ್ಹತೆಗೆ ಭಂಗ ತಂದುಕೊಂಡಿದ್ದಾರೆ' ಎಂದು ಹೇಳಿದ್ದರು.

ಬ್ರಿಜ್ ಭೂಷಣ್ ಬಿಜೆಪಿ ಸಂಸದರಾಗಿದ್ದು, ಪಕ್ಷ ಸದ್ಯ ಕ್ರಮಕೈಗೊಳ್ಳುವ ಸ್ಥಿತಿಯಲ್ಲಿಲ್ಲ. 'ಉತ್ತರ ಪ್ರದೇಶದಲ್ಲಿ ಹಲವು ಲೋಕಸಭೆ ಕ್ಷೇತ್ರಗಳಲ್ಲಿ ಬ್ರಿಜ್ ಭೂಷಣ್ ಪ್ರಭಾವಿ. ಎಲ್ .ಕೆ. ಅಡ್ವಾಣಿ ಅವರ ರಥಯಾತ್ರೆ ಮುನ್ನಡೆಸಿದ್ದರು. ಅಯೋಧ್ಯೆ ಅರ್ಚಕ ವಲಯದಲ್ಲಿಯೂ ಪ್ರಭಾವವಿದೆ. ಈಗ 2024ರಲ್ಲಿ ರಾಮಮಂದಿರ ಉದ್ಘಾಟನೆಗೆ ಸಿದ್ಧತೆ ನಡೆದಿದೆ. ಹೀಗಾಗಿ ಕ್ರಮಕೈಗೊಳ್ಳುವ ಸ್ಥಿತಿಯಲ್ಲಿ ಇಲ್ಲ' ಎನ್ನುತ್ತಾರೆ ಉತ್ತರ ಪ್ರದೇಶ ಮುಖಂಡರೊಬ್ಬರು.

ಆದರೆ, ಈ ಬಗ್ಗೆ ಕಾಂಗ್ರೆಸ್ ವ್ಯಾಖ್ಯಾನವೇ ಬೇರೆ. ಈ ಪ್ರತಿಭಟನೆಯು ಬಿಜೆಪಿ ಮೇಲೆ ಪರಿಣಾಮ ಬೀರಲಿದೆ. ಪ್ರಿಯಾಂಕಾ ಗಾಂಧಿ ಭೇಟಿ ಆಗಿರುವುದು ಹರಿಯಾಣದಲ್ಲಿ ಜಾಟ್ ವರ್ಗದವರು ಇರುವ ಕಡೆ ಪರಿಣಾಮ ಬೀರಲಿದೆ. ಇದರಿಂದ ದೊಡ್ಡ ರಾಜಕೀಯ ಲಾಭ ಆಗದಿದ್ದರೂ ಮುಂದೆ ತಕ್ಕಮಟ್ಟಿನ ಫಲ ನೀಡುವುದು ನಿಶ್ಚಿತ ಎಂಬ ವಿಶ್ವಾಸ ಆ ಪಕ್ಷದ್ದು.

ಆರ್‌ಎಲ್‌ಡಿ ಪಕ್ಷದ ಜಯಂತ್ ಸಿಂಗ್, ಹರಿಯಾಣದ ಮಾಜಿ ಸಿ.ಎಂ ಭೂಪಿಂದರ್ ಸಿಂಗ್ ಹೂಡಾ, ಅವರ ಪುತ್ರ, ಸಂಸದ ದೀಪಿಂದರ್ ಹೂಡಾ, ಎಎಪಿ ಶಾಸಕ ಸೌರಭ್ ಭಾರದ್ವಾಜ್ ಅವರೂ ಧರಣಿನಿರತರನ್ನು ಭೇಟಿಯಾಗಿದ್ದರು.

ಜೊತೆಗೆ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರೂ ಟ್ವೀಟ್ ಮಾಡಿ ಧರಣಿ ನಿರತ ಕುಸ್ತಿಪಟುಗಳಿಗೆ ನೈತಿಕ ಬೆಂಬಲ ನೀಡಿದ್ದರು.

ಪದಕ ವಾಪಸ್: ಕೋಚ್ ಮಹಾವೀರ ಸಿಂಗ್ ಎಚ್ಚರಿಕೆ

ಚಂಡೀಗಢ (ಪಿಟಿಐ): ಜಂತರ್ ಮಂತರ್‌ನಲ್ಲಿ ಪ್ರತಿಭಟನೆಯಲ್ಲಿ ತೊಡಗಿರುವ ಕುಸ್ತಿಪಟುಗಳ ಬೆಂಬಲಕ್ಕೆ ನಿಂತಿರುವ ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಕೋಚ್ ಮಹಾವೀರ್ ಸಿಂಗ್ ಫೋಗಟ್ ಅವರು ಧರಣಿ ಕುಳಿತವರಿಗೆ ನ್ಯಾಯ ಒದಗಿಸದಿದ್ದಲ್ಲಿ ಪದಕಗಳನ್ನು ವಾಪಸು ಮಾಡುವುದಾಗಿ ಶುಕ್ರವಾರ ಬೆದರಿಕೆ ಒಡ್ಡಿದ್ದಾರೆ.

ವಿನೇಶಾ ಫೋಗಟ್ ಮತ್ತು ಬಜರಂಗ್ ಪೂನಿಯಾ ಅವರು ತಮ್ಮ ಬೇಡಿಕೆ ಈಡೇರಿಸದಿದ್ದಲ್ಲಿ ಪ್ರಶಸ್ತಿ, ಪದಕಗಳನ್ನು ಹಿಂತಿರುಗಿಸುವುದಾಗಿ ಗುರುವಾರ ಬೆದರಿಕೆಯೊಡ್ಡಿದ್ದರು.

ಇದೇ ವೇಳೆ ಹರಿಯಾಣದ ಹಲವು 'ಖಾಪ್'ಗಳು (ಸಮುದಾಯದ ಹಿರಿಯರ ಪಂಚಾಯ್ತಿ) ಕುಸ್ತಿಪಟುಗಳಿಗೆ ಬೆಂಬಲ ನೀಡುವುದಾಗಿ ತಿಳಿಸಿವೆ. ಗುರುವಾರ, ಹಿಸಾರ್, ಭಿವಾನಿ, ಜಿಂದ್ ಮತ್ತು ರೋಹ್ತಕ್‌ಗಳಲ್ಲಿ ಖಾಪ್‌ಗಳು ಪ್ರತಿಭಟನೆ ನಡೆಸಿ, ಕುಸ್ತಿಪಟುಗಳಿಗೆ ಧೈರ್ಯ ತುಂಬಿದ್ದರು.

ಮುಂದಿನ ನಡೆ: ಪೈಲ್ವಾನರ ಚಿಂತನೆ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ತಮ್ಮ ಅರ್ಜಿಯ ವಿಚಾರಣೆಯನ್ನು ಮುಕ್ತಾಯಗೊಳಿಸಿದ ಬೆನ್ನಲ್ಲೇ ಮುಂದಿನ ನಡೆಯ ಬಗ್ಗೆ ಪ್ರತಿಭಟನಾನಿರತ ಕುಸ್ತಿಪಟುಗಳು ಯೋಚನೆಯಲ್ಲಿದ್ದಾರೆ. ಇನ್ನೊಂದೆಡೆ, 'ವ್ಯವಸ್ಥೆಯ ಮೇಲೆ ನಂಬಿಕೆಯಿಡಿ, ವಿಚಾರಣೆಯಿಂದ ಎಲ್ಲವೂ ಸ್ಪಷ್ಟವಾಗಲಿದೆ' ಎಂದು ಕ್ರೀಡಾ ಸಚಿವ ಅನುರಾಗ್ ಠಾಕೂರ್ ಕುಸ್ತಿಪಟುಗಳಿಗೆ ಮನವಿ ಮಾಡಿದ್ದಾರೆ.

ಇನ್ನಷ್ಟು ಪೈಲ್ವಾನರು ಪ್ರತಿಭಟನಾ ಸ್ಥಳಕ್ಕೆ ಬರದಂತೆ ದೆಹಲಿ ಪೊಲೀಸರು ತಡೆಹಾಕಿದ್ದಾರೆ. ಧರಣಿನಿರತರಿಗೆ ಬೆಂಬಲ ಸೂಚಿಸಲು ಕೆಲವು ರೈತರಷ್ಟೇ ಪ್ರತಿಭಟನಾ ಸ್ಥಳ ಜಂತರ್‌ಮಂಥರ್ ತಲುಪಿದ್ದಾರೆ.

ಪ್ರತಿಭಟನೆ 13ನೇ ದಿನಕ್ಕೆ ಕಾಲಿಟ್ಟಿದ್ದು, ಸ್ಥಳದಲ್ಲಿ ಶುಕ್ರವಾರ ಎಂದಿನ ಚಟುವಟಿಕೆ, ಲವಲವಿಕೆ ಕಾಣಲಿಲ್ಲ. ಕೆಲವು ರಾಜಕೀಯ ಮತ್ತು ರೈತನಾಯಕರು ಕುಸ್ತಿಪಟುಗಳನ್ನು ಭೇಟಿಯಾದರು.

'ನಮ್ಮ ಕಾನೂನು ತಂಡ ಮತ್ತು ಮಾರ್ಗದರ್ಶಕರು ಮುಂದಿನ ನಡೆಯ ಬಗ್ಗೆ ಚರ್ಚೆಯಲ್ಲಿದ್ದಾರೆ. ಅಂತಿಮಗೊಂಡ ಮೇಲೆ ವಿವರ ನೀಡುತ್ತೇವೆ' ಎಂದು ಒಲಿಂಪಿಕ್ ಪದಕ ವಿಜೇತ ಬಜರಂಗ್ ಪೂನಿಯಾ ಸುದ್ದಿಸಂಸ್ಥೆಗೆ ತಿಳಿಸಿದರು.

ಅರ್ಜಿಯಲ್ಲಿ ಮನವಿ ಮಾಡಿರುವಂತೆ ಎಫ್‌ಐಆರ್ ದಾಖಲಿಸಲಾಗಿದೆ ಮತ್ತು ಸಂತ್ರಸ್ತ ಏಳು ಮಂದಿ ಮಹಿಳಾ ಕುಸ್ತಿಪಟುಗಳಿಗೆ ಸೂಕ್ತ ರಕ್ಷಣೆ ನೀಡಿರುವ ಕಾರಣ ಮುಂದಿನ ವಿಚಾರಣೆಯ ಅಗತ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಅರ್ಜಿ ವಿಲೇ ಮಾಡಿತ್ತು.

ದೆಹಲಿ ಪೊಲೀಸರು ಬ್ರಿಜ್‌ಭೂಷಣ್ ವಿರುದ್ಧ ಪೊಸ್ಕೊ ಕಾಯಿದೆಯಡಿ ಒಂದು ಸೇರಿದಂತೆ ಎರಡು ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ. ಐವರು ಕುಸ್ತಿಪಟುಗಳ ಹೇಳಿಕೆ ಪಡೆದಿದ್ದಾರೆ.

ಸಚಿವರ ಮನವಿ (ಲಖನೌ ವರದಿ): 'ನಿಮ್ಮ ಎಲ್ಲಾ ಬೇಡಿಕೆಗಳನ್ನು ಈಡೇರಿಸಲಾಗಿದೆ. ಇನ್ನಾದರೂ ನಿಷ್ಪಕ್ಷಪಾತ ತನಿಖೆ ನಡೆಸಲು ಪೊಲೀಸರಿಗೆ ಅನುವು ಮಾಡಿಕೊಡಿ ಎಂದು ಪ್ರತಿಭಟನಾನಿರತ ಕ್ರೀಡಾಪಟುಗಳಿಗೆ ಮನವಿ ಮಾಡುತ್ತೇನೆ' ಎಂದು ಸಚಿವ ಅನುರಾಗ್ ಠಾಕೂರ್ ಹೇಳಿದ್ದಾರೆ.

ಪೊಲೀಸ್ ತನಿಖೆಯಿಂದ ಸತ್ಯಾಂಶ ಹೊರಬರಲಿದೆ. ಅವರು ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಿದ್ದಾರೆ ಎಂದು ಠಾಕೂರ್ ಅವರು ಖೇಲೊ ಇಂಡಿಯಾ ಕಾರ್ಯಕ್ರಮಕ್ಕೆ ಲಖನೌಗೆ ಬಂದಿದ್ದ ಸಂದರ್ಭದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ರೋಡ್ ಶೋ: ಜನಾಕ್ರೋಶ

ಒಂದನೇ ಪುಟದಿಂದ...

ರೋಡ್ ಶೋ ನಡೆದಾಗ ನಾಗರಿಕರು ತೊಂದರೆಗೆ ಒಳಗಾಗಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಪ್ರಧಾನಿ 'ರೋಡ್ ಶೋ'ನಿಂದ ಮಕ್ಕಳು ಪರೀಕ್ಷಾ ಕೇಂದ್ರ ತಲುಪಲು ಕಷ್ಟವಾಗಬಹುದು. ಪರೀಕ್ಷೆಯ ಮೇಲೆ ಪರಿಣಾಮ ಬೀರಬಹುದು ನೀಟ್ ಮೇ 7ರಂದು ನಡೆಯುದೆ. ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣೆ ನಿಮಿತ್ತ ಬೆಂಗಳೂರಿನ ಹಲವೆಡೆ ಹಮ್ಮಿಕೊಂಡಿರುವ 'ರೋಡ್ ಶೋ' ಅನ್ನು ಸ್ವಯಂ ಪ್ರೇರಿತರಾಗಿ ಕೈಬಿಡಬೇಕು ಎಂದು ಶಿಕ್ಷಣದ ಮೂಲಭೂತ ಹಕ್ಕಿಗಾಗಿ ಜನಾಂದೋಲನಗಳ ಸಮನ್ವಯದ ಪ್ರಧಾನ ಸಂಚಾಲಕ ಪಿ.ವಿ. ನಿರಂಜನಾರಾಧ್ಯ ಮನವಿ ಮಾಡಿದ್ದಾರೆ.

ಈ ಎಲ್ಲ ಬೆಳವಣಿಗೆಗಳ ಮಧ್ಯೆಯೇ, ಮೋದಿ ಅವರ ಬೆಂಗಳೂರಿನ ರೋಡ್ ಶೋ ಪ್ರಶ್ನಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿದಾರರ ಮನವಿಯನ್ನು ಮಾನ್ಯ ಮಾಡಲು ನಿರಾಕರಿಸಿರುವ ಹೈಕೋರ್ಟ್, ರೋಡ್ ಶೋಗೆ ಹಸಿರು ನಿಶಾನೆ ತೋರಿದೆ.

'ಪ್ರಧಾನಿಯವರ ರೋಡ್ ಶೋನಿಂದ ಸಾರ್ವಜನಿಕರಿಗೆ ಸಮಸ್ಯೆ ಉಂಟಾಗಲಿದ್ದು, ರೋಡ್ ಶೋ ನಡೆಸುವುದಕ್ಕೆ ತಡೆ ನೀಡಬೇಕು' ಎಂದು ಕೋರಿ ವಕೀಲ ಎನ್. ಪಿ. ಅಮೃತೇಶ್ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಇದನ್ನು ಹೈಕೋರ್ಟ್‌ನ ರಜಾಕಾಲದ ವಿಶೇಷ ಮತ್ತು ವಿಭಾಗೀಯ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿಗಳಾದ ಕೃಷ್ಣ ಎಸ್. ದೀಕ್ಷಿತ್ ಹಾಗೂ ವಿಜಯಕುಮಾರ್ ಎ. ಪಾಟೀಲ್ ಅವರು ಶುಕ್ರವಾರ ಸುದೀರ್ಘ ವಿಚಾರಣೆ ನಡೆಸಿದರು.

'ರೋಡ್ ಶೋನಲ್ಲಿ ಭಾಗವಹಿಸುವ ಯಾರೊಬ್ಬರಿಗೂ ಯಾವುದೇ ರೀತಿಯಲ್ಲಿ ಹಾನಿಯಾಗಬಾರದು. ರೋಡ್ ಶೋನಲ್ಲಿ ಒಂದು ವೇಳೆ ಏನಾದರೂ ಅಹಿತಕರ ಘಟನೆ ನಡೆದರೆ ಸಂಘಟಕರನ್ನು ಜವಾಬ್ದಾರನ್ನಾಗಿ ಮಾಡಲಾಗುವುದು' ಎಂದು ಮೌಖಿಕ ಎಚ್ಚರಿಕೆ ನೀಡಿದ ನ್ಯಾಯಪೀಠ, ರೋಡ್ ಶೋಗೆ ಅವಕಾಶ ಕಲ್ಪಿಸಿತು.

> **'ನರೇಂದ್ರ ಮೋದಿ ರೋಡ್ ಶೋ ಹೆಸರಿನಲ್ಲಿ ಬೆಂಗಳೂರು ಪೊಲೀಸರು, ನಿಯಮಬಾಹಿರವಾಗಿ ಜನರ ಹಕ್ಕುಗಳನ್ನು ಮೊಟಕುಗೊಳಿಸುತ್ತಿರುವುದು ನಾಚಿಕೆಗೇಡು. ಮೇ 10ರಂದು ಜನರು ಪಾಠ ಕಲಿಸುವುದರಲ್ಲಿ ಸಂದೇಹವಿಲ್ಲ.**
> **ಪ್ರಶಾಂತ್ ಭೂಷಣ್,** ಸುಪ್ರೀಂಕೋರ್ಟ್ ವಕೀಲ

ಒತ್ತಡಕ್ಕೆ ಮಣಿದ ಬಿಜೆಪಿ

ಭಾನುವಾರ ನಡೆಯಬೇಕಿದ್ದ ಸುದೀರ್ಘ ಅವಧಿಯ ರೋಡ್ ಶೋ ಅನ್ನು ಎಂಟು ಕಿ.ಮೀಗೆ ಇಳಿಸಲಾಗಿದ್ದು, ಒಂದೂವರೆ ಗಂಟೆಯಲ್ಲೇ ಮುಗಿಯಲಿದೆ. ಅಂದು ಬೆಳಿಗ್ಗೆ 10ಕ್ಕೆ ತಿಪ್ಪಸಂದ್ರದ ಕೆಂಪೇಗೌಡ ಪ್ರತಿಮೆಯಿಂದ ರೋಡ್ ಶೋ ಆರಂಭಿಸಲಿರುವ ಮೋದಿ, 11.30ಕ್ಕೆ ಟ್ರಿನಿಟಿ ವೃತ್ತದಲ್ಲಿ ಮುಗಿಸಲಿದ್ದಾರೆ.

ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರು ಸಂಜೆ 5.30ರ ಬಳಿಕ ಮಹದೇವಪುರ, ಬೆಂಗಳೂರು ದಕ್ಷಿಣ ಮತ್ತು ಶಿವಾಜಿ ನಗರ ವಿಧಾನಸಭಾ ಕ್ಷೇತ್ರಗಳಲ್ಲಿ ಕಾರ್ಯಕ್ರಮ ನಡೆಸಲಿದ್ದಾರೆ.

ವೈದ್ಯ, ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತೆ ಪಡೆಯಲು ನಡೆಯುವ ನೀಟ್ ಪರೀಕ್ಷೆ ಭಾನುವಾರ ಮಧ್ಯಾಹ್ನ 2.30ಕ್ಕೆ ನಿಗದಿಯಾಗಿದೆ. ಪರೀಕ್ಷಾರ್ಥಿಗಳು ಬೆಳಿಗ್ಗೆ 11.45ರೊಳಗೆ ಪರೀಕ್ಷಾ ಕೇಂದ್ರದಲ್ಲಿ ಹಾಜರಿರಬೇಕು. ರಾಜಕೀಯ ನಾಯಕರು, ಅದರಲ್ಲೂ ಪ್ರಧಾನಿಯವರ ರೋಡ್ ಶೋಗೆ ವಿಶೇಷ ಭದ್ರತಾ ವ್ಯವಸ್ಥೆ ಕಲ್ಪಿಸಬೇಕಾಗಿರುವುದರಿಂದಾಗಿ ರೋಡ್ ಶೋ ಸಾಗುವ ರಸ್ತೆಗಳಲ್ಲಿ ಭಾರಿ ನಿರ್ಬಂಧ ವಿಧಿಸಲಾಗುತ್ತದೆ. ಈ ರಸ್ತೆಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳಿಗೆ ಬ್ಯಾರಿಕೇಡ್ ಹಾಕಿ, ಮಾರ್ಗ ಬದಲಾವಣೆ ಮಾಡುವುದರಿಂದಾಗಿ ನಾಗರಿಕರು ನಿತ್ಯ ಸಾಗುವ ಹಾದಿಯಲ್ಲಿ ಹೋಗಲಾಗದು. ಸುತ್ತುಬಳಸಿ ಹೋಗಬೇಕಾಗುವುದರಿಂದ ಪರೀಕ್ಷಾ ಕೇಂದ್ರ ತಲುಪುವುದು ವಿಳಂಬವಾಗಲಿದೆ. ಒಂದು ಗಂಟೆಗೆ ತಲುಪಬಹುದಾದ ಕೇಂದ್ರಗಳಿಗೆ ಕನಿಷ್ಠ ಮೂರು ಗಂಟೆಯಾದರೂ ಬೇಕಾಗಲಿದೆ. ಇದರಿಂದ ತೀವ್ರ ತೊಂದರೆಯಾಗಲಿದೆ ಎಂದು ವಿದ್ಯಾರ್ಥಿಗಳು, ಪೋಷಕರು ಅಸಮಾಧಾನ ವ್ಯಕ್ತಪಡಿಸಿದ್ದರು. ರಾಜಕೀಯ ಪಕ್ಷಗಳ ಪ್ರಮುಖರು ಸಿಟ್ಟು ಹೊರಹಾಕಿದ್ದರು.

ಈ ಹಿನ್ನೆಲೆಯಲ್ಲಿ ಚರ್ಚೆ ನಡೆಸಿದ ಬಿಜೆಪಿ ನಾಯಕರು ಎರಡು ದಿನಗಳ ರೋಡ್ ಶೋ ಸಮಯವನ್ನು ಪರಿಷ್ಕರಿಸಿ, ಶನಿವಾರ 26.5 ಕಿ.ಮೀ ದೂರ ನಡೆಸಲು ಮತ್ತು ಭಾನುವಾರ ಕೇವಲ 8 ಕಿ.ಮೀ ನಷ್ಟು ಚಿಕ್ಕದಾಗಿ ನಡೆಸಲು ತೀರ್ಮಾನಿಸಿದರು ಎಂದು ಮೂಲಗಳು ತಿಳಿಸಿವೆ.

ಶನಿವಾರ ಬೆಳಿಗ್ಗೆ 10 ಕ್ಕೆ ಜೆ.ಪಿ.ನಗರದ ಬ್ರಿಗೇಡ್ ಮಿಲೇನಿಯಂನಿಂದ ಆರಂಭಗೊಂಡು ಮಲ್ಲೇಶ್ವರದ ಸ್ಯಾಂಕಿಕೆರೆಯವರೆಗೆ ಮೋದಿ ರೋಡ್ ಶೋ ನಡೆಯಲಿದೆ.

ಮತಾಂತರ ಮುಂದೆ, ಬಾಂಧವ್ಯ ಹಿಂದೆ

• ಅಭಿಲಾಷ ಪಿ.ಎಸ್.

ನಾವು ನೋಡಿದ ಸಿನಿಮಾ

ದಿ ಕೇರಳ ಸ್ಟೋರಿ(ಹಿಂದಿ)

- ನಿರ್ದೇಶನ: ಸುದಿಪ್ತೋ ಸೇನ್
- ನಿರ್ಮಾಪಕ: ವಿಪುಲ್ ಅಮೃತ್‌ಲಾಲ್ ಶಾ
- ತಾರಾಗಣ: ಅದಾ ಶರ್ಮಾ, ಸಿದ್ಧಿ ಇದ್ನಾನಿ, ಯೋಗಿತಾ ಬಿಹಾನಿ, ಸೋನಿಯಾ ಬಲಾನಿ, ಪ್ರಣಯ್ ಪಚೌರಿ, ವಿಜಯ್‌ಕೃಷ್ಣ ಮತ್ತಿತರರು



'ನೈಜ ಘಟನೆ ಆಧಾರಿತ' ಅಥವಾ 'ನೈಜ ಘಟನೆ ಪ್ರೇರಿತ' ಎಂಬ ಅಡಿಬರಹವನ್ನು ಹೊತ್ತ ಸಿನಿಮಾಗಳು ಬಿಡುಗಡೆಗೂ ಮುನ್ನ ಚರ್ಚೆಗೆ, ವಿವಾದಕ್ಕೆ ಒಳಪಡುವುದನ್ನು ಆಗೀಗ ನೋಡುತ್ತೇವೆ. ಸುದಿಪ್ತೋ ಸೇನ್ ನಿರ್ದೇಶನದ 'ದಿ ಕೇರಳ ಸ್ಟೋರಿ'ಯೂ ವಿವಾದದ ಸುಳಿಯಲ್ಲೇ ಸಿಲುಕಿ ತೆರೆಗೆ ಬಂದಿದೆ.


ಸುಮಾರು ಆರು ವರ್ಷಗಳ ಹಿಂದೆ ಕೇರಳದ ಕಾಸರಗೋಡು ಜಿಲ್ಲೆಯಲ್ಲಿ ನಡೆದ ಹಿಂದೂ ಯುವತಿಯ ಮುಸ್ಲಿಂ ಮತಾಂತರದ ಘಟನೆ ಹಾಗೂ ಮತ್ತೊಂದಿಷ್ಟು ಘಟನೆಗಳನ್ನು ಸೇರಿಸಿ ಕಥಾಹಂದರವನ್ನು ರೂಪಿಸಿದಂತೆ ಈ ಸಿನಿಮಾ ತೋರುತ್ತದೆ. ಹೀಗಾಗಿಯೇ ಆರಂಭದಲ್ಲೇ 'ಹಲವು ನೈಜ ಕಥೆಗಳಿಂದ ಪ್ರೇರಿತ ಸಿನಿಮಾ' ಎಂದು ನಿರ್ದೇಶಕರು ಹೇಳಿಕೊಂಡಿದ್ದಾರೆ.

ವ್ಯವಸ್ಥಿತವಾದ ಮತಾಂತರ ಸುತ್ತ ಚಿತ್ರದ ಕಥೆಯಿದೆ. ರಿವರ್ಸ್ ಸ್ಕ್ರೀನ್‌ಪ್ಲೇಯಲ್ಲಿ ಕಥೆಯನ್ನು ಆರಂಭಿಸಿದ್ದಾರೆ ನಿರ್ದೇಶಕರು. 'ಫಾತಿಮಾ'ಳಾಗಿ ಮತಾಂತರಗೊಂಡ ಶಾಲಿನಿ ಉನ್ನಿಕೃಷ್ಣನ್(ಅದಾ ಶರ್ಮಾ) ಇರಾನ್–ಅಫ್ಗಾನಿಸ್ತಾನ ಗಡಿಯಲ್ಲಿ ಅಮೆರಿಕ–ಅಫ್ಗಾನಿಸ್ತಾನ ಸೇನೆಯ ವಶಕ್ಕೆ ಸಿಲುಕಿದಲ್ಲಿಂದ ಸಿನಿಮಾ ಆರಂಭಗೊಳ್ಳುತ್ತದೆ. ಆಕೆಯೇ ಹಿಂದಿನ ಕಥೆ ಬಿಚ್ಚಿಡುತ್ತಾ ಸಾಗುವಾಗ 'ದಿ ಕೇರಳ ಸ್ಟೋರಿ' ತೆರೆದುಕೊಳ್ಳುತ್ತದೆ. ನರ್ಸಿಂಗ್ ಕಲಿಯಲು ಕಾಸರಗೋಡು ಕಾಲೇಜೊಂದಕ್ಕೆ ಶಾಲಿನಿ, ಗೀತಾಂಜಲಿ(ಸಿದ್ಧಿ ಇದ್ನಾನಿ) ಹಾಗೂ ನಿಮ್ಹಾ(ಯೋಗಿತಾ ಬಿಹಾನಿ) ಸೇರುತ್ತಾರೆ. ಎಲ್ಲರೂ ಕೇರಳ ಮೂಲದವರೇ. ಅವರ ಜೊತೆಯೇ ಹಾಸ್ಟೆಲ್ ಕೊಠಡಿಯಲ್ಲಿರುವ ಆಸಿಫಾ(ಸೋನಿಯಾ ಬಲಾನಿ) ಹೇಗೆ ಶಾಲಿನಿ ಹಾಗೂ ಗೀತಾಂಜಲಿಯನ್ನು ವ್ಯವಸ್ಥಿತವಾಗಿ ಮತಾಂತರಕ್ಕೆ ತಳ್ಳುತ್ತಾಳೆ, ಇಸ್ಲಾಮಿಕ್ ಸ್ಟೇಟ್(ಐಎಸ್) ಉಗ್ರವಾದಿ ಚಟುವಟಿಕೆಗಳಿಗೆ ಶಾಲಿನಿ ಹೇಗೆ ಕಳ್ಳ ಸಾಗಣೆಯಾಗುತ್ತಾಳೆ, ಮತಾಂತರ ವಿರೋಧಿಸುವ ನಿಮ್ಹಾ ಏನಾಗುತ್ತಾಳೆ ಎನ್ನುವುದೇ ಮುಂದಿನ ಕಥೆ.

ವ್ಯವಸ್ಥಿತವಾದ ಮತಾಂತರ ಎಂಬ ಷಡ್ಯಂತ್ರದ ವಿವರಣೆಯೇ ನಿರ್ದೇಶಕರ ಗುರಿ. ಹೀಗಾಗಿ ಆಸಿಫಾ ಎನ್ನುವ ಪಾತ್ರವನ್ನು ಈ ದೃಷ್ಟಿಯಿಟ್ಟುಕೊಂಡೇ ಸೃಷ್ಟಿಸಿದ್ದಾರೆ. ಆರಂಭದಿಂದಲೇ ಆಕೆಯ ಮಾತುಗಳು ಕೃತಕವಾಗಿ ಭಾಸವಾಗುತ್ತವೆ. ಯುವತಿಯರ ಕೊಠಡಿಯಲ್ಲೇ ಡ್ರಗ್ಸ್ ಲಭ್ಯವಾಗುವುದು, ಆಸಿಫಾ ಮಾತಿಗೆ ಮರುಳಾಗಿ ಶಾಲಿನಿ ಹಾಗೂ ಗೀತಾಂಜಲಿ ಏಕಾಏಕಿ ಹಿಜಾಬ್ ಧರಿಸಲು ಆರಂಭಿಸಿದಾಗ ಪ್ರೇಕ್ಷಕನೂ ಗಲಿಬಿಲಿಗೊಳ್ಳುತ್ತಾನೆ. ಔರಂಗಜೇಬ್ ಕುರಿತ ಸಂಭಾಷಣೆ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹರಿದಾಡುವ ಸಂದೇಶದಂತಿದೆ. ಚಿತ್ರದಲ್ಲಿ ಹಿಂದಿ ಹೇರಿಕೆ ಮಾಡಲು ಹೋಗಿ ನಿರ್ದೇಶಕರು ಎಡವಿದ್ದಾರೆ. ನಾಲ್ವರು ಕೇರಳದ ಯುವತಿಯರು ಹಾಸ್ಟೆಲ್ ಸೇರಿ ಮಲಯಾಳಂ ಮಿಶ್ರಿತ ಹಿಂದಿ ಮಾತನಾಡುವಾಗ ಇಡೀ ದೃಶ್ಯವೇ ಕೃತಕವಾಗಿ ಕಾಣುತ್ತದೆ. ದ್ವಿತೀಯಾರ್ಧದಲ್ಲಿ ಹಿಂಸಾತ್ಮಕ ದೃಶ್ಯಗಳು ದಂಡಿಯಾಗಿವೆ.

ಹಿಂದೂ–ಮುಸ್ಲಿಂ ನಡುವಿನ ಬಾಂಧವ್ಯ, ಬದಲಾದ ಅಂತರ್ಧರ್ಮೀಯ ವಿವಾಹದ ಮನಃಸ್ಥಿತಿಯನ್ನು ಸೂಕ್ಷ್ಮವಾಗಿ ನಿರ್ದೇಶಕರು ಕಥೆಯಲ್ಲಿ ಅಳವಡಿಸಿದ್ದಾರೆ. ಚಿತ್ರವನ್ನು ಮತ್ತಷ್ಟು ಪ್ರಚೋದನಕಾರಿಯಾಗಿ ಮಾಡಲು ಚಿತ್ರತಂಡ ಪ್ರಯೋಗಿಸಿದ ಕೆಲವು ಅಂಕಿಅಂಶಗಳು ಚಿತ್ರತಂಡಕ್ಕೇ ಮುಳುವಾಗಿರುವುದು ಸ್ಪಷ್ಟ. ಚಿತ್ರದ ಅಂತ್ಯದಲ್ಲಿ, 'ಕಳೆದ 10 ವರ್ಷಗಳಲ್ಲಿ 32 ಸಾವಿರ ಯುವತಿಯರು ಮತಾಂತರವಾಗಿದ್ದಾರೆ ಎನ್ನುವ ಕುರಿತು ಮಾಹಿತಿ ಪಡೆಯಲು ನಾವು ಆರ್‌ಟಿಐ ಅರ್ಜಿ ಸಲ್ಲಿಸಿದ್ದೆವು. ಇದಕ್ಕೆ ಪ್ರತಿಯಾಗಿ ನಮಗೆ ವೆಬ್‌ಸೈಟ್ ಒಂದರ ಲಿಂಕ್ ನೀಡಿ ಮಾಹಿತಿ ಪಡೆದುಕೊಳ್ಳಲು ತಿಳಿಸಲಾಗಿತ್ತು. ಆದರೆ ಈ ವೆಬ್‌ಸೈಟ್ ಚಾಲ್ತಿಯಲ್ಲಿ ಇಲ್ಲ' ಎಂಬ ಮಾಹಿತಿಯನ್ನು ಚಿತ್ರ ತಂಡ ನೀಡಿದೆ. ನಟನೆಯಲ್ಲಿ ಅದಾ ಶರ್ಮಾ 'ಶಾಲಿನಿ' ಹಾಗೂ 'ಫಾತಿಮಾ' ಆಗಿ ಪಾತ್ರಕ್ಕೆ ಜೀವ ತುಂಬಿದ್ದಾರೆ. 'ಶಾಲಿನಿ'ಯ ಮುಗ್ಧತೆ, ತಾಯ್ನಾಡಿನ, ತಾಯಿಯ ತುಡಿತವನ್ನೂ ನಟನೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಯೋಗಿತಾ ಹಾಗೂ ಸಿದ್ಧಿಯೂ ತಮ್ಮ ಪಾತ್ರದಲ್ಲಿ ಜೀವಿಸಿದ್ದಾರೆ. 'ಶಾಲಿನಿ' ತಾಯಿ ಪಾತ್ರದಲ್ಲಿ ನಟಿಸಿದ ದೇವದರ್ಶಿನಿ ಚೇತನ್ ಗಮನಸೆಳೆಯುತ್ತಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,256
ಇಂದಿನ ಅಂತ್ಯ	18,069
▼	187
ದಿನದ ಕನಿಷ್ಠ	18,055

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹480

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1620)
ಸೋಯಾ (ರಿಫೈನ್ಡ್)	₹970 (957)
ಸೂರ್ಯಕಾಂತಿ (ರಿಫೈನ್ಡ್)	₹990 (1000)
ಪಾಮೋಲಿನ್	₹945 (835)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹151.50
ಆರ್‌ಎಸ್‌ಎಸ್-5	₹146.50
ಗುಡ್ ಲಾಟ್	₹133

(ಪ್ರತಿ ಕೆ.ಜಿಗೆ)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹900-1300
ಮಧ್ಯಮ	₹600-800
ಸಣ್ಣ	₹300-500

ಸುದ್ದಿ 2 ನಿಮಿಷ

ಚಿನ್ನಕ್ಕೆ ಬೇಡಿಕೆ ಶೇ 17ರಷ್ಟು ಇಳಿಕೆ

ಮುಂಬೈ (ಪಿಟಿಐ): ಜನವರಿಯಿಂದ ಮಾರ್ಚ್ ನಡುವಿನ ಅವಧಿಯಲ್ಲಿ ದೇಶದಲ್ಲಿ ಚಿನ್ನದ ಬೇಡಿಕೆಯು ಶೇಕಡ 17ರಷ್ಟು ಕಡಿಮೆ ಆಗಿದೆ ಎಂದು ವಿಶ್ವ ಚಿನ್ನ ಸಮಿತಿ (ಡಬ್ಲ್ಯುಜಿಸಿ) ಹೇಳಿದೆ. ಚಿನ್ನದ ಬೆಲೆಯು ದಾಖಲೆಯ ಮಟ್ಟದಲ್ಲಿ ಇದ್ದುದು ಬೇಡಿಕೆ ತಗ್ಗುವುದಕ್ಕೆ ಕಾರಣ ಎಂದು ಅದು ತಿಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಭಾರತವು ಒಟ್ಟು 135.5 ಟನ್ ಚಿನ್ನ ಆಮದು ಮಾಡಿಕೊಂಡಿತ್ತು. ಈ ವರ್ಷದಲ್ಲಿ ಅದು 112.5 ಟನ್‌ಗೆ ಇಳಿಕೆಯಾಗಿದೆ.

'2023ರ ಮೊದಲ ತ್ರೈಮಾಸಿಕದಲ್ಲಿ (ಜನವರಿ–ಮಾರ್ಚ್) ಚಿನ್ನಾಭರಣ ಬೇಡಿಕೆಯು 78 ಟನ್‌ಗೆ ಕುಸಿದಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ 94.2 ಟನ್ ಆಗಿತ್ತು' ಎಂದು ಸಮಿತಿಯು ಹೇಳಿದೆ. 2010ರ ನಂತರದಲ್ಲಿ, ಕೋವಿಡ್ ಸಾಂಕ್ರಾಮಿಕದ ಅವಧಿಯೊಂದನ್ನು ಹೊರತುಪಡಿಸಿದರೆ ಮೊದಲ ತ್ರೈಮಾಸಿಕದಲ್ಲಿ ಚಿನ್ನಾಭರಣ ಬೇಡಿಕೆಯು 100 ಟನ್‌ಗಿಂತ ಕಡಿಮೆ ಆಗಿರುವುದು ಇದು ನಾಲ್ಕನೆಯ ಬಾರಿ.



ಮೊದಲ ತ್ರೈಮಾಸಿಕದಲ್ಲಿ ಚಿನ್ನದ ಮೇಲಿನ ಹೂಡಿಕೆ ಕೂಡ ಶೇ 17ರಷ್ಟು ಕಡಿಮೆಯಾಗಿದೆ.

ಮೀಶೊ: 251 ಸಿಬ್ಬಂದಿ ವಜಾ

ನವದೆಹಲಿ (ಪಿಟಿಐ): ಇ-ಕಾಮರ್ಸ್ ವಲಯದ ಮೀಶೊ ಕಂಪನಿಯು ವೆಚ್ಚ ತಗ್ಗಿಸಲು ಮತ್ತು ಲಾಭ ಗಳಿಸುವ ಪ್ರಯತ್ನದ ಭಾಗವಾಗಿ 251 ಸಿಬ್ಬಂದಿಯನ್ನು ಕೆಲಸದಿಂದ ವಜಾ ಮಾಡಿದೆ.

ಕಂಪನಿಯ ಸ್ಥಾಪಕ ಮತ್ತು ಸಿಇಒ ವಿದಿತ್ ಅತ್ರೇಯಾ ಅವರು ಸಿಬ್ಬಂದಿಗೆ ಕಳುಹಿಸಿರುವ ಇ-ಮೇಲ್‌ನಲ್ಲಿ ಈ ಮಾಹಿತಿ ನೀಡಿದ್ದು, ವಜಾ ಆಗಿರುವ ಸಿಬ್ಬಂದಿಯು ನೋಟಿಸ್ ಅವಧಿಯಾಚೆಗೆ ಒಂದು ತಿಂಗಳ ಹೆಚ್ಚುವರಿ ಪರಿಹಾರ ಮೊತ್ತವನ್ನು ಪಡೆಯಲಿದ್ದಾರೆ. ಸಿಬ್ಬಂದಿಯು ಕಂಪನಿಯಲ್ಲಿ ಕೆಲಸ ಮಾಡಿರುವ ಅವಧಿ ಎಷ್ಟೇ ಇದ್ದರೂ, ನೌಕರರ ಷೇರು ಮಾಲೀಕತ್ವದ ಯೋಜನೆಯ (ಇಎಸ್‌ಒಪಿ) ಪ್ರಯೋಜನ ಅವರಿಗೆ ಸಿಗಲಿದೆ ಎಂದು ತಿಳಿಸಿದ್ದಾರೆ.

ಜಿಆರ್‌ಟಿಯಿಂದ ಚಿನ್ನದ ಆಭರಣಗಳ ಹೊಸ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಆರ್‌ಟಿ ಜುವೆಲರ್ಸ್ ಕಂಪನಿಯು 'ಬೃಹ' ಎಂಬ ಹೊಸ ಶ್ರೇಣಿಯ ಆಭರಣಗಳ ಸಂಗ್ರಹವನ್ನು ಬಿಡುಗಡೆ ಮಾಡಿದೆ.

ಈ ಶ್ರೇಣಿಯ ಚಿನ್ನದ ಆಭರಣಗಳ ವಿನ್ಯಾಸಗಳು ಚೋಳರ ವಾಸ್ತುಶಿಲ್ಪ ಮತ್ತು ಸಂಪ್ರದಾಯಗಳಿಂದ ಪ್ರೇರಿತವಾಗಿವೆ. ಬೃಹದೀಶ್ವರ ದೇವಾಲಯದಿಂದ ಪ್ರೇರಿತವಾದ ಸೂಕ್ಷ್ಮ ಕೆತ್ತನೆಗಳು ಮತ್ತು ಚೋಳ ಸಾಮ್ರಾಜ್ಯದ ವೈಭವವನ್ನು ಸಾರುತ್ತವೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಸಂಪ್ರದಾಯಗಳನ್ನು ಎತ್ತಿಹಿಡಿಯಲು ಮತ್ತು ಅವುಗಳನ್ನು ಆಧುನಿಕ ಕಾಲದೊಂದಿಗೆ ಸಂಯೋಜಿಸಲು ಜಿಆರ್‌ಟಿ ಯಾವಾಗಲೂ ಶ್ರಮಿಸುತ್ತದೆ. 'ಬೃಹ' ಶ್ರೇಣಿಯು ಅದನ್ನು ಸೂಚಿಸುತ್ತದೆ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ಅನಂತಪದ್ಮನಾಭನ್ ಹೇಳಿದ್ದಾರೆ.

ದೇಶದ ಷೇರುಪೇಟೆಗಳಲ್ಲಿ ಹೆಚ್ಚಿದ ಮಾರಾಟದ ಒತ್ತಡ

ಶೇ 1ಕ್ಕೂ ಹೆಚ್ಚು ಕುಸಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಶುಕ್ರವಾರದ ವಹಿವಾಟಿನಲ್ಲಿ ಶೇಕಡ 1ಕ್ಕೂ ಹೆಚ್ಚಿನ ಕುಸಿತ ಕಂಡವು.

ಎಚ್‌ಡಿಎಫ್‌ಸಿ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ವಿಲೀನದಿಂದ ಸುಮಾರು ₹1,230 ಕೋಟಿಯಿಂದ ₹1,600 ಕೋಟಿಯಷ್ಟು ಬಂಡವಾಳ ಹೊರಹೋಗಲಿದೆ ಎನ್ನುವ ವರದಿ ಪ್ರಕಟವಾದ ಬಳಿಕ ಎರಡೂ ಕಂಪನಿಗಳ ಷೇರುಗಳು ಅತಿಯಾದ ಮಾರಾಟದ ಒತ್ತಡಕ್ಕೆ ಒಳಗಾದವು. ಇದರ ಪರಿಣಾಮವಾಗಿ ಸೂಚ್ಯಂಕಗಳು ಇಳಿಕೆ ಕಾಣುವಂತಾಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 695 ಅಂಶ ಇಳಿಕೆ ಕಂಡು 61,054 ಅಂಶಗಳಿಗೆ ತಲುಪಿತು. ದಿನದ ವಹಿವಾಟಿನ ಒಂದು ಹಂತದಲ್ಲಿ 747 ಅಂಶಗಳವರೆಗೂ ಇಳಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 187 ಅಂಶ ಇಳಿಕೆಯಾಗಿ 18,069 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಬಿಎಸ್‌ಇ ಮಿಡ್‌ಕ್ಯಾಪ್ ಶೇ 0.50ರಷ್ಟು ಮತ್ತು ಬಿಎಸ್‌ಇ ಸ್ಮಾಲ್‌ಕ್ಯಾಪ್ ಶೇ 0.39ರಷ್ಟು ಇಳಿಕೆ ಕಂಡಿತು.ವಲಯವಾರು ಹಣಕಾಸು ಸೇವೆಗಳು ಶೇ 2.28ರಷ್ಟು ಇಳಿಕೆ ಕಂಡವು.



ಮುಖ್ಯಾಂಶಗಳು

- ಎಚ್‌ಡಿಎಫ್‌ಸಿ ಬ್ಯಾಂಕ್ ಮಾರುಕಟ್ಟೆ ಮೌಲ್ಯ ₹56,228 ಕೋಟಿ ಇಳಿಕೆ
- ಎಚ್‌ಡಿಎಫ್‌ಸಿ ಮಾರುಕಟ್ಟೆ ಮೌಲ್ಯ ₹29,572 ಕೋಟಿ ಇಳಿಕೆ

ಎಚ್‌ಡಿಎಫ್‌ಸಿ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ಗಳು ಅತಿಯಾದ ಮಾರಾಟದ ಒತ್ತಡಕ್ಕೆ ಒಳಗಾಗಿದ್ದರಿಂದ ಭಾರತದ ಮಾರುಕಟ್ಟೆಗಳು ಇಳಿಕೆ ಕಾಣುವಂತಾಯಿತು. ಯುರೋಪ್‌ನ ಕೇಂದ್ರೀಯ ಬ್ಯಾಂಕ್ ಬಡ್ಡಿದರವನ್ನು ಶೇ 0.25ರಷ್ಟು ಹೆಚ್ಚಿಸಿದ್ದು, ಅಗತ್ಯ ಬಿದ್ದರೆ ಬಡ್ಡಿದರದಲ್ಲಿ ಇನ್ನಷ್ಟು ಹೆಚ್ಚಳ ಮಾಡುವುದಾಗಿಯೂ ಸೂಚನೆ ನೀಡಿದೆ. ಇದು ಜಾಗತಿಕ ಮಟ್ಟದಲ್ಲಿ ವಹಿವಾಟು ಇಳಿಕೆಗೆ ಕಾರಣವಾಯಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅಮೆರಿಕದಲ್ಲಿ ಪ್ರಾದೇಶಿಕ ಬ್ಯಾಂಕ್‌ಗಳ ಸಾಮರ್ಥ್ಯದ ಬಗೆಗಿನ ಆತಂಕ ಹೆಚ್ಚಾಗಿದೆ. ಇದರಿಂದಾಗಿ ಅಮೆರಿಕದ ಷೇರುಪೇಟೆಯಲ್ಲಿ ಮಾರಾಟದ ಒತ್ತಡ ಕಂಡುಬಂದಿತು ಎಂದು ನಾಯರ್ ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 1.59ರಷ್ಟು ಏರಿಕೆ ಕಂಡು ಒಂದು ಬ್ಯಾರಲ್‌ಗೆ 73.65 ಡಾಲರ್‌ಗೆ ತಲುಪಿತು.

ಭಾರತದ ಷೇರುಪೇಟೆಯಲ್ಲಿ ಲಾಭ ಮಾಡಿಕೊಳ್ಳಿ: ಬಿಒಎಫ್‌ಎ ಸೆಕ್ಯುರಿಟೀಸ್

ಬೆಂಗಳೂರು (ರಾಯಿಟರ್ಸ್): ಭಾರತದ ಮಾರುಕಟ್ಟೆಗಳಲ್ಲಿ ಷೇರುಗಳನ್ನು ಮಾರಾಟ ಮಾಡುವ ಮೂಲಕ ಲಾಭ ಮಾಡಿಕೊಳ್ಳಲು ಇದು ಸೂಕ್ತ ಸಮಯ ಎಂದು ಬಿಒಎಫ್‌ಎ ಸೆಕ್ಯುರಿಟೀಸ್, ಹೂಡಿಕೆದಾರರಿಗೆ ಸಲಹೆ ನೀಡಿದೆ.

ಅಮೆರಿಕದಲ್ಲಿ ಆರ್ಥಿಕ ಹಿಂಜರಿತ ಹಾಗೂ ದೇಶಿ ಕಾರ್ಪೊರೇಟ್ ಕಂಪನಿಗಳ ಗಳಿಕೆ ನಿರೀಕ್ಷೆಗಿಂತಲೂ ಕಡಿಮೆ ಇರುವ ಕಾರಣಗಳಿಂದಾಗಿ ಈ ವರ್ಷದ ಅಂತ್ಯದ ವೇಳೆಗೆ ನಿಫ್ಟಿ 50 ಸೂಚ್ಯಂಕ ತುಸು ಇಳಿಕೆ ಕಾಣಲಿದೆ. ಹೀಗಾಗಿ ಈಗ ಲಾಭ ಮಾಡಿಕೊಳ್ಳುವುದು ಉತ್ತಮ ಎಂದು ಹೇಳಿದೆ.

ಈ ವರ್ಷದಲ್ಲಿ ಇಲ್ಲಿಯವರೆಗೆ ನಿಫ್ಟಿ 50 ಶೇ 0.36ರಷ್ಟು ಏರಿಕೆ ಕಂಡು 18,170 ಅಂಶಗಳಿಗೆ ತಲುಪಿದೆ. ನಿಫ್ಟಿ 50 ಸೂಚ್ಯಂಕವು ಸದ್ಯ ಇರುವ ಮಟ್ಟದಿಂದ ಸುಮಾರು ಶೇ 1ರವರೆಗೆ ಇಳಿಕೆ ಕಾಣಲಿದ್ದು ವರ್ಷಾಂತ್ಯದ ವೇಳೆಗೆ 18 ಸಾವಿರ ಅಂಶಗಳ ಮಟ್ಟದಲ್ಲಿ ಇರಲಿದೆ ಎಂದು ಬಿಒಎಫ್‌ಎ ಅಂದಾಜು ಮಾಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40000
ಹಳತು	48000-53000
ಕಾರ್ಕಳ	
ಹೊಸತು	30000-39500
ಹಳತು	40000-53000
ಕುಮಟಾ	
ಚಿಪ್ಪು	29569-31999
ಕೋಕ	19999-31019
ಫ್ಯಾಕ್ಟರಿ	12089-22069
ಹಳೆಚಾಲಿ	36019-38109
ಹೊಸಚಾಲಿ	34899-36499
ಶಿವಮೊಗ್ಗ	
ಬೆಟ್ಟೆ	46899-53019
ಗೊರಬಲು	17519-34418
ರಾಶಿ	33219-49451
ಸರಕು	54099-83009
ಸಿದ್ದಾಪುರ	
ಬಿಳಿಗೋಟು	28609-32109
ಚಾಲಿ	35299-36611
ಕೋಕ	27099-32099
ಕೆಂಪುಗೋಟು	27599-31799
ರಾಶಿ	42319-46539
ತಟ್ಟಿಬೆಟ್ಟೆ	34609-36869
ಶಿರಸಿ	
ಬೆಟ್ಟೆ	31869-42899
ಬಿಳಿಗೋಟು	25000-32011
ಚಾಲಿ	32690-36907
ಕೆಂಪುಗೋಟು	27661-32789
ರಾಶಿ	42199-45699
ಯಲ್ಲಾಪುರ	
ಆಪಿ	53029-61699
ಬಿಳಿಗೋಟು	24899-32889
ಚಾಲಿ	33812-36790
ಕೋಕ	16109-32399
ಕೆಂಪುಗೋಟು	29206-33106
ರಾಶಿ	40291-49899
ತಟ್ಟಿಬೆಟ್ಟೆ	36899-45619

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15300	15375	182.95 ಸೆಂಟ್ಸ್
ಎಸಿ	---	7600	7700	
ಆರ್‌ಪಿ	---	10600	10400	ಲಂಡನ್
ಆರ್‌ಸಿ	---	228 on OT	5650	2412 ಡಾಲರ್ಸ್

ಜೆಟ್ ಏರ್‌ವೇಸ್ ಸಂಸ್ಥಾಪಕ ನರೇಶ್ ಮನೆಯಲ್ಲಿ ಸಿಬಿಐ ಶೋಧ

ನವದೆಹಲಿ (ಪಿಟಿಐ): ₹538 ಕೋಟಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜೆಟ್ ಏರ್‌ವೇಸ್ ವಿಮಾನಯಾನ ಕಂಪನಿ ಮತ್ತು ಅದರ ಸಂಸ್ಥಾಪಕ ನರೇಶ್ ಗೋಯಲ್ ಅವರಿಗೆ ಸಂಬಂಧಿಸಿದ ಸ್ಥಳಗಳೂ ಸೇರಿದಂತೆ ಮುಂಬೈನ ಏಳು ಕಡೆಗಳಲ್ಲಿ ಸಿಬಿಐ ಶುಕ್ರವಾರ ಶೋಧ ಕಾರ್ಯಾಚರಣೆ ನಡೆಸಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗೋಯಲ್, ಅವರ ಪತ್ನಿ ಅನಿತಾ ಹಾಗೂ ವಿಮಾನಯಾನ ಸಂಸ್ಥೆಯ ಮಾಜಿ ನಿರ್ದೇಶಕ ಗೌರಂಗ್ ಆನಂದ್ ಶೆಟ್ಟಿ ಅವರ ನಿವಾಸ ಮತ್ತು ಕಚೇರಿಯಲ್ಲಿ ಸಿಬಿಐ ಪರಿಶೀಲನೆ ನಡೆಸಿತು.



ನರೇಶ್ ಗೋಯಲ್

ಪ್ರಕರಣ ಸಂಬಂಧ ಕೆನರಾ ಬ್ಯಾಂಕ್ ಸಲ್ಲಿಸಿದ ದೂರಿನ ಆಧಾರದಲ್ಲಿ ತನಿಖಾ ಸಂಸ್ಥೆಯು ಹೊಸ ಪ್ರಕರಣವನ್ನು ದಾಖಲಿಸಿಕೊಂಡಿದೆ ಎಂದು ಅವರು ತಿಳಿಸಿದ್ದಾರೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್. ಪೇಟೆ	₹8500-8500
ತುರುವೇಕೆರೆ	₹9700-9700

ಮುಂಬೈ ಧಾರಣೆ

ಶೇಂಗಾ

5-5-2023

ಜಾವಾ 70/80(ಹೊಸ)	11400-11450
ಜಾವಾ 80/90(ಹೊಸ)	11000-11050
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1630)
ಒಂದು ವಾರದ ಡೆಲಿವರಿ	1645 (1625)
ಸೋಯಾ ಕಚ್ಚಾ	895 (875)
ಪಾಮ್ ವಾರದ ಡೆಲಿವರಿ	943 (933)
ಸೂರ್ಯಕಾಂತಿ ಎಣ್ಣೆ ಕಚ್ಚಾ	900 (890)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60,850 (61,300)
ಬೆಳ್ಳಿ ಕೆ.ಜಿ.
77,000 (76,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಇಂದು 3ನೇ ಚಾರ್ಲ್ಸ್ ಪಟ್ಟಾಭಿಷೇಕ

ಬಕಿಂಗ್‌ಹ್ಯಾಮ್‌ನಲ್ಲಿ ಸಡಗರ: ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಭಾಗಿ

ಲಂಡನ್ (ಎಎಫ್‌ಪಿ): ಬ್ರಿಟನ್ ರಾಜ 3ನೇ ಚಾರ್ಲ್ಸ್ ಪಟ್ಟಾಭಿಷೇಕ ಸಮಾರಂಭವು ಇಂದು (ಶನಿವಾರ) ವೈಭವೋಪೇತವಾಗಿ ನಡೆಯಲಿದ್ದು, ಸಾವಿರಾರು ಸಂಖ್ಯೆಯಲ್ಲಿ ಗಣ್ಯಾತಿಗಣ್ಯರ ದಂಡೇ ಇಲ್ಲಿನ ಬಕಿಂಗ್‌ಹ್ಯಾಮ್ ಅರಮನೆಗೆ ಹರಿದು ಬಂದಿದೆ.

ವಾರಾಂತ್ಯದಲ್ಲಿ ನಡೆಯುತ್ತಿರುವಪಟ್ಟಾಭಿಷೇಕ ಸಮಾರಂಭದಲ್ಲಿ ಚಾರ್ಲ್ಸ್ ಮತ್ತು ಅವರ ಪತ್ನಿ ಕ್ಯಾಮಿಲ್ಲಾ ಕೇಂದ್ರ ಬಿಂದುವಾಗಿದ್ದಾರೆ. ಈ ಐತಿಹಾಸಿಕ ಸಮಾರಂಭಕ್ಕೆ ಸುಮಾರು 2,300 ಅತಿಥಿಗಳು ಸಾಕ್ಷಿಯಾಗಲಿದ್ದಾರೆ. ಇದರಲ್ಲಿ ವಿದೇಶಗಳ ನಾಯಕರು, ರಾಜಮನೆತನದವರು, ಚುನಾಯಿತ ಪ್ರತಿನಿಧಿಗಳು, ನಾಗರಿಕ ಸಮಾಜದ ಪ್ರತಿನಿಧಿಗಳೂ ಇದ್ದಾರೆ.

ರಾಣಿ 2ನೇ ಎಲಿಜಬೆತ್ 1953ರಲ್ಲಿ ಬ್ರಿಟನ್ ರಾಣಿಯಾಗಿ ಕಿರೀಟ ಧರಿಸಿ ವೆಸ್ಟ್‌ಮಿನ್‌ಸ್ಟರ್ ಅಬೆ ಸೇರಿದ ಸಮಾರಂಭದಲ್ಲಿ 8 ಸಾವಿರಕ್ಕೂ ಹೆಚ್ಚು ಅತಿಥಿಮಹೋದಯರು ಭಾಗಿಯಾಗಿದ್ದರು.

ಪಟ್ಟಾಭಿಷೇಕ ಸಮಾರಂಭಕ್ಕೆ ಯಾರೆಲ್ಲ ಗಣ್ಯರು ಭಾಗವಹಿಸಬಹುದು ಎನ್ನುವ ಕುತೂಹಲದ ನಡುವೆ ಯಾರು ಗೈರು ಆಗಬಹುದೆಂಬ ಚರ್ಚೆಗಳೂ ನಡೆಯುತ್ತಿವೆ.

ರಾಜನ ಕಿರಿಯ ಪುತ್ರ, ರಾಜಕುಮಾರ ಹ್ಯಾರಿ ರಾಜಪ್ರಭುತ್ವದ ಕರ್ತವ್ಯಗಳನ್ನು ತ್ಯಜಿಸಿ, ಸಾಮಾನ್ಯ ಜೀವನ ನಡೆಸಲು ರಾಜ ಪರಿವಾರದಿಂದ ಹೊರನಡೆದ ನಂತರ ಪರಿವಾರದಿಂದ ಭಾರಿ ಟೀಕೆ ಮತ್ತು ಕೆಂಗಣ್ಣಿಗೆ ಗುರಿಯಾಗಿದ್ದರು. ಪಟ್ಟಾಭಿಷೇಕ ಸಮಾರಂಭಕ್ಕೆ ಹ್ಯಾರಿ ಹಾಜರಾಗಬಹುದೆಂದು ನಿರೀಕ್ಷಿಸಲಾಗಿದೆ. ಆದರೆ, ದಿನದ ಬೇರೆ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸುವುದಿಲ್ಲ ಎನ್ನಲಾಗಿದೆ. ಹ್ಯಾರಿ ಅವರ ಪತ್ನಿ ಮೇಘನ್ ಅವರು ತಮ್ಮ ಇಬ್ಬರು ಮಕ್ಕಳಾದ ಲಿಲಿಬೆಟ್ ಮತ್ತು ಅರ್ಚಿಯೊಂದಿಗೆ ಕ್ಯಾಲಿಫೋರ್ನಿಯಾದಲ್ಲೇ ಉಳಿದುಕೊಂಡಿದ್ದಾರೆ.

ಪಟ್ಟಾಭಿಷೇಕ ಸಮಾರಂಭದಲ್ಲಿ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಮತ್ತು ಅವರ ಪತ್ನಿ ಅಕ್ಷತಾ ಮೂರ್ತಿ ಸೇರಿದಂತೆ ಬ್ರಿಟನ್ ಸಂಸತ್‌ನ 80 ಸದಸ್ಯರು, ಚಾರಿಟಿಗಾಗಿ ದೇಣಿಗೆ ಸಂಗ್ರಹಿಸಲು ತನ್ನ ಗಾರ್ಡನ್ನಿನ ಗುಡಾರದಲ್ಲೇ ಮೂರು ವರ್ಷಗಳ ಕಾಲ ಮಲಗಿದ ಇಂಗ್ಲಿಷ್ ಸ್ಕೂಲ್ ಬಾಯ್ ಮ್ಯಾಕ್ಸ್ ವೂಸಿ ಸೇರಿದಂತೆ ನೂರಾರು ಪ್ರಭಾವಿ ನಾಯಕರು ಪಾಲ್ಗೊಳ್ಳಲಿದ್ದಾರೆ.

ಭಾರತದ ಪರವಾಗಿ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಆಸ್ಟ್ರೇಲಿಯಾದ ಪ್ರಧಾನಿ ಆ್ಯಂಟನಿ ಅಲ್ಬನೆಸ್, ಚೀನಾ ಉಪಾಧ್ಯಕ್ಷ ಹ್ಯಾನ್ ಝೆಂಗ್, ಯುರೋಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ವಾನ್ ಡೇರ್ ಲೆಯೆನ್, ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್, ಜರ್ಮನಿ ಅಧ್ಯಕ್ಷ ಫ್ರಾಂಕ್ ವಾಲ್ಟರ್ ಸ್ಟೇನ್ಮಿಯರ್, ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ ಹಿಪ್‌ಕಿನ್ಸ್, ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಶರೀಫ್, ಫಿಲಿಪ್ಪೀನ್ಸ್ ಅಧ್ಯಕ್ಷ ಫರ್ಡಿನೆಂಡ್ ಮಾರ್ಕಸ್ ಜೂನಿಯರ್ ಸೇರಿದಂತೆ ಸ್ಪೇನ್, ಡೆನ್ಮಾರ್ಕ್, ಜಪಾನ್, ಮೊನಾಕೊ, ಜೋರ್ಡಾನ್, ಥಾಯ್ಲೆಂಡ್‌ನ ರಾಜರು ಮತ್ತು ರಾಣಿಯರೂ ಸಮಾರಂಭಕ್ಕೆ ಅತಿಥಿಗಳಾಗಿ ಆಹ್ವಾನಿತರಾಗಿದ್ದಾರೆ.



ಔಪಚಾರಿಕ ಸಭೆಯಲ್ಲಿ ಬ್ರಿಟನ್ ರಾಜ 3ನೇ ಚಾರ್ಲ್ಸ್ ಅವರನ್ನು ಪ್ರಧಾನಿ ರಿಷಿ ಸುನಕ್ ಅಭಿನಂದಿಸಿದರು –ಎಎಫ್‌ಪಿ ಚಿತ್ರ

ಪಟ್ಟಾಭಿಷೇಕ ಹೇಗಿರಲಿದೆ?

ಲಂಡನ್ ಕೇಂದ್ರಭಾಗದಲ್ಲಿನ ಬಕಿಂಗ್‌ಹ್ಯಾಮ್ ಅರಮನೆಯಿಂದ ವೆಸ್ಟ್‌ಮಿನ್‌ಸ್ಟರ್ ಅಬೆವರೆಗೆ (ಎರಡು ಕಿ.ಮೀ) ರಾಜ ವೈಭವದ ಮೆರವಣಿಗೆಯೊಂದಿಗೆ ಬೆಳಿಗ್ಗೆ 10.20ಕ್ಕೆ (0920 ಜಿಎಂಟಿ) ಕಾರ್ಯಕ್ರಮ ಪ್ರಾರಂಭವಾಗಲಿದೆ.

ಆರು ಕುದುರೆಗಳ ಸಾರೋಟಿನಲ್ಲಿ ರಾಜ ದಂಪತಿಯನ್ನು ಪಟ್ಟಾಭಿಷೇಕದ ಸ್ಥಳಕ್ಕೆ ಕರೆದೊಯ್ಯಲಾಗುತ್ತದೆ. ಸಾರೋಟಿಗೆ ರಾಜನ ಅಂಗರಕ್ಷಕ ಪಡೆಯು ಬೆಂಗಾವಲು ಒದಗಿಸಲಿದೆ. 11 ಗಂಟೆಗೆ ಪಟ್ಟಾಭಿಷೇಕ ಶುರುವಾಗಲಿದೆ. ಇಂಗ್ಲೆಂಡ್‌ನ ಕ್ಯಾಂಟರ್‌ಬರಿ ಚರ್ಚ್‌ನ ಆರ್ಚ್ ಬಿಷಪ್ ಜಸ್ಟಿನ್ ವೆಲ್ಬಿ ನೇತೃತ್ವದಲ್ಲಿ 12 ಗಂಟೆಗೆ ಸರಿಯಾಗಿ 3ನೇ ಚಾರ್ಲ್ಸ್ ಅವರಿಗೆ ರಾಜನ ಕಿರೀಟ ಧಾರಣೆ ಮಾಡಲಾಗುತ್ತದೆ. ಆರ್ಚ್ ಬಿಷಪ್ ಪ್ರತಿಜ್ಞಾ ವಿಧಿ ಬೋಧಿಸಲಿದ್ದಾರೆ.

ಪಟ್ಟಾಭಿಷೇಕದ ವೇಳೆ ಚಾರ್ಲ್ಸ್ ಅವರನ್ನು 1300ರಲ್ಲಿ ರೂಪಿಸಲಾದ ಸಿಂಹಾಸನದ ಮೇಲೆ ಆಸೀನಗೊಳಿಸಲಾಗುತ್ತದೆ. ಈ ಸಿಂಹಾಸನವನ್ನು ಮೊದಲನೇ ಕಿಂಗ್ ಎಡ್ವರ್ಡ್ ಸ್ಕಾಟ್ಲೆಂಡ್ ಸಾಮ್ರಾಜ್ಯ ವಶಪಡಿಸಿಕೊಂಡ ಸಂಕೇತವಾಗಿ ನೋಡಲಾಗುತ್ತದೆ. ಪ್ರತ್ಯೇಕ ಸಮಾರಂಭದಲ್ಲಿ ಕ್ಯಾಮಿಲ್ಲಾ ಕೂಡ ರಾಣಿಯಾಗಿ ಕಿರೀಟ ಧರಿಸಲಿದ್ದಾರೆ. ನಂತರ ರಾಜ ಮತ್ತು ರಾಣಿ ಇಬ್ಬರೂ ಚಿನ್ನದ ಸಾರೋಟಿನಲ್ಲಿ ಬೃಹತ್ ಮೆರವಣಿಗೆಯಲ್ಲಿ ಬಕಿಂಗ್‌ಹ್ಯಾಮ್ ಅರಮನೆಗೆ ಹಿಂತಿರುಗಲಿದ್ದಾರೆ.

ಸುಡಾನ್ ಸಂಘರ್ಷ: 190 ಮಕ್ಕಳು ಸಾವು

ಜಿನೀವಾ (ಎಎಫ್‌ಪಿ): ಸುಡಾನ್‌ನಲ್ಲಿ ಸೇನೆ ಮತ್ತು ಅರೆಸೇನಾ ಪಡೆಗಳ ನಡುವಣ ಸಂಘರ್ಷದಿಂದ ಮಕ್ಕಳ ಬದುಕು ತೀವ್ರ ಸಂಕಷ್ಟಕ್ಕೆ ಸಿಲುಕಿದೆ ಎಂದು ವಿಶ್ವಸಂಸ್ಥೆ ಆತಂಕ ವ್ಯಕ್ತಪಡಿಸಿದೆ.

ಅಧಿಕಾರಕ್ಕಾಗಿನ ಸಂಘರ್ಷ ಮಕ್ಕಳ ಬದುಕನ್ನು ಅಕ್ಷರಶಃ ಕಸಿದುಕೊಂಡಿದೆ. ಪ್ರತಿ ಒಂದು ಗಂಟೆ ಅವಧಿಯಲ್ಲಿ ಏಳು ಮಕ್ಕಳು ಮೃತಪಡುತ್ತಿದ್ದಾರೆ ಅಥವಾ ಗಾಯಗೊಳ್ಳುತ್ತಿರುವ ಬಗ್ಗೆ ವರದಿಯಾಗುತ್ತಿದೆ ಎಂದು ಯುನಿಸೆಫ್‌ನ ಮಕ್ಕಳ ವಿಭಾಗದ ವಕ್ತಾರ ಜೇಮ್ಸ್ ಎಲ್ಡರ್ ಕಳವಳ ವ್ಯಕ್ತಪಡಿಸಿದ್ದಾರೆ.

'ಯುನಿಸೆಫ್ ಸ್ವಯಂಪ್ರೇರಿತವಾಗಿ ಸ್ಥಳ ಪರಿಶೀಲಿಸಿಲ್ಲ. ಆದರೆ, ವಿಶ್ವಸನೀಯ ಸಂಸ್ಥೆಗಳಿಂದ ಪಡೆದಿರುವ ಮಾಹಿತಿ ಅನ್ವಯ ಸಂಘರ್ಷ ಆರಂಭಗೊಂಡ ಏಪ್ರಿಲ್ 15ರಿಂದ 11 ದಿನಗಳ ಅವಧಿಯಲ್ಲಿ ಒಟ್ಟು 190 ಮಕ್ಕಳು ಅಸುನೀಗಿದ್ದು, 1,700 ಮಕ್ಕಳು ಗಾಯಗೊಂಡಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

ಖಾರ್ಟೂಮ್ ಮತ್ತು ಡಾರ್ಫರ್ ಪ್ರದೇಶದಲ್ಲಿ ಆರೋಗ್ಯ ಸೇವೆಗಾಗಿ ಜನರು ಆಸ್ಪತ್ರೆಗಳ ಮುಂಭಾಗ ಸಾಲುಗಟ್ಟಿರುವ ದೃಶ್ಯಗಳು ಸಾಮಾನ್ಯವಾಗಿವೆ. ಇದು ಆಘಾತಕಾರಿಯಾದ ಸಂಗತಿ ಎಂದಿದ್ದಾರೆ.

ಸೇನೆಯ ಮುಖ್ಯಸ್ಥ ಜನರಲ್ ಅಬ್ದುಲ್ ಫತ್ತಾಹ್ ಅಲ್ ಬುರ್ಹಾನ್ ಹಾಗೂ ಅರೆಸೇನಾ ಪಡೆ ಮುಖ್ಯಸ್ಥ ಮೊಹಮ್ಮದ್ ಹಮದಾನ್ ದಾಗಲೊ ನಡುವಣ ಸಂಘರ್ಷ 21ನೇ ದಿನಕ್ಕೆ ಕಾಲಿಟ್ಟಿದೆ. ಶುಕ್ರವಾರವೂ ಗುಂಡಿನ ದಾಳಿ ಮುಂದುವರಿಯಿತು.

ನಿರಾಶ್ರಿತರಿಗೆ ಆಶ್ರಯ ನೀಡಿ: ಸುಡಾನ್ ನಿರಾಶ್ರಿತರ ಪ್ರವೇಶಕ್ಕೆ ಗಡಿಭಾಗದ ರಾಷ್ಟ್ರಗಳು ಅನುಮತಿ ನೀಡಬೇಕು ಎಂದು ವಿಶ್ವಸಂಸ್ಥೆಯ ನಿರಾಶ್ರಿತರ ಏಜೆನ್ಸಿ ಕೋರಿದೆ.

ಪ್ರಜಾಸತ್ತಾತ್ಮಕ ನೆಲೆಗಟ್ಟಿನಲ್ಲಿ ಸುಡಾನ್ ಪ್ರಜೆಗಳಿಗೆ ಆಶ್ರಯ ಕಲ್ಪಿಸಬೇಕು. ಪಾಸ್‌ಪೋರ್ಟ್ ಅಥವಾ ದಾಖಲಾತಿ ಇಲ್ಲದ ಇತರ ದೇಶಗಳ ಪ್ರಜೆಗಳಿಗೆ ನೆಲೆ ನೀಡಬೇಕು ಎಂದು ಏಜೆನ್ಸಿ ಮುಖ್ಯಸ್ಥೆ ಎಲಿಜಬೆತ್ ಥಾನ್ ಕೋರಿದ್ದಾರೆ.

ಸಾವಿರಾರು ಸಂಖ್ಯೆಯಲ್ಲಿ ಸಂಘರ್ಷಕ್ಕೆ ತುತ್ತಾದ ಜನರು ದೇಶ ತೊರೆಯುತ್ತಿದ್ದಾರೆ. 1.13 ಲಕ್ಷ ಜನರು ನೆರೆಯ ದೇಶಗಳಿಗೆ ತೆರಳಿದ್ದಾರೆ. ಸುಮಾರು 8.60 ಲಕ್ಷ ಜನರು ಇದೇ ಹಾದಿಯಲ್ಲಿದ್ದಾರೆ ಎಂದು ತಿಳಿಸಿದ್ದಾರೆ.

ರಾಜ್ಯಕ್ಕೆ ಮರಳಿದ 97 ಮಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಡಾನ್‌ನಲ್ಲಿ ಸಿಲುಕಿದ್ದ ಭಾರತೀಯರನ್ನು ಕರೆ ತರಲು 'ಆಪರೇಷನ್ ಕಾವೇರಿ' ಹೆಸರಿನಲ್ಲಿ ಕಾರ್ಯಾಚರಣೆ ನಡೆಯುತ್ತಿದ್ದು ಶುಕ್ರವಾರ ತಾಯ್ನಾಡಿಗೆ 97 ಮಂದಿಯನ್ನು ಒಳಗೊಂಡ ಮತ್ತೊಂದು ತಂಡವು ಸುರಕ್ಷಿತವಾಗಿ ಮರಳಿತು.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮೂರು ವಿಮಾನಗಳಲ್ಲಿ ಬಂದಿಳಿದರು. ಬೆಳಿಗ್ಗೆ 8ಕ್ಕೆ ಬಂದ ವಿಮಾನದಲ್ಲಿ 11 ಪುರುಷರು ಹಾಗೂ 7 ಮಂದಿ ಮಹಿಳೆಯರು ಸೇರಿದಂತೆ 18 ಮಂದಿ, ಬೆಳಿಗ್ಗೆ 10ಕ್ಕೆ ಬಂದ 2ನೇ ವಿಮಾನದಲ್ಲಿ 16 ಪುರುಷರು, 37 ಮಹಿಳೆಯರು ಸೇರಿದಂತೆ ಒಟ್ಟು 53 ಹಾಗೂ 3ನೇ ವಿಮಾನದಲ್ಲಿ 26 ಮಂದಿ ಪುರುಷರು ರಾಜ್ಯಕ್ಕೆ ವಾಪಸ್ಸಾಗಿದ್ದಾರೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಮನೋಜ್ ರಾಜನ್ ತಿಳಿಸಿದ್ದಾರೆ.

ಸಂಘರ್ಷ ಪೀಡಿತ ಸುಡಾನ್‌ನಲ್ಲಿ ಸಿಲುಕಿದ್ದ ಭಾರತೀಯರನ್ನು ರಕ್ಷಿಸಿ ಕರೆತರುವ ಕಾರ್ಯಾಚರಣೆ ನಡೆಯುತ್ತಿದೆ. ಇದುವರೆಗೂ ರಾಜ್ಯದ 439 ಮಂದಿಯನ್ನು ಸುರಕ್ಷಿತವಾಗಿ ಕರೆತರಲಾಗಿದೆ. ವಿಮಾನ ನಿಲ್ದಾಣದಿಂದ ಅವರ ಸ್ವಂತ ಊರುಗಳಿಗೆ ಕೆಎಸ್‌ಆರ್‌ಟಿಸಿ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಬಂದವರ ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ. ಕೆಲವರನ್ನು ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

ಸಿಡ್ನಿ: ಹಿಂದೂ ದೇಗುಲ ವಿರೂಪಗೊಳಿಸಿದ ಖಾಲಿಸ್ತಾನ ಉಗ್ರರು

ಮೆಲ್ಬರ್ನ್(ಪಿಟಿಐ): ಆಸ್ಟ್ರೇಲಿಯಾದ ಸಿಡ್ನಿಯ ರೋಸ್‌ಹಿಲ್ ಪ್ರದೇಶದಲ್ಲಿರುವ ಪ್ರಸಿದ್ಧ ಶ್ರೀಸ್ವಾಮಿ ನಾರಾಯಣ ದೇಗುಲವನ್ನು ಖಾಲಿಸ್ತಾನ ಉಗ್ರರು ಶುಕ್ರವಾರ ವಿರೂಪಗೊಳಿಸಿದ್ದು, ಇಲ್ಲಿನ ಭಾರತೀಯ ಸಮುದಾಯ ಆತಂಕಗೊಂಡಿದೆ.

ಮೇ 24ರಂದು ಇಲ್ಲಿ ನಡೆಯಲಿರುವ ಕ್ವಾಡ್ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದಾರೆ. ಈ ಭೇಟಿಗೂ ಮುನ್ನವೇ ದೇಗುಲದ ಗೋಡೆಗಳ ಮೇಲೆ ಭಾರತ ವಿರೋಧಿ ಬರಹಗಳನ್ನು ಬರೆಯಲಾಗಿದೆ.

ದೇವಾಲಯದ ಗೇಟಿನ ಮೇಲೆ ಖಾಲಿಸ್ತಾನದ ಧ್ವಜ ಕಟ್ಟಲಾಗಿದೆ. ಈ ವಿಧ್ವಂಸಕ ಕೃತ್ಯವು ಇಲ್ಲಿ ನೆಲೆಸಿರುವ ಭಾರತೀಯರ ಭಾವನೆಗಳಿಗೆ ಘಾಸಿ ಉಂಟು ಮಾಡಿದೆ. ಘಟನೆ ಕುರಿತು ನ್ಯೂ ಸೌಥ್ ವೇಲ್ಸ್ ಪೊಲೀಸರಿಗೆ ಮಾಹಿತಿ ನೀಡಲಾಗಿದೆ ಎಂದು ದೇವಾಲಯದ ಆಡಳಿತ ಮಂಡಳಿ ತಿಳಿಸಿದೆ.

23 ವರ್ಷಗಳ ಹಿಂದೆ ಈ ದೇಗುಲ ನಿರ್ಮಿಸಲಾಗಿದೆ. ಇಲ್ಲಿನ ಭಾರತೀಯರಲ್ಲಿ ಶಾಂತಿ, ಸಾಮರಸ್ಯ ಸೇರಿದಂತೆ ಹಿಂದೂ ಧರ್ಮದ ಮೌಲ್ಯಗಳನ್ನು ಬಿತ್ತಲು ಒತ್ತು ನೀಡಲಾಗಿದೆ. ಈ ಘಟನೆಯು ಆಸ್ಟ್ರೇಲಿಯಾದ ವಿವಿಧೆಡೆ ಇರುವ ಹಿಂದೂ ದೇಗುಲಗಳ ಮೇಲೆ ದಾಳಿ ಮುಂದುವರಿಯುವ ಸಾಧ್ಯತೆಯನ್ನು ಪುಷ್ಟೀಕರಿಸಿದೆ ಎಂದು ಆತಂಕ ವ್ಯಕ್ತಪಡಿಸಿದೆ. ಸುದ್ದಿ ತಿಳಿದ ತಕ್ಷಣ ಸಂಸದ ಆಂಡ್ರ್ಯೂ ಚಾರ್ಲ್ಟನ್ ದೇವಾಲಯಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ವಿರೂಪಗೊಂಡಿರುವ ಗೋಡೆಗಳಿಗೆ ಬಣ್ಣ ಬಳಿಯಲು ದೇವಾಲಯದ ಆಡಳಿತ ಮಂಡಳಿಗೆ ನೆರವಾದರು.

'ನನ್ನ ಕ್ಷೇತ್ರದಲ್ಲಿ ನಡೆದಿರುವ ಈ ಘಟನೆ ಆಘಾತ ತಂದಿದೆ. ಇಂತಹ ವಿಧ್ವಂಸಕ ಕೃತ್ಯಗಳನ್ನು ಎಲ್ಲರೂ ಖಂಡಿಸಬೇಕು. ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಎಲ್ಲಾ ಸಮುದಾಯದವರು ಶಾಂತಿಯಿಂದ ತಮ್ಮ ಧಾರ್ಮಿಕ ಕಾರ್ಯಕ್ರಮಗಳನ್ನು ಆಚರಿಸುವ ಹಕ್ಕುಗಳನ್ನು ಹೊಂದಿದ್ದಾರೆ' ಎಂದರು.

ಈ ವರ್ಷದ ಆರಂಭದಲ್ಲಿ ಮೆಲ್ಬರ್ನ್‌ನಲ್ಲಿ ಮೂರು ಹಾಗೂ ಬ್ರಿಸ್ಬೇನ್‌ನಲ್ಲಿರುವ ಎರಡು ಹಿಂದೂ ದೇಗುಲಗಳನ್ನು ಖಾಲಿಸ್ತಾನ ಉಗ್ರರು ವಿರೂಪಗೊಳಿಸಿದ್ದರು.

ಮಾರ್ಚ್‌ನಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಆಸ್ಟ್ರೇಲಿಯಾ ಪ್ರಧಾನಿ ಆ್ಯಂಟನಿ ಅಲ್ಬನೆಸ್ ಜೊತೆಗಿನ ಚರ್ಚೆ ವೇಳೆ ಪ್ರಧಾನಿ ಮೋದಿ ಈ ವಿಷಯವನ್ನು ಪ್ರಸ್ತಾಪಿಸಿದ್ದರು. 'ಹಿಂದೂ ದೇಗುಲಗಳ ಮೇಲೆ ನಡೆಯುವ ದಾಳಿಯನ್ನು ತಡೆಗಟ್ಟಲು ಕ್ರಮವಹಿಸಲಾಗುವುದು' ಎಂದು ಆ್ಯಂಟನಿ ಭರವಸೆ ನೀಡಿದ್ದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಗುಜರಾತ್ ಟೈಟನ್ಸ್‌ಗೆ ಶರಣಾದ ರಾಜಸ್ಥಾನ ರಾಯಲ್ಸ್: ನೂರ್ ಮಿಂಚು

ರಶೀದ್ ಮೋಡಿಗೆ ಒಲಿದ ಜಯ

ಜೈಪುರ (ಪಿಟಿಐ): ರಶೀದ್ ಖಾನ್ ಮತ್ತು ನೂರ್ ಅಹ್ಮದ್ ಅವರ ಮೋಡಿಯಿಂದಾಗಿ ಗುಜರಾತ್ ಟೈಟನ್ಸ್ ತಂಡವು ರಾಜಸ್ಥಾನ ರಾಯಲ್ಸ್ ಎದುರು ಜಯಭೇರಿ ಬಾರಿಸಿತು.

ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ರಾಜಸ್ಥಾನ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ, ರಶೀದ್ (14ಕ್ಕೆ3) ಹಾಗೂ ನೂರ್ ಅಹಮದ್ (25ಕ್ಕೆ2) ಅವರ ದಾಳಿಯ ಮುಂದೆ ರಾಜಸ್ಥಾನ ತಂಡವು 17.5 ಓವರ್‌ಗಳಲ್ಲಿ 118 ರನ್ ಮಾತ್ರ ಗಳಿಸಿತು. ಇದಕ್ಕುತ್ತರವಾಗಿ ಗುಜರಾತ್ ತಂಡವು 13.5 ಓವರ್‌ಗಳಲ್ಲಿ 1 ವಿಕೆಟ್‌ಗೆ 119 ರನ್ ಗಳಿಸಿತು. 9 ವಿಕೆಟ್‌ಗಳಿಂದ ಜಯಿಸಿತು.

ಯೋಜನಾಬದ್ಧ ಆಟವಾಡಿದ ಹಾರ್ದಿಕ್ ಪಾಂಡ್ಯ ಬಳಗವು ರಾಯಲ್ಸ್ ಬ್ಯಾಟರ್‌ಗಳನ್ನು ಕಟ್ಟಿಹಾಕುವಲ್ಲಿ ಯಶಸ್ವಿಯಾಯಿತು.

ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿಯೇ ಜೋಸ್ ಬಟ್ಲರ್ ವಿಕೆಟ್ ಗಳಿಸಿದ ಹಾರ್ದಿಕ್ ಪಾಂಡ್ಯ ಸಂಭ್ರಮಿಸಿದರು. ತಂಡದ ರನ್ ಯಂತ್ರವಾಗಿರುವ ಯಶಸ್ವಿ ಜೈಸ್ವಾಲ್ ಅವರು ನಾಯಕ ಸಂಜು ಸ್ಯಾಮ್ಸನ್ ಜೊತೆಗೂಡಿ ಇನಿಂಗ್ಸ್‌ಗೆ ಬಲ ತುಂಬಲು ಪ್ರಯತ್ನಿಸಿದರು.

ಆದರೆ ಆರನೇ ಓವರ್‌ನಲ್ಲಿ ಮೋಹಿತ್ ಶರ್ಮಾ ಹಾಗೂ ರಶೀದ್ ಖಾನ್ ಅವರ ಜಂಟಿ ಪ್ರಯತ್ನದಿಂದಾಗಿ ಜೈಸ್ವಾಲ್ ರನ್‌ಔಟ್ ಆದರು. ಇದು ರಾಜಸ್ಥಾನ ಹಿನ್ನಡೆಗೆ ಕಾರಣವಾಯಿತು.

ನಂತರದ ಓವರ್‌ನಲ್ಲಿ ಸಂಜು (30; 20ಎ) ಆಟಕ್ಕೆ ಜೊಶುವ ಲಿಟ್ಲ್ ತಡೆಯೊಡ್ಡಿದರು. ಲಯ ಕಂಡುಕೊಳ್ಳಲು ಯತ್ನಿಸಿದ ದೇವದತ್ತ ಪಡಿಕ್ಕಲ್ (12; 12ಎ) ಅವರನ್ನು ನೂರ್ ಅಹಮದ್ ಕ್ಲೀನ್‌ಬೌಲ್ಡ್ ಮಾಡಿದರು.

ಅಶ್ವಿನ್, ರಿಯಾನ್ ಪರಾಗ್, ಹೆಟ್ಮೆಯರ್ ಹಾಗೂ ಧ್ರುವ ಜುರೇಲ್ ಅವರಿಗೆ ಕಾಲೂರಿ ನಿಲ್ಲಲು ಸಾಧ್ಯವಾಗಲಿಲ್ಲ. ಇದರಿಂದಾಗಿ ತಂಡವು ನೂರರ ಗಡಿ ಮುಟ್ಟುವ ಮುನ್ನವೇ ಒಟ್ಟು ಎಂಟು ವಿಕೆಟ್‌ಗಳು ಪತನವಾಗಿದ್ದವು.

ಕೊನೆಯ ಹಂತದ ಓವರ್‌ಗಳಲ್ಲಿ ಟ್ರೆಂಟ್ ಬೌಲ್ಟ್ (15; 11ಎ) ಒಂದಿಷ್ಟು ಹೋರಾಟ ಮಾಡಿದರು. ಒಂದು ಬೌಂಡರಿ ಹಾಗೂ ಸಿಕ್ಸರ್ ಸಿಡಿಸಿದ ಅವರು ತಂಡದ ಮೊತ್ತಕ್ಕೆ ರನ್‌ಗಳ ಕಾಣಿಕೆ ನೀಡಿದರು.

ಸಾಧಾರಣ ಗುರಿ ಬೆನ್ನಟ್ಟಿದ ಟೈಟನ್ಸ್ ಬಳಗಕ್ಕೆ ವೃದ್ಧಿಮಾನ್ ಸಹಾ ಹಾಗೂ ಶುಭಮನ್ ಗಿಲ್ ಮೊದಲ ವಿಕೆಟ್ ಜೊತೆಯಾಟದಲ್ಲಿ 71 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಹತ್ತನೇ ಓವರ್ ಬೌಲಿಂಗ್ ಮಾಡಿದ ಸ್ಪಿನ್ನರ್ ಯಜುವೇಂದ್ರ ಚಾಹಲ್ ಬೌಲಿಂಗ್‌ನಲ್ಲಿ ಗಿಲ್ ಔಟಾದರು.

ಸಹಾ (ಔಟಾಗದೆ 41; 34ಎ) ಹಾಗೂ ನಾಯಕ ಹಾರ್ದಿಕ್ (ಔಟಾಗದೆ 39; 15ಎ) ಮುರಿಯದ ಎರಡನೇ ವಿಕೆಟ್ ಜೊತೆಯಾಟದಲ್ಲಿ ತಂಡವನ್ನು ಗೆಲುವಿನ ದಡ ಸೇರಿಸಿದರು.



ರಾಜಸ್ಥಾನ ರಾಯಲ್ಸ್ ತಂಡದ ಆರ್. ಅಶ್ವಿನ್ ವಿಕೆಟ್ ಗಳಿಸಿದ ಗುಜರಾತ್ ಟೈಟನ್ಸ್‌ನ ರಶೀದ್ ಖಾನ್ (ಬಲ) ಅವರು ಸಹ ಆಟಗಾರ ಹಾರ್ದಿಕ್ ಪಾಂಡ್ಯ ಅವರೊಂದಿಗೆ ಸಂಭ್ರಮಿಸಿದರು– ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್: 118 (17.5 ಓವರ್)
ಜೈಸ್ವಾಲ್ ರನ್‌ಔಟ್ (ಶರ್ಮಾ/ ರಶೀದ್) 14 (11ಎ,4x1, 6x1)
ಬಟ್ಲರ್ ಸಿ ಶರ್ಮಾ ಬಿ ಪಾಂಡ್ಯ 8 (6ಎ, 4x2)
ಸ್ಯಾಮ್ಸನ್ ಸಿ ಪಾಂಡ್ಯ ಬಿ ಲಿಟ್ಲ್ 30 (20ಎ, 4x3, 6x1)
ಪಡಿಕ್ಕಲ್ ಬಿ ನೂರ್ 12 (12ಎ, 4X1)
ಅಶ್ವಿನ್ ಬಿ ರಶೀದ್ 2 (6ಎ)
ಪರಾಗ್ ಎಲ್‌ಬಿಡಬ್ಲ್ಯು ಬಿ ರಶೀದ್ 4 (6ಎ)
ಹೆಟ್ಮೆಯರ್ ಎಲ್‌ಬಿಡಬ್ಲ್ಯು ಬಿ ರಶೀದ್ 7 (13ಎ)
ಜುರೆಲ್ ಎಲ್‌ಬಿಡಬ್ಲ್ಯು ಬಿ ನೂರ್ 9 (8ಎ, 4X1)
ಬೌಲ್ಟ್ ಬಿ ಶಮಿ 15 (11ಎ, 4X1, 6X1)
ಜಂಪಾ ರನ್‌ಔಟ್ (ಮನೋಹರ್) 7 (9ಎ), ಸಂದೀಪ್ ಔಟಾಗದೇ 2 (5ಎ)
ಇತರೆ: 8 (ಲೆಗ್‌ಬೈ 1, ವೈಡ್ 7)
ವಿಕೆಟ್ ಪತನ: 1-11 (ಜೋಸ್ ಬಟ್ಲರ್; 1.4), 2-47 (ಯಶಸ್ವಿ ಜೈಸ್ವಾಲ್; 5.1), 3-60 (ಸಂಜು ಸ್ಯಾಮ್ಸನ್, 6.5), 4-63 (ರವಿಚಂದ್ರನ್ ಅಶ್ವಿನ್, 7.6), 5-69 (ರಿಯಾನ್ ಪರಾಗ್, 9.2), 6-77 (ದೇವದತ್ತ ಪಡಿಕ್ಕಲ್, 11.3), 7-87 (ಧ್ರುವ್ ಜುರೆಲ್, 13.1), 8-96 (ಶಿಮ್ರೊನ್ ಹೆಟ್ಮೆಯರ್, 14.1), 9-112 (ಟ್ರೆಂಟ್ ಬೌಲ್ಟ್, 16.3), 10-118 (ಆ್ಯಡಂ ಜಂಪಾ, 17.5)
ಬೌಲಿಂಗ್: ಮೊಹಮ್ಮದ್ ಶಮಿ 4-0-27-1, ಹಾರ್ದಿಕ್ ಪಾಂಡ್ಯ 2-0-22-1, ರಶೀದ್ ಖಾನ್ 4-0-14-3, ಜೋಶ್ ಲಿಟ್ಲ್ 4-0-24-1; ನೂರ್ ಅಹ್ಮದ್ 3-0-25-2; ಮೋಹಿತ್ ಶರ್ಮಾ 0.5-0-5-0

ಗುಜರಾತ್ ಟೈಟನ್ಸ್ 1ಕ್ಕೆ 119 (13.5 ಓವರ್)
ವೃದ್ಧಿಮಾನ್ ಔಟಾಗದೆ 41 (34ಎ, 4X5)
ಗಿಲ್ ಸ್ಟಂಪ್ಡ್ ಸ್ಯಾಮ್ಸನ್ ಬಿ ಚಾಹಲ್ 36 (35ಎ, 4X6)
ಹಾರ್ದಿಕ್ ಔಟಾಗದೆ 39 (15ಎ, 4X3, 6X3)
ಇತರೆ: 3 (ಲೆಗ್‌ಬೈ 2, ನೋಬಾಲ್ 1)
ವಿಕೆಟ್ ಪತನ: 1-71 (ಶುಭಮನ್ ಗಿಲ್, 9.4)
ಬೌಲಿಂಗ್: ಟ್ರೆಂಟ್ ಬೌಲ್ಟ್ 3-0-28-0, ಸಂದೀಪ್ ಶರ್ಮಾ 3-0-19-0, ಆ್ಯಡಂ ಜಂಪಾ 3-0-40-0, ಯಜುವೇಂದ್ರ ಚಾಹಲ್ 3.5-0-22-1, ರವಿಚಂದ್ರನ್ ಅಶ್ವಿನ್ 1-0-8-0
ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ 9 ವಿಕೆಟ್‌ಗಳ ಜಯ

ಡಬ್ಲ್ಯುಟಿಸಿ ಫೈನಲ್‌ಗೆ ರಾಹುಲ್ ಇಲ್ಲ

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ವಿರುದ್ಧದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್‌ಗೆ ಭಾರತ ಕ್ರಿಕೆಟ್ ತಂಡದ ಬ್ಯಾಟರ್ ಕೆ.ಎಲ್.ರಾಹುಲ್ ಲಭ್ಯರಿಲ್ಲ. ಶುಕ್ರವಾರ ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಅವರು ಬರೆದುಕೊಂಡಿದ್ದಾರೆ. ಐಪಿಎಲ್‌ನಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕರಾಗಿರುವ ರಾಹುಲ್, ಇತ್ತೀಚೆಗೆ ಫೀಲ್ಡಿಂಗ್ ಮಾಡುವಾಗ ಗಾಯಗೊಂಡಿದ್ದರು.

ಕರುಣ್‌ಗೆ ಸ್ಥಾನ: ಲಖನೌ ತಂಡದಲ್ಲಿ ರಾಹುಲ್ ಬದಲಿಗೆ ಕರ್ನಾಟಕದ ಕರುಣ್ ನಾಯರ್ ಸ್ಥಾನ ಪಡೆದಿದ್ದಾರೆ. ತಂಡವು ₹ 50 ಲಕ್ಷಕ್ಕೆ ಅವರನ್ನು ತನ್ನದಾಗಿಸಿಕೊಂಡಿದೆ.

ಆರ್ಚರಿ: ಭಾರತಕ್ಕೆ 14 ಪದಕ

ತಾಷ್ಕೆಂಟ್ (ಪಿಟಿಐ): ಕಾಂಪೌಂಡ್ ವಿಭಾಗದಲ್ಲಿ ಪಾರಮ್ಯ ಸಾಧಿಸುವುದರೊಂದಿಗೆ ಭಾರತದ ಆರ್ಚರಿಪಟುಗಳು ಇಲ್ಲಿ ನಡೆಯುತ್ತಿರುವ ಏಷ್ಯಾಕಪ್ ಸ್ಟೇಜ್ 2 ವಿಶ್ವ ರ‍್ಯಾಂಕಿಂಗ್ ಟೂರ್ನಿಯಲ್ಲಿ ಒಟ್ಟು 14 (ಏಳು ಚಿನ್ನ, ಐದು ಬೆಳ್ಳಿ ಮತ್ತು ಎರಡು ಕಂಚು) ಪದಕಗಳನ್ನು ಜಯಿಸಿದರು.

ಮಹಿಳೆಯರ ಕಾಂಪೌಂಡ್ ತಂಡ ವಿಭಾಗದಲ್ಲಿ ಪರ್ಣೀತ್ ಕೌರ್, ರಾಗಿಣಿ ಮಾರ್ಕೂ ಮತ್ತು ಪ್ರಗತಿ 232-223ರಿಂದ ಕಜಕಸ್ತಾನ ತಂಡವನ್ನು ಸೋಲಿಸಿ ಮೊದಲ ಚಿನ್ನ ಗೆದ್ದರು. ಅಭಿಷೇಕ ವರ್ಮಾ, ಕುಶಾಲ್ ದಲಾಲ್ ಮತ್ತು ಅಮಿತ್ ಅವರನ್ನೊಳಗೊಂಡ ಪುರುಷರ ತಂಡವೂ 233-226ರಿಂದ ಹಾಂಗ್‌ಕಾಂಗ್ ಮೇಲೆ ಗೆದ್ದು ಚಿನ್ನದ ಪದಕಕ್ಕೆ ಮುತ್ತಿಟ್ಟಿತು. ಮಿಶ್ರ ತಂಡ ವಿಭಾಗದಲ್ಲಿ ಅಭಿಷೇಕ್ -ಪರ್ಣಿತ್ ಅಗ್ರಸ್ಥಾನ ಗಳಿಸಿದರು.

ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ರಾಗಿಣಿ ಅವರು ಭಾರತದವರೇ ಆದ ಪ್ರಗತಿ ಅವರನ್ನು ಮಣಿಸಿ ಚಿನ್ನ ಗೆದ್ದರು.

ಪುರುಷರ ಕಾಂಪೌಂಡ್ ವೈಯಕ್ತಿಕ ವಿಭಾಗದ ಫೈನಲ್‌ನಲ್ಲಿ ಅಭಿಷೇಕ್ ಅವರು ಅಮಿತ್ ಅವರಿಗೆ ಸೋಲುಣಿಸಿದರು.

ಟೆನಿಸ್: ಫೈನಲ್‌ಗೆ ಬೋಪಣ್ಣ

ಮ್ಯಾಡ್ರಿಡ್ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯು ಎಬ್ಡೆನ್ ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಫೈನಲ್ ತಲುಪಿದರು.

ಟೂರ್ನಿಯ ನಾಲ್ಕರ ಘಟ್ಟದ ಪಂದ್ಯದಲ್ಲಿ ಬೋಪಣ್ಣ ಹಾಗೂ ಎಬ್ಡೆನ್ 5-7, 7-6(3), 10-4ರಿಂದ ಮೆಕ್ಸಿಕೊದ ಸ್ಯಾಂಟಿಯಾಗೊ ಗೊನ್ಜಾಲೆಜ್ ಮತ್ತು ಫ್ರಾನ್ಸ್‌ನ ಎಡ್ವರ್ಡ್ ರೋಜರ್ ಅವರನ್ನು ಮಣಿಸಿದರು.



ಬೋಪಣ್ಣ, ಎಬ್ಡೆನ್– ಟ್ವಿಟರ್ ಚಿತ್ರ

ಫೈನಲ್‌ನಲ್ಲಿ ಶನಿವಾರ ಬೋಪಣ್ಣ, ಎಬ್ಡೆನ್, ರಷ್ಯಾದ ಕರೆನ್ ಕಚನೊವ್–ಆ್ಯಂಡ್ರೆ ರುಬ್ಲೆವ್ ಎದುರು ಸೆಣಸುವರು.

ವೇಟ್‌ಲಿಫ್ಟಿಂಗ್: ಮೀರಾಗೆ 5ನೇ ಸ್ಥಾನ

ಜಿಂಜು (ದಕ್ಷಿಣಕೊರಿಯಾ) (ಪಿಟಿಐ): ಭಾರತದ ಅನುಭವಿ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಅವರು ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ನಿರಾಸೆ ಅನುಭವಿಸಿದರು. ಶುಕ್ರವಾರ ನಡೆದ 49 ಕೆ.ಜಿ. ವಿಭಾಗ ದಲ್ಲಿ ಅವರು ಐದನೇ ಸ್ಥಾನ ಪಡೆದರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿಯ ಪದಕ ಗೆದ್ದುಕೊಂಡಿದ್ದ ಮೀರಾ, ಸ್ನಾಚ್‌ನಲ್ಲಿ 85 ಕೆ.ಜಿ. ಮತ್ತು ಕ್ಲೀನ್ ಮತ್ತು ಜರ್ಕ್‌ನಲ್ಲಿ 109 ಕೆ.ಜಿ ಸಹಿತ ಒಟ್ಟು 194 ಕೆ.ಜಿ. ಎತ್ತಿದರು.

ಚೀನಾದ ಜಿಯಾಂಗ್ ಹುಯಿಹುವ ಒಟ್ಟು 207 ಕೆ.ಜಿ (94 + 113 ಕೆ.ಜಿ) ಸಾಧನೆಯೊಡನೆ ಚಿನ್ನ ಗೆದ್ದರು. ಒಲಿಂಪಿಕ್ಸ್ ಚಿನ್ನ ವಿಜೇತೆ ಹೌ ಜಿಹುಯಿ ಒಟ್ಟು 204 ಕೆ.ಜಿ. ಎತ್ತಿ ಎರಡನೇ ಸ್ಥಾನ ಪಡೆದರು. ಥಾಯ್ಲೆಂಡ್‌ನ ಸೆರೊಡಚನ ಖಂಬಾವೊ (200) 3ನೇ ಸ್ಥಾನ ಪಡೆದರು.

ಟೆನ್ ಕೆ: 27 ಸಾವಿರ ನೋಂದಣಿ

ಬೆಂಗಳೂರು: 15ನೇ ಆವೃತ್ತಿಯ ಟಿಸಿಎಸ್ ಬೆಂಗಳೂರು ವಿಶ್ವ ಟೆನ್ ಕೆ ಸ್ಪರ್ಧೆಗೆ 27 ಸಾವಿರಕ್ಕೂ ಅಧಿಕ ಮಂದಿ ನೋಂದಾಯಿಸಿಕೊಂಡಿದ್ದಾರೆ. ಸ್ಪರ್ಧೆಯ ಸಂಘಟಕರು ಈ ವಿಷಯ ತಿಳಿಸಿದ್ದಾರೆ.

ಇದೇ 21ರಂದು ಕಂಠೀರವ ಕ್ರೀಡಾಂಗಣದಲ್ಲಿ ಸ್ಪರ್ಧೆ ನಡೆಯಲಿದೆ. ಈ ಕುರಿತು ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ನಡೆಯಿತು.

ಟೀಶರ್ಟ್ ಬಿಡುಗಡೆ: ಭಾರತ ಕ್ರಿಕೆಟ್ ತಂಡದ ಮಧ್ಯಮವೇಗದ ಬೌಲರ್ ಪ್ರಸಿದ್ಧ ಕೃಷ್ಣ ಇದೇ ವೇಳೆ ಟೆನ್ ಕೆ ಸ್ಪರ್ಧೆಯ ಟೀಶರ್ಟ್‌ಗಳನ್ನು ಬಿಡುಗಡೆಗೊಳಿಸಿದರು.



ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಟೆನ್ ಕೆ ಸ್ಪರ್ಧೆಯ ಟೀಶರ್ಟ್‌ಗಳನ್ನು ಬಿಡುಗಡೆಗೊಳಿಸಲಾಯಿತು. ಈ ಸಂದರ್ಭದಲ್ಲಿ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ವಲಯ ಮುಖ್ಯಸ್ಥರಾದ ಹಾರ್ದಿಕ್ ಜೈನ್, ಪ್ರಶಾಂತ್ ಪ್ರಭಾಕರ್, ಐಎಎಸ್ ಅಧಿಕಾರಿ ರಾಜೇಂದ್ರ ಕಟಾರಿಯಾ, ಕ್ರಿಕೆಟಿಗ ಪ್ರಸಿದ್ಧ ಕೃಷ್ಣ, ಟಿಸಿಎಸ್ ಬೆಂಗಳೂರು ವಲಯ ಮುಖ್ಯಸ್ಥ ಸುನಿಲ್ ದೇಶಪಾಂಡೆ, ಎಎಸ್‌ಐಸಿಎಸ್ ಇಂಡಿಯಾ ಸ್ಪೋರ್ಟ್ಸ್ ಮಾರ್ಕೆಂಟಿಗ್ ಮುಖ್ಯಸ್ಥ ಅಜಯ್ ರಾಜ್, ವಯಾಹ್ ವಿಕಾಸ್ ಸಿಇಒ ಜಮುನಾ ರವಿ, ಪ್ರೊಕ್ಯಾಮ್ ಇಂಟರ್‌ನ್ಯಾಷನಲ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಸಿಂಗ್ ಇದ್ದರು.

ಮಲ್ಲಕಂಬ ಪಾಟೀಲರು ಇನ್ನಿಲ್ಲ



ಲಕ್ಷ್ಮೇಶ್ವರ: ಪಟ್ಟಣದ ಪುರಸಭೆ ಕಲಾ ಮಹಾವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ, ರಾಜ್ಯ ಮಲ್ಲಕಂಬ ಅಸೋಷಿಯೇಷನ್ ಅಧ್ಯಕ್ಷ ಹಾಗೂ ರಾಷ್ಟ್ರೀಯ ಉಪಾಧ್ಯಕ್ಷರೂ ಆಗಿದ್ದ ಪ್ರೊ. ಎನ್.ಎಸ್. ಪಾಟೀಲ (77) ಅವರು ಶುಕ್ರವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಮತ್ತು ಇಬ್ಬರು ಪುತ್ರಿಯರು ಇದ್ದಾರೆ.

ಕರ್ನಾಟಕದಲ್ಲಿ ಅಟ್ಯಾಪಟ್ಯಾ, ಮಲ್ಲಕಂಬ ಸೇರಿದಂತೆ ಹಲವಾರು ಗ್ರಾಮೀಣ ಕ್ರೀಡೆಗಳ ಬೆಳವಣಿಗೆಯಲ್ಲಿ ಅವರು ಪ್ರಮುಖ ಪಾತ್ರವಹಿಸಿದ್ದರು. ಅದರಲ್ಲೂ ಉತ್ತರ ಕರ್ನಾಟಕದ ಗ್ರಾಮೀಣ ಭಾಗದ ಪ್ರತಿಭೆಗಳನ್ನು ಗುರುತಿಸಿ ಮಲ್ಲಕಂಬ ಪಟುಗಳನ್ನಾಗಿ ರೂಪಿಸಿದ್ದರು.

ದೆಹಲಿಯಲ್ಲಿ ವಿಜೃಂಭಿಸುವರೇ ವಿರಾಟ್?

ರಾಯಲ್ ಚಾಲೆಂಜರ್ಸ್ ಬೆಂಗಳೂರು–ಡೆಲ್ಲಿ ಕ್ಯಾಪಿಟಲ್ಸ್ ಹಣಾಹಣಿ ಇಂದು

ನವದೆಹಲಿ(ಪಿಟಿಐ): ವಿರಾಟ್ ಕೊಹ್ಲಿ ತಮ್ಮ ತವರೂರಿನ ಅಂಗಳಕ್ಕೆ ಮರಳಿದ್ದಾರೆ. ಈ ವರ್ಷದ ಐಪಿಎಲ್ ಟೂರ್ನಿಯಲ್ಲಿ ಇದೇ ಮೊದಲ ಬಾರಿಗೆ ಅವರು ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಆಡಲಿದ್ದಾರೆ.

ಶನಿವಾರ ನಡೆಯಲಿರುವ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ಮುಖಾಮುಖಿಯಾಗಲಿವೆ. ಹೋದ ತಿಂಗಳು ಈ ತಂಡಗಳು ಬೆಂಗಳೂರಿನಲ್ಲಿ ಮುಖಾಮುಖಿಯಾಗಿದ್ದವು. ಆಗ ಆರ್‌ಸಿಬಿ ಜಯಗಳಿಸಿತ್ತು.

ಇದುವರೆಗೆ ಆರ್‌ಸಿಬಿ ತಂಡವು ಒಂಬತ್ತು ಪಂದ್ಯಗಳನ್ನು ಆಡಿ ಐದರಲ್ಲಿ ಜಯಿಸಿ, ನಾಲ್ಕರಲ್ಲಿ ಸೋತಿದೆ. ಪ್ಲೇ ಆಫ್ ಪ್ರವೇಶಿಸಲು ಡೆಲ್ಲಿ ವಿರುದ್ಧ ಸೇರಿದಂತೆ ಉಳಿದೆಲ್ಲ ಪಂದ್ಯಗಳಲ್ಲಿಯೂ ಜಯಿಸುವ ಒತ್ತಡ ಆರ್‌ಸಿಬಿಗೆ ಇದೆ.

ಆದರೆ ನಾಯಕ ಫಫ್ ಡುಪ್ಲೆಸಿ, ವಿರಾಟ್ ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಮಾತ್ರ ರನ್ ಗಳಿಸುತ್ತಿದ್ದಾರೆ. ಉಳಿದ ಬ್ಯಾಟರ್‌ಗಳು ಸತತ ವೈಫಲ್ಯ ಅನುಭವಿಸುತ್ತಿದ್ದಾರೆ. ಇದರಿಂದಾಗಿ ಮೂವರ ಮೇಲೆಯೇ ತಂಡವು ಅವಲಂಬಿತವಾಗಿದೆ. 466 ರನ್ ಗಳಿಸಿರುವ ಫಫ್ ಅವರು ಬ್ಯಾಟರ್‌ಗಳ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ.

ಕಳೆದ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡವು ಈ ಮೂವರೂ ಹೆಚ್ಚು ರನ್ ಗಳಿಸದಂತೆ ಕಟ್ಟಿಹಾಕಿತ್ತು. ಅದರಿಂದಾಗಿ ಆರ್‌ಸಿಬಿ ಸಾಧಾರಣ ಮೊತ್ತದ ಗುರಿ ನೀಡಿತ್ತು. ಆದರೆ ಮೊಹಮ್ಮದ್ ಸಿರಾಜ್, ಜೋಶ್ ಹ್ಯಾಜಲ್‌ವುಡ್ ಹಾಗೂ ಕರಣ್ ಶರ್ಮಾ ಅವರ ಬೌಲಿಂಗ್ ಪಡೆಯು ಆರ್‌ಸಿಬಿಗೆ ಗೆಲುವಿನ ಕಾಣಿಕೆ ನೀಡಿತ್ತು. ಈ ಪಂದ್ಯದಲ್ಲಿ ಆಲ್‌ರೌಂಡರ್ ಕೇದಾರ್ ಜಾಧವ್ ಕಣಕ್ಕಿಳಿಯುವ ಸಾಧ್ಯತೆ ಇದೆ.

ಆದರೆ ಡೆಲ್ಲಿ ಕ್ಯಾಪಿಟಲ್ಸ್ ಪರಿಸ್ಥಿತಿ ಚಿಂತಾಜನಕವಾಗಿದೆ. ಡೇವಿಡ್ ವಾರ್ನರ್ ಬಳಗವು ಪಾಯಿಂಟ್ ಪಟ್ಟಿಯ ಕೊನೆಯ ಸ್ಥಾನದಲ್ಲಿದೆ. ಇದುವರೆಗೆ ಮೂರರಲ್ಲಿ ಗೆದ್ದು, ಆರರಲ್ಲಿ ಸೋತಿದೆ. ಇದರಿಂದಾಗಿ ಪ್ಲೇ ಆಫ್ ಹಾದಿ ಬಹುತೇಕ ಮುಚ್ಚಿದಂತಾಗಿದೆ.

ಆದರೆ ತಂಡವು ಅಚ್ಚರಿಯ ಫಲಿತಾಂಶ ನೀಡಿ ಎದುರಾಳಿಯ ಯೋಜನೆಗಳಿಗೆ ಅಡ್ಡಿಯಾಗುವ ಸಾಮರ್ಥ್ಯ ಹೊಂದಿದೆ. ತನ್ನ ಕಳೆದ ಪಂದ್ಯದಲ್ಲಿ ಬಲಿಷ್ಠ ಗುಜರಾತ್ ಟೈಟನ್ಸ್ ತಂಡವನ್ನೇ ಮಣಿಸಿದ ಡೆಲ್ಲಿ ಅಚ್ಚರಿ ಮೂಡಿಸಿತ್ತು. ಎಡಗೈ ವೇಗಿ ಖಲೀಲ್ ಅಹಮದ್, ಅನುಭವಿ ವೇಗಿ ಇಶಾಂತ್ ಶರ್ಮಾ ಹಾಗೂ ಸ್ಪಿನ್ನರ್ ಕುಲದೀಪ್ ಯಾದವ್ ಅವರು ತಂಡವನ್ನು ಗೆಲುವಿನತ್ತ ಮುನ್ನಡೆಸಿದ್ದರು. ಅವರ ಮುಂದೆ ಈಗ ಆರ್‌ಸಿಬಿಯ ಅಗ್ರ ಮೂರು ಬ್ಯಾಟರ್‌ಗಳನ್ನು ಕಟ್ಟಿಹಾಕುವ ಸವಾಲು ಇದೆ.



ವಿರಾಟ್ ಕೊಹ್ಲಿ ಹಾಗೂ ಫಫ್ ಡುಪ್ಲೆಸಿ

ಇಂದಿನ ಪಂದ್ಯಗಳು

ಚೆನ್ನೈ ಸೂಪರ್ ಕಿಂಗ್ಸ್–ಮುಂಬೈ ಇಂಡಿಯನ್ಸ್
ಸ್ಥಳ: ಚೆನ್ನೈ
ಆರಂಭ: ಮಧ್ಯಾಹ್ನ 3.30

ರಾಯಲ್ ಚಾಲೆಂಜರ್ಸ್ ಬೆಂಗಳೂರು– ಡೆಲ್ಲಿ ಕ್ಯಾಪಿಟಲ್ಸ್
ಸ್ಥಳ: ನವದೆಹಲಿ
ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	18

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	466

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	10	7	3	0	14	0.752
ಲಖನೌ	10	5	4	1	11	0.639
ಚೆನ್ನೈ	10	5	4	1	11	0.329
ರಾಜಸ್ಥಾನ	10	5	5	0	10	0.448
ಬೆಂಗಳೂರು	9	5	4	0	10	-0.030
ಮುಂಬೈ	9	5	4	0	10	-0.373
ಪಂಜಾಬ್	10	5	5	0	10	-0.472
ಕೋಲ್ಕತ್ತ	10	4	6	0	8	-0.103
ಹೈದರಾಬಾದ್	9	3	6	0	6	-0.540
ಡೆಲ್ಲಿ	9	3	6	0	6	-0.768

ಶುಕ್ರವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಡೈಮಂಡ್ ಲೀಗ್‌ನಲ್ಲಿ ನೀರಜ್ ಚೋಪ್ರಾಗೆ ಚಿನ್ನ

ದೋಹಾ (ಪಿಟಿಐ): ಒಲಿಂಪಿಕ್ ಚಾಂಪಿಯನ್, ಭಾರತದ ನೀರಜ್ ಚೋಪ್ರಾ ಅವರು ಇಲ್ಲಿ ನಡೆದ ಡೈಮಂಡ್ ಲೀಗ್‌ನ ಮೊದಲ ಲೆಗ್ ಜಾವೆಲಿನ್ ಥ್ರೊ ಸ್ಪರ್ಧೆಯಲ್ಲಿ 'ವರ್ಲ್ಡ್ ಲೀಡಿಂಗ್' ಸಾಧನೆಯೊಂದಿಗೆ ಚಿನ್ನದ ಪದಕಕ್ಕೆ ಮುತ್ತಿಟ್ಟರು.

25 ವರ್ಷದ ನೀರಜ್, ವಿಶ್ವದ ತಾರಾ ಅಥ್ಲೀಟ್‌ಗಳನ್ನು ಹಿಂದಿಕ್ಕಿ 88.67 ಮೀಟರ್ಸ್ ಸಾಧನೆಯೊಂದಿಗೆ ಅಗ್ರಸ್ಥಾನ ಗಳಿಸಿದರು. ಇದು ಅವರು ದಾಖಲಿಸಿದ ವೃತ್ತಿಜೀವನದ ನಾಲ್ಕನೇ ಶ್ರೇಷ್ಠ ಎಸೆತವಾಗಿದೆ.

ನೀರಜ್ ಅವರ ವೈಯಕ್ತಿಕ ಶ್ರೇಷ್ಠ ಸಾಧನೆ 89.94 ಮೀ. ಆಗಿದೆ.

ಸ್ಪರ್ಧೆಯ ಮೊದಲ ಸುತ್ತಿನಲ್ಲೇ ನೀರಜ್ 88.67 ಮೀ. ದೂರ ಜಾವೆಲಿನ್ ಎಸೆದರು.



ನೀರಜ್ ಚೋಪ್ರಾ– ಟ್ವಿಟರ್ ಚಿತ್ರ

ಜೆಕ್ ಗಣರಾಜ್ಯದ ಜಾಕುಬ್ ವಡ್ಲೆಚ್ (88.63 ಮೀ.) ಬೆಳ್ಳಿ ಹಾಗೂ ಹಾಲಿ ವಿಶ್ವ ಚಾಂಪಿಯನ್, ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್ (85.88 ಮೀ.) ಕಂಚಿನ ಪದಕ ತಮ್ಮದಾಗಿಸಿಕೊಂಡರು.

2018ರಲ್ಲಿ ಅವರು ಇಲ್ಲಿ ಮೊದಲ ಬಾರಿ ಸ್ಪರ್ಧಿಸಿದಾಗ ನಾಲ್ಕನೇ ಸ್ಥಾನ ಗಳಿಸಿದ್ದರು.

ಪ್ರೀಕ್ವಾರ್ಟರ್‌ಗೆ ಹುಸಾಮುದ್ದೀನ್, ನವೀನ್

ತಾಷ್ಕೆಂಟ್, (ಪಿಟಿಐ): ಭಾರತದ ಮೊಹಮ್ಮದ್ ಹುಸಾಮುದ್ದೀನ್ ಹಾಗೂ ನವೀನ್ ಕುಮಾರ್ ಅವರು ಇಲ್ಲಿ ನಡೆಯುತ್ತಿರುವ ಪುರುಷರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಪ್ರೀಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟರು.

57 ಕೆಜಿ ವಿಭಾಗದ ಎರಡನೇ ಬೌಟ್‌ನಲ್ಲಿ ಹುಸಾಮುದ್ದೀನ್ ಶುಕ್ರವಾರ 5-0ಯಿಂದ ಚೀನಾದ ಲ್ಯೂ ಪಿಂಗ್ ಅವರನ್ನು ಮಣಿಸಿದರು. ನವೀನ್(92 ಕೆಜಿ)5-0ಯಿಂದ ದಕ್ಷಿಣ ಕೊರಿಯಾದ ಲೀ ಸಂಗ್ಮಿನ್ ಅವರನ್ನು ಸೋಲಿಸಿದರು.

80 ಕೆಜಿ ವಿಭಾಗದ ಎರಡನೇ ಸುತ್ತಿನ ಬೌಟ್‌ನಲ್ಲಿ ಕ್ಯೂಬಾದ ಅರ್ಲೆನ್ ಲೋಪೆಜ್ 5-2ರಿಂದ ಭಾರತದ ಆಶಿಶ್‌ಗೆ ಸೋಲುಣಿಸಿದರು.

ಶನಿವಾರ, ಮೇ 6, 2023 | ₹ 7.00
www.prajavani.net
prajavani.net prajavani prajavani prajavani
ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ವಾಗತ
ಬ್ರಿಟನ್ ಪ್ರಧಾನಿ ರಿಷಿ ಸುನಕ್ ಪತ್ನಿ ಅಕ್ಷತಾ ಮೂರ್ತಿ ಅವರು ಶುಕ್ರವಾರ ಲಂಡನ್‌ನಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಪತ್ನಿ ಜಿಲ್ ಬೈಡನ್ ಅವರನ್ನು ಸ್ವಾಗತಿಸಿದರು




ZEE ಕನ್ನಡ
ಏರಿಯಾಗೆ ಹೊಸ ಹುಡುಗ್ರು ಬರ್ತಿದಾರೆ
ಛೋಟಾ CHAMPION
SPECIAL PARTNER
Gold Winner
ಇಂದಿನಿಂದ
ಶನಿ-ಭಾನು | ಸಂಜೆ 6ಕ್ಕೆ
DIGITAL PARTNER
ZEE5
ALSO IN HD
ನಿಮಗೆ ZEE ಕನ್ನಡ ಚಾನೆಲ್ ಸಿಗುತ್ತಿಲ್ಲವೆಂದರೆ 8657393373 ಈ ನಂಬರ್‌ಗೆ Missed Call ಕೊಡಿ

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಹೆಣ್ಣಿನ ಕಣ್ಣಲ್ಲಿ ಜನಪ್ರತಿನಿಧಿ

ದಕ್ಷಿಣ ಒಳನಾಡು, ಕರಾವಳಿ ಜಿಲ್ಲೆಗಳಲ್ಲಿ ಮಳೆ ಸಾಧ್ಯತೆ 3
ಬಿಷಪ್ ಸಾಮ್ಯುಯೆಲ್‌ಗೆ ನಿರ್ಬಂಧ 3
ಪ್ರಜಾವಾಣಿ ಚರ್ಚೆ
ಪಕ್ಷಗಳ ಪ್ರಣಾಳಿಕೆ ಘೋಷಣೆಗಳು ಕಾರ್ಯಸಾಧುವೇ? 5

32 ಸಾವಿರ ಮಹಿಳೆಯರ ಮತಾಂತರ ಹೇಳಿಕೆ: ಟೀಸರ್‌ನಿಂದ ತೆರವು

‘ದಿ ಕೇರಳ ಸ್ಟೋರಿ’ಗೆ ತಡೆ ಇಲ್ಲ

ಕೊಚ್ಚಿ (ಪಿಟಿಐ): ವಿವಾದಿತ ‘ದಿ ಕೇರಳ ಸ್ಟೋರಿ’ ಸಿನಿಮಾದ ಬಿಡುಗಡೆಗೆ ತಡೆ ನೀಡಲು ಕೇರಳ ಹೈಕೋರ್ಟ್ ಶುಕ್ರವಾರ ನಿರಾಕರಿಸಿದೆ.

ಚಿತ್ರದ ಟ್ರೇಲರ್‌ನಲ್ಲಿ ಯಾವುದೇ ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿರುವುದು ಕಂಡು ಬಂದಿಲ್ಲ ಎಂದೂ ನ್ಯಾಯಾಲಯ ಹೇಳಿದೆ.

ಕೇರಳದ 32 ಸಾವಿರ ಮಹಿಳೆಯರು ಮತಾಂತರಗೊಂಡು ಭಯೋತ್ಪಾದಕ ಸಂಘಟನೆಗಳಿಗೆ ಸೇರಿದ್ದಾರೆ ಎಂಬ ಹೇಳಿಕೆಯನ್ನು ಹೊಂದಿದ್ದ ಟೀಸರ್ ಅನ್ನು ಉಳಿಸಿಕೊಳ್ಳುವ ಉದ್ದೇಶವಿಲ್ಲ ಎಂದು ಚಿತ್ರದ ನಿರ್ಮಾಪಕರು ತಿಳಿಸಿರುವುದನ್ನು ನ್ಯಾಯಮೂರ್ತಿಗಳಾದ ಎನ್. ನಗರೇಶ್ ಮತ್ತು ಸೋಫಿ ಥಾಮಸ್ ಅವರನ್ನೊಳಗೊಂಡ ನ್ಯಾಯಪೀಠವು ಉಲ್ಲೇಖಿಸಿದೆ.

ಚಲನಚಿತ್ರ ಪ್ರಮಾಣೀಕರಣ ಮಂಡಳಿಯು (ಸಿಬಿಎಫ್‌ಸಿ) ಈ ಸಿನಿಮಾವನ್ನು ಪರಿಶೀಲಿಸಿ, ಇದು ಜನರ ಮುಂದೆ ಪ್ರದರ್ಶಿಸಲು ಯೋಗ್ಯವಾಗಿದೆ ಎಂದು ಪ್ರಮಾಣಪತ್ರ ನೀಡಿದೆ ಎಂದೂ ಹೈಕೋರ್ಟ್ ಹೇಳಿದೆ.

‘ಈ ಚಿತ್ರವು ಕಾಲ್ಪನಿಕ ಮತ್ತು ನಾಟಕೀಯ ರಂಗಗಳನ್ನು ಹೊಂದಿದೆ. ನಿಖರ ಮತ್ತು ಐತಿಹಾಸಿಕ ಘಟನೆಗಳನ್ನು ಹೊಂದಿಲ್ಲ ಎಂಬ ಮಾಹಿತಿಯನ್ನು ನಿರ್ಮಾಪಕರು ಸಿನಿಮಾದಲ್ಲಿ ಅಳವಡಿಸಿಕೊಳ್ಳಲಿದ್ದಾರೆ’ ಎಂದೂ ನ್ಯಾಯಪೀಠ ತಿಳಿಸಿದೆ.

ಈ ಸಿನಿಮಾವು ಕೇರಳದ ಜನರನ್ನು ಅವಮಾನಿಸುವ ಉದ್ದೇಶವನ್ನು ಹೊಂದಿದೆ ಮತ್ತು ಸುಳ್ಳಿನಿಂದ ಕೂಡಿದೆ ಎಂದು ಆರೋಪಿಸಿ ಹೈಕೋರ್ಟ್‌ಗೆ ಅರ್ಜಿಗಳು ಸಲ್ಲಿಕೆಯಾಗಿದ್ದವು.

ಅದಾ ಶರ್ಮಾ ಮುಖ್ಯ ಭೂಮಿಕೆಯಲ್ಲಿರುವ ಈ ಸಿನಿಮಾ ಶುಕ್ರವಾರ ಬಿಡುಗಡೆಯಾಗಿದೆ.

‘100 ಮಂದಿ ಹೆಣ್ಣು ಮಕ್ಕಳಿಗೆ ಸಿನಿಮಾ ತೋರಿಸುತ್ತೇನೆ’: ‘ಲವ್ ಜಿಹಾದ್’ನಿಂದ ಹೆಣ್ಣುಮಕ್ಕಳನ್ನು ರಕ್ಷಿಸಲು ‘ದಿ ಕೇರಳ ಸ್ಟೋರಿ’ ಸಿನಿಮಾವನ್ನು 100 ಮಂದಿ ಹೆಣ್ಣು ಮಕ್ಕಳಿಗೆ ತೋರಿಸುತ್ತೇನೆ. ನೀವೂ ಹಾಗೆ ಮಾಡಿ’ ಎಂದು ಉತ್ತರಪ್ರದೇಶದ ಬಿಜೆಪಿ ಕಾರ್ಯದರ್ಶಿ ಅಭಿಜಿತ್ ಮಿಶ್ರಾ ಟ್ವೀಟ್ ಮೂಲಕ ಕರೆ ನೀಡಿದ್ದಾರೆ.



ಮುಖ್ಯಾಂಶಗಳು

- ಪ್ರಮಾಣಪತ್ರ ಪಡೆದ ಸಿನಿಮಾಕ್ಕೆ ತಡೆ ನೀಡಲಾಗದು: ಹೈಕೋರ್ಟ್
- ಕೇರಳದ ಜನರನ್ನು ಅವಮಾನಿಸುವ ಉದ್ದೇಶ: ಅರ್ಜಿಯಲ್ಲಿ ಆರೋಪ
- ಮಸೀದಿಯಲ್ಲಿ ಹಿಂದೂ ದಂಪತಿ ಮದುವೆ: ವಿಡಿಯೊ ಹಂಚಿಕೊಂಡ ಎ.ಆರ್. ರೆಹಮಾನ್

ಮಸೀದಿಯಲ್ಲಿ ಹಿಂದೂ ದಂಪತಿ ಮದುವೆ: (ತಿರುವನಂತಪುರ ವರದಿ): ‘ದಿ ಕೇರಳ ಸ್ಟೋರಿ’ ಸಿನಿಮಾ ಬಗ್ಗೆ ಪರ– ವಿರೋಧದ ಚರ್ಚೆ ನಡೆದಿರುವ ಬೆನ್ನಲ್ಲೇ, ಕೇರಳದ ಮಸೀದಿಯೊಂದರಲ್ಲಿ ಮೂರು ವರ್ಷಗಳ ಹಿಂದೆ ನಡೆದಿದ್ದ ಹಿಂದೂ ದಂಪತಿಯ ವಿವಾಹದ ವಿಡಿಯೊ ಅನ್ನು ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಅವರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.

‘ಮಾನವೀಯತೆ ಮೇಲಿನ ಪ್ರೀತಿಯು ಬೇಷರತ್ತಾಗಿರಬೇಕು ಮತ್ತು ಸಾಮರಸ್ಯ ತರುವಂತಿರಬೇಕು’ ಎಂದು ರೆಹಮಾನ್ ಟ್ವೀಟ್ ಮಾಡಿದ್ದಾರೆ. ಸಾಮಾಜಿಕ ಜಾಲತಾಣದ ಗುಂಪೊಂದು ಇತ್ತೀಚೆಗೆ ‘ದಿ ಕೇರಳ ಸ್ಟೋರಿ’ ಹ್ಯಾಷ್ ಟ್ಯಾಗ್‌ನೊಂದಿಗೆ ಹಂಚಿಕೊಂಡಿದ್ದ ಈ ವಿಡಿಯೊವನ್ನು ರೆಹಮಾನ್ ಟ್ವೀಟ್ ಮಾಡಿದ್ದಾರೆ.

2020ರ ಜನವರಿ 19ರಂದು ಅಂಜು ಮತ್ತು ಶರತ್ ಎಂಬ ಹಿಂದೂ ದಂಪತಿ ಕೇರಳದ ಆಲಪ್ಪುಳ ಜಿಲ್ಲೆಯ ಕಾಯಂಕುಲಂನಲ್ಲಿ ಶೆರಾವಲ್ಲಿ ಮುಸ್ಲಿಂ ಜಮಾತ್ ಸಮಿತಿ ನೇತೃತ್ವದಲ್ಲಿ ಹಿಂದೂ ಸಂಪ್ರದಾಯದಂತೆ ವಿವಾಹ ಮಾಡಿಕೊಂಡಿದ್ದರು. ವಧುವಿನ ತಾಯಿ ಬಡವರಾಗಿದ್ದು, ತಮ್ಮ ಮಗಳ ಮದುವೆಗೆ ಸಹಾಯ ಮಾಡುವಂತೆ ಕೋರಿದ್ದರು. ಇದಕ್ಕೆ ಸ್ಪಂದಿಸಿದ್ದ ಜಮಾತ್ ಸಮಿತಿಯು ಈ ವಿವಾಹವನ್ನು ನಡೆಸಿಕೊಟ್ಟಿತ್ತು.

ಮೋದಿ ಭಾಷಣದಲ್ಲಿ ಸಿನಿಮಾ ಪ್ರಸ್ತಾಪ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಪ್ರಧಾನಿ ನರೇಂದ್ರ ಮೋದಿ ಅವರು, ವಿವಾದ ಸೃಷ್ಟಿಸಿರುವ ‘ದಿ ಕೇರಳ ಸ್ಟೋರಿ’ ಸಿನಿಮಾವನ್ನು ಚುನಾವಣಾ ಪ್ರಚಾರದಲ್ಲಿ ಉಲ್ಲೇಖಿಸಿದ್ದಾರೆ.

‘ಕೇರಳದಲ್ಲಿ ಭಯೋತ್ಪಾದಕರು ರೂಪಿಸಿದ ಷಡ್ಯಂತ್ರದ ಕಥೆಯನ್ನು ‘ದಿ ಕೇರಳ ಸ್ಟೋರಿ’ ಚಿತ್ರ ಆಧರಿಸಿದ್ದು, ಭಯೋತ್ಪಾದಕರ ಮುಖವಾಡವನ್ನು ಕಳಚಿಹಾಕಿದೆ’ ಎಂದು ಮೋದಿ ವಿಶ್ಲೇಷಿಸಿದ್ದಾರೆ.

‘ದಿ ಕೇರಳ ಸ್ಟೋರಿ’ ಸಿನಿಮಾ ಕುರಿತು ಚುನಾವಣಾ ಪ್ರಚಾರದಲ್ಲಿ ಮೋದಿ ಅವರು ಪ್ರಸ್ತಾಪ ಮಾಡಿದ್ದು ಇದೇ ಮೊದಲು.

ಜಿಲ್ಲಾ ಬಿಜೆಪಿ ಇಲ್ಲಿನ ಕಪ್ಪಗಲ್ ರಸ್ತೆಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಪ್ರಚಾರ ಸಭೆಯಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳ ಪರ ಮತ ಯಾಚಿಸಿದ ಪ್ರಧಾನಿ, 50 ನಿಮಿಷಗಳ ಭಾಷಣದಲ್ಲಿ ಬಹುತೇಕ ಸಮಯವನ್ನು ಭಯೋತ್ಪಾದನೆ ಮತ್ತು ಕಾಂಗ್ರೆಸ್ ವಿರುದ್ಧದ ವಾಗ್ದಾಳಿಗೆ ಮೀಸಲಿಟ್ಟರು.



‘ಕೇಂದ್ರ ಸರ್ಕಾರ ಭಯೋತ್ಪಾದನೆ ವಿರುದ್ಧ ಕಠಿಣ ತೀರ್ಮಾನಗಳನ್ನು ಕೈಗೊಂಡಾಗಲೆಲ್ಲಾ ಕಾಂಗ್ರೆಸ್ ಹೊಟ್ಟೆ ನೋವಿನಿಂದ ತೊಳಲಾಡುತ್ತದೆ. ಭಯೋತ್ಪಾದನೆ ಮಾನವೀಯತೆ, ಪ್ರಗತಿ ಮತ್ತು ಜೀವನ ಮೌಲ್ಯಗಳ ವಿರೋಧಿಯಾಗಿದೆ’ ಎಂದು ಅವರು ವ್ಯಾಖ್ಯಾನಿಸಿದರು.

‘ಇತ್ತೀಚಿನ ವರ್ಷಗಳಲ್ಲಿ ಭಯೋತ್ಪಾದನೆ ಸ್ವರೂಪ ಬದಲಾಗಿದೆ. ಕಳ್ಳಸಾಗಣೆ, ಮಾದಕವಸ್ತು ದಂಧೆ ಮತ್ತು ಸಾಂಪ್ರದಾಯಿಕ ಉನ್ಮಾದಗಳ ಮೂಲಕ ಸಮಾಜದೊಳಗೆ ನುಸುಳುತ್ತಿದೆ. ಉಗ್ರರ ಬಾಂಬ್, ಪಿಸ್ತೂಲ್, ಬಂದೂಕುಗಳ ಸದ್ದು ಕೇಳುತ್ತಿತ್ತು. ಆದರೆ, ಮಾಜದೊಳಗೆ ನುಸುಳಿರುವ ಹೊಸ ಸ್ವರೂಪದ ಆತಂಕವಾದದ ಸದ್ದು ಕೇಳಿಸುವುದಿಲ್ಲ. ನ್ಯಾಯಾಲಯಗಳೂ ಈ ಬಗ್ಗೆ ಆತಂಕ ವ್ಯಕ್ತಪಡಿಸಿವೆ’ ಎಂದು ಮೋದಿ ವಿವರಿಸಿದರು.

2012ರಲ್ಲಿ ಕಾಂಗ್ರೆಸ್ ಕದ ತಟ್ಟಿದ್ದ ಬೊಮ್ಮಾಯಿ: ಶೆಟ್ಟರ್

ಪ್ರಜಾವಾಣಿ ವಾರ್ತೆ

ಧಾರವಾಡ: ‘2012ರಲ್ಲಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪ್ರತ್ಯೇಕ ಪಕ್ಷ ಸ್ಥಾಪಿಸಲು ಹೇಳಿ, ತಾವು ಕಾಂಗ್ರೆಸ್ ಸೇರಲು ಕದ ತಟ್ಟಿದ್ದನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮರೆತಿದ್ದಾರೆ. ಕಾಂಗ್ರೆಸ್ ಕೆಸರು ಎಂದು ಹೇಳುತ್ತಿರುವ ಅವರು, ಆಗ ಏನಂದುಕೊಂಡಿದ್ದರು’ ಎಂದು ಕಾಂಗ್ರೆಸ್ ಮುಖಂಡ ಜಗದೀಶ ಶೆಟ್ಟರ್ ತಿರುಗೇಟು ನೀಡಿದರು.

ನಗರದ ಹೆಬ್ಬಳ್ಳಿ ಅಗಸಿ ಬಳಿ ಧಾರವಾಡ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವಿನಯ ಕುಲಕರ್ಣಿ ಪರ ಶುಕ್ರವಾರ ರೋಡ್ ಶೋ ನಡೆಸಿ ಅವರು ಮಾತನಾಡಿದರು.



‘ಬೊಮ್ಮಾಯಿ ಅವರಿಗೆ ಬೇಕಾದ ಕ್ಷೇತ್ರವನ್ನು ಕಾಂಗ್ರೆಸ್ ನೀಡದ ಕಾರಣ, ಬಿಜೆಪಿಯಲ್ಲೇ ಉಳಿದರು. ನನಗೆ ನೈತಿಕತೆಯ ಪಾಠ ಹೇಳುವ ಅಧಿಕಾರ ಬೊಮ್ಮಾಯಿಗೆ ಇಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ವಂಶಾಡಳಿತ, 65 ವರ್ಷದ ಮಿತಿ ಹಾಗೂ ಚಾರಿತ್ರ್ಯವಂತರ ಸ್ಪರ್ಧೆ ಕುರಿತು ಬಿಜೆಪಿ ನಾಯಕರು ಮಾತನಾಡುತ್ತಿದ್ದಾರೆ. ಆದರೆ 80 ಕ್ರಿಮಿನಲ್ ಪ್ರಕರಣವಿರುವ ರೌಡಿ ಶೀಟರ್‌ಗೆ ಕಲಬುರ್ಗಿಯಲ್ಲಿ ಬಿಜೆಪಿ ಟಿಕೆಟ್ ನೀಡಿದೆ. ಹಲವೆಡೆ ವಂಶಾಡಳಿತಕ್ಕೆ ಮಣೆ ಹಾಕಿದೆ. 70 ಮೀರಿದವರಿಗೂ ಟಿಕೆಟ್ ನೀಡಲಾಗಿದೆ. ಬಿಜೆಪಿಯಲ್ಲೀಗ ಯಾವ ಸಿದ್ಧಾಂತವೂ ಉಳಿದಿಲ್ಲ. ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುವ ಕಾಂಗ್ರೆಸ್ ಈ ಬಾರಿ 140ರಿಂದ 150 ಸ್ಥಾನಗಳಲ್ಲಿ ಜಯಭೇರಿ ಬಾರಿಸಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಡಿಆರ್‌ಡಿಒ ವಿಜ್ಞಾನಿ ಪ್ರದೀಪ್ ಬಂಧನ

ಮುಂಬೈ (ಪಿಟಿಐ): ಸೇನೆಗೆ ಸಂಬಂಧಿಸಿದ ಗೋಪ್ಯ ಮಾಹಿತಿಯನ್ನು ಪಾಕಿಸ್ತಾನಕ್ಕೆ ಒದಗಿಸುತ್ತಿದ್ದ ಆರೋಪದ ಮೇಲೆ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ವಿಜ್ಞಾನಿ ಪ್ರದೀಪ್ ಕುರುಳ್ಕರ್ ಅವರನ್ನು ಬಂಧಿಸಲಾಗಿತ್ತು. ಅವರು ಪಾಕಿಸ್ತಾನದ ಗುಪ್ತಚರ ಸಂಸ್ಥೆ ಏಜೆಂಟರ ಜೊತೆ ಕಳೆದ ವರ್ಷದಿಂದ ಸಂಪರ್ಕದಲ್ಲಿದ್ದರು ಎಂದು ಅಧಿಕಾರಿಗಳು ಶುಕ್ರವಾರ ಹೇಳಿದ್ದಾರೆ.

ಪುಣೆಯಲ್ಲಿರುವ ಡಿಆರ್‌ಡಿಒದ ಶಾಖೆಯಲ್ಲಿ ಪ್ರದೀಪ್ ಅವರು ನಿರ್ದೇಶಕರಾಗಿದ್ದರು. ಅವರನ್ನು ಮಹಾರಾಷ್ಟ್ರ ಭಯೋತ್ಪಾದಕ ನಿಗ್ರಹ ದಳದ (ಎಟಿಎಸ್) ಸಿಬ್ಬಂದಿ ಬುಧವಾರ ಬಂಧಿಸಿದ್ದಾರೆ. ನ್ಯಾಯಾಲಯವು ಅವರನ್ನು ಮೇ 9ರವರೆಗೆ ಎಟಿಎಸ್ ವಶಕ್ಕೆ ನೀಡಿದೆ.

‘ಪ್ರದೀಪ್ ಕುರುಳ್ಕರ್ ಹನಿಟ್ರ್ಯಾಪ್‌ಗೆ ಒಳಗಾಗಿದ್ದಾರೆ. ಪಾಕಿಸ್ತಾನದ ಗುಪ್ತಚರ ಸಂಸ್ಥೆಯ ಮಹಿಳೆಯೊಂದಿಗೆ ನಂಟು ಹೊಂದಿರುವ ಆರೋಪದ ಮೇಲೆ ಅವರ ವಿರುದ್ಧ ತನಿಖೆ ಆರಂಭಗೊಂಡ ಬೆನ್ನಲ್ಲೇ, ನಿರ್ದೇಶಕ ಹುದ್ದೆಯಿಂದ ಅವರನ್ನು ಇತ್ತೀಚೆಗೆ ತೆಗೆದು ಹಾಕಲಾಗಿತ್ತು.

‘ಪಾಕಿಸ್ತಾನದ ಮಹಿಳೆ ಪ್ರದೀಪ್ ಅವರನ್ನು ವಾಟ್ಸ್‌ಆ್ಯಪ್ ಮೂಲಕ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಸಂಪರ್ಕಿಸಿದ್ದಳು. ಅಂದಿನಿಂದಲೇ ಇಬ್ಬರು ವಾಟ್ಸ್‌ಆ್ಯಪ್ ಸಂದೇಶಗಳು, ವಿಡಿಯೊ ಕರೆಗಳ ಮೂಲಕ ಸಂಪರ್ಕದಲ್ಲಿದ್ದರು’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಪಾಕಿಸ್ತಾನ ಮಹಿಳೆ ಜೊತೆ ವಿಡಿಯೊ ಚಾಟ್ ಮಾಡಿದ್ದಾಗಿ ಪ್ರದೀಪ್ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ. ಆರೋಪಿಯು ಬಳಸುತ್ತಿದ್ದ ಎರಡು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದ್ದು, ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ’ ಎಂದೂ ಅಧಿಕಾರಿ ತಿಳಿಸಿದ್ದಾರೆ.

‘ಶತ್ರು ರಾಷ್ಟ್ರಕ್ಕೆ ತನ್ನ ಬಳಿಯಲ್ಲಿದ್ದ ಮಾಹಿತಿಯನ್ನು ಒದಗಿಸುವುದು ದೇಶದ ಭದ್ರತೆಗೆ ಅಪಾಯ ತರಲಿದೆ ಎಂಬುದು ಗೊತ್ತಿದ್ದೂ ವಿಜ್ಞಾನಿ ಪ್ರದೀಪ್ ತಮ್ಮ ಹುದ್ದೆಯನ್ನು ದುರುಪಯೋಗಪಡಿಸಿಕೊಂಡು, ಗೋಪ್ಯ ಮಾಹಿತಿ ಹಂಚಿಕೊಂಡಿರುವುದು ತಿಳಿದುಬಂದಿದೆ’ ಎಂದು ಎಟಿಎಸ್ ತಿಳಿಸಿದೆ.

ಓದುಗರ ಗಮನಕ್ಕೆ

ಇಂದಿನ ಸಂಚಿಕೆಯು ಎರಡು ಭಾಗಗಳಲ್ಲಿ ಪ್ರಕಟವಾಗಿದೆ.

ಬಿ.ವಿ. ಶ್ರೀನಿವಾಸ್‌ಗೆ ಜಾಮೀನು ನಿರಾಕರಣೆ

ಗುವಾಹಟಿ (ಪಿಟಿಐ): ಅಸ್ಸಾಂ ಯುವ ಕಾಂಗ್ರೆಸ್ ಘಟಕ ಅಧ್ಯಕ್ಷೆ ಸ್ಥಾನದಿಂದ ಉಚ್ಚಾಟನೆಯಾಗಿರುವ ಅಂಗ್‌ಕಿತಾ ದತ್ತ ಅವರು ದಾಖಲಿಸಿರುವ ಕಿರುಕುಳ ಪ್ರಕರಣಕ್ಕೆ ಸಂಬಂಧಿಸಿ ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಗುವಾಹಟಿ ಹೈಕೋರ್ಟ್ ಶುಕ್ರವಾರ ತಿರಸ್ಕರಿಸಿದೆ.

ನ್ಯಾಯಮೂರ್ತಿ ಅಜಿತ್ ಬೊರ್ಥಾಕುರ್ ಅವರಿದ್ದ ಪೀಠವು, ಅರ್ಜಿದಾರರಿಗೆ ಬಂಧನದಿಂದ ರಕ್ಷಣೆ ನೀಡಲು ಸೂಕ್ತವಾದ ಪ್ರಕರಣ ಇದಲ್ಲ. ಹಾಗಾಗಿ, ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಲಾಗಿದೆ ಎಂದು ಹೇಳಿದೆ. ಅಂಗ್‌ಕಿತಾ ದತ್ತ ಅವರು ದಾಖಲಿಸಿರುವ ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿ ಶ್ರೀನಿವಾಸ್ ಏಪ್ರಿಲ್ 26ರಂದು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ನಂತರ ಅವರು ಬಂಧನದಿಂದ ರಕ್ಷಣೆ ಕೋರಿ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು.

ಶ್ರೀನಿವಾಸ್ ವಿರುದ್ಧ ಅಂಕಿತಾ ದತ್ತ ಅವರು ಗುವಾಹಟಿಯ ದಿಸ್ಪುರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.



ಜಮ್ಮು–ಕಾಶ್ಮೀರದ ರಜೌರಿ ಜಿಲ್ಲೆಯ ಕಂಡಿ ಅರಣ್ಯ ಪ್ರದೇಶದಲ್ಲಿ ಅವಿತಿದ್ದ ಉಗ್ರರೊಂದಿಗೆ ಎನ್‌ಕೌಂಟರ್ ನಡೆದ ಸ್ಥಳದ ಸಮೀಪ ಭದ್ರತಾ ಪಡೆ ಸಿಬ್ಬಂದಿ ಶುಕ್ರವಾರ ಶೋಧ ಕಾರ್ಯ ಕೈಗೊಂಡಿದ್ದರು –ಪಿಟಿಐ ಚಿತ್ರ

ರಜೌರಿ: ಶೋಧ ಕಾರ್ಯಾಚರಣೆ ವೇಳೆ ಉಗ್ರರ ದಾಳಿ ಸ್ಫೋಟ: ಐವರು ಯೋಧರು ಹುತಾತ್ಮ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ಕಂಡಿ ಅರಣ್ಯ ಪ್ರದೇಶದಲ್ಲಿ ಉಗ್ರರು ಶುಕ್ರವಾರ ನಡೆಸಿದ ಸ್ಫೋಟದಲ್ಲಿ ಐವರು ಯೋಧರು ಹುತಾತ್ಮರಾಗಿದ್ದು, ಸೇನೆಯ ಮೇಜರ್ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಬ್ಬರು ಯೋಧರು ಸ್ಥಳದಲ್ಲೇ ಸಾವನ್ನಪ್ಪಿದ್ದು, ಉಳಿದ ಮೂವರು ಉಧಂಪುರದ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ಸೇನೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಲೆಫ್ಟಿನೆಂಟ್ ಕರ್ನಲ್ ದೇವೇಂದರ್ ಆನಂದ್ ಹೇಳಿದ್ದಾರೆ.

ರಜೌರಿ ವಲಯದ ಅರಣ್ಯದಲ್ಲಿ ಉಗ್ರರು ಅವಿತಿರುವ ಮಾಹಿತಿ ಅರಿತು ಯೋಧರು ಶೋಧ ಕಾರ್ಯಾಚರಣೆ ನಡೆಸಿದರು. ಈ ವೇಳೆ ಗುಹೆಯೊಂದರಲ್ಲಿ ಅವಿತಿದ್ದ ಭಯೋತ್ಪಾದಕರು ಸ್ಫೋಟಕ ಸಾಧನಗಳನ್ನು ಬಳಸಿ ಯೋಧರ ಮೇಲೆ ದಾಳಿ ನಡೆಸಿದ್ದಾರೆ ಎಂದು ತಿಳಿಸಿದ್ದಾರೆ.

ಜಮ್ಮುವಿನ ಭಾಟಾ ಧುರಿಯಾ ಪ್ರದೇಶದಲ್ಲಿ ಏಪ್ರಿಲ್ 20ರಂದು ಸೇನಾ ವಾಹನದ ಮೇಲೆ ಹೊಂಚು ದಾಳಿ ನಡೆಸಿದ್ದ ಉಗ್ರರೇ ಈ ಕೃತ್ಯ ಎಸಗಿದ್ದಾರೆ. ಅಂದಿನ ದಾಳಿಯಲ್ಲಿ ಭಾಗಿಯಾಗಿದ್ದವರ ಪೈಕಿ ಕೆಲ ಉಗ್ರರು ಈ ಪ್ರದೇಶದಲ್ಲಿ ಅವಿತಿರುವ ಬಗ್ಗೆ ಗುಪ್ತಚರ ಇಲಾಖೆ ಮಾಹಿತಿ ನೀಡಿತ್ತು. ಅದರ ಅನ್ವಯ ಶೋಧ ಕಾರ್ಯಾಚರಣೆ ನಡೆಸಲಾಗಿತ್ತು ಎಂದೂ ಹೇಳಿದ್ದಾರೆ.

ಉಗ್ರರ ಪತ್ತೆಗಾಗಿ ಕಾರ್ಯಾಚರಣೆ ಮುಂದುವರಿದಿದೆ. ರಜೌರಿಯಲ್ಲಿ ಮೊಬೈಲ್ ಇಂಟರ್‌ನೆಟ್ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ ಎಂದೂ ವಿವರಿಸಿದ್ದಾರೆ.

ಈ ಪ್ರದೇಶದಲ್ಲಿ ದಟ್ಟ ಅರಣ್ಯ ಇದ್ದು, ನೈಸರ್ಗಿಕವಾಗಿಯೇ ಗುಹೆ ರೀತಿಯ ರಚನೆಗಳೂ ಇವೆ. ಉಗ್ರರಿಗೆ ಕೆಲ ಸ್ಥಳೀಯರು ಆಹಾರ ಸೇರಿದಂತೆ ಇತರ ನೆರವು ಒದಗಿಸುತ್ತಿದ್ದಾರೆ. ಇದೇ ಕಾರಣಕ್ಕೆ, ಅವಿತುಕೊಳ್ಳಲು ಉಗ್ರರು ಈ ಸ್ಥಳವನ್ನೇ ಬಳಸಿಕೊಳ್ಳುತ್ತಿರುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಎಸ್‌ಸಿಒ ಸಮಾವೇಶ • ಪಾಕ್‌ಗೆ ಪರೋಕ್ಷ ಸಂದೇಶ ರವಾನಿಸಿದ ಜೈಶಂಕರ್

‘ಉಗ್ರವಾದಕ್ಕೆ ನೆರವು ನಿಲ್ಲಬೇಕು’

ಬೆನೊಲಿಂ (ಗೋವಾ) (ಪಿಟಿಐ): ಗಡಿಯಾಚೆಗಿನ ಭಯೋತ್ಪಾದನಾ ಕೃತ್ಯಗಳು ಸೇರಿದಂತೆ ಭಯೋತ್ಪಾದಕರ ಚಟುವಟಿಕೆಗಳಿಗೆ ಹಣಕಾಸು ನೆರವು ಒದಗಿಸುವುದನ್ನು ನಿಲ್ಲಿಸಬೇಕು ಎಂಬ ತನ್ನ ದೃಢ ನಿಲುವನ್ನು ಭಾರತ ಶುಕ್ರವಾರ ಸ್ಪಷ್ಟಪಡಿಸಿತು.

ಇಲ್ಲಿ ಆರಂಭವಾದ ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ವಿದೇಶಾಂಗ ಸಚಿವರ ಸಮಾವೇಶದಲ್ಲಿ ಸಚಿವ ಎಸ್.ಜೈಶಂಕರ್ ಮಾತನಾಡಿದರು. ಪಾಕಿಸ್ತಾನ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ–ಜರ್ದಾರಿ ಅವರ ಉಪಸ್ಥಿತಿಯಲ್ಲಿಯೇ ಜೈಶಂಕರ್, ಆ ರಾಷ್ಟ್ರಕ್ಕೆ ಸ್ಪಷ್ಟ ಸಂದೇಶ ರವಾನಿಸಿದರು.

‘ನಮ್ಮ ಕಣ್ಮುಂದೆಯೇ ನಡೆಯುತ್ತಿರುವ ಭಯೋತ್ಪಾದಕ ಕೃತ್ಯಗಳ ಬಗ್ಗೆ ಗಮನ ಹರಿಸದಿದ್ದಲ್ಲಿ ಅದು ಸದಸ್ಯ ರಾಷ್ಟ್ರಗಳ ಭದ್ರತೆಗೆ ಅಪಾಯವಾಗಿ ಪರಿಣಮಿಸುತ್ತದೆ. ಇಡೀ ಜಗತ್ತೇ ಕೋವಿಡ್–19 ಪಿಡುಗು ಹಾಗೂ ಅದರ ಪರಿಣಾಮಗಳ ವಿರುದ್ಧ ಹೋರಾಡುತ್ತಿದ್ದಾಗ, ಕೆಲವೆಡೆ ಭಯೋತ್ಪಾದನೆಯ ಬೆದರಿಕೆ ನಿಂತಿರಲಿಲ್ಲ’ ಎಂದು ಅವರು ಪಾಕಿಸ್ತಾನ ಕುರಿತು ಪರೋಕ್ಷವಾಗಿ ಹೇಳಿದರು.

‘ಭಯೋತ್ಪಾದನೆಯನ್ನು ಯಾವುದೇ ರೀತಿಯಲ್ಲಿಯೂ ಸಮರ್ಥನೆ ಮಾಡಿಕೊಳ್ಳಲಾಗದು. ಅಲ್ಲದೇ, ಈ ಬೆದರಿಕೆ ವಿರುದ್ಧ ಹೋರಾಟ ನಡೆಸುವುದೇ ಶಾಂಘೈ ಸಹಕಾರ ಸಂಘಟನೆಯ ಮೂಲ ಉದ್ದೇಶವೂ ಆಗಿದೆ’ ಎಂದು ಜೈಶಂಕರ್ ಪ್ರತಿಪಾದಿಸಿದರು.

‘ಅಭಿವೃದ್ಧಿಯಲ್ಲಿ ಸಂಪರ್ಕ ಮಹತ್ವದ ಪಾತ್ರ ವಹಿಸುತ್ತದೆ. ಆದರೆ, ಸಂಘಟನೆಯ ಸದಸ್ಯ ರಾಷ್ಟ್ರಗಳ ಸಾರ್ವಭೌಮತೆ ಮತ್ತು ಭೌಗೋಳಿಕ ಸಮಗ್ರತೆಯನ್ನು ಗೌರವಿಸುವ ರೀತಿಯಲ್ಲಿ ಈ ಸಂಪರ್ಕ ಇರಬೇಕು’ ಎಂದರು.

ಒತ್ತಾಯ: ಅಫ್ಗಾನಿಸ್ತಾನದ ಮಹಿಳೆಯರ ಹಕ್ಕುಗಳನ್ನು ಗೌರವಿಸಿ, ರಕ್ಷಿಸಬೇಕು ಎಂದು ಭಾರತ, ರಷ್ಯಾ ಹಾಗೂ ಪಾಕಿಸ್ತಾನ ವಿದೇಶಾಂಗ ಸಚಿವರು ಅಫ್ಗಾನಿಸ್ತಾನದ ಪ್ರಾತಿನಿಧಿಕ ಸರ್ಕಾರವನ್ನು ಒತ್ತಾಯಿಸಿದರು.

ಅಫ್ಗಾನಿಸ್ತಾನದಲ್ಲಿನ ಪರಿಸ್ಥಿತಿ ಕುರಿತು ಪ್ರಸ್ತಾಪಿಸಿದ ಜೈಶಂಕರ್, ‘ನಮ್ಮ ಪ್ರಯತ್ನಗಳೂ ಅಫ್ಗಾನಿಸ್ತಾನದ ಜನರ ಏಳಿಗೆಗೆ ಪೂರಕವಾಗಿರಬೇಕು. ಮಾನವೀಯ ನೆರವು ಒದಗಿಸುವುದರ ಜೊತೆಗೆ, ಎಲ್ಲರನ್ನೂ ಒಳಗೊಳ್ಳುವ ಹಾಗೂ ಪ್ರಾತಿನಿಧಿಕ ಸರ್ಕಾರ ರಚನೆಯನ್ನು ಖಾತ್ರಿಪಡಿಸಬೇಕು, ಭಯೋತ್ಪಾದನೆ ಮತ್ತು ಡ್ರಗ್ಸ್ ಕಳ್ಳಸಾಗಣೆ ನಿಗ್ರಹ, ಮಹಿಳೆ, ಮಕ್ಕಳು ಹಾಗೂ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಯೇ ನಮ್ಮ ಆದ್ಯತೆಯಾಗಬೇಕು’ ಎಂದರು.



ಗೋವಾದ ಬೆನೊಲಿಂನಲ್ಲಿ ನಡೆದ ಶಾಂಘೈ ಸಹಕಾರ ಸಂಘಟನೆಯ ವಿದೇಶಾಂಗ ಸಚಿವರ ಸಮಾವೇಶದಲ್ಲಿ ಸಚಿವ ಎಸ್.ಜೈಶಂಕರ್ ಶುಕ್ರವಾರ ಮಾತನಾಡಿದರು –ಪಿಟಿಐ ಚಿತ್ರ

ಸಮಾವೇಶದ ಪ್ರಮುಖ ಅಂಶಗಳು

- ಬಿಲಾವಲ್ ಭುಟ್ಟೊ–ಜರ್ದಾರಿ ಸೇರಿದಂತೆ ವಿದೇಶಾಂಗ ಸಚಿವರಿಗೆ ನಮಸ್ತೆ ಹೇಳಿ ಸ್ವಾಗತಿಸಿದ ಜೈಶಂಕರ್. ಹಸ್ತಲಾಘವ ಇಲ್ಲ
- ರಷ್ಯನ್, ಚೀನಿ ಜೊತೆ ಇಂಗ್ಲಿಷ್‌ಗೂ ಎಸ್‌ಸಿಒದ ಅಧಿಕೃತ ಭಾಷೆ ಸ್ಥಾನಮಾನ ನೀಡಲು ಯತ್ನ
- ಇರಾನ್, ಬೆಲಾರೂಸ್‌ಗೆ ಎಸ್‌ಸಿಒ ಸದಸ್ಯತ್ವ ಪರಿಶೀಲನೆಯಲ್ಲಿ: ಜೈಶಂಕರ್
- 12 ವರ್ಷಗಳ ನಂತರ ಭಾರತಕ್ಕೆ ಪಾಕ್ ವಿದೇಶಾಂಗ ಸಚಿವರ ಭೇಟಿ. 2011ರಲ್ಲಿ ಹೀನಾ ರಬ್ಬಾನಿ ಖಾರ್ ಭಾರತಕ್ಕೆ ಭೇಟಿ ನೀಡಿ, ಆಗಿನ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ ಅವರೊಂದಿಗೆ ಸಭೆ ನಡೆಸಿದ್ದರು

ಜಂಟಿ ಹೊಣೆಗಾರಿಕೆ: ಬಿಲಾವಲ್ ಭುಟ್ಟೊ

‘ಭಯೋತ್ಪಾದನೆ ಜಾಗತಿಕ ಭದ್ರತೆಗೆ ಅಪಾಯಕಾರಿಯಾಗಿದೆ. ಇದರ ವಿರುದ್ಧ ಹೋರಾಡುವುದು ನಮ್ಮ ಜಂಟಿ ಹೊಣೆಗಾರಿಕೆಯಾಗಿದೆ. ಎಸ್‌ಸಿಒ ಸದಸ್ಯ ರಾಷ್ಟ್ರಗಳು ಒಗ್ಗಟ್ಟಿನ ಹೋರಾಟ ನಡೆಸಬೇಕು’ ಎಂದು ಪಾಕಿಸ್ತಾನ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ–ಜರ್ದಾರಿ ಹೇಳಿದರು.

‘ರಾಜತಾಂತ್ರಿಕವಾಗಿ ಮುನ್ನಡೆ ಕಾಯ್ದುಕೊಳ್ಳುವ ಉದ್ದೇಶದಿಂದ ಭಯೋತ್ಪಾದನೆ ವಿಷಯವನ್ನೇ ಒಂದು ಅಸ್ತ್ರವನ್ನಾಗಿ ಬಳಕೆ ಮಾಡಿಕೊಳ್ಳಬಾರದು’ ಎಂದು ಪರೋಕ್ಷವಾಗಿ ಭಾರತವನ್ನು ಉದ್ದೇಶಿಸಿ ಹೇಳಿದರು.

‘ಪಾಕಿಸ್ತಾನದ ಜನತೆ ಭಯೋತ್ಪಾದಕರ ದಾಳಿಗಳಿಂದ ಅತಿ ಹೆಚ್ಚು ತೊಂದರೆ ಅನುಭವಿಸಿದ್ದಾರೆ. ಈ ಬಗ್ಗೆ ಮಾತನಾಡುವಾಗ ನಾನು ಪಾಕಿಸ್ತಾನದ ವಿದೇಶಾಂಗ ಸಚಿವನಾಗಿ ಮಾತ್ರವಲ್ಲ, ಭಯೋತ್ಪಾದಕರ ಕೃತ್ಯಕ್ಕೆ ತನ್ನ ತಾಯಿಯನ್ನು ಕಳೆದುಕೊಂಡ ಮಗನಾಗಿಯೂ ಮಾತನಾಡುತ್ತೇನೆ’ ಎಂದರು.

ಮ್ಯೂಚುವಲ್ ಫಂಡ್‌ನಲ್ಲಿ ಪಾಲು ಶೇಕಡ 54ರಷ್ಟು

84 ಲಕ್ಷ ಮಿಲೆನಿಯಲ್‌ಗಳಿಂದ ಹೂಡಿಕೆ

ನವದೆಹಲಿ (ಪಿಟಿಐ): ಐದು ವರ್ಷಗಳ ಅವಧಿಯಲ್ಲಿ ಒಟ್ಟು 84.3 ಲಕ್ಷ ಮಿಲೆನಿಯಲ್‌ಗಳು ಮ್ಯೂಚುವಲ್ ಫಂಡ್‌ಗಳ ಮೂಲಕ ಹೊಸದಾಗಿ ಹೂಡಿಕೆ ಆರಂಭಿಸಿದ್ದಾರೆ. ಈ ಅವಧಿಯಲ್ಲಿ ಹೊಸದಾಗಿ ಹೂಡಿಕೆ ಆರಂಭಿಸಿದವರಲ್ಲಿ ಮಿಲೆನಿಯಲ್‌ಗಳ ಪಾಲು ಶೇಕಡ 54ರಷ್ಟು ಇದೆ.

ಕೆವೈಸಿ ಪ್ರಕ್ರಿಯೆ ಪೂರ್ಣಗೊಳಿಸುವುದನ್ನು ಸರಳಗೊಳಿಸಿದ್ದು ಹಾಗೂ ಅಗತ್ಯ ಸಲಹೆಗಳನ್ನು ಸಂಘಟಿತವಾಗಿ ನೀಡಿದ್ದು ಇದಕ್ಕೆ ಕಾರಣ. ಐದು ವರ್ಷಗಳ ಅವಧಿಯಲ್ಲಿ ಒಟ್ಟು 1.57 ಕೋಟಿ ಹೊಸ ಹೂಡಿಕೆದಾರರು ಮ್ಯೂಚುವಲ್ ಫಂಡ್‌ಗಳ ಮೂಲಕ ಹೂಡಿಕೆ ಆರಂಭಿಸಿದ್ದಾರೆ ಎಂದು ಮ್ಯೂಚುವಲ್ ಫಂಡ್ ವರ್ಗಾವಣೆ ಏಜೆನ್ಸಿ ಆಗಿರುವ ‘ಕಂಪ್ಯೂಟರ್ ಏಜ್ ಮ್ಯಾನೇಜ್‌ಮೆಂಟ್ ಸರ್ವಿಸಸ್’ (ಕ್ಯಾಮ್ಸ್) ಸಿದ್ಧಪಡಿಸಿರುವ ವರದಿ ಹೇಳಿದೆ.

2019–20ರಲ್ಲಿ ಹೊಸದಾಗಿ ಹೂಡಿಕೆ ಆರಂಭಿಸಿದವರಲ್ಲಿ ಮಿಲೆನಿಯಲ್‌ಗಳ ಪಾಲು ಶೇಕಡ 57ರಷ್ಟು ಆಗಿತ್ತು. ‘ಮಾರುಕಟ್ಟೆಯಲ್ಲಿ ಅಸ್ಥಿರತೆ, 2022–23ರ ಆದ್ಯಂತ ಅನಿಶ್ಚಿತ ವಾತಾವರಣ ಇದ್ದರೂ ಮ್ಯೂಚುವಲ್ ಫಂಡ್‌ಗಳ ಮೂಲಕ ಹೂಡಿಕೆ ಮಾಡುವುದರಲ್ಲಿನ ವಿಶ್ವಾಸಕ್ಕೆ ಪೆಟ್ಟು ಬೀಳಲಿಲ್ಲ. ಸಂಪತ್ತು ಸೃಷ್ಟಿ ಉದ್ದೇಶದ ಹೂಡಿಕೆಗೆ ಮಿಲೆನಿಯಲ್‌ಗಳು ಮ್ಯೂಚುವಲ್ ಫಂಡ್‌ಗಳನ್ನು ಆಯ್ಕೆ ಮಾಡಿಕೊಂಡರು’ ಎಂದು ಕೂಡ ವರದಿ ಹೇಳಿದೆ.


ಮಿಲೆನಿಯಲ್‌ಗಳ ಪೈಕಿ ಮಹಿಳೆಯರು ಕೂಡ ಹೂಡಿಕೆಯಲ್ಲಿ ತೊಡಗಿಸಿಕೊಳ್ಳುತ್ತಿರುವುದು ಹೆಚ್ಚುತ್ತಿದೆ ಎಂದು ವರದಿ ಹೇಳಿದೆ. 2022–23ರಲ್ಲಿ ಹೊಸದಾಗಿ ಹೂಡಿಕೆ ಆರಂಭಿಸಿದ ಮಿಲೆನಿಯಲ್‌ಗಳ ಪೈಕಿ ಮಹಿಳೆಯರ ಪಾಲು ಶೇಕಡ 30ರಷ್ಟು.

ಮಿಲೆನಿಯಲ್‌ಗಳ ಪೈಕಿ ಹೂಡಿಕೆಗೆ ಎಸ್‌ಐಪಿ ಮಾರ್ಗವನ್ನು ಆಯ್ಕೆ ಮಾಡಿಕೊಂಡವರ ಪ್ರಮಾಣವು ಮೂರನೆಯ ಎರಡರಷ್ಟು. ಒಂದೇ ಬಾರಿಗೆ ಹೂಡಿಕೆಯನ್ನು ಆಯ್ಕೆ ಮಾಡಿಕೊಂಡವರ ಪ್ರಮಾಣವು ಮೂರನೆಯ ಒಂದರಷ್ಟು.

1980ರ ದಶಕದ ಆರಂಭದಿಂದ 1990ರ ದಶಕದ ಕೊನೆಯವರೆಗಿನ ಅವಧಿಯಲ್ಲಿ ಜನಿಸಿದವರನ್ನು ಮಿಲೆನಿಯಲ್‌ಗಳು ಎಂದು ಗುರುತಿಸಲಾಗುತ್ತದೆ.

‘ಕಳೆದ ಐದು ವರ್ಷಗಳಲ್ಲಿ ಮ್ಯೂಚುವಲ್ ಫಂಡ್‌ಗಳ ಮೂಲಕ ಹೂಡಿಕೆ ಹೆಚ್ಚಾಗುತ್ತಿರುವುದು ದೇಶದ ಬಂಡವಾಳ ಮಾರುಕಟ್ಟೆಗಳ ದೃಷ್ಟಿಯಿಂದ ಬಹಳ ಆರೋಗ್ಯಕರ ಬೆಳವಣಿಗೆ. ಮಿಲೆನಿಯಲ್‌ಗಳು ಸಂಪತ್ತು ಸೃಷ್ಟಿಗೆ ಮ್ಯೂಚುವಲ್ ಫಂಡ್‌ಗಳನ್ನು ಆಯ್ಕೆ ಮಾಡಿಕೊಳ್ಳುತ್ತಿರುವುದು ಮೆಚ್ಚುವಂಥದ್ದು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

2032ರ ವೇಳೆಗೆ ಭಾರತವು 8 ಟ್ರಿಲಿಯನ್ ಡಾಲರ್ ಗಾತ್ರದ ಅರ್ಥ ವ್ಯವಸ್ಥೆಯಾಗಿ ಬೆಳೆಯಲಿದೆ. ಈ ಅವಧಿಯಲ್ಲಿ ಬಂಡವಾಳ ಮಾರುಕಟ್ಟೆಗಳ ಮೂಲಕ ಭಾರಿ ಪ್ರಮಾಣದಲ್ಲಿ ಸಂಪತ್ತು ಸೃಷ್ಟಿಯಾಗಲಿದೆ. ಈ ಪ್ರಕ್ರಿಯೆಯಲ್ಲಿ ಭಾಗಿಯಾಗಲು ಎಸ್‌ಐಪಿ ಮೂಲಕ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದು ಅತ್ಯುತ್ತಮ ವಿಧಾನ ಎಂದು ಅವರು ಹೇಳಿದ್ದಾರೆ.



ಮಿಲೆನಿಯಲ್‌ಗಳ ಹೂಡಿಕೆಗೆ ಕಾರಣ ಏನಿರಬಹುದು?

- ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದರ ಪ್ರಯೋಜನಗಳನ್ನು ಹೇಳುವ ಬೃಹತ್ ಅಭಿಯಾನ
- 2018–19ರಿಂದ 2022–23ರ ನಡುವಿನ ಅವಧಿಯಲ್ಲಿ ಮಾರುಕಟ್ಟೆ ಪರಿಸ್ಥಿತಿ ಅನುಕೂಲಕರ ಆಗಿದ್ದುದು. (ಕೋವಿಡ್ ಲಾಕ್‌ಡೌನ್ ನಂತರದಲ್ಲಿ 2021ರ ಅಕ್ಟೋಬರ್‌ವರೆಗೆ ಷೇರುಪೇಟೆಯಲ್ಲಿ ಗೂಳಿ ಓಟ ಇತ್ತು)
- ಡಿಜಿಟಲ್ ವೇದಿಕೆಗಳ ಮೂಲಕ ಹೂಡಿಕೆ ಮಾಡಲು ಅವಕಾಶ ಕಲ್ಪಿಸಿದ್ದು

ರಾಜೀನಾಮೆ ನಿರ್ಧಾರ ಕೈಬಿಟ್ಟ ಪವಾರ್

ಮುಂಬೈ (ಪಿಟಿಐ): ‘ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಅಧ್ಯಕ್ಷ ಸ್ಥಾನ ತೊರೆಯುವ ನಿರ್ಧಾರವನ್ನು ಕೈಬಿಟ್ಟಿರುವುದಾಗಿ ಶರದ್ ಪವಾರ್ ಅವರು ಶುಕ್ರವಾರ ಪ್ರಕಟಿಸುವ ಮೂಲಕ, ಪಕ್ಷದ ಕಾರ್ಯಕರ್ತರಲ್ಲಿ ಇದ್ದ ಆತಂಕವನ್ನು ದೂರ ಮಾಡಿದ್ದಾರೆ.



‘ಪಕ್ಷದ ಪದಾಧಿಕಾರಿಗಳು, ಕಾರ್ಯಕರ್ತರು ರಾಜೀನಾಮೆ ನಿರ್ಧಾರ ಮರುಪರಿಶೀಲಿಸಬೇಕು ಎಂದು ಕೋರಿದ್ದರು. ಅವರ ಭಾವನೆಗಳಿಗೆ ಅಗೌರವ ತೋರಲು ನಾನು ಬಯಸುವುದಿಲ್ಲ’ ಎಂದು ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

‘ಪಕ್ಷದ ಕಾರ್ಯಕರ್ತರು, ಪದಾಧಿಕಾರಿಗಳು ತೋರಿದ ಪ್ರೀತಿ, ನನ್ನ ಮೇಲಿಟ್ಟಿರುವ ವಿಶ್ವಾಸದಿಂದ ವಿನೀತನಾಗಿದ್ದೇನೆ. ಉತ್ತರಾಧಿಕಾರಿ ಆಯ್ಕೆಗೆ ರಚಿಸಿದ್ದ ಸಮಿತಿಯ ನಿರ್ಧಾರವನ್ನು ಗೌರವಿಸುತ್ತೇನೆ’ ಎಂದು ತಿಳಿಸಿದರು.

ಪಕ್ಷ, ಸಂಘಟನೆಯಲ್ಲಿ ಯಾವುದೇ ಸ್ಥಾನ ಅಥವಾ ಜವಾಬ್ದಾರಿಗೆ ಸಂಬಂಧಿಸಿದಂತೆ ಉತ್ತರಾಧಿಕಾರಿಯ ಚಿಂತನೆ ಇರಬೇಕು. ಹೊಸ ಜವಾಬ್ದಾರಿ ನೀಡುವ ಹಾಗೂ ಹೊಸ ನಾಯಕತ್ವ ರೂಪಿಸುವ ಕೆಲಸ ಆಗಬೇಕು ಎಂದು ಇದೇ ಸಂದರ್ಭದಲ್ಲಿ ಪ್ರತಿಪಾದಿಸಿದರು.

ಪಕ್ಷದ ಅಧ್ಯಕ್ಷ ಸ್ಥಾನದ ಉತ್ತರಾಧಿಕಾರಿ ಆಯ್ಕೆಗೆ ಪವಾರ್ ಅವರೇ ರಚಿಸಿದ್ದ ಸಮಿತಿಯು ಶುಕ್ರವಾರ ಮಧ್ಯಾಹ್ನ ಸಭೆ ಸೇರಿ, ರಾಜೀನಾಮೆ ನೀಡುವ ಪವಾರ್ ಅವರ ನಿರ್ಧಾರವನ್ನು ತಿರಸ್ಕರಿಸಿತ್ತು. ಈ ನಿರ್ಧಾರವನ್ನು ಮುಖಂಡ ಪ್ರಫುಲ್ ಪಟೇಲ್, ಪವಾರ್ ಅವರ ಗಮನಕ್ಕೆ ತಂದಿದ್ದರು.

ಎನ್‌ಸಿಪಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಮೇ 2ರಂದು ಪ್ರಕಟಿಸಿದ್ದ ಶರದ್ ಪವಾರ್ ಅವರು, ಉತ್ತರಾಧಿಕಾರಿ ಆಯ್ಕೆಗೆ ಸಮಿತಿ ರಚಿಸಿದ್ದರು. ಈ ಸಮಿತಿಯಲ್ಲಿ ಅಜಿತ್ ಪವಾರ್, ಸುಪ್ರಿಯಾ ಸುಳೆ, ಪ್ರಫುಲ್ ಪಟೇಲ್ ಮತ್ತು ಛಗನ್ ಭುಜ್‌ಬಲ್ ಇದ್ದರು.

3ನೇ ಪುಟ ನೋಡಿ

ಸುದ್ದಿಗೋಷ್ಠಿಗೆ ಅಜಿತ್ ಪವಾರ್ ಗೈರು

ಶರದ್ ಪವಾರ್ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವುದನ್ನು ಬೆಂಬಲಿಸಿದ್ದ ಅವರ ಸೋದರಳಿಯ, ಎನ್‌ಸಿಪಿ ಮುಖಂಡ ಅಜಿತ್ ಪವಾರ್ ಶುಕ್ರವಾರ ನಡೆದ ಸುದ್ದಿಗೋಷ್ಠಿಗೆ ಗೈರುಹಾಜರಾಗಿದ್ದರು.ಇದು, ಅಚ್ಚರಿ ಮೂಡಿಸಿತು.

ಅಜಿತ್ ಪವಾರ್ ಅವರ ಗೈರುಹಾಜರಿ ಕುರಿತ ಪ್ರಶ್ನೆಗೆ ಶರದ್ ಪವಾರ್ ಅವರು, ‘ಎಲ್ಲರೂ ಎಲ್ಲ ಕಡೆಯೂ ಇರಲು ಸಾಧ್ಯವಿಲ್ಲ’ ಎಂದು ಪ್ರತಿಕ್ರಿಯಿಸಿದರು. ಅವರ ಗೈರು ಹಾಜರಿ ಕುರಿತಂತೆ ಹೆಚ್ಚಿನ ಕುತೂಹಲ ಬೇಡ ಎಂದೂ ಮಾಧ್ಯಮಗಳಿಗೆ ಕೋರಿದರು.

‘ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವ ಕುರಿತು ನಾನು ಅಜಿತ್ ಪವಾರ್ ಅವರಿಗೆ ಈ ಹಿಂದೆಯೇ ಸುಳಿವು ನೀಡಿದ್ದೆ. ಆದರೆ, ಇಲ್ಲಿ ಕುಳಿತಿರುವ ಯಾರಿಗೂ ಆ ಬಗ್ಗೆ ತಿಳಿಸಿರಲಿಲ್ಲ‘ ಎಂದು ತಿಳಿಸಿದರು.

ಎನ್‌ಸಿಪಿ ಕಾರ್ಯಾಧ್ಯಕ್ಷ ಸ್ಥಾನ ಒಪ್ಪಿಕೊಳ್ಳಬೇಕು ಎಂದು ಪುತ್ರಿ, ಸಂಸದೆ ಸುಪ್ರಿಯಾ ಸುಳೆ ಅವರಿಗೆ ಪಕ್ಷದ ಮುಖಂಡರು ಸಲಹೆ ಮಾಡಿದರು. ಆದರೆ, ಸುಪ್ರಿಯಾ ಈ ಸಲಹೆಯನ್ನು ಒಪ್ಪಿಕೊಳ್ಳಲಿಲ್ಲ ಎಂದು ಪವಾರ್ ಇದೇ ಸಂದರ್ಭದಲ್ಲಿ ವಿವರಿಸಿದರು.



ಹೆಣ್ಣಿನ ಕಣ್ಣಲ್ಲಿ ಜನಪ್ರತಿನಿಧಿ

ಚುನಾವಣೆಯ ಹೊಸ್ತಿಲಲ್ಲಿ ಇದ್ದೇವೆ. ಸರ್ಕಾರ ಯಾವುದೇ ಇರಲಿ, ಬರಲಿ; ಆಡಳಿತ ವೈಖರಿಯನ್ನು ಆಗಾಗ ಪರಾಮರ್ಶಿಸಿ, ಇಂಥದ್ದು ಆಗಲೇಬೇಕು ಎಂದು ಹಕ್ಕೊತ್ತಾಯ ಮಂಡಿಸುವುದು ಪ್ರತಿಯೊಬ್ಬ ನಾಗರಿಕನ ಹಕ್ಕು. ಅದು ಪ್ರಜಾಪ್ರಭುತ್ವದ ಜೀವಾಳವೂ ಹೌದು. ಪ್ರತಿ ಐದು ವರ್ಷಕ್ಕೊಮ್ಮೆ ಆಡಳಿತಯಂತ್ರದಲ್ಲಾಗುವ ಬದಲಾವಣೆಯೇ ಹೊಸ ನಿರೀಕ್ಷೆಗಳಿಗೆ ನಾಂದಿ. ತಮ್ಮ ಜನಪ್ರತಿನಿಧಿಗಳು ಹೇಗಿರಬೇಕು, ಎಂಥ ಯೋಜನೆಗಳು, ಆಲೋಚನೆಗಳು ಅಭಿವೃದ್ಧಿಪಥದತ್ತ ಕೊಂಡೊಯ್ಯಬಲ್ಲವು ಎಂಬುದರ ಬಗ್ಗೆ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರು ಮಾತಾಡಿದ್ದಾರೆ. ಇದು ಕೇವಲ ಅವರ ದನಿಯಷ್ಟೆ ಅಲ್ಲ ಆಡಳಿತದ ದಿಕ್ಕು ಇಂಥದ್ದೆ ದಾರಿಯಲ್ಲಿ ಸಾಗಬೇಕು ಎಂಬುದರ ಸ್ಪಷ್ಟ ದಿಕ್ಸೂಚಿಯೂ ಹೌದು. ಅದರ ಒಟ್ಟಂದದ ನಿರೂಪಣೆ ಇಲ್ಲಿದೆ....



ಲಿಂಗತಟಸ್ಥ ಸಮವಸ್ತ್ರ ಬರಲಿ

ಉಮಾ ಕಿರಣ್, ವಿದ್ಯಾರ್ಥಿ ಕೇಂದ್ರಿತ ಶಿಕ್ಷಣದ ಪ್ರತಿಪಾದಕಿ, ಶಿವಮೊಗ್ಗ



ಈಗಲೂ ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣುಮಕ್ಕಳಿಗೆ ಮತ್ತು ಶಿಕ್ಷಕಿಯರಿಗೆ ಬಹಳ ಕಷ್ಟವಾಗುವ ವಿಷಯವೆಂದರೆ ಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ ಶೌಚಾಲಯಗಳು ಮತ್ತು ಶುದ್ಧ ನೀರು ಸಿಗದಿರುವುದು. ಅದರಿಂದಾಗಿ ಹೆಣ್ಣುಮಕ್ಕಳು ಮುಜುಗರ ಮತ್ತು ಮೂತ್ರಸಂಬಂಧಿತ ಸೋಂಕು ಅನುಭವಿಸಬೇಕಾಗುತ್ತದೆ. ಇದರತ್ತ ಜನಪ್ರತಿನಿಧಿಗಳು ಗಮನ ಕೊಟ್ಟು ವ್ಯವಸ್ಥೆಯನ್ನು ಸರಿಪಡಿಸಬೇಕಿದೆ.

ಮೊದಲಿನಿಂದಲೂ ಹೆಣ್ಣುಮಕ್ಕಳಿಗೆ ಲಂಗ ಸಮವಸ್ತ್ರದ ಭಾಗವಾಗಿದೆ. ಗಂಡುಮಕ್ಕಳಿಗೆ ಚಡ್ಡಿಯನ್ನು ನೀಡಲಾಗುತ್ತದೆ. ಆದರೆ ಆಟೋಟಗಳಲ್ಲಿ ಹೆಣ್ಣುಮಕ್ಕಳು ಲಂಗ ಧರಿಸಿ ಆಡುವುದು ಕಷ್ಟ. ಲಿಂಗತಟಸ್ಥ(ಜಂಡರ್ ನ್ಯೂಟ್ರಲ್) ಆದ ಸಮವಸ್ತ್ರ ನೀಡಿದರೆ, ಗಂಡುಮಕ್ಕಳಂತೆ ಹೆಣ್ಣುಮಕ್ಕಳೂ ಆಟೋಟಗಳಲ್ಲಿ ಮುಂದೆ ಬರಬಹುದು. ಮುಂದಿನ ಸರ್ಕಾರವಾದರೂ ಅಂತಹ ಯೋಚನೆ ಮಾಡಲಿ.

ಚಿಕ್ಕಮಕ್ಕಳಿರುವ ಶಿಕ್ಷಕಿಯರು ಮತ್ತು ಮಹಿಳಾ ಉದ್ಯೋಗಿಗಳಿಗೆ ಸಹಾಯವಾಗುವಂತ ಶಿಶು ಪಾಲನಾ ಕೇಂದ್ರಗಳನ್ನು ಸ್ಥಾಪಿಸಿದಲ್ಲಿ ಹಲವು ಮಹಿಳಾ ನೌಕರರು ಹೆಚ್ಚಿನ ನೆಮ್ಮದಿಯಿಂದ ಕೆಲಸದಲ್ಲಿ ತೊಡಗಿಸಿಕೊಳ್ಳಬಹುದು. ಹಾಗೆಯೇ, ಅವರ ಕೌಶಲಗಳನ್ನು ಹೆಚ್ಚಿಸಿಕೊಳ್ಳಲು ತರಬೇತಿಯ ಹಾಗೂ ಉನ್ನತ ಶಿಕ್ಷಣದ ಹಾಗೂ ಟೆಕ್ ಟ್ರೈನಿಂಗ್ ನೀಡುವ ಯೋಜನೆಗಳೂ ಬೇಕಿವೆ.

ನಿರೂಪಣೆ: ಚಂದ್ರಹಾಸ ಹಿರೇಮಳಲಿ



ಸಣ್ಣ ಉಳಿತಾಯಕ್ಕೆ ಸಹಾಯ ಅವಶ್ಯ

ಕೆ.ಎನ್.ಶೋಭಾ ಸೋಮಶೇಖರ್, ರೈತ ಮಹಿಳೆ, ಹನಿಯಂಬಾಡಿ, ಮಂಡ್ಯ



ರೈತ ಮಹಿಳೆಯರು ಹಳ್ಳಿಗಳಲ್ಲಿ ಮಾಡುವ ಸಣ್ಣ ಉಳಿತಾಯ ಮಕ್ಕಳ ವಿದ್ಯಾಭ್ಯಾಸಕ್ಕೆ, ಆಸ್ಪತ್ರೆ ಖರ್ಚುಗಳಿಗೆ ಸಹಾಯಕ್ಕೆ ಬರುತ್ತದೆ. ಮಹಿಳೆಯರು ನಡೆಸುವ ಹೈನುಗಾರಿಕೆಯಿಂದ ಎಷ್ಟೋ ಕುಟುಂಬಗಳು ನಡೆಯುತ್ತವೆ. ಮಳೆ, ಬೆಳೆ ಕೈಕೊಟ್ಟಾಗ ಹೈನುಗಾರಿಕೆ ರೈತರ ಕೈ ಹಿಡಿದಿದೆ. ಪಶುಸಂಗೋಪನೆಯಿಂದ ಮಹಿಳೆಯರು ಸಂಪಾದಿಸುವ ಪುಡಿಗಾಸು ಕುಟುಂಬದ ನೆರವಿಗೆ ಬರುತ್ತದೆ.

ಇಂಥ ಪಶು ಸಂಗೋಪನೆಗೆ ಪ್ರೋತ್ಸಾಹ ನೀಡಬೇಕು. ಬಡ್ಡಿರಹಿತ ಸಾಲ ಸೌಲಭ್ಯ ಒದಗಿಸಬೇಕು. ಅಲ್ಪಾವಧಿ ಸಾಲ ನೀಡಿದರೆ ಶೀಘ್ರ ಹಣ ಸಂಪಾದನೆ ಮಾಡಿ ಸಾಲ ಮರುಪಾವತಿ ಮಾಡುತ್ತಾರೆ. ಜೊತೆಗೆ ರೈತ ಕುಟುಂಬಗಳು ಕೂಡ ಆರ್ಥಿಕವಾಗಿ ಸದೃಢರಾಗುತ್ತಾರೆ. ಆ ಮೂಲಕ ಮಹಿಳೆ ಕೂಡ ಕುಟುಂಬದ ಆರ್ಥಿಕ ಪ್ರಗತಿಗೆ ತನ್ನ ಪಾಲು ನೀಡಿದಂತಾಗುತ್ತದೆ.

ರೈತ ಮಹಿಳೆ ತನ್ನ ಮನೆಯ ಕೈತೋಟದಲ್ಲಿ ಬೆಳೆಯುವ ತರಕಾರಿಗಳ ಮಾರಾಟಕ್ಕೆ ಸ್ಥಳೀಯವಾಗಿ ಮಾರುಕಟ್ಟೆ ಕಲ್ಪಿಸಬೇಕು. ಅದಕ್ಕಾಗಿ ಸಹಕಾರಿ ಸಂಘಗಳನ್ನು ಹೆಚ್ಚು ಶಕ್ತಿಯುತಗೊಳ್ಳಬೇಕು. ತರಕಾರಿ ಉತ್ಪಾದನೆ- ಮಾರಾಟ ಸಹಕಾರಿ ಸಂಘಟನೆಗಳನ್ನು ರಚಿಸಬೇಕು. ಸಂಘಗಳ ಮೂಲಕ ಮಹಿಳೆಯರಿಗೆ ಸಾಲ ಸೌಲಭ್ಯ ಒದಗಿಸಬೇಕು. ಮನೆ ಕೆಲಸದ ನಡುವೆ ದೊರೆಯುವ ಸಣ್ಣ ಅವಧಿಯನ್ನು ಕೈತೋಟದಲ್ಲಿ ತೊಡಗಿಸಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ.

ನರೇಗಾ ಯೋಜನೆ ಜಾರಿಗೊಳಿಸಿದ ನಂತರ ದುಡಿಯುವ ಹೆಣ್ಣು ಮಕ್ಕಳಿಗೆ ಕೆಲಸ ಸಿಕ್ಕಿದೆ. ಆದರೆ, ಕೆಲಸ ನೀಡುವಲ್ಲಿ ಹೆಣ್ಣುಮಕ್ಕಳಿಗೆ ಅನ್ಯಾಯ ಮಾಡಲಾಗುತ್ತಿದೆ. ಹೆಣ್ಣು ಮಕ್ಕಳಿಗಾಗಿ ಹೆಚ್ಚಿನ ಮಾನವ ದಿನಗಳ ಸೃಜನೆಯಾಗುತ್ತಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ನರೇಗಾ ಯೋಜನೆಗಳಲ್ಲಿ ನಡೆಯುತ್ತಿರುವ ಪಕ್ಷ ರಾಜಕಾರಣದಿಂದ ಮಹಿಳೆಯರು ಕೆಲಸದಿಂದ ವಂಚಿತರಾಗುತ್ತಿದ್ದಾರೆ. ಸರ್ಕಾರಗಳು ನರೇಗಾ ಯೋಜನೆಯಲ್ಲಿ ರಾಜಕಾರಣ ಸುಳಿಯದಂತೆ ನೋಡಿಕೊಳ್ಳಬೇಕಾಗಿದೆ.

ನಿರೂಪಣೆ: ಯೋಗೇಶ್ ಎಂ.ಎನ್.



ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸಿ

ಅಪರ್ಣಾ ಪಿ. ಸಿರಸಾಳಮಠ,
ಸಿಇಒ, ಸಖಿ ಸಾಫಲ್ಯ, ಕ್ರಾಫ್ಟ್ ಉತ್ಪನ್ನಗಳ ಸಂಸ್ಥೆ, ಧಾರವಾಡ



ಎಂಬ್ರಾಯಿಡರಿ, ಹ್ಯಾಂಡ್‌ಲೂಂ, ಹ್ಯಾಂಡಿ ಕ್ರಾಫ್ಟ್ ಹಾಗೂ ಖಾದಿ ಉತ್ಪನ್ನ ವಲಯವಷ್ಟೇ ಅಲ್ಲದೇ, ಇನ್ನಿತರ ಉದ್ಯಮಗಳಲ್ಲಿ ಮಹಿಳೆಯರು ತೊಡಗಿಸಿಕೊಂಡು, ಅವರೇ ಸಂಸ್ಥೆಯನ್ನು ನಡೆಸುವಂತಾಗಲು ಸರ್ಕಾರದ ಪ್ರೋತ್ಸಾಹ, ನೆರವು ಇಂದಿನ ದಿನಗಳಲ್ಲಿ ತೀರ ಅಗತ್ಯವಾಗಿದೆ.

ಮುಖ್ಯವಾಗಿ ದೇಸಿ ನೇಯ್ಗೆಯ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸುವುದರೊಂದಿಗೆ ಮಹಿಳಾ ಉದ್ಯಮಿಗಳನ್ನು ಸೃಷ್ಟಿಸಬೇಕಿದೆ. ಎಂಬ್ರಾಯಿಡರಿ, ಹ್ಯಾಂಡ್‌ಲೂಂ, ಹ್ಯಾಂಡಿ ಕ್ರಾಫ್ಟ್ ಹಾಗೂ ಖಾದಿ ಉತ್ಪನ್ನಗಳ ಮೇಲೆ ಈ ಮುನ್ನ ಶೇ 5 ರಷ್ಟು ಜಿಎಸ್‌ಟಿಯನ್ನು ವಿಧಿಸಲಾಗಿತ್ತು. ಸದ್ಯ ಶೇ12 ರಷ್ಟಿದೆ.

ಆರ್ಥಿಕ ಹೊರೆಯಾದರೆ ಯಾವ ಸಂಸ್ಥೆಯೂ ಅಭಿವೃದ್ಧಿ ಹೊಂದುವುದು ಕಷ್ಟ. ಈ ಹೊರೆಯನ್ನು ನೇರವಾಗಿ ಖರೀದಿದಾರರಿಗೆ ವರ್ಗಾಯಿಸಿದಂತಾಗುತ್ತದೆ. ಹಾಗಾಗಿ ಜಿಎಸ್‌ಟಿ ಪ್ರಮಾಣವನ್ನು ಕಡಿಮೆ ಮಾಡಬೇಕು.ಸರ್ಕಾರ ಈ ಉತ್ಪನ್ನಗಳನ್ನು ಆಗಾಗ ಖರೀದಿಸುತ್ತಿದ್ದರೆ ನಮಗೂ ಬೆಂಬಲ, ಆರ್ಥಿಕ ಬಲ ಸಿಕ್ಕಂತಾಗುತ್ತದೆ.

ನಿರೂಪಣೆ: ಕಲಾವತಿ ಬೈಚಬಾಳ

ರಾಜಕೀಯ ಪ್ರಾತಿನಿಧ್ಯ ಸಿಗಲಿ

ಪರ್ವೀನ್, ಯುವ ಪರಿವರ್ತಕಿ, ಯುವಸ್ಪಂದನ, ಮಂಗಳೂರು



ಜನರ ಆಶೋತ್ತರಗಳಿಗೆ ಸ್ಪಂದಿಸುವವರೇ ನಿಜವಾದ ಜನಪ್ರತಿನಿಧಿ. ಜಾತಿ, ಧರ್ಮ ಇವುಗಳ ಭೇದವಿಲ್ಲದೆ ಜನರನ್ನು ಒಗ್ಗೂಡಿಸುವ ಕೆಲಸ ಮಾಡಬೇಕು. ಜತೆಗೆ ಜನರ ಸಮಸ್ಯೆಗಳನ್ನು ಆಲಿಸಿ, ಸ್ಪಂದಿಸುವಂಥ ಕೆಲಸ ಆಗಬೇಕಿದೆ. ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳಿಗೆ ಶೈಕ್ಷಣಿಕ ಮೀಸಲಾತಿ ಇನ್ನಷ್ಟು ದೊರೆಯಬೇಕು. ವಿದ್ಯಾರ್ಥಿ ವೇತನ, ವಸತಿನಿಲಯದಂತಹ ಸೌಕರ್ಯ ಕಲ್ಪಿಸುವ ಯೋಜನೆಗಳ ಅಗತ್ಯವೂ ಅವರಿಗಿದೆ. ಶೈಕ್ಷಣಿಕವಾಗಿ ಸಬಲೀಕರಣಗೊಂಡರೆ ಉಳಿದದೆಲ್ಲವೂ ತಾನಾಗಿಯೇ ನಡೆಯುತ್ತದೆ. ಉನ್ನತ ಶಿಕ್ಷಣವೆಂಬುದು ಎಲ್ಲರಿಗೂ ಸಿಗುವಂತಾಗಬೇಕು. ಹಾಗೆಯೇ ಈ ಸಮುದಾಯದ ಉದ್ಯೋಗಸ್ಥ ಮಹಿಳೆಯರನ್ನು ಪ್ರೋತ್ಸಾಹಿಸುವ ಯೋಜನೆಗಳೂ ಅನುಷ್ಠಾನಗೊಳ್ಳಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ಸಿಗಬೇಕು. ಆಗ ಮಾತ್ರ ಅವರ ದನಿಗೆ ಶಾಸನಸಭೆಗಳಲ್ಲಿಯೂ ಮನ್ನಣೆ ಸಿಗುತ್ತದೆ.

ನಿರೂಪಣೆ: ರೂಪಾ ಕೆ.ಎಂ.

ಆರೋಗ್ಯಕಾರ್ಡ್ ಎಲ್ಲರಿಗೂ ಸಿಗಲಿ

ಡಾ. ನಂದಾ ರಜನೀಶ್, ಆಂಕೊಸರ್ಜನ್, ಬೆಂಗಳೂರು



ಸರ್ಕಾರಿ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯರಿಗೆ ಹಾಗೂ ವೈದ್ಯಕೀಯ ಇತರೆ ಮಹಿಳಾ ಸಿಬ್ಬಂದಿಗೆ ಯಾವುದೇ ಸೌಕರ್ಯಗಳು ಸಿಗುತ್ತಿಲ್ಲ. ಅವರು ಅತ್ಯಂತ ದಯನೀಯ ಸ್ಥಿತಿಯಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯತೆ ಇದೆ. ಮಹಿಳಾ ಸಿಬ್ಬಂದಿಗೆ ಸುರಕ್ಷತೆ ಮತ್ತು ಸೌಲಭ್ಯ ಒದಗಿಸುವ ಮೂಲಕ ಈಗಿರುವ ಪರಿಸ್ಥಿತಿಯನ್ನು ಬದಲಿಸಬೇಕು.

ಗಂಭೀರವಾದ, ಹೊಸ ಪ್ರಕಾರದ ಕಾಯಿಲೆಗಳನ್ನು ನಿರ್ವಹಿಸಬಲ್ಲ ವ್ಯವಸ್ಥೆ ಸರ್ಕಾರಿ ಆಸ್ಪತ್ರೆಗಳಲ್ಲಿ ಇಲ್ಲ. ಕ್ಯಾನ್ಸರ್ ಸೇರಿದಂತೆ ಕೆಲವು ಪ್ರಾಣಾಪಾಯ ತಂದೊಡ್ಡಬಲ್ಲ ಕಾಯಿಲೆಗಳ ಚಿಕಿತ್ಸೆಗೆ ಎಲ್ಲರೂ ಖಾಸಗಿ ಆಸ್ಪತ್ರೆಗಳತ್ತ ಮುಖ ಮಾಡುವ ಪರಿಸ್ಥಿತಿ ಇದೆ. ಇದು ಬಡರೋಗಿಗಳ ಪಾಲಿಗೆ ಕಂಟಕವಾದುದು. ಖಾಸಗಿ ಆಸ್ಪತ್ರೆಗಳಂತೆ ಸರ್ಕಾರಿ ಆಸ್ಪತ್ರೆಗಳಲ್ಲೂ ಎಲ್ಲಾ ಪ್ರಕಾರದ ರೋಗಗಳನ್ನು ನಿರ್ವಹಿಸಬಲ್ಲ ಸುಸಜ್ಜಿತ ವೈದ್ಯಕೀಯ ಸೌಲಭ್ಯಗಳು ಇರುವಂತಾಗಬೇಕು.

ಕೃಷಿಯಲ್ಲಿ ಅತಿಯಾದ ಕೀಟನಾಶಕ, ಕ್ರಿಮಿನಾಶಕಗಳ ಬಳಕೆಯಿಂದ ಆಹಾರದ ಗುಣಮಟ್ಟ ಕುಸಿದು ಹೋಗಿದೆ. ಇದು ಹತ್ತಾರು ಗಂಭೀರ ಕಾಯಿಲೆಗಳಿಗೆ ದಾರಿ ಮಾಡಿಕೊಡುತ್ತಿದೆ. ಈ ಬಗ್ಗೆ ಜನಪ್ರತಿನಿಧಿಗಳು ಗಮನಹರಿಸಬೇಕು. ಮುಂಬರುವ ಸರ್ಕಾರ ಮನುಕುಲದ ಆರೋಗ್ಯ, ಮುಂದಿನ ಪೀಳಿಗೆಯ ಭವಿಷ್ಯವನ್ನು ಗಮನದಲ್ಲಿಟ್ಟು ಕೊಂಡು ಎಲ್ಲರಿಗೂ ಪರಿಶುದ್ಧ ಆಹಾರ ಲಭ್ಯವಾಗುವಂತೆ ಯೋಜನೆಗಳನ್ನು ರೂಪಿಸಬೇಕು.

ಈಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸರಿಯಾದ ವ್ಯವಸ್ಥೆ ಮತ್ತು ಸೌಲಭ್ಯಗಳಿಲ್ಲ. ಕೆಲವು ಕಡೆ ಸಿಬ್ಬಂದಿಯ ಕೊರತೆ ಇದೆ. ಈ ಚಿತ್ರಣ ಬದಲಾಗಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಬೇಕು. ಈ ಕೇಂದ್ರಗಳಿಗೆ ಅಗತ್ಯ ಔಷಧಗಳನ್ನು ಪೂರೈಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಎಲ್ಲರಿಗೂ ಆರೋಗ್ಯ ಕಾರ್ಡ್‌ಗಳು ಸುಲಭವಾಗಿ ಸಿಗುವಂತಾಗಬೇಕು. ಅವುಗಳ ಸೌಲಭ್ಯಗಳನ್ನು ಪ್ರತಿಯೊಬ್ಬರೂ ಪಡೆಯುವಂತಾಗಬೇಕು.

ನಿರೂಪಣೆ: ಸುಶೀಲಾ ಡೋಣೂರ

ಮಹಿಳಾ ಏಳಿಗೆಯೇ ಸಮಾಜದ ಏಳಿಗೆ

ಆರ್. ಮಂಜುಳಾ ದೇವಿ, ಹಿರಿಯ ವಕೀಲರು, ಹೈಕೋರ್ಟ್



ಸಮರ್ಪಕ ಕಾನೂನಿನ ಅರಿವು ಮತ್ತು ಅನುಷ್ಠಾನ ಮಹಿಳೆಯರ ದೊಡ್ಡ ಶಕ್ತಿ. ಈಗಾಗಲೇ ಐವತ್ತಕ್ಕೂ ಮೀರಿ ಮಹಿಳಾ ಪರ ಕಾನೂನುಗಳಿವೆ ಮತ್ತು ಸುಪ್ರೀಂ ಕೋರ್ಟ್ ತೀರ್ಪುಗಳಿವೆ. ಆದರೆ ಶಾಸನ ರಚಿಸುವ ಜಾಗದಲ್ಲಿ ಮಹಿಳಾ ಪ್ರಾತಿನಿಧ್ಯದ ಕೊರತೆ ಇದೆ. ಇದರಿಂದ ಶಾಸನ ರಚಿಸುವಾಗ ಮಹಿಳಾ ಸಂವೇದನೆ ಕಾಣಲು ಸಿಗುವುದಿಲ್ಲ. ಶಾಸನಸಭೆ ಮತ್ತು ಸಂಸತ್ತಿನಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಾಗಬೇಕು ಮತ್ತು ಮಹಿಳಾ ಪರ ಕಾನೂನುಗಳ ಜಾರಿ ಸಮರ್ಪಕ ಆಗುತ್ತಿದೆಯೇ ಎಂದು ಅಧ್ಯಯನದ ವರದಿ ಪಡೆದು ಕಾಲ ಕಾಲಕ್ಕೆ ಅವುಗಳ ಜಾರಿಗೆ ಮಾರ್ಗದರ್ಶಿ ಸೂಚನೆಗಳನ್ನು ನೀಡಬೇಕು.

ಕಾನೂನು ಕ್ಷೇತ್ರದಲ್ಲೂ ಮಹಿಳೆಯರ ಸಂಖ್ಯೆ ಕಡಿಮೆ ಇದೆ. ಕೆಳಹಂತದ ನ್ಯಾಯಾಲಯದಲ್ಲಿ ಮಹಿಳಾ ನ್ಯಾಯಾಧೀಶರು ಇದ್ದರೂ ಹೈಕೋರ್ಟ್, ಸುಪ್ರೀಂಕೋರ್ಟ್‌ನಲ್ಲಿ ಬೆರಳೆಣಿಕೆಯಷ್ಟು ಇದ್ದಾರೆ. ನ್ಯಾಯಾಧೀಶರು ಮತ್ತು ವಕೀಲರು ಇಬ್ಬರಿಗೂ ಮಹಿಳಾ ಕಾನೂನುಗಳ ಕುರಿತು ಕಾರ್ಯಾಗಾರಗಳನ್ನು ನಡೆಸಬೇಕು ಮತ್ತು ತರಬೇತಿ ನೀಡಬೇಕು. ಪೋಲಿಸ್ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ತಂದು ಕಟ್ಟುನಿಟ್ಟಿನಲ್ಲಿ ಕ್ರಮ ವಹಿಸುವಂತೆ ನೋಡಿಕೊಳ್ಳಬೇಕು ಮತ್ತು ಲಿಂಗಸೂಕ್ಷ್ಮತೆಯ ಅರಿವು ಮೂಡಿಸಬೇಕು. ಈಗಾಗಲೇ ಅನೇಕ ಮಹಿಳಾ ಪರ ಕಾನೂನುಗಳಿವೆ ವಿಶಾಖ ತೀರ್ಪು, ನಿರ್ಭಯಾ ಪ್ರಕರಣದ ನಂತರ ಅನೇಕ ಬದಲಾವಣೆ ಆಗಿವೆ. ಅದರೆ ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಈಗ ಇರುವ ಕಾನೂನುಗಳನ್ನೇ ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಕ್ರಮ ವಹಿಸದರೆ ಸಾಕು, ಹೊಸ ಕಾನೂನಿನ ಅಗತ್ಯ ಇಲ್ಲ.

ಹೊಸ ಕಾನೂನು ಎಂದರೆ ರಾಜಕೀಯಲ್ಲಿ ಮಹಿಳಾ ಮೀಸಲಾತಿ ಜಾರಿಗೊಳಿಸಿ ಕಾನೂನು ರೂಪಿಸಿ ಮಹಿಳೆಯರ ಸ್ಥೈರ್ಯ ಹೆಚ್ಚಿಸಬೇಕು. ಮಹಿಳೆಯರ ಏಳಿಗೆಯಲ್ಲಿ ಸಮಾಜದ ಏಳಿಗೆ ಇದೆ ಎಂಬುದನ್ನು ಜನಪ್ರತಿನಿಧಿಗಳು ಅರ್ಥಮಾಡಿಕೊಳ್ಳಬೇಕು.

ನಿರೂಪಣೆ: ಮಂಜುಶ್ರೀ ಎಂ.ಕಡಕೋಳ

ಕಲಾವಿದೆಯರಿಗೆ ಪ್ರಾತಿನಿಧ್ಯ ಸಿಗಲಿ

ವಿದ್ಯಾ ಕೋಳ್ಯೂರು, ಯಕ್ಷಗಾನ ಕಲಾವಿದೆ ಮಂಗಳೂರು,



ಮಹಿಳೆ ಯಾವ ಕ್ಷೇತ್ರದಲ್ಲಿ ಇಲ್ಲ ಎಂಬುದನ್ನು ಬೊಟ್ಟು ಮಾಡಿ ತೋರಿಸಿ ನೋಡೋಣ, ಆಕೆ ಪುರುಷನಿಗೆ ಸರಿಸಮಾನಳಾಗಿ ನಿಂತಿದ್ದಾಳೆ. ನಾವು ನಮ್ಮನ್ನು ನಿರೂಪಿಸಿಯಾಗಿದೆ, ನಮಗೆ ಎಲ್ಲ ಕ್ಷೇತ್ರಗಳಲ್ಲಿ ಸಮಾನತೆ ಬೇಕು ಎಂಬುದಷ್ಟೇ ಈಗಿನ ಬೇಡಿಕೆ. ಮನೆಯಲ್ಲಿ ಹೇಗೆ ಮಗ-ಮಗಳೆಂಬ ಭೇದವಿಲ್ಲದೆ ಸಮಾನವಾಗಿ ತಿಂಡಿ-ತಿನಿಸು ಹಂಚುತ್ತೇವೆಯೋ ಹಾಗೆ ಸಮಾಜದಲ್ಲೂ ಈ ಸಮಾನ ಭಾವ ಸಹಜವಾಗಿ ಬರಲಿ.

ಕಲೆ, ಸಾಹಿತ್ಯ, ರಂಗಭೂಮಿ, ರಾಜಕೀಯ ಹೀಗೆ ಯಾವುದೇ ಕ್ಷೇತ್ರ ಇರಲಿ, ಕಾದು ಕುಳಿತರೆ ಮಹಿಳೆ ಈ ಪ್ರಪಂಚದಲ್ಲಿ ಮೇಲೆ ಬರಲು ಸಾಧ್ಯವೇ ಇಲ್ಲ. ಆಕೆಯ ಸಾಧನೆ ಸ್ವ ಪ್ರಯತ್ನವೇ ಹೊರತು ಯಾವ ಮೀಸಲಾತಿಯಿಂದ ದಕ್ಕಿದ್ದಲ್ಲ.

ಪಶ್ಚಿಮ ಬಂಗಾಳದಲ್ಲಿ ಕಲೆಗೆ ವಿಶೇಷ ಗೌರವ ಇದೆ. ಅಲ್ಲಿ ಕಲೆಗೆ ಲಿಂಗಾಧಾರಿತ ತಾರತಮ್ಯ ಇಲ್ಲ. ಆದರೆ, ಕರ್ನಾಟಕದ ವಿಷಯಕ್ಕೆ ಬಂದಾಗ ಇಲ್ಲಿ ಮಹಿಳೆಯರು ಸ್ವ ಸಾಮರ್ಥ್ಯದಿಂದ ಗುರುತಿಸಿಕೊಂಡಿದ್ದಾರೆಯೇ ವಿನಾ ಸರ್ಕಾರದ ಪ್ರೋತ್ಸಾಹ ದೊರೆತು ಅವರು ಮೇಲೆ ಬಂದಿದ್ದಲ್ಲ.

ಯಾವುದೇ ಸಮ್ಮೇಳನ, ಯಾವ ವೇದಿಕೆ ಇರಲಿ ಮಹಿಳೆಯರಿಗೆ ಸಿಗುವ ಪ್ರಾಧಾನ್ಯತೆ ಎಷ್ಟು? ಕಲೆ ವಿಷಯದಲ್ಲೂ ಕಲಾವಿದೆಯರಿಗೆ ಪ್ರಾತಿನಿಧ್ಯ ನಿರಂತರವಾಗಿ ಸಿಗುತ್ತಿಲ್ಲ. ಸರ್ಕಾರಗಳು ಬದಲಾಗುತ್ತವೆ, ಮನಃಸ್ಥಿತಿ ಬದಲಾಗುವುದಿಲ್ಲ. ಹಾಗಿದ್ದಾಗ ಏನನ್ನು ನಿರೀಕ್ಷಿಸಲು ಸಾಧ್ಯ? ಬೇಡಿಕೆ ಮುಂದಿಟ್ಟು ಜಿಗುಪ್ಸೆ ಹುಟ್ಟಿದೆ.

ಕೇಳಿದ್ದಕ್ಕಾಗಿ ಹೇಳಬೇಕಾಗಿದೆ, ಯಕ್ಷಗಾನದ ಬಗ್ಗೆ ಹೇಳುವುದಾದರೆ ಪುಸ್ತಕದ ರೂಪದಲ್ಲಿ ಮಹಿಳೆಯರ ಸಾಧನೆ ದಾಖಲೀಕರಣ ಆಗಲಿ. ಎಲ್ಲಕ್ಕಿಂತ ಮುಖ್ಯವಾಗಿ ಎಲ್ಲ ಕ್ಷೇತ್ರಗಳಲ್ಲಿ ಸಮಾನವಾಗಿ ನೋಡುವ ಮನೋಭೂಮಿಕೆ ರೂಪುಗೊಳ್ಳಲಿ.

ನಿರೂಪಣೆ: ಸಂಧ್ಯಾಹೆಗಡೆ

ಸಮಾನತೆಯ ಪ್ರತಿಪಾದನೆ ಎಲ್ಲ ಕಾಲಕ್ಕೂ ಇರಲಿ

ವೈ.ಜಿ.ಉಮಾ, ನಟಿ, ಕೋಲಾರ,

ಚುನಾವಣೆಯಲ್ಲಿ ಅಭಿವೃದ್ಧಿ ವಿಷಯಗಳು ಗೌಣವಾಗಿವೆ. ಜಾತಿ, ಧರ್ಮ ಸಮೀಕರಣಗಳೇ ಮೇಳೈಸುತ್ತಿರುವ ಸಂದರ್ಭದಲ್ಲಿ ಮಹಿಳಾ ಪ್ರಾತಿನಿಧ್ಯ ಬಲವಾಗಿ ಪ್ರತಿಪಾದನೆಗೊಳ್ಳಬೇಕಿದೆ. ಮಹಿಳಾ ಸಬಲೀಕರಣ ಕೇವಲ ಯೋಜನೆಗಳಿಂದ ಮಾತ್ರ ಸಾಧ್ಯವಿಲ್ಲ. ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರು ಕ್ರಿಯಾಶೀಲರಾದಾಗ ಪ್ರಜಾತಂತ್ರ ವ್ಯವಸ್ಥೆಗೆ ಅರ್ಥ ಸಿಗುತ್ತದೆ.

ಮನುಷ್ಯತ್ವ ನೆಲೆಯಲ್ಲಿ ಮಹಿಳಾ ರಾಜಕಾರಣ ನೋಡಬೇಕು. ಚುನಾವಣೆ ಸಂದರ್ಭದಲ್ಲಿ ನಾಟಕೀಯತೆ ಮಾಡದೇ ಎಲ್ಲ ಸಮಯದಲ್ಲೂ ಸಮಾನತೆ ದೃಷ್ಟಿಯಿಂದ ಕಾಣುವಂತಾಗಬೇಕು. ಶಿಕ್ಷಣ ಆರೋಗ್ಯ, ಆಹಾರ ಎಲ್ಲರಿಗೂ ಸಿಗಬೇಕು.

ಗ್ರಾಮ ಪಂಚಾಯಿತಿ ಮಟ್ಟದಿಂದಲೇ ಮಹಿಳಾ ಸಮಾನತೆಯ ಕಾನೂನುಗಳಿವೆ. ಆದರೆ, ಅನುಷ್ಠಾನಕ್ಕೆ ಬರಬೇಕು. ಮಹಿಳೆಯರು, ವಿಧವೆಯರಿಗೆ ವಿಶೇಷ ಪ್ರಾತಿನಿಧ್ಯ ಸಿಗಬೇಕು. ಅಂಗವಿಕಲ ಮಹಿಳೆಯರ ಸಬಲೀಕರಣ, ಅವರ ಮಕ್ಕಳ ಶಿಕ್ಷಣಕ್ಕೆ ವಿಶೇಷ ಮಾನ್ಯತೆ ಸಿಕ್ಕಾಗ ಮಾತ್ರ ಸಬಲೀಕರಣಕ್ಕೆ ಅರ್ಥ ಸಿಗುತ್ತದೆ.

ಸಿನಿಮಾ ಸೃಜನಶೀಲ ಕ್ಷೇತ್ರ. ಇಲ್ಲಿ ಹಿರಿಯ, ಕಿರಿಯ ಕಲಾವಿದರಿಗೆ ಕನಿಷ್ಠ ಸೌಲಭ್ಯಗಳು ಸಿಗಬೇಕು. ಇಂಥದ್ದೊಂದು ಪೂರಕ ಯೋಜನೆ ಜಾರಿಯಾಗಬೇಕು. ಮಹಿಳಾ ಕಲಾವಿದರನ್ನು ಗೌರವಿಸುವ ವಾತಾವರಣ ಸೃಷ್ಟಿಯಾಗಬೇಕು.

ನಿರೂಪಣೆ: ಸುಬ್ರಮಣ್ಯ ಎಚ್.ಎಂ



ಗರ್ಭಿಣಿಯರು 3ನೇ ತ್ರೈಮಾಸಿಕದಲ್ಲಿ ಹೇಗೆ ಜಾಗ್ರತೆವಹಿಸಬೇಕು?

ಸ್ಪಂದನ



ಡಾ. ವೀಣಾ ಎಸ್. ಭಟ್

1. ನನಗೆ 29 ವರ್ಷ. ಮೊದಲ ಮಗು 8 ತಿಂಗಳಿಗೆ ಜನಿಸಿತು. ಹುಟ್ಟಿದ 12 ದಿನಗಳ ನಂತರ ತೀರಿಕೊಂಡಿತು. ಯಾವುದೇ ಔಷಧವಿಲ್ಲದೇ ತಿಂಗಳು ಸರಿಯಾಗಿ ಮುಟ್ಟಾದ ಬಳಿಕ ಈಗ ಮತ್ತೆ ಗರ್ಭಿಣಿ. ಈಗ 6 ತಿಂಗಳು. ಸ್ಕ್ಯಾನಿಂಗ್ ರಿಪೋರ್ಟ್ ನಾರ್ಮಲ್ ಆಗಿದೆ. ಆದರೂ ಸಸ್ಟೆನ್ 200 ಮಾತ್ರೆ ತೆಗೆದುಕೊಳ್ಳುವುದಕ್ಕೆ ಹೇಳಿದ್ದಾರೆ. ಮಾತ್ರೆಯನ್ನು ಮೂರನೇ ತಿಂಗಳಿಗೆ ತೆಗೆದುಕೊಂಡೆ. ಮತ್ತೆ ಅದೇ, ಮಾತ್ರೆ ತೆಗೆದುಕೊಳ್ಳಲು ಹೇಳಿದ್ದಾರೆ. ಅದಕ್ಕೆ ಸರಿಯಾದ ಮಾಹಿತಿ ನೀಡಿಲ್ಲ. ಕ್ಯಾಲ್ಸಿಯಂ, ಐರನ್, ಫೋಲಿಕ್‌ಆಸಿಡ್ ಮಾತ್ರೆ ನಿರಂತರವಾಗಿ ತೆಗೆದುಕೊಳ್ಳುತ್ತಿದ್ದೇನೆ. ಒಂದೊಂದು ಬಾರಿ ಹೊಟ್ಟೆ ಮೇಲ್ಭಾಗದಲ್ಲಿ ನೋವು, ವಾಸನೆ ರಹಿತ ಬಿಳಿಮುಟ್ಟು ಆಗುತ್ತದೆ. ಇದರಿಂದ ಏನಾದರೂ ಸಮಸ್ಯೆ ಇದೆಯೇ?

ಮೂರನೇ ತ್ರೈಮಾಸಿಕ ಅವಧಿಯಲ್ಲಿ ಯಾವ ರೀತಿ ಜಾಗ್ರತೆ ವಹಿಸಬೇಕು?

ಹೆಸರು, ಊರು ತಿಳಿಸಿಲ್ಲ

ಉತ್ತರ: ನಿಮಗೆ ಮೊದಲನೇ ಮಗು 8 ತಿಂಗಳಿಗೆ ಹುಟ್ಟಿ ನಂತರ 12ನೇ ದಿನಕ್ಕೆ ಮರಣಹೊಂದಿರುವುದರ ಬಗ್ಗೆ ಬೇಸರವಾಯಿತು. ಈ ಬಾರಿ ಸ್ಕ್ಯಾನಿಂಗ್ ವರದಿಗಳು ನಾರ್ಮಲ್ ಆಗಿರುವುದರಿಂದ ನೀವು ಚಿಂತಿಸಬೇಡಿ, ಧೈರ್ಯವಾಗಿರಿ. ಈಗಾಗಲೇ ನಿರಂತರವಾಗಿ ತೆಗೆದುಕೊಳ್ಳುತ್ತಿರುವ ಕ್ಯಾಲ್ಸಿಯಂ ಮತ್ತು ಐರನ್ ಮಾತ್ರೆಗಳನ್ನು ಮುಂದುವರಿಸಿ. ಸಸ್ಟೇನ್ 200 ಎಂ.ಜಿ ಮಾತ್ರೆಯು ಪ್ರೊಜೆಸ್ಟ್ರಾನ್ ಹಾರ್ಮೋನಿನ ಮಾತ್ರೆಯಾಗಿದ್ದು ಅದನ್ನು ಮುಂದುವರಿಸಿ. ಈ ಹಿಂದೆ ನಿಮಗೆ ಮೊದಲಿನಂತೆ ಅಕಾಲಿಕ ಹೆರಿಗೆಯಾಗದಿರಲಿ ಎಂದು ಆ ಮಾತ್ರೆ ಕೊಟ್ಟಿದ್ದಾರೆ.

ಇನ್ನು ನಿಮಗಾಗುತ್ತಿರುವ ವಾಸನೆರಹಿತ ಬಿಳಿಮುಟ್ಟು ಹಾಗೂ ಸ್ವಲ್ಪ ಹೊಟ್ಟೆನೋವು ಮೇಲ್ಭಾಗದಲ್ಲಿದ್ದರೆ ಗಾಬರಿಯಾಗುವ ಅಗತ್ಯವಿಲ್ಲ. ಗರ್ಭಧಾರಣೆಯಲ್ಲಿ ಗರ್ಭಕೋಶಕ್ಕೆ ಹೆಚ್ಚು ರಕ್ತಸರಬರಾಜು ಆಗುವುದರಿಂದ ಸ್ವಲ್ಪಮಟ್ಟಿಗೆ ವಾಸನೆ ರಹಿತ ಬಿಳಿಮುಟ್ಟಾಗುವುದು ಸಹಜ. ಆಗಾಗ ಗರ್ಭಕೋಶ ಸಂಕುಚಿತಗೊಂಡಾಗ ಸ್ವಲ್ಪ ಹೊಟ್ಟೆಹಿಂಡಿದ ಅನುಭವ ಆಗಬಹುದು. ಹೊಟ್ಟೆ ನೋವು ಅಧಿಕವಾದಲ್ಲಿ ನಿಮ್ಮ ವೈದ್ಯರು ಅಕಾಲಿಕ ಹೆರಿಗೆ ಆಗದ ಹಾಗೆ, ಗರ್ಭಕೋಶ ಸಂಕುಚನಗೊಳ್ಳುವುದನ್ನ ತಡೆಗಟ್ಟಲು ಇರುವ ಮಾತ್ರೆಗಳನ್ನು ಬಳಸಲು ಹೇಳುತ್ತಾರೆ. ನೀವು ಧೈರ್ಯದಿಂದಿರಿ.

ಮೂರನೇ ತ್ರೈಮಾಸಿಕ ಸಮಯದಲ್ಲಿ ಜಾಗ್ರತೆವಹಿಸುವ ಬಗ್ಗೆ ಕೇಳಿದ್ದೀರಿ; ಈ ಅವಧಿಯಲ್ಲಿ ನೀವು ಅನವಶ್ಯಕ ಪ್ರಯಾಣ ಮಾಡಬಾರದು. ಚಟುವಟಿಕೆಯಿಂದಿರಬೇಕು. ಆದರೆ ಅತಿ ಆಯಾಸದ ಕೆಲಸ ಮಾಡಬೇಡಿ. ಬೆಳೆಯುತ್ತಿರುವ ಮಗುವಿನಿಂದ ಹೊಟ್ಟೆಭಾರ ಎನಿಸಬಹುದು. ಆದ್ದರಿಂದ ಆಹಾರ ಸೇವನೆಯಲ್ಲಿ ಸುಲಭವಾಗಿ ಜೀರ್ಣವಾಗುವ ಆಹಾರಗಳನ್ನು, ಸೊಪ್ಪು ತರಕಾರಿ, ಸೂಪ್ ಇತ್ಯಾದಿಗಳನ್ನ ಸೇವಿಸಿ. ಮೂರು ಹೊತ್ತು ಹೆಚ್ಚು ಆಹಾರ ಸೇವಿಸುವುದಕ್ಕಿಂತ, ಕಡಿಮೆ ಆಹಾರವನ್ನು ಐದು ಬಾರಿ ಸೇವಿಸುವುದು ಒಳ್ಳೆಯದು.

ಈ ಲಕ್ಷಣಗಳ ಬಗ್ಗೆ ಅರಿವಿರಲಿ: ಯೋನಿಯಿಂದ ರಕ್ತಸ್ರಾವವಾಗುವುದು, ಇದ್ದಕ್ಕಿದ್ದಂತೆ ನೀರು ಸೋರುವುದು, ಮುಖ, ಕೈಕಾಲುಗಳು ಊದಿಕೊಳ್ಳುವುದು, ಹೆಚ್ಚು ಕಡಿಮೆಯಾದ ಮಗುವಿನ ಚಲನೆ, ಮೂತ್ರವಿಸರ್ಜಿಸುವಾಗ ಉರಿ ಮತ್ತು ನೋವಿದ್ದಲ್ಲಿ, ಚಳಿ ಮತ್ತು ಜ್ವರ ಏನಾದರೂ ಇದ್ದಲ್ಲಿ, ಒಂದೇ ಸಮನೆ ಬಿಟ್ಟು ಬಿಟ್ಟು ಹೊಟ್ಟೆ ಅಥವಾ ಸೊಂಟದನೋವು ಹೆಚ್ಚಾದಲ್ಲಿ, ತೀವ್ರವಾದ ತಲೆನೋವು, ದೃಷ್ಟಿ ಮಂಜಾಗುವುದು, ಕಣ್ಣುಮುಂದೆ ಏನಾದರು ಬೆಳಕು ಹೊಳೆದಂತಾಗುವುದು... ಇವೆಲ್ಲ ಕೂಡಲೇ ವೈದ್ಯರನ್ನು ಕಾಣಬೇಕಾದ ತುರ್ತುಚಿಹ್ನೆಗಳು. ಇವೆಲ್ಲದರ ಬಗ್ಗೆ ನಿಮಗೆ ಅರಿವಿರುವುದು ಅಗತ್ಯ.



ಗರ್ಭಧಾರಣೆಯ ಕೊನೆಯ ಮೂರು ತಿಂಗಳಲ್ಲಿ ಕೆಮ್ಮಿದರೆ, ಸೀನಿದರೆ ಸ್ವಲ್ಪ ಮೂತ್ರ ಹೊರಬಂದ ಹಾಗೇ ಆಗಬಹುದು. ಇದನ್ನ ತಡೆಗಟ್ಟಲು ಪೆಲ್ವಿಕ್ (ಅಸ್ಥಿಕುಹರ) ಸ್ನಾಯುಗಳಿಗೆ ವ್ಯಾಯಾಮ ಕೊಡುವ ಕೆಗಲ್ಸ್ ವ್ಯಾಯಾಮಗಳನ್ನು ನಿಯಮಿತವಾಗಿ ಮಾಡಬೇಕು. ಜೊತೆಗೆ ಕಾಲುಗಳಲ್ಲಿ ನೀರು ತುಂಬಿ ಊತ ಆಗುವುದನ್ನು (ಎಡಿಮಾ) ತಡೆಗಟ್ಟಲು ಕಾಲು, ಕೈಗಳ ಸೂಕ್ಷ್ಮ ವ್ಯಾಯಾಮಗಳನ್ನ ಮಾಡುತ್ತಿರಬೇಕು.

ಮಗುವಿನ ಚಲನೆ ಬಗ್ಗೆ ಗಮನವಿರಲಿ: ಗರ್ಭಿಣಿಯರು 8 ತಿಂಗಳಾಗಿದ್ದಾಗ ನೇರವಾಗಿ ಮಲಗಿದರೆ ದೊಡ್ಡರಕ್ತನಾಳದ ಮೇಲೆ ಒತ್ತಡ ಬಿದ್ದು ರಕ್ತದೊತ್ತಡ ಸ್ವಲ್ಪ ಕಡಿಮೆ ಆಗಿ ತಲೆಸುತ್ತಿದ ಅನುಭವ ಆಗುತ್ತದೆ. ಗರ್ಭಿಣಿಯರು ಹೆಚ್ಚಾಗಿ ಒಂದು ಮಗ್ಗುಲಲ್ಲೇ ಮಲಗುವುದರಿಂದ ಇದನ್ನು ತಡೆಗಟ್ಟಬಹುದು. ಗರ್ಭದೊಳಗಿನ ಮಗುವಿನ ಮಿಸುಕಾಟ ಬೆಳಿಗ್ಗೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಸುಮಾರು 10 ಬಾರಿಯಾದರೂ ಇದ್ದು ಮತ್ತೆ 12 ರಿಂದ 6 ಗಂಟೆಯ ಒಳಗೆ ಇನ್ನೊಂದು 10 ಬಾರಿಯಾದರೂ ನಿಮಗೆ ಗೊತ್ತಾಗಬೇಕು. ಹಾಗಾಗದಿದ್ದಲ್ಲಿ ನಿಮ್ಮ ವೈದ್ಯರನ್ನು ಸಂಪರ್ಕಿಸಿ.

ಸಹಜ ಹೆರಿಗೆಯಾಗುವುದೆಂದು ಮಾನಸಿಕ ಸಂಕಲ್ಪ ಮಾಡಿಕೊಳ್ಳಿ ಅದಕ್ಕಾಗಿ ದೈಹಿಕ ತಯಾರಿಯಾಗಿ 8 ತಿಂಗಳು ತುಂಬಿ 9 ತಿಂಗಳು ಆರಂಭವಾದಾಗ ಬದ್ದಕೋಣಾಸನ, ಉತ್ಕಟಾಸನ, ಚಕ್ಕಿಚಲನಾಸನ ವ್ಯಾಯಾಮಗಳನ್ನು ನಿಯಮಿತವಾಗಿ ಮಾಡಿ. ನಿಮಗೆ ಸುಖ ಪ್ರಸವವಾಗಿ ಆರೋಗ್ಯವಂತ ಮಗು ಜನನವಾಗಲಿ ಎಂದು ಹಾರೈಸುತ್ತೇನೆ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಧರ್ಮಾಧಿಕಾರಿ ನಿವೃತ್ತಿ ವಯೋಮಿತಿ ಏರಿಕೆ ವಿರೋಧಿಸಿದ ಅರ್ಜಿ • ಹೈಕೋರ್ಟ್ ತೀರ್ಪು

ಬಿಷಪ್ ಸ್ಯಾಮ್ಯುಯೆಲ್‌ಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಟೆಸ್ಟೆಂಟ್ ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದ ಬಿಷಪ್‌ಗಳ ನಿವೃತ್ತಿ ವಯೋಮಿತಿ ವಿಸ್ತರಣೆಗೆ ಸಂಬಂಧಿಸಿದಂತೆ; ದಕ್ಷಿಣ ಭಾರತದ ಚರ್ಚ್‌ಗಳ ಸಂವಿಧಾನದ 5ನೇ ಅಧ್ಯಾಯದ ಷರತ್ತು 12 (ಎ)ಗೆ ತರಬೇಕೆಂದಿರುವ ಉದ್ದೇಶಿತ ತಿದ್ದುಪಡಿಗೆ ಅನುಮೋದನೆ ಸಿಗುವ ತನಕ, ಕರ್ನಾಟಕ ಸೆಂಟ್ರಲ್ ಡಯಾಸೆಸ್‌ನ (ಬಿಷಪ್ ಆಡಳಿತ ನಿರ್ವಹಿಸುವ ಪ್ರಾಂತ್ಯ ವ್ಯಾಪ್ತಿ) ಬಿಷಪ್ ಅವರು ಯಾವುದೇ ಆಡಳಿತಾತ್ಮಕ ನಿರ್ಧಾರ ಅಥವಾ ಚಟುವಟಿಕೆ ಕೈಗೊಳ್ಳದಂತೆ ಹೈಕೋರ್ಟ್ ನಿರ್ಬಂಧ ವಿಧಿಸಿದೆ.

ಈ ಕುರಿತಂತೆ ನಗರದ ಮನೋರಾಯನಪಾಳ್ಯದ ಹಿರಿಯ ನಾಗರಿಕ ಜೆ.ಸಿ. ಸಂಪತ್ ಕುಮಾರ್ ಅವರು, ಸಲ್ಲಿಸಿರುವ ಪ್ರಥಮ ಮೇಲ್ಮನವಿಯ (ಎಂಎಫ್‌ಎ 318/2023) ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ. ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಕರ್ನಾಟಕ ಸೆಂಟ್ರಲ್ ಡಯಾಸೆಸ್‌ನ ಬಿಷಪ್ ಪ್ರಸನ್ನ ಕುಮಾರ್ ಸ್ಯಾಮ್ಯುಯೆಲ್ ಅವರು ವಿಚಾರಣಾ ನ್ಯಾಯಾಲಯದಲ್ಲಿನ ಸಿವಿಲ್ ದಾವೆ ಇತ್ಯರ್ಥಗೊಳ್ಳುವ ತನಕ ಯಥಾಸ್ಥಿತಿ ಕಾಯ್ದುಕೊಂಡು ಹೋಗಬೇಕು' ಎಂದು ತೀರ್ಪು ನೀಡಿದೆ.

ಈ ಸಂಬಂಧ ಸಿಟಿ ಸಿವಿಲ್ ಕೋರ್ಟ್ (ಸಿಸಿಎಚ್–7) 2023ರ ಜನವರಿ 3ರಂದು ನೀಡಿದ್ದ ಆದೇಶವನ್ನು ವಜಾಗೊಳಿಸಿರುವ ನ್ಯಾಯಪೀಠ, 'ಸ್ವಾಯತ್ತ ಘಟಕವೆನಿಸಿದ ದಕ್ಷಿಣ ಭಾರತದ ಚರ್ಚ್‌ಗಳ ಸಿನಾಡ್ (ಪಾದ್ರಿಗಳ ಪರಿಷತ್) ತನ್ನ ಸಂವಿಧಾನಕ್ಕೆ ತಿದ್ದುಪಡಿ ತರುವ ಪರಮಾಧಿಕಾರ ಹೊಂದಿರುವುದು ನಿಜವೇ ಆದರೂ, ತಿದ್ದುಪಡಿಗೆ ಅಗತ್ಯವಾದ ಮೂರನೇ ಎರಡರಷ್ಟು ಸದಸ್ಯರ ಬಹುಮತದಲ್ಲಿ ಎಷ್ಟು ಜನ ಸದಸ್ಯರು ಪರವಾಗಿದ್ದಾರೆ ಮತ್ತು ಎಷ್ಟು ಜನ ವಿರೋಧವಾಗಿದ್ದಾರೆ ಎಂಬುದರ ಬಗ್ಗೆ ಸ್ಪಷ್ಟವಾದ ವಿವರಣೆ ನೀಡಿಲ್ಲ. ಈ ಅಂಶವನ್ನು ವಿಚಾರಣಾ ನ್ಯಾಯಾಲಯ ಸೂಕ್ತ ರೀತಿಯಲ್ಲಿ ಪರಿಗಣಿಸಿಲ್ಲ. ಹೀಗಾಗಿ, ಈ ಕುರಿತ ಮಧ್ಯಂತರ ಅರ್ಜಿಯ ಮೇಲೆ ವಿಚಾರಣಾ ನ್ಯಾಯಾಲಯವು ತನ್ನ ವ್ಯಾಪ್ತಿ ಮೀರಿ ನೀಡಿರುವ ಆದೇಶ ಕಾನೂನುಬಾಹಿರವಾಗಿದೆ' ಎಂದು ಅಭಿಪ್ರಾಯಪಟ್ಟಿದೆ.



ಬಿಷಪ್ ಪ್ರಸನ್ನ ಕುಮಾರ್ ಸ್ಯಾಮ್ಯುಯೆಲ್

ಲಾಯರ್ ನೋಟಿಸ್: ಹೈಕೋರ್ಟ್‌ನಲ್ಲಿ ಸಲ್ಲಿಸಲಾಗಿದ್ದ ಅರ್ಜಿಯಲ್ಲಿ ಬಿಷಪ್ ಪ್ರಸನ್ನ ಕುಮಾರ್ ಸ್ಯಾಮ್ಯುಯೆಲ್, ಚರ್ಚ್ ಆಫ್ ಸೌತ್ ಇಂಡಿಯಾದ ಚೆನ್ನೈ ಕಚೇರಿಯ ಸಿನಾಡ್‌ನ ಕಾರ್ಯದರ್ಶಿ, ತಿರುವನಂತಪುರಂನಲ್ಲಿರುವ ಮಾಡರೇಟರ್ ಧರ್ಮರಾಜ ಪ್ರಸಾಲಮ್, ಬೆಂಗಳೂರು ಘಟಕದ ಕಾರ್ಯದರ್ಶಿ ಸೇರಿದಂತೆ ಇತರರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿತ್ತು.

ಹೈಕೋರ್ಟ್, 2023ರ ಏಪ್ರಿಲ್ 21ರಂದು ತೀರ್ಪು ನೀಡಿದ ನಂತರ ಅರ್ಜಿದಾರ ಜೆ.ಸಿ.ಸಂಪತ್ ಕುಮಾರ್ ಅವರು ತಮ್ಮ ವಕೀಲರಾದ ಕೆ.ಬಿ.ಎಸ್. ಮಣಿಯನ್ ಮುಖಾಂತರ ಬಿಷಪ್ ಪ್ರಸನ್ನ ಕುಮಾರ್ ಸ್ಯಾಮ್ಯುಯೆಲ್ ಸೇರಿದಂತೆ ಚರ್ಚ್ ಆಫ್ ಸೌತ್ ಇಂಡಿಯಾದ ಸಿನಾಡ್‌ನ ಕಾರ್ಯದರ್ಶಿ ಫರ್ನಾಂಡಿಸ್ ರಥಿನಾ ರಾಜ, ಚೆನ್ನೈನ ಮಾಡರೇಟರ್ ಎ.ಧರ್ಮರಾಜ ರಸಾಲಮ್ ಹಾಗೂ ಇತರರಿಗೆ ವಕೀಲರ ನೋಟಿಸ್ ನೀಡಿದ್ದಾರೆ.

'ಬಿಷಪ್ ಪ್ರಸನ್ನ ಕುಮಾರ್ ಸ್ಯಾಮ್ಯುಯೆಲ್ 2023ರ ಫೆಬ್ರುವರಿ 10ರಂದೇ ನಿವೃತ್ತಿ ಹೊಂದಿದ್ದಾರೆ. ಅವರೀಗಾಗಲೇ ತಮ್ಮ ಕಚೇರಿಯಲ್ಲಿ ಮುಂದುವರಿಯುವ ಎಲ್ಲ ಹಕ್ಕುಗಳನ್ನು ಕಳೆದುಕೊಂಡಿದ್ದಾರೆ. ಒಂದು ವೇಳೆ ಅವರೇನಾದರೂ ಈ ಅವಧಿಯಲ್ಲಿ ಯಾವುದಾದರೂ ಆಡಳಿತಾತ್ಮಕ ತೀರ್ಮಾನಗಳನ್ನು ಕೈಗೊಂಡಿದ್ದೇ ಆದಲ್ಲಿ ಅದು ಹೈಕೋರ್ಟ್‌ನಲ್ಲಿರುವ ಮೇಲ್ಮನವಿಯ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ. ಅಂತೆಯೇ, ಹೊಸ ಬಿಷಪ್ ಆಯ್ಕೆಯಾಗುವತನಕ ಕರ್ನಾಟಕ ಸೆಂಟ್ರಲ್ ಡಯಾಸೆಸ್‌ಗೆ ತಾತ್ಕಾಲಿಕವಾಗಿ ಮಾಡರೇಟರ್ ಕಮಿಷರಿ ನೇಮಕ ಮಾಡಬೇಕು. ಬಿಷಪ್ ಅವರು ತಕ್ಷಣವೇ ತಮ್ಮ ಕಚೇರಿ ಖಾಲಿ ಮಾಡಬೇಕು. ನೋಟಿಸ್‌ಗೆ ಸೂಕ್ತ ಉತ್ತರ ನೀಡದೇ ಹೋದಲ್ಲಿ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.

ಕರ್ನಾಟಕದಲ್ಲಿ ಪ್ರಾಟೆಸ್ಟೆಂಟ್ ಸಮುದಾಯವು ಉತ್ತರ, ದಕ್ಷಿಣ ಮತ್ತು ಕೇಂದ್ರ ಸ್ಥಾನ ಎಂಬ ಮೂರು ವಿಭಾಗಗಳನ್ನು ಒಳಗೊಂಡಿದೆ. ಕರ್ನಾಟಕ ಮಧ್ಯ ಪ್ರಾಂತ್ಯದ (ಕೇಂದ್ರ) ಧರ್ಮಾಧಿಕಾರಿ ಎನಿಸಿದ ಪ್ರಸನ್ನ ಕುಮಾರ್ ಸ್ಯಾಮ್ಯುಯೆಲ್ ಅವರ ಅಧಿಕಾರ ವ್ಯಾಪ್ತಿಯಲ್ಲಿ ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ತುಮಕೂರು, ಕೋಲಾರ ಮತ್ತು ರಾಮನಗರ ಜಿಲ್ಲೆಯ ವಿವಿಧ ತಾಲ್ಲೂಕುಗಳು ಒಳಗೊಂಡಿವೆ.

ಜಾರಿ ನಿರ್ದೇಶನಾಲಯ ನೋಟಿಸ್

ಅಕ್ರಮ ಹಣ ವರ್ಗಾವಣೆ ಆರೋಪದಡಿ 2020ರ ಆಗಸ್ಟ್‌ನಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಬೆಂಗಳೂರು ಘಟಕದ ಕಚೇರಿಯು, ಧನ ಶೋಧನ ನಿವಾರಣಾ ಕಾಯ್ದೆ–2002ರ (ಪಿಎಂಎಲ್‌ಎ) ಅನ್ವಯ ಬಿಷಪ್ ಪ್ರಸನ್ನ ಕುಮಾರ್ ಸ್ಯಾಮ್ಯುಯೆಲ್ ಅವರಿಗೆ ಖುದ್ದು ಹಾಜರಾಗಿ ಹೇಳಿಕೆ ನೀಡುವಂತೆ ಸಮನ್ಸ್ ಜಾರಿಗೊಳಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಏನಿದು ಅರ್ಜಿ?

ದಕ್ಷಿಣ ಭಾರತದ ಪ್ರಾಟೆಸ್ಟೆಂಟ್ ಚರ್ಚ್‌ಗಳ ಸಂವಿಧಾನದ ಪ್ರಕಾರ ಬಿಷಪ್‌ಗಳ ನಿವೃತ್ತಿ ವಯೋಮಿತಿ 67 ವರ್ಷಗಳು. ಆದರೆ, 2022ರ ಡಿಸೆಂಬರ್ 21ರಂದು ಸಿನಾಡ್‌ನಲ್ಲಿ ಮಂಡಿಸಲಾಗಿರುವ ತಿದ್ದುಪಡಿ ಅನುಸಾರ ಈ ವಯೋಮಿತಿಯನ್ನು 67 ರಿಂದ 70 ವರ್ಷಕ್ಕೆ ವಿಸ್ತರಿಸಲು ಉದ್ದೇಶಿಸಲಾಗಿದೆ. ಇದು ದುರುದ್ದೇಶಪೂರ್ವಕ ಎಂದು ಆರೋಪಿಸಿ ಜೆ.ಸಿ. ಸಂಪತ್‌ಕುಮಾರ್ ಸಿಟಿ ಸಿವಿಲ್ ಕೋರ್ಟ್‌ನಲ್ಲಿ ಸಿವಿಲ್ ದಾವೆ ಹೂಡಿದ್ದಾರೆ.



ಚುಚ್ಚುಮದ್ದು ಅಡ್ಡ ಪರಿಣಾಮ, ಎರಡು ಎತ್ತುಗಳು ಸಾವು

ಪ್ರಜಾವಾಣಿ ವಾರ್ತೆ

ಹಗರಿಬೊಮ್ಮನಹಳ್ಳಿ (ವಿಜಯನಗರ): ತಾಲ್ಲೂಕಿನ ಬಾಚಿಗೊಂಡನಹಳ್ಳಿ ಗ್ರಾಮದಲ್ಲಿ ಚುಚ್ಚುಮದ್ದಿನ ಅಡ್ಡಪರಿಣಾಮದಿಂದಾಗಿ ₹ 1 ಲಕ್ಷ ಬೆಲೆ ಬಾಳುವ 2 ಎತ್ತುಗಳು ಶುಕ್ರವಾರ ಮೃತಪಟ್ಟಿವೆ.

ಎತ್ತುಗಳಿಗೆ ಬಾಧಿಸಿದ ಉಣ್ಣೆ ನಿಯಂತ್ರಿಸಲು ಚುಚ್ಚುಮದ್ದು ನೀಡಲಾಗಿತ್ತು. ಗ್ರಾಮದ ರೈತ ಶಿವಕುಮಾರ್ ಎನ್ನುವವರು ತಮ್ಮ ಎತ್ತುಗಳಿಗಾಗಿ ಪಟ್ಟಣದ ಖಾಸಗಿ ಔಷಧ ಅಂಗಡಿಯಲ್ಲಿ ಚುಚ್ಚುಮದ್ದು ಖರೀದಿಸಿದ್ದರು. ಬಾಚಿಗೊಂಡನಹಳ್ಳಿ ಸರ್ಕಾರಿ ಪಶು ಆಸ್ಪತ್ರೆ ವೈದ್ಯರು ಎರಡು ಎತ್ತುಗಳಿಗೆ ಚುಚ್ಚುಮದ್ದು ನೀಡಿದ್ದರು. ಇದಾಗಿ ಕೇವಲ 10 ನಿಮಿಷದಲ್ಲಿ ಎತ್ತುಗಳು ಸಾವನ್ನಪ್ಪಿವೆ.

'ಚುಚ್ಚುಮದ್ದು ನೀಡಿದ್ದರಿಂದಲೇ ಎತ್ತುಗಳು ಸಾವನ್ನಪ್ಪಿವೆ. ಮರಣೋತ್ತರ ಪರೀಕ್ಷೆ ಮಾಡಲಾಗಿದೆ. ಕೆಲವು ಅಂಗಗಳು ಮತ್ತು ರಕ್ತದ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ಬಳಿಕ ಚುಚ್ಚುಮದ್ದು ಸರಬರಾಜು ಮಾಡಿರುವ ಸಂಸ್ಥೆಯ ವಿರುದ್ಧ ಸೂಕ್ತ ಕ್ರಮಕ್ಕೆ ಮೇಲಧಿಕಾರಿಗಳಿಗೆ ಪತ್ರ ಬರೆಯಲಾಗುವುದು' ಎಂದು ಪಶುಸಂಗೋಪನೆ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಸೂರಪ್ಪ ಪ್ರತಿಕ್ರಿಯಿಸಿದ್ದಾರೆ.

ದಯಾ ಗಂಗನಘಟ್ಟಗೆ ಕಥಾಸಂಕಲನ ಪ್ರಶಸ್ತಿ



ಬೆಂಗಳೂರು: ಡಾ. ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ ನೀಡುವ ಅತ್ಯುತ್ತಮ ಕಥಾಸಂಕಲನ ಪ್ರಶಸ್ತಿಗೆ ದಯಾ ಗಂಗನಘಟ್ಟ ಅವರ 'ಉಪ್ಪುಚ್ಚಿ ಮುಳ್ಳು' ಕಥಾಸಂಕಲನ ಆಯ್ಕೆಯಾಗಿದೆ. ಪ್ರಶಸ್ತಿಯು ₹ 25 ಸಾವಿರ ನಗದು ಒಳಗೊಂಡಿದೆ. ದಯಾ ಅವರು ತುಮಕೂರು ಜಿಲ್ಲೆಯ ತಿಪಟೂರು ಸಮೀಪದ ಗಂಗನಘಟ್ಟದವರು. ಸದ್ಯ ಬೆಂಗಳೂರಿನಲ್ಲಿ ವಾಸವಿದ್ದಾರೆ. ಜೂನ್ 25ರಂದು ಮಂಡ್ಯದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಅಧ್ಯಕ್ಷೆ ಎಚ್.ಆರ್. ಸುಜಾತಾ ತಿಳಿಸಿದ್ದಾರೆ.

ರಾಜೀನಾಮೆ ನಿರ್ಧಾರ ಕೈಬಿಟ್ಟ ಪವಾರ್

ಒಂದನೇ ಪುಟದಿಂದ...

'ರಾಷ್ಟ್ರಕ್ಕೆ ಪವಾರ್ ಅವರಂತಹ ನಾಯಕರ ಅಗತ್ಯವಿದೆ. ಅವರು ದೇಶದ ಗೌರವಾನ್ವಿತ ನಾಯಕರು. ಅವರ ನಿರ್ಧಾರಕ್ಕೆ ಕಾರ್ಯಕರ್ತರ ತೀವ್ರ ವಿರೋಧವಿದೆ. ಅವರ ಈ ಭಾವನೆಗಳನ್ನು ಕಡೆಗಣಿಸಲಾಗದು' ಎಂದು ಪ್ರಫುಲ್ ಪಟೇಲ್ ಹೇಳಿದ್ದರು.

ಪಕ್ಷದ ಸಾಂಸ್ಥಿಕ ಘಟಕಗಳ ಬದಲಾವಣೆಗೆ ಒತ್ತು ನೀಡಲಿದ್ದು, ಹೊಸ ಜವಾಬ್ದಾರಿ ನೀಡುವ ಮೂಲಕ ಹೊಸ ನಾಯಕತ್ವ ಬೆಳೆಸುತ್ತೇನೆ. ಅಲ್ಲದೆ, ಪಕ್ಷದ ಗುರಿ ಮತ್ತು ಸಿದ್ಧಾಂತಗಳ ಸಾಧನೆಗಳಾಗಿ ಶಕ್ತಿ ಮೀರಿ ಶ್ರಮಿಸುತ್ತೇನೆ ಎಂದು ಹೇಳಿದರು.

ನನ್ನ ಆತ್ಮಚರಿತ್ರೆ ಬಿಡುಗಡೆಯ ಸಂದರ್ಭದಲ್ಲಿಯೇ ಎನ್‌ಸಿಪಿ ಮುಖ್ಯಸ್ಥ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ತಿಳಿಸಿದ್ದೆ. 63 ವರ್ಷಗಳ ಸಾರ್ವಜನಿಕ ಬದುಕಿನ ನಂತರ ನಾನು ಎಲ್ಲ ಜವಾಬ್ದಾರಿಗಳಿಂದ ಮುಕ್ತನಾಗಲು ಬಯಸಿದ್ದೆ. ಆದರೆ, ನನ್ನ ರಾಜೀನಾಮೆಯನ್ನು ಜನರು ಸಹಜವಾಗಿ ಸ್ವೀಕರಿಸಲಿಲ್ಲ. ಗಂಭೀರವಾಗಿ ಪ್ರತಿಕ್ರಿಯೆಗಳು ಬಂದವು. ಎನ್‌ಸಿಪಿ ಕಾರ್ಯಕರ್ತರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸಮಾಧಾನ ನೀಡಲಿಲ್ಲ. ಮರುಪರಿಶೀಲಿಸಲು ಮನವಿ ಮಾಡಿದರು ಎಂದರು.

ಕಾರ್ಯಕರ್ತರ ಸಂಭ್ರಮ: ಪವಾರ್ ಅವರ ನಿರ್ಧಾರ ಪ್ರಕಟವಾಗುತ್ತಿದ್ದಂತೆಯೇ, ಪಕ್ಷದ ಕಚೇರಿ ಎದುರು ಗುಂಪುಗೂಡಿದ್ದ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಿಸಿದರು. 'ಪವಾರ್ ಒಬ್ಬರೇ ನಾಯಕ' ಎಂಬ ಘೋಷಣೆ ಕೂಗಿದರು.

ಸ್ಟಾಲಿನ್ ಮನವಿ: ಎನ್‌ಸಿಪಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವ ನಿರ್ಧಾರವನ್ನು ಶರದ್ ಪವಾರ್ ಅವರು ಮರುಪರಿಶೀಲಿಸಬೇಕು ಎಂದು ಡಿಎಂಕೆ ಅಧ್ಯಕ್ಷ ಎಂ.ಕೆ.ಸ್ಟಾಲಿನ್ ಅವರೂ ಮನವಿ ಮಾಡಿದ್ದರು.

ಎಎಸ್‌ಐ, ಹೆಡ್‌ಕಾನ್‌ಸ್ಟೆಬಲ್ ಲೋಕಾಯುಕ್ತ ಬಲೆಗೆ

ತುಮಕೂರು: ಅಪಘಾತದ ಸಮಯದಲ್ಲಿ ವಶಕ್ಕೆ ಪಡೆದಿದ್ದ ಕಾರು ಬಿಡುಗಡೆಗೆ ಲಂಚ ಪಡೆಯುತ್ತಿದ್ದ ನಗರದ ಕ್ಯಾತ್ಸಂದ್ರ ಪೊಲೀಸ್ ಠಾಣೆ ಸಹಾಯಕ ಸಬ್ ಇನ್‌ಸ್ಪೆಕ್ಟರ್ ಗುರುಮಲ್ಲುರಾಧ್ಯ, ಹೆಡ್‌ಕಾನ್‌ಸ್ಟೆಬಲ್ ಎ. ನಾಗರಾಜು ಶುಕ್ರವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಏಪ್ರಿಲ್ 28ರಂದು ಕ್ಯಾತ್ಸಂದ್ರ ಠಾಣಾ ವ್ಯಾಪ್ತಿಯಲ್ಲಿ ನಡೆದ ಅಪಘಾತ ಪ್ರಕರಣದಲ್ಲಿ ಕಾರು ವಶಕ್ಕೆ ಪಡೆದಿದ್ದರು. ಅದನ್ನು ಬಿಡುಗಡೆ ಮಾಡಲು ₹ 10 ಸಾವಿರ ಹಣಕ್ಕೆ ಬೇಡಿಕೆ ಇಟ್ಟಿದ್ದರು. ನಗರದ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಲಂಚ ತೆಗೆದುಕೊಳ್ಳುವಾಗ ಸಿಕ್ಕಿಬಿದ್ದಿದ್ದಾರೆ.

ಲೋಕಾಯುಕ್ತ ಡಿವೈಎಸ್‌ಪಿಗಳಾದ ಮಂಜುನಾಥ್, ಹರೀಶ್, ಇನ್‌ಸ್ಪೆಕ್ಟರ್‌ಗಳಾದ ಸತ್ಯನಾರಾಯಣ, ರಾಮರೆಡ್ಡಿ, ಶಿವರುದ್ರಪ್ಪ ಮೇಟಿ ಮತ್ತು ಸಿಬ್ಬಂದಿ ದಾಳಿ ನಡೆಸಿದ್ದರು.

ದಕ್ಷಿಣ ಒಳನಾಡು, ಕರಾವಳಿ ಜಿಲ್ಲೆಗಳಲ್ಲಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ಮುಂದಿನ ಎರಡು ದಿನಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.


ದಕ್ಷಿಣ ಒಳನಾಡಿನ ವ್ಯಾಪ್ತಿಯ ಜಿಲ್ಲೆಗಳ ಅಲ್ಲಲ್ಲಿ, ಕರಾವಳಿ ಭಾಗದ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಒಳನಾಡಿನ ಕೊಪ್ಪಳ, ರಾಯಚೂರು, ಯಾದಗಿರಿ, ಬೀದರ್, ಗದಗ ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿ ಹಾಗೂ ಉತ್ತರ ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ ಎಂದು ಸೂಚನೆ ನೀಡಿದೆ.

ಉತ್ತರ ಒಳನಾಡಿನ ಕೆಲವು ಕಡೆಗಳಲ್ಲಿ ಉಷ್ಣಾಂಶವು ಸಾಮಾನ್ಯಕ್ಕಿಂತ 3ರಿಂದ 4 ಡಿಗ್ರಿ ಸೆಲ್ಸಿಯಸ್ ಹಾಗೂ ದಕ್ಷಿಣ ಒಳನಾಡಿನ ಕೆಲವು ಭಾಗದಲ್ಲಿ 2ರಿಂದ 3 ಡಿಗ್ರಿ ಸೆಲ್ಸಿಯಸ್‌ನಷ್ಟು ತಗ್ಗುವ ಸಾಧ್ಯತೆಯಿದೆ.

ಬೆಂಗಳೂರಿನಲ್ಲಿ ಶನಿವಾರ ಮತ್ತು ಭಾನುವಾರ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ಅಥವಾ ರಾತ್ರಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಹೆಚ್ಚಿದೆ. ರಾಜಧಾನಿಯ ಉಷ್ಣಾಂಶವು ಗರಿಷ್ಠ 31 ಹಾಗೂ ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ಇರಲಿದೆ.

ರಾಜ್ಯದಲ್ಲಿಯೇ ಅತಿ ಹೆಚ್ಚು ಉಷ್ಣಾಂಶ ಶುಕ್ರವಾರ ಕಾರವಾರದಲ್ಲಿ 36.4 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು ಎಂದು ಹವಾಮಾನ ಇಲಾಖೆ ತಿಳಿಸಿದೆ.

ಶುಕ್ರವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಬಳ್ಳಾರಿಯ ಹಗರಿ ಕೆ.ವಿ.ಕೆಯಲ್ಲಿ 7 ಸೆಂ.ಮೀ, ತುಮಕೂರಿನ ಮಿಡಿಗೇಶಿ, ಬೆಂಗಳೂರಿನಲ್ಲಿ ತಲಾ 4 ಸೆಂ.ಮೀ ಮಳೆ ಸುರಿದಿತ್ತು. ಕಲಬುರಗಿಯ ಚಿತ್ತಾಪುರ, ಬಳ್ಳಾರಿಯ ಕುರುಗೋಡು, ಚಿತ್ರದುರ್ಗದ ಪರಶುರಾಂಪುರ, ರಾಮನಗರದಲ್ಲಿ ತಲಾ 3 ಸೆಂ.ಮೀ ಮಳೆಯಾಗಿದೆ. ಕೋಲಾರ, ಬಳ್ಳಾರಿ ನಗರದಲ್ಲಿ 2 ಸೆಂ.ಮೀ ಮಳೆಯಾಗಿದೆ.



ಮಡಿಕೇರಿಯ ಬಡಾವಣೆಯಲ್ಲಿ ಮಳೆ ನೀರು ಶುಕ್ರವಾರ ಕಾಲುವೆಯಂತೆ ಹರಿಯಿತು

ಮಡಿಕೇರಿಯಲ್ಲಿ ಭಾರಿ ಮಳೆ

ಮಡಿಕೇರಿ: ನಗರದಲ್ಲಿ ಶುಕ್ರವಾರ ಸಂಜೆ ಸುಮಾರು ಒಂದೂವರೆ ಗಂಟೆಗಳ ಭಾರಿ ಮಳೆ ಸುರಿದು, ಇಲ್ಲಿನ ನ್ಯೂಎಕ್ಸ್‌ಟೆಂಕ್ಷನ್ ಹಾಗೂ ಪ್ರಕೃತಿ ಬಡಾವಣೆಗೆ ನೀರು ನುಗ್ಗಿತ್ತು. ರಸ್ತೆಗಳಲ್ಲಿ ಕಾಲುವೆಯಂತೆ ನೀರು ಹರಿಯಿತು. ಕೆಲವು ಮನೆಗಳಿಗೂ ನೀರು ನುಗ್ಗಿದೆ.

ಮಡಿಕೇರಿ– ಮಂಗಳೂರು ರಸ್ತೆಯಲ್ಲಿ ರಸ್ತೆಯೇ ಕಾಣದಂತೆ ನೀರು ತುಂಬಿಕೊಂಡಿತ್ತು. ಕಾಟಕೆರೆ ಬಳಿ ಲಾರಿಯೊಂದು ರಸ್ತೆ ಬದಿಗೆ ಉರುಳಿದ್ದರೆ, ದೇವರಕೊಲ್ಲಿ ಸಮೀಪ ಕೆಎಸ್‌ಆರ್‌ಟಿಸಿ ಬಸ್ ಮತ್ತು ಕಾರಿನ ಮಧ್ಯೆ ಡಿಕ್ಕಿ ಸಂಭವಿಸಿದೆ. ಸಾವು–ನೋವು ಸಂಭವಿಸಿಲ್ಲ.

ವಾಡಿಕೆಗಿಂತ ಶೇ 28ರಷ್ಟು ಅಧಿಕ ಮಳೆ

ನವದೆಹಲಿ (ಪಿಟಿಐ): ಮುಂಗಾರುಪೂರ್ವ ಅವಧಿಯಲ್ಲಿ ದೇಶದಲ್ಲಿ ವಾಡಿಕೆಗಿಂತ ಶೇ 28ಕ್ಕಿಂತ ಅಧಿಕ ಪ್ರಮಾಣದ ಮಳೆಯಾಗಿದೆ. ಪ್ರದೇಶವಾರು ಗಮನಿಸಿದಾಗ, ದೇಶದ ಮಧ್ಯ ಭಾಗದಲ್ಲಿ ವಾಡಿಕೆಗಿಂತ ಶೇ 268ರಷ್ಟು ಮಳೆ ಬಿದ್ದಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಹೇಳಿದೆ.

ಮಾರ್ಚ್ 1ರಿಂದ ಮೇ 3ರ ವರೆಗಿನ ಅವಧಿಯಲ್ಲಿ ದೇಶದ ಪೂರ್ವ ಹಾಗೂ ಈಶಾನ್ಯ ಭಾಗದಲ್ಲಿ 14.15 ಸೆಂ.ಮೀ.ನಷ್ಟು ಮಳೆ ಬಿದ್ದಿದೆ. ಇದು ವಾಡಿಕೆಯ ಮಳೆ ಪ್ರಮಾಣ 19.99 ಸೆಂ.ಮೀ.ಗಿಂತ ಶೇ 29ರಷ್ಟು ಕಡಿಮೆ ಎಂದು ಇಲಾಖೆ ತಿಳಿಸಿದೆ.

ವಾಯವ್ಯ ಭಾಗದ ರಾಜ್ಯಗಳಲ್ಲಿ ವಾಡಿಕೆ ಮಳೆ ಪ್ರಮಾಣ 83.4 ಎಂ.ಎಂ.ಗಿಂತ ಶೇ 18ರಷ್ಟು (98.3 ಎಂ.ಎಂ.) ಹೆಚ್ಚು ಮಳೆಯಾಗಿದೆ. ಮಧ್ಯಪ್ರದೇಶ, ಛತ್ತೀಸಗಢ, ಒಡಿಶಾ, ಮಹಾರಾಷ್ಟ್ರ ಒಳಗೊಂಡ ಮಧ್ಯ ಭಾಗದ ರಾಜ್ಯಗಳಲ್ಲಿ ವಾಡಿಕೆಗಿಂತ ಶೇ 268ರಷ್ಟು ಹೆಚ್ಚು ಮಳೆಯಾಗಿದೆ.

ತಾಪಮಾನ ತೀವ್ರತೆ ಕಡಿಮೆ: ಪೂರ್ವ ಹಾಗೂ ಈಶಾನ್ಯ ಭಾಗ ಹೊರತುಪಡಿಸಿದಂತೆ, ದೇಶದ ಇತರೆಡೆ ಏಪ್ರಿಲ್ 21ರಿಂದ ಮಳೆ ಬಿದ್ದ ಕಾರಣ ಈ ಅವಧಿಯಲ್ಲಿ ವಾಡಿಕೆಗಿಂತ ಕಡಿಮೆ ತಾಪಮಾನ ದಾಖಲಾಗಿದೆ. 'ಏಪ್ರಿಲ್ 21ರ ನಂತರ ದೇಶದ ಯಾವ ಪ್ರದೇಶದಲ್ಲಿಯೂ ಬಿಸಿಗಾಳಿ ಬೀಸಿದ್ದು ವರದಿಯಾಗಿಲ್ಲ. ಇಷ್ಟೊಂದು ದೀರ್ಘ ಅವಧಿವರೆಗೆ ಬಿಸಿಗಾಳಿ ಬೀಸದೇ ಇರುವುದು ಅಪರೂಪದ ವಿದ್ಯಮಾನ' ಎಂದು ಇಲಾಖೆ ಹಿರಿಯ ವಿಜ್ಞಾನಿಯೊಬ್ಬರು ಹೇಳಿದ್ದಾರೆ.



ಚರಣ್‌ಜಿತ್ ಸಿಂಗ್ ಅಟ್ವಾಲ್ ಅವರನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಶುಕ್ರವಾರ ಪಕ್ಷಕ್ಕೆ ಬರಮಾಡಿಕೊಂಡರು –ಪಿಟಿಐ ಚಿತ್ರ

ಚರಣ್‌ಜಿತ್ ಸಿಂಗ್ ಅಟ್ವಾಲ್ ಬಿಜೆಪಿಗೆ ಸೇರ್ಪಡೆ

ನವದೆಹಲಿ(ಪಿಟಿಐ): ಲೋಕಸಭೆಯ ಮಾಜಿ ಉಪ ಸಭಾಧ್ಯಕ್ಷ ಚರಣ್‌ಜಿತ್ ಸಿಂಗ್ ಅಟ್ವಾಲ್ ಅವರು ಶುಕ್ರವಾರ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆಗೊಂಡರು.

ಚರಣ್‌ಜಿತ್ ಅವರ ಸೇರ್ಪಡೆಯಿಂದ ಮೇ 10ರಂದು ನಡೆಯಲಿರುವ ಜಲಂಧರ್ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿಗೆ ಬಲ ಬಂದಂತಾಗಿದೆ.

ಚರಣ್‌ಜಿತ್ ಅವರು ಈಚೆಗೆ ಶಿರೋಮಣಿ ಅಕಾಲಿ ದಳಕ್ಕೆ (ಎಸ್‌ಎಡಿ) ರಾಜೀನಾಮೆ ನೀಡಿದ್ದರು. ಅವರ ಪುತ್ರ ಇಂದರ್ ಇಕ್ಬಾಲ್ ಸಿಂಗ್ ಅಟ್ವಾಲ್ ಅವರು ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ.

ಬ್ಯಾಸ್ಟೀಲ್ ಡೇ ಪರೇಡ್: ಪ್ರಧಾನಿ ಮುಖ್ಯ ಅತಿಥಿ

ನವದೆಹಲಿ (ಪಿಟಿಐ): 'ಫ್ರಾನ್ಸ್‌ನಲ್ಲಿ ಜುಲೈ 14ರಂದು ನಡೆಯಲಿರುವ ಬ್ಯಾಸ್ಟೀಲ್ ಡೇ ಪರೇಡ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ' ಎಂದು ವಿದೇಶಾಂಗ ಸಚಿವಾಲಯ ಶುಕ್ರವಾರ ತಿಳಿಸಿದೆ.

'ಭಾರತೀಯ ಸೇನಾ ಪಡೆಗಳ ತಂಡವೊಂದು ಈ ಪರೇಡ್‌ನಲ್ಲಿ ಭಾಗವಹಿಸಲಿದೆ. ಜೊತೆಗೆ ಭಾರತ–ಫ್ರಾನ್ಸ್‌ನ ರಾಜತಾಂತ್ರಿಕ ಸಂಬಂಧಕ್ಕೆ 25 ವರ್ಷ ಸಂದ ಸಂದರ್ಭದ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಅವರು ಫ್ರಾನ್ಸ್ ಅಧ್ಯಕ್ಷರ ಆಹ್ವಾನವನ್ನು ಸ್ವೀಕರಿಸಿದ್ದಾರೆ' ಎಂದೂ ಸಚಿವಾಲಯ ತಿಳಿಸಿದೆ.



❦ ಸುಭಾಷಿತ ❦

ಇತರರು ನಿಮ್ಮ ಬಗ್ಗೆ ಅರಿತಿಲ್ಲ ಎಂದು ಚಿಂತಿಸಬೇಡಿ. ನೀವು ಅವರನ್ನು ಸರಿಯಾಗಿ ಅರಿಯದೇ ಇರುವುದರ ಬಗ್ಗೆ ಚಿಂತಿಸಿ.
–ಕನ್‌ಫ್ಯೂಷಿಯಸ್

ಮಣಿಪುರದಲ್ಲಿ ಭುಗಿಲೆದ್ದ ಹಿಂಸಾಚಾರ ವಿವಾದಗಳಿಗೆ ರಾಜಕೀಯ ಪರಿಹಾರ ಬೇಕು

ಮಣಿಪುರ ರಾಜ್ಯದ ಹಲವು ಕಡೆಗಳಲ್ಲಿ ಹಿಂಸಾಚಾರ ಭುಗಿಲೆದ್ದಿದೆ. ಆ ರಾಜ್ಯದ ಬುಡಕಟ್ಟು ಸಮುದಾಯಗಳ ಹಾಗೂ ಅಲ್ಲಿನ ಮುಖ್ಯವಾಹಿನಿಯ ಮೈತೇಯಿ ಸಮುದಾಯದ ನಡುವೆ ಬಹುಕಾಲದಿಂದ ಮಡುಗಟ್ಟಿದ್ದ ಅನುಮಾನ ಮತ್ತು ಶತ್ರುತ್ವದ ವಾತಾವರಣವು ಸ್ಫೋಟಕ್ಕೆ ಹೋಗಿದ್ದರ ಪರಿಣಾಮ ಇದು. ಮಣಿಪುರ ರಾಜ್ಯದಲ್ಲಿ ಕುಕಿ ಮತ್ತು ನಾನಾ ಬುಡಕಟ್ಟು ಸಮುದಾಯಗಳಿಗೆ ಮೀಸಲಾತಿಯ ಪ್ರಯೋಜನ ಕಲ್ಪಿಸಲಾಗಿದೆ. ಮೈತೇಯಿ ಸಮುದಾಯದವರು ತಮ್ಮನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಬೇಕು ಎಂಬ ಬೇಡಿಕೆ ಇರಿಸಿದ್ದಾರೆ. ಮಣಿಪುರ ಹೈಕೋರ್ಟ್ ಈಚೆಗೆ ನೀಡಿದ ಆದೇಶದಲ್ಲಿ, ಈ ಬೇಡಿಕೆಯ ವಿಚಾರವಾಗಿ ರಾಜ್ಯ ಸರ್ಕಾರವು ಕೇಂದ್ರಕ್ಕೆ ಒಂದು ತಿಂಗಳೊಳಗೆ ತನ್ನ ಶಿಫಾರಸನ್ನು ಕಳುಹಿಸಬೇಕು ಎಂದು ಸೂಚಿಸಿತು. ಈ ಸೂಚನೆಯು ಮೈತೇಯಿ ಸಮುದಾಯದವರ ಬೇಡಿಕೆಗೆ ಬಲ ತಂದುಕೊಟ್ಟಿತು. ಇದು ಮೈತೇಯಿ ಸಮುದಾಯಕ್ಕೆ ಮೀಸಲಾತಿಯನ್ನು ಕಲ್ಪಿಸುವತ್ತ ಒಂದು ಹೆಜ್ಜೆ ಮುಂದಕ್ಕೆ ಇರಿಸಿದಂತೆ ಎಂದು ಭಾವಿಸಲಾಯಿತು. ಈ ಸೂಚನೆಯನ್ನು ವಿರೋಧಿಸಿ ಬುಡಕಟ್ಟು ಸಮುದಾಯಗಳು ಬುಧವಾರ ಒಗ್ಗಟ್ಟಿನ ನಡಿಗೆಯನ್ನು ಆಯೋಜಿಸಿದ್ದವು. ಪ್ರತಿಭಟನಾ ನಡಿಗೆಯ ಸಂದರ್ಭದಲ್ಲಿ ವ್ಯಾಪಕ ಗಲಭೆ ನಡೆಯಿತು. ಹಿಂಸಾಚಾರ ಕೂಡ ನಡೆಯಿತು. ಅಲ್ಲಿ ಹಿಂಸಾಚಾರ ನಿಲ್ಲಿಸಲು ಸೇನೆಯನ್ನು ಮತ್ತು ಅಸ್ಸಾಂ ರೈಫಲ್ಸ್‌ನ ಯೋಧರನ್ನು ಕರೆಸಿಕೊಳ್ಳಲಾಗಿದೆ. ಕಂಡಲ್ಲಿ ಗುಂಡು ಆದೇಶ ಹೊರಡಿಸಲಾಗಿದೆ ಮತ್ತು ಇಂಟರ್ನೆಟ್ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ.



ಮೀಸಲಾತಿ ಹಾಗೂ ಇತರ ಬೇಡಿಕೆಗಳಿಗೆ ರಾಜಕೀಯ ಮಾತುಕತೆಗಳ ಮೂಲಕ ಪರಿಹಾರ ಕಂಡುಕೊಳ್ಳಬೇಕು. ಸೇನೆ ಬಳಕೆ, ನಿರ್ಬಂಧ ಹೇರುವುದು ಪರಿಸ್ಥಿತಿಯನ್ನು ಇನ್ನಷ್ಟು ವಿಷಮಗೊಳಿಸಬಹುದು

ಮೀಸಲಾತಿಯು ಈಚಿನ ದಿನಗಳಲ್ಲಿ ಸಾಮಾಜಿಕ ಸಂಘರ್ಷ ಹಾಗೂ ರಾಜಕೀಯ ವಿವಾದಗಳಿಗೆ ಹೆಚ್ಚೆಚ್ಚು ಕಾರಣವಾಗುತ್ತಿದೆ. ಹಲವು ಸಮುದಾಯಗಳು ತಮಗೂ ಮೀಸಲಾತಿ ಬೇಕು ಎಂದು ಕೇಳುತ್ತಿವೆ. ಈಗಾಗಲೇ ಮೀಸಲಾತಿ ಪಡೆಯುತ್ತಿರುವ ಹಲವು ಸಮುದಾಯಗಳು ಬೇರೆ ಸಮುದಾಯಗಳಿಗೆ ಈ ಸೌಲಭ್ಯ ವಿಸ್ತರಿಸುವುದನ್ನು ವಿರೋಧಿಸುತ್ತಿವೆ. ಮಣಿಪುರ ರಾಜ್ಯದಲ್ಲಿ ಮೈತೇಯಿ ಸಮುದಾಯದ ಜನ ಬಹುಸಂಖ್ಯಾತರು. ಅಲ್ಲಿನ 60 ಸದಸ್ಯ ಬಲದ ವಿಧಾನಸಭೆಯಲ್ಲಿ ಈ ಸಮುದಾಯದವರ ಸಂಖ್ಯೆ 40. ಈ ಸಮುದಾಯವು ಮೀಸಲಾತಿ ಬೇಕು ಎಂದು ಕೇಳುತ್ತಿರುವುದು, ತಮ್ಮ ಮೀಸಲಾತಿಯನ್ನು ಕಿತ್ತುಕೊಳ್ಳುವ ನಡೆ ಎಂದು ಬುಡಕಟ್ಟು ಸಮುದಾಯಗಳು ಭಾವಿಸುತ್ತವೆ. ಬುಡಕಟ್ಟು ಸಮುದಾಯಗಳು ಮ್ಯಾನ್ಮಾರ್‌ನಿಂದ ವಲಸೆ ಬಂದು ಇಲ್ಲಿ ನೆಲೆಗೊಂಡವರು, ಹಾಗಾಗಿ ಅವರು ಹೊರಗಿನ ಸಮುದಾಯಗಳು ಎಂದು ಕೆಲವರು ಭಾವಿಸಿದ್ದಾರೆ. ಈಗಿನ ಹಿಂಸಾಚಾರಕ್ಕೆ ಮೀಸಲಾತಿಯ ಬೇಡಿಕೆಯೇ ಮುಖ್ಯ ಕಾರಣವಾಗಿದ್ದರೂ, ಇಲ್ಲಿ ಸಂಘರ್ಷಕ್ಕೆ ಬೇರೆ ಕಾರಣಗಳೂ ಇವೆ. ಬಿಜೆಪಿಯ ಎನ್. ಬಿರೇನ್ ಸಿಂಗ್ ನೇತೃತ್ವದ ಸರ್ಕಾರವು ತಮ್ಮನ್ನು ಗುರಿಯಾಗಿಸಿಕೊಂಡಿದೆ ಎಂದು ಬುಡಕಟ್ಟು ಸಮುದಾಯಗಳು ಭಾವಿಸಿವೆ. ಬುಡಕಟ್ಟು ಸಮುದಾಯಗಳ ಜನರನ್ನು ಮನೆಗಳಿಂದ ಒಕ್ಕಲೆಬ್ಬಿಸಿದ್ದು ಸೇರಿದಂತೆ ರಾಜ್ಯ ಸರ್ಕಾರವು ಕಳೆದ ಎರಡು ವರ್ಷಗಳಲ್ಲಿ ಕೈಗೊಂಡ ಕೆಲವು ತೀರ್ಮಾನಗಳು ದ್ವೇಷ ಹಾಗೂ ತಾರತಮ್ಯಕ್ಕೆ ನಿದರ್ಶನಗಳು ಎಂದು ಬುಡಕಟ್ಟು ಸಮುದಾಯಗಳು ಹೇಳುತ್ತಿವೆ. ಆದರೆ, ತನ್ನ ಕ್ರಮಗಳನ್ನು ಸಮರ್ಥಿಸಿಕೊಂಡಿರುವ ಸರ್ಕಾರವು ಅವು ಸಹಜ ಆಡಳಿತಾತ್ಮಕ ತೀರ್ಮಾನಗಳು ಎಂದು ಹೇಳಿದೆ.

ಜನರಿಗೆ ಸೂಕ್ತವಾದ ಹಾಗೂ ಕೈಗೆಟಕುವ ದರದಲ್ಲಿ ಶಿಕ್ಷಣವನ್ನು ಒದಗಿಸಲು ಸರ್ಕಾರಗಳಿಗೆ ಸಾಧ್ಯವಾಗುತ್ತಿಲ್ಲ. ಯುವಜನರಿಗೆ ಅಗತ್ಯ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿಸಲು ಕೂಡ ಸರ್ಕಾರಗಳಿಗೆ ಆಗುತ್ತಿಲ್ಲ. ಮೀಸಲಾತಿಗೆ ಬೇಡಿಕೆ ಹೆಚ್ಚುತ್ತಿರುವುದಕ್ಕೆ ಇದು ಮುಖ್ಯ ಕಾರಣ. ಕಷ್ಟದ ಸಂದರ್ಭಗಳಲ್ಲಿ ಸಾಮಾಜಿಕ ಮತ್ತು ಆರ್ಥಿಕ ರಕ್ಷಣೆ ನೀಡುವ ಸೌಲಭ್ಯ ಇದು ಎಂದು ಕಾಣಲಾಗುತ್ತಿದೆ. ರಾಜಕೀಯ ಲೆಕ್ಕಾಚಾರಗಳ ಕಾರಣಕ್ಕಾಗಿ ಈ ಬೇಡಿಕೆಗಳಿಗೆ ಪಕ್ಷಗಳು ಒಪ್ಪುತ್ತವೆ. ಆದರೆ ನ್ಯಾಯಾಲಯಗಳು ಮೀಸಲಾತಿ ಬೇಡಿಕೆಗಳಿಗೆ ಒಪ್ಪಿಗೆ ನೀಡುತ್ತಿಲ್ಲ. ಮಣಿಪುರದಲ್ಲಿ ಆಗಿರುವಂತೆ ಮೀಸಲಾತಿ ಬೇಡಿಕೆಯ ಜೊತೆಯಲ್ಲಿ ಸಾಮಾಜಿಕ, ಆರ್ಥಿಕ ಹಿತಾಸಕ್ತಿಗಳ ಸಂಘರ್ಷಗಳು ಹಾಗೂ ಇತರ ಕೆಲವು ಸಮಸ್ಯೆಗಳು ಬೆರೆತುಕೊಂಡಿರುತ್ತವೆ. ಮಣಿಪುರದ ಈಗಿನ ಸರ್ಕಾರವನ್ನು ಮೈತೇಯಿ ಸಮುದಾಯದ ಹಿತರಕ್ಷಕ ಎಂಬಂತೆ ಕಾಣಲಾಗಿತ್ತು. ಅದು ಈಗಿನ ಹಿಂಸಾಚಾರವನ್ನು ನಿರೀಕ್ಷಿಸಿರಲಿಲ್ಲ ಮತ್ತು ಪರಿಸ್ಥಿತಿಯನ್ನು ಸರಿಯಾಗಿ ನಿಭಾಯಿಸಲಿಲ್ಲ. ಮೀಸಲಾತಿ ಹಾಗೂ ಇತರ ಕೆಲವು ಬೇಡಿಕೆಗಳಿಗೆ ರಾಜಕೀಯ ಮಾತುಕತೆಗಳ ಮೂಲಕ ಪರಿಹಾರ ಕಂಡುಕೊಳ್ಳಬೇಕು. ಸೇನೆಯನ್ನು ಬಳಸಿಕೊಳ್ಳುವುದು, ನಿರ್ಬಂಧಗಳನ್ನು ಹೇರುವುದು ಪರಿಸ್ಥಿತಿಯನ್ನು ಇನ್ನಷ್ಟು ವಿಷಮಗೊಳಿಸಬಹುದು.

ಸಾಮೂಹಿಕ ಹಿತ, ಸುಸ್ಥಿರ ಅಭಿವೃದ್ಧಿ, ವ್ಯವಸ್ಥೆ ಸುಧಾರಣೆಯ ಕಾಳಜಿ ಮತದಾನದಲ್ಲಿ ವ್ಯಕ್ತವಾಗಲಿ

ಪ್ರಣಾಳಿಕೆಯ ಜೋಗುಳ, ಪ್ರಜೆಗಳ ಜಾಗರಣೆ!



ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ಬಿರುಬಿಸಿಲಲ್ಲಿ ನಾಡು ತೋಯುವ ಹೊತ್ತಿನಲ್ಲಿ, ಮಲೆನಾಡಿನ ಬೇಡ್ತಿ ಹಾಗೂ ಅಘನಾಶಿನಿ ನದಿಕಣಿವೆಗಳ ಕೆಲವು ಹಳ್ಳಿಗಳಲ್ಲಿ ಓಡಾಡುವ ಸಂದರ್ಭ ಬಂತು. ಅದರ ಅನುಭವವಾದರೂ ಹೇಗಿತ್ತು? ಎಲ್ಲೆಡೆ ಬಿಸಿಲಿನ ಝಳಕ್ಕೆ ಬತ್ತಿರುವ ಬಾವಿ, ಕೆರೆಗಳು ಹಾಗೂ ಒಣಗುತ್ತಿರುವ ತೋಟಗಳ ನೋಟ. ಯಾರನ್ನು ಮಾತನಾಡಿಸಿದರೂ, ಕೈಕೊಟ್ಟ ಕೃಷಿ, ಸೋತ ಹೈನುಗಾರಿಕೆ, ಹೆಚ್ಚುತ್ತಿರುವ ಆರೋಗ್ಯ ಸಮಸ್ಯೆ, ನಗರ ಸೇರಿದ ಮಕ್ಕಳು- ಈ ಕುರಿತೇ ಮಾತು.

ರಂಗೇರಿರುವ ಚುನಾವಣೆ ಬಗೆಗೆ ಹಳ್ಳಿಗರನ್ನು ಕೇಳಿದರೆ, ‘ಅಯ್ಯೋ, ಸಂಜೆಮುಂದೆ ವೇಳೆ ಕಳೀಲಿಕ್ಕೆ ಟೀವೀಲಿ ನೋಡೋ ಸುದ್ದೀರಿ ಅದು’ ಎನ್ನುತ್ತಾರೆ! ಮುಂಬರುವ ಸರ್ಕಾರ ತಮ್ಮ ಸಮಸ್ಯೆಗಳಿಗೆ ಪರಿಹಾರ ಒದಗಿಸೀತು ಎಂಬ ನಂಬಿಕೆಯೇ ಅವರಲ್ಲಿ ಇದ್ದಂತಿಲ್ಲ. ‘ಹಾಗಾದ್ರೆ, ಮತ ಹಾಕ್ತೀರೋ ಇಲ್ವೋ?’ ಎಂದು ಹಿರಿಯರೊಬ್ಬರನ್ನು ಕೇಳಿದರೆ, ‘ಹ್ಞೂಂ, ಹಾಕ್ಬೇಕು. ನಾಡಿಗೊಂದು ಸರ್ಕಾರ ಬೇಕಲ್ಲ’ ಎಂದರು.

ಪ್ರಜಾಪ್ರಭುತ್ವದ ಹಬ್ಬವೆನ್ನಲಾಗುವ ಚುನಾವಣೆಗೂ ತಮ್ಮ ದೈನಂದಿನ ಜೀವನಕ್ಕೂ ಸಂಬಂಧವೇ ಇಲ್ಲ ಎಂಬ ವಿಷಾದ ಎಲ್ಲೆಡೆ ಆವರಿಸಿದಂತಿದೆ. ಜಾತ್ರೆಯ ಮೋಜು ಹಾಗೂ ಜೂಜಿನ ಮಟ್ಟಕ್ಕೆ ಇಳಿದಿದೆ ಚುನಾವಣೆಯ ಮೌಲ್ಯ!

ಬದುಕು ಇಂದು ಎರಡು ಗಂಭೀರ ಸವಾಲುಗಳಿಗೆ ಮೈಯೊಡ್ಡಿ ನಿಂತಿದೆ. ಒಂದು, ಹವಾಮಾನ ಬದಲಾವಣೆ ವಿದ್ಯಮಾನಗಳಿಂದಾಗಿ ನೀರು, ಆಹಾರ, ಆರೋಗ್ಯದಂಥ ಪ್ರಾಥಮಿಕ ಅಗತ್ಯಗಳ ವಿಷಯದಲ್ಲೂ ಎದುರಾಗುತ್ತಿರುವ ಸಂಕೀರ್ಣ ಸಮಸ್ಯೆಗಳು. ಇನ್ನೊಂದು, ಆಧುನಿಕ ಸೌಕರ್ಯಗಳಿಗೆ ಭಂಗ ಬರದಂತೆ ನೋಡಿಕೊಳ್ಳಲು ವಿದ್ಯುತ್, ಇಂಧನ, ನಿರ್ಮಾಣ ಸಾಮಗ್ರಿಯಂತಹವುಗಳನ್ನೆಲ್ಲ ನಿರಂತರವಾಗಿ ಒದಗಿಸಿಕೊಳ್ಳುವುದು. ಆದರೆ, ಈ ಸವಾಲುಗಳನ್ನು ನಿರ್ವಹಿಸಲು ವಿಶ್ವದ ಬೇರೆಡೆ ಅಪ್ಪಿಕೊಂಡಿರುವ ಪರಿಹಾರದ ದಾರಿಗಳು ನಮ್ಮ ದೇಶಕ್ಕೆ ಸೂಕ್ತವಾಗಲಿಕ್ಕಿಲ್ಲ.

ನೂರಾ ನಲವತ್ತು ಕೋಟಿಗೂ ಹೆಚ್ಚಿನ ಜನರೊಂದಿಗೆ ಪ್ರಪಂಚದ ಗರಿಷ್ಠ ಜನಸಂಖ್ಯೆಯ ದೇಶವಾಗಿರುವ ನಮ್ಮ ಪರಿಸ್ಥಿತಿಯೇ ತೀರಾ ಭಿನ್ನ. ಇಲ್ಲಿನ ಪ್ರತಿಯೊಬ್ಬರಿಗೆ ಕನಿಷ್ಠ ಜೀವನಸುರಕ್ಷತೆ ಒದಗಿಸಬೇಕೆಂದರೂ, ಈ ನೆಲಕ್ಕೆ ಒಗ್ಗುವ ಹೊಸ ಅಭಿವೃದ್ಧಿ ಮಾದರಿಗಳನ್ನೇ ಕಂಡುಕೊಳ್ಳಬೇಕಿದೆ. ಭವಿಷ್ಯ ರೂಪಿಸಬಲ್ಲ ಅಂಥ ಸಾಧ್ಯತೆಗಳ ಶೋಧಕ್ಕೆ ಅವಕಾಶವಾಗಬೇಕು ಚುನಾವಣೆ. ಆದರೆ, ಪ್ರಜಾಪ್ರಭುತ್ವ ನೀಡಿರುವ ಈ ಮಹತ್ವದ ಅಸ್ತ್ರದ ಕುರಿತು ಜನಮಾನಸ ಅದೆಷ್ಟು ವಿಶ್ವಾಸ ಕಳೆದುಕೊಳ್ಳುತ್ತಿದೆ!

ನಾಡು ಎದುರಿಸುತ್ತಿರುವ ಸವಾಲುಗಳು ಹಾಗೂ ಅವನ್ನು ನಿಭಾಯಿಸಲು ರಾಜಕೀಯವರ್ಗವು ಚುನಾವಣಾ ಸಂದರ್ಭದಲ್ಲಿ ಮುಂದಿಡುತ್ತಿರುವ ಪರಿಹಾರೋಪಾಯಗಳ ಕುರಿತು ಜನಾಭಿಪ್ರಾಯ ರೂಪಿಸುವಲ್ಲಿ, ವಿಶ್ವವಿದ್ಯಾಲಯಗಳಂಥ ಶೈಕ್ಷಣಿಕ ಲೋಕ ಹಾಗೂ ಬಹುತೇಕ ಸಮೂಹ ಮಾಧ್ಯಮಗಳೂ ಸೋಲುತ್ತಿವೆ. ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು, ಅವರ ಪ್ರಣಾಳಿಕೆಗಳ ಕುರಿತಂತೆಲ್ಲ ಮಾಹಿತಿ ಹಾಗೂ ವಸ್ತುನಿಷ್ಠ ವಿಶ್ಲೇಷಣೆ ಮೂಲಕ ನೈಜ ಜನಜಾಗೃತಿ ಮೂಡಿಸುವ ನೈತಿಕ ಜವಾಬ್ದಾರಿ ಅಲ್ಲಿಯೂ ಮಾಯವಾಗುತ್ತಿದೆ. ಹೀಗಾಗಿ, ಗಂಭೀರ ಸಾರ್ವಜನಿಕ ಸಂವಾದವೇ ರೂಪುಗೊಳ್ಳುತ್ತಿಲ್ಲ. ಸಮಾಜದ ಈ ವ್ಯಾಪಕ ನಿರಾಸಕ್ತಿಯನ್ನು ರಾಜಕೀಯವರ್ಗ ಸ್ಪಷ್ಟವಾಗಿ ಗುರುತಿಸಿದಂತಿದೆ. ಹೀಗಾಗಿ, ಚುನಾವಣೆಗೆ ಬರೀ ಎರಡು ವಾರ ಉಳಿಯಿತು ಎನ್ನುವಾಗಲಷ್ಟೇ ಬಹುಪಾಲು ಪಕ್ಷಗಳು ತಮ್ಮ ಪ್ರಣಾಳಿಕೆ ಪ್ರಕಟಿಸಿದವು. ಸುಲಭ ಮತ ಗಳಿಕೆ ಉದ್ದೇಶದ ‘ಉಚಿತ ಕೊಡುಗೆ’ಗಳನ್ನು ಮಾತ್ರ ತಿಂಗಳುಗಳ ಮೊದಲೇ ಅವು ಸಾರಿದವು! ಪ್ರಣಾಳಿಕೆಗೆ ಪಕ್ಷಗಳು ನೀಡುತ್ತಿರುವ ಮಹತ್ವವಿದು.

ಚುನಾವಣಾ ನಿಯಮಗಳನ್ನು ಪೂರೈಸಲು ಅನಿವಾರ್ಯವಾದ ತಾಂತ್ರಿಕ ವಿಧಾನವೊಂದಾಗಿ ಮಾತ್ರ ಪ್ರಣಾಳಿಕೆಗಳು ಹೊರಬರುತ್ತಿರುವಂತೆ ತೋರುತ್ತಿದೆ.

ಇರಲಿ, ಮುಖ್ಯವಾಹಿನಿಯ ರಾಜಕೀಯ ಪಕ್ಷಗಳು ಪ್ರಸಕ್ತ ವಿಧಾನಸಭಾ ಚುನಾವಣೆಗಾಗಿ ಪ್ರಕಟಿಸಿರುವ ಪ್ರಣಾಳಿಕೆಗಳಾದರೂ ಹೇಗಿವೆ? ಸಂವಿಧಾನದ ಆಶಯ ಹಾಗೂ ರಾಜಕೀಯಶಾಸ್ತ್ರದ ಪ್ರಾಥಮಿಕ ಅರಿವಿನ ಹಿನ್ನೆಲೆಯಲ್ಲಷ್ಟೇ ಗಮನಿಸಿದರೂ, ಅವು ತೀವ್ರ ನಿರಾಸೆ ತರುವಂತಿವೆ.

ತಾತ್ವಿಕವಾಗಿ ಅವನ್ನು ಮೂರು ಆಯಾಮಗಳಲ್ಲಿ ಪರಿಶೀಲಿಸಬಹುದು. ಮೊದಲಿನದು, ಇವು ಸಾಮೂಹಿಕ ಹಿತ ಮತ್ತು ಅಂತ್ಯೋದಯ ಗುರಿಗಳನ್ನು ನಿಜವಾಗಿ ಒಳಗೊಂಡಿವೆಯೇ? ಇಲ್ಲವೇ ಇಲ್ಲವಲ್ಲ! ಚುನಾವಣೆಯ ಸಂವಹನವೆಲ್ಲವೂ ಸಂಪೂರ್ಣವಾಗಿ ಧರ್ಮ, ಜಾತಿ, ಉಪಜಾತಿಗಳ ಓಲೈಕೆ ಹಾಗೂ ಆಮಿಷಗಳ ಪರಿಭಾಷೆಯಲ್ಲೇ ಸಾಗಿವೆ. ಶಾಲಾ ಕಾಲೇಜುಗಳ ತರಗತಿಗಳಲ್ಲಿ ನಮ್ಮ ಮಕ್ಕಳು ಮೈಗೂಡಿಸಿಕೊಳ್ಳಬೇಕೆಂದು ನಾವು ಬಯಸುವ ಸಮಾನತೆ, ಸ್ವಾತಂತ್ರ್ಯ, ಸೋದರತೆಯಂತಹವುಗಳೆಲ್ಲ ರಾಜಕೀಯದಾಟದ ಬಯಲಲ್ಲಿ ಕೊಚ್ಚಿಹೋಗುತ್ತಿವೆ!

ಎರಡನೆಯದು, ಪ್ರಣಾಳಿಕೆಗಳು ಪ್ರಸ್ತಾಪಿಸಿರುವ ಯೋಜನೆಗಳು ಆರ್ಥಿಕವಾಗಿ ಹಾಗೂ ಪಾರಿಸರಿಕವಾಗಿ ಸಾಧುವೇ ಎಂಬುದು. ಏಳು ಕೋಟಿಗೂ ಮಿಕ್ಕಿ ಜನಸಂಖ್ಯೆಯಿರುವ ನಮ್ಮ ನಾಡಿನ ಸರ್ವರಿಗೂ ಅವು ನಿರಂತರವಾಗಿ ನ್ಯಾಯ ಒದಗಿಸಬಲ್ಲವೇ? ಈ ಪ್ರಶ್ನೆಯನ್ನು ಕೇಳುವಂತಿಲ್ಲ. ಉದಾಹರಣೆಗೆ, ವಿದ್ಯುತ್ ಅಥವಾ ಅಡುಗೆ ಅನಿಲವನ್ನು ಉಚಿತವಾಗಿ ನೀಡುವ ಭರವಸೆಯನ್ನೇ ಗಮನಿಸಿ. ದೀರ್ಘಕಾಲದಲ್ಲಿ ಅವನ್ನು ನಿಭಾಯಿಸುವ ಮಾರ್ಗಗಳೇನು? ಕಲ್ಲಿದ್ದಲು ಕೊರತೆ ಹಾಗೂ ಹೂಳು ತುಂಬಿರುವ ಅಣೆಕಟ್ಟುಗಳಿಂದಾಗಿ ರಾಜ್ಯದ ವಿದ್ಯುತ್ ಉತ್ಪಾದನಾ ಘಟಕಗಳ ಕ್ಷಮತೆ ಕ್ಷೀಣಿಸುತ್ತಿದೆ. ಸೌರ ಹಾಗೂ ಗಾಳಿ ವಿದ್ಯುತ್ ಘಟಕಗಳ ಸ್ಥಾಪನೆ, ನಿರ್ವಹಣೆ ಹಾಗೂ ವಿಸ್ತರಣೆಯಲ್ಲಿ ಸರ್ಕಾರ ಸೋಲುತ್ತಿದೆ. ಈ ದಿಸೆಯಲ್ಲಿ, ಭವಿಷ್ಯದಲ್ಲಿ ಕೈಗೊಳ್ಳಲೇಬೇಕಾದ ಕಾರ್ಯಗಳ ಕುರಿತು ಗಟ್ಟಿ ಚಿಂತನೆಗಳೇ ಇರದ ಪ್ರಣಾಳಿಕೆಗಳನ್ನು ಪುರಸ್ಕರಿಸುವುದಾದರೂ ಹೇಗೆ?

ಅಂತಿಮವಾಗಿ, ಆಡಳಿತ ವ್ಯವಸ್ಥೆಯನ್ನು ಇನ್ನಷ್ಟು ಸಶಕ್ತವಾಗಿಸಲು ಪ್ರಣಾಳಿಕೆ ಪ್ರಯತ್ನಿಸುವುದೇ ಎಂಬ ಪ್ರಶ್ನೆ. ಖೇದದ ಸಂಗತಿಯೆಂದರೆ, ಪರಿಣಾಮಕಾರಿ ಆಡಳಿತ ವ್ಯವಸ್ಥೆಯನ್ನು ರೂಪಿಸುವ ಹಾಗೂ ಅದನ್ನು ಕ್ಷಮತೆಯಿಂದ ನಿರ್ವಹಿಸುವ ಬದ್ಧತೆಯಿಂದ ರಾಜಕೀಯ ಪಕ್ಷಗಳು ವರ್ಷದಿಂದ ವರ್ಷಕ್ಕೆ ಜಾರಿಕೊಳ್ಳುತ್ತಿವೆ. ಶಾಲಾ ಶಿಕ್ಷಣ ಅಥವಾ ಸಾರ್ವಜನಿಕ ಆರೋಗ್ಯದಂಥ ತೀರಾ ಅಗತ್ಯದ ಪ್ರಾಥಮಿಕ ಸೇವಾ ಕ್ಷೇತ್ರಗಳನ್ನೂ ಸಮರ್ಪಕವಾಗಿ ನಿರ್ವಹಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಅವನ್ನೂ ಖಾಸಗಿಯವರ ಹೆಗಲಿಗೇರಿಸಲಾಗುತ್ತಿದೆ. ಕಟ್ಟಡ, ರಸ್ತೆ, ರೈಲುಮಾರ್ಗದಂತಹವುಗಳನ್ನು ಗುತ್ತಿಗೆದಾರರ ಮೂಲಕ ನಿರ್ಮಿಸಿ ನಿರ್ವಹಿಸಿದಂತೆ, ಸರ್ಕಾರಿ ಇಲಾಖೆಗಳ ದೈನಂದಿನ ಜವಾಬ್ದಾರಿಗಳನ್ನೂ ಹೊರಗುತ್ತಿಗೆ ನೀಡಲಾಗುತ್ತಿದೆ. ಹೀಗಾದಾಗ, ಆಡಳಿತ ಯಂತ್ರದಲ್ಲಿ ಪಾರದರ್ಶಕತೆ, ಉತ್ತರದಾಯಿತ್ವ ಮತ್ತು ಕ್ಷಮತೆ ಮಾಯವಾಗದೆ ಇನ್ನೇನು?

ಇವನ್ನೆಲ್ಲ ಕೊಂಚವಾದರೂ ಸರಿದಾರಿಗೆ ತರುವ ಯೋಚನೆಗಳೇ ಪ್ರಣಾಳಿಕೆಗಳಲ್ಲಿ ಕಾಣುತ್ತಿಲ್ಲ. ಸರ್ಕಾರವೆಂದರೆ ತುಂಡು ಕಾಮಗಾರಿಗಳ ಗುತ್ತಿಗೆ ಹಾಗೂ ‘ಇವೆಂಟ್ ಮ್ಯಾನೇಜ್‌ಮೆಂಟ್’ ತರಹದ ಕ್ಷಣಿಕ ಸುಖದ ಯೋಜನೆಗಳಿಗೆ ಸೀಮಿತವಾಗುತ್ತಿದೆಯಲ್ಲ!

ಪ್ರಣಾಳಿಕೆಯೆಂದರೆ ಚುನಾವಣಾ ಸಮಯದಲ್ಲಿ ಪ್ರಜೆಗಳನ್ನು ನಿರೀಕ್ಷೆಗಳ ಭ್ರಮೆಯಲ್ಲಿ ಮೈಮರೆಸುವ ‘ಜೋಗುಳದ ಹಾಡಿನಂತೆ’ ಎಂದು, ಪ್ರಸಿದ್ಧ ಪರಿಸರ ಶಾಸ್ತ್ರಜ್ಞರಾಗಿದ್ದ ಅನಿಲ ಅಗರವಾಲ್ ದಶಕಗಳ ಹಿಂದೆಯೇ ಒಮ್ಮೆ ವಿಷಾದದಿಂದ ನುಡಿದಿದ್ದರು. ಈಗ ಕಾಲ ಅದೆಷ್ಟೋ ಬದಲಾಗಿದೆ. ಈಗ ಅವು ಜನರನ್ನು ಗಾಢನಿದ್ರೆಗೇ ತಳ್ಳುವ ಮಂಪರು ದ್ರವ್ಯವಾಗುತ್ತಿವೆಯೇ ಎಂಬ ಭಯ ಕಾಡುತ್ತಿದೆ!

ಇಷ್ಟಾದರೂ, ಪ್ರಜಾಪ್ರಭುತ್ವದ ಮೂಲಸತ್ವವನ್ನು ಕಾಪಾಡುವುದು ಹಾಗೂ ಅಗತ್ಯವಿದ್ದಾಗಲೆಲ್ಲ ಸರಿಪಡಿಸುವುದು ಪ್ರಜಾಪ್ರಭುತ್ವದ ಮಾರ್ಗಗಳಿಂದ ಮಾತ್ರ ಸಾಧ್ಯ ಎಂಬುದನ್ನೂ ಮರೆಯಬಾರದು. ಹೀಗಾಗಿ, ಜನತೆಯ ಮುಂದಿರುವ ಆಯ್ಕೆ ಒಂದೇ. ರಾಜಕೀಯ ವರ್ಗವು ಮುಂದಿಡುವ ಪ್ರಣಾಳಿಕೆಗಳು ಹಾಗೂ ಪ್ರಚಾರದ ಬಣ್ಣದ ಮಾತುಗಳ ಜೋಗುಳದಲ್ಲಿ ನಿದ್ರಿಸದೆ, ಜಾಗೃತ ಪ್ರಜೆಗಳಾಗುವುದು. ಬೇಡ್ತಿ ನದಿ ಕಣಿವೆಯ ಹಳ್ಳಿಯೊಂದರಲ್ಲಿ ಭೆಟ್ಟಿಯಾದ ಆ ವೃದ್ಧರು ಹೇಳಿದಂತೆ, ತಪ್ಪದೇ ಯೋಚಿಸಿ ಮತ ಚಲಾಯಿಸುವುದು.

ಮತಯಂತ್ರದ ಗುಂಡಿ ಒತ್ತುವ ಬೆರಳಂಚಿನಲ್ಲಿ ಮಿದುಳು ಮೈದಾಳಿದರೆ, ಸರ್ಕಾರಿಯಂತ್ರದ ಕಾರ್ಯಕ್ಷಮತೆಯಲ್ಲಿ ಬೆಳಕು ಕಂಡೀತು!



ಚುರುಮುರಿ



ಫ್ರೀ ಆ್ಯಂಡ್ ಫೇರ್...

● ನಾರಾಯಣ ರಾಯಚೂರ್

‘ಹಲೋ, ನಮಸ್ಕಾರ... ಫ್ರೀ ಆಗಿದೀರಾ ಸಾರ್?’

‘ಕರೆಂಟ್ ಫ್ರೀ, ಹಾಲು ಫ್ರೀ, ಅಕ್ಕಿ ಫ್ರೀ, ಸಿಲಿಂಡರ್ ಫ್ರೀ... ನಾನೂ ಫ್ರೀ... ಹೇಳಪ್ಪಾ ಡೈರೆಕ್ಟರ್ ಕಾರ್ತಿಕ್’.

‘ಹೋ! ನೀವು ಪ್ರಣಾಲಿಗೆ ನೋಡ್ತಾಯಿದೀರಿ ಅಂತ ಕಾಣ್ತಿತ್ತೆ, ಟಿ.ವಿ ಸೌಂಡ್ ಕೇಳ್ತಾಯಿದೆ’.

‘ಪ್ರಣಾಲಿಗೆ... ಅಲ್ಲಯ್ಯಾ ಪ್ರಣಾಳಿಕೆ! ನೀನು ಹೇಳೋದೂ ಸರೀನೆ. ಪ್ರಣಾಳಿಕೆಯ ಜೊತೆ ಪ್ರ‘ನಾಲಿಗೆ’ನೂ ಹರಿಬಿಡ್ತಾಯಿದಾರೆ’.

‘ನಾಲಿಗೆ ಅಲ್ಲ ಸಾರ್, ಖಡ್ಗ. ‘ರಕ್ತದಲ್ಲಿ ಬರಕೊಡ್ತೀನಿ’, ಅಬ್ಬಬ್ಬಾ ‘ವಿಷದ ಹಾವು’, ‘ವಿಷಕನ್ಯೆ’, ‘ನಾಲಾಯಕ್ ಮಗ’, ‘ಹುಚ್ಚ’ ಒಂದೇ ಎರಡೇ?... ಸಾರ್ ‘ನಾಲಾಯಕ್ ಮಗ’ ಸಿನಿಮಾ ಟೈಟಲ್‌ಗೆ ಚೆನ್ನಾಗಿದೆ ಸಾರ್, ನಮ್ಮ ಪ್ರೊಡ್ಯೂಸರ್‌ಗೆ ಹೇಳ್ತೀನಿ’.

‘ಈ ಚುನಾವಣಾ ಕೆಸರೆರಚಾಟದಲ್ಲಿ ಹಲವಾರು ಟೈಟಲ್ ಕೊಡ್ತೀನಿ ತಗೊಳಪ್ಪಾ ಸಿನಿಮಾಕ್ಕೆ. ‘ತಾಯಿಗೆ ತಕ್ಕ ಮಗ’ ಹಿಟ್ಟಾಗಿತ್ತಲ್ಲ, ಹಾಗೇ ‘ತಂದೆಗೆ ತಕ್ಕ ಮಗ’, ‘ತಾತನಿಗೆ ತಕ್ಕ ಮೊಮ್ಮಗ’, ‘ಸಿಡಿದೆದ್ದ ಸೊಸೆ’, ‘ಟಗರಿನ ಪೊಗರು’, ‘ರಾಜಾಹುಲಿಯ ರೋಷ’.

‘ಸಾರ್, ಈ ಹಬ್ಬಗಳಿಗೆ ಯುಗಾದಿ, ಗಣೇಶ ಚತುರ್ಥಿ, ದೀಪಾವಳಿಗೆ ಸಿಲಿಂಡರ್ ಕೊಡ್ತಾಯಿದಾರಲ್ಲ ಅದರ ಬಗ್ಗೆ ‘ಯುಗಯುಗಾದಿ ಕಳೆದರೂ ಸಿಲಿಂಡರ್ ಮರಳಿ ಬರುತಿದೆ’ ಅಂತ ಸಾಂಗ್ ಬರೆದರೆ, ಮತ್ತೆ ‘ಈ ಭಾಗ್ಯ, ಆ ಭಾಗ್ಯ’ ಅಂತ ಏನೇನೊ ಭಾಗ್ಯಗಳಿವೆಯಲ್ಲ ಅವುಗಳ ಬಗ್ಗೆನೂ ಬರೆಸಬಹುದು ಸಾರ್’.

‘ನಮಗೆ ಈ ಭಾಗ್ಯಗಳ ವಾಸನೆ ತೋರಿಸಿ ಅವರು ‘ಆಡಳಿತ ಭಾಗ್ಯ’ ಪಡ್ಕೊಂಡು ಪ್ರಜೆಗಳನ್ನ ಐದು ವರ್ಷ ಭೋಗ್ಯಕ್ಕೆ ಹಾಕ್ಕೊಂಡು, ನಮ್ಮನ್ನ ‘ಆಡು’ಗಳ ಹಾಗೆ ಟ್ರೀಟ್ ಮಾಡ್ತಾರೆ. ನಾವು ಕುರಿಗಳಾಗ್ತೀವಷ್ಟೆ’.

‘ನೀನೇನೋ ರೀಲ್ ಬದುಕಿನವ, ರಿಯಲ್ ಬದುಕಿನಲ್ಲಿ ಈ ‘ಫ್ರೀ’ಗಳ (ಉಚಿತ) ಪರಿಣಾಮದ ಬಗ್ಗೆ ಯೋಚಿಸು. ಸಾಧ್ಯವಾದರೆ ಆ ಬಗ್ಗೆ ಒಂದು ಸಿನಿಮಾ ಮಾಡಿ. ಸ್ವಾವಲಂಬನೆಗೆ ಆದ್ಯತೆ ಕೊಡದೆ ಸೋಮಾರಿಗಳನ್ನ ಮಾಡೋ ಈ ಸ್ಕೀಮ್‌ಗಳು ಬರೀ ಆಮಿಷ’.

‘ನಿಜ ಸಾರ್, ‘ಫ್ರೀ ಆ್ಯಂಡ್ ಫೇರ್’ ಅಂತ ಈಗ್ಲೇ ಫಿಲಂ ಚೇಂಬರ್‌ನಲ್ಲಿ ರಿಜಿಸ್ಟರ್ ಮಾಡ್ತೀನಿ’.

ದಿನದ ಟ್ವೀಟ್


ಇದ್ದಾರೆಯೇ ಅಂತಹ ನಾಯಕರು?



ತುಳುನಾಡಿಗೆ ಅನನ್ಯ ದೂರದೃಷ್ಟಿಯಿದ್ದ, ತಲೆಮಾರುಗಳ ಕಾಲ ನೆನಪಿನಲ್ಲಿ ಉಳಿಯುವಂತಹ ಕಾರ್ಯಗಳನ್ನು ಮಾಡಿದ ಯು.ಶ್ರೀನಿವಾಸ ಮಲ್ಯ, ಜಾರ್ಜ್ ಫರ್ನಾಂಡಿಸ್ ಅವರಂತಹ ರಾಜಕಾರಣಿಗಳ ಅಗತ್ಯ ಇದೆ. ಅವರು ಮಾಡಿದ ಅಂತಹ ಒಂದಾದರೂ ಕೆಲಸವನ್ನು ನಮ್ಮ ಇತ್ತೀಚಿನ ಸಂಸದರು ಹಾಗೂ ಶಾಸಕರು ಮಾಡಿರುವುದನ್ನು ನಾವು ಪಟ್ಟಿ ಮಾಡಲು ಸಾಧ್ಯವಿದೆಯೇ?

ವಿಜೆ ಶೆಟ್ಟಿ, ಎಂಜಿನಿಯರ್

ಕಿಡಿನುಡಿ



ಪ್ರತಿಯೊಂದು ಸಮುದಾಯಕ್ಕೂ ತನ್ನ ಪಾಲು ದಕ್ಕುವುದನ್ನು ಖಾತರಿಗೊಳಿಸಲು ಸಂಪನ್ಮೂಲದ ಲಭ್ಯತೆಯನ್ನು ಹೆಚ್ಚಿಸಬೇಕಾಗಿರುವುದು ದೇಶದಲ್ಲಿನ ಗಂಭೀರ ವಿಷಯ. ಮಣಿಪುರದಿಂದ ಹಿಡಿದು ಭಾರತದ ಕೇಂದ್ರ ಭಾಗದವರೆಗೆ ಚಾಚಿರುವ ಮೀಸಲಾತಿ ಬೇಡಿಕೆಗಳು, ಸ್ಥಳೀಯರಿಗಾಗಿ ಅರಣ್ಯ ಭೂಮಿ ಅಥವಾ ಖನಿಜಗಳ ಬಳಕೆಗೆ ಬೇಡಿಕೆ ಇವೆಲ್ಲ ಇದನ್ನು ಪ್ರತಿಫಲಿಸುತ್ತವೆ. ಈ ಪರಿಸ್ಥಿತಿಯನ್ನು ನಿರ್ವಹಿಸಲು ದೂರದೃಷ್ಟಿಯ ಆಡಳಿತ ಅತ್ಯಗತ್ಯ.

ಯಶೋವರ್ಧನ್ ಝಾ ಆಜಾದ್, ಉದ್ಯಮಿ, ನಿವೃತ್ತ ಐಪಿಎಸ್ ಅಧಿಕಾರಿ

25 ವರ್ಷಗಳ ಹಿಂದೆ

ಬುಧವಾರ, 6-5-1998

● **ಭೂಕಬಳಿಕೆ ತಡೆಯಲು ರಾಜ್ಯಕ್ಕೆ ಸುಪ್ರೀಂ ಕೋರ್ಟ್ ಆದೇಶ**

ನವದೆಹಲಿ, ಮೇ 5 (ಪಿಟಿಐ)– ಕರ್ನಾಟಕದ ಪಶ್ಚಿಮಘಟ್ಟದ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಭೂಕಬಳಿಕೆಯಾಗುತ್ತಿರುವುದನ್ನು ತಡೆಯಲು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಇಂದು ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಕೆಲವು ಪ್ರಭಾವಿ ರಾಜಕಾರಣಿಗಳು ಭೂಕಬಳಿಕೆ ಮಾಡಿರುವ ಆರೋಪಗಳು ಬಂದಿದ್ದು, ಇದನ್ನು ತಡೆಯದಿದ್ದರೆ ಚಿಕ್ಕಮಗಳೂರು ಜಿಲ್ಲೆಯ ಸಂಪೂರ್ಣ ಕಾಫಿ ಬೆಳೆ ಪ್ರದೇಶಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲಾಗುವುದು ಎಂದು ಸುಪ್ರೀಂ ಕೋರ್ಟ್ ಎಚ್ಚರಿಕೆ ನೀಡಿದೆ.

● **ಹವಾಲ ಪ್ರಕರಣ: ಸಿನ್ಹ, ಖುರಾನ ಆರೋಪಮುಕ್ತಿ**

ನವದೆಹಲಿ, ಮೇ 5 (ಪಿಟಿಐ)– ಬಹುಕೋಟಿ ಹವಾಲ ಹಗರಣದಲ್ಲಿ ಆರೋಪಿಗಳಾಗಿದ್ದ ಕೇಂದ್ರ ಸಚಿವ ಯಶವಂತ ಸಿನ್ಹ ಮತ್ತು ಮದನ್‌ಲಾಲ್ ಖುರಾನ ಅವರು ಸೇರಿದಂತೆ 19 ರಾಜಕಾರಣಿಗಳನ್ನು ದೆಹಲಿ ಹೈಕೋರ್ಟ್ ಇಂದು ಆರೋಪ ಮುಕ್ತಗೊಳಿಸಿದೆ.

50 ವರ್ಷಗಳ ಹಿಂದೆ

ಭಾನುವಾರ, 6-5-1973

● **ಭಿನ್ನಮತೀಯ ಶಾಸಕರಿಂದ ಅರಸು ಸಂಪುಟದ ವಿರುದ್ಧ ಶರ್ಮರಿಗೆ ಆಪಾದನೆ ಪಟ್ಟಿ ಸಲ್ಲಿಕೆ**

ಬೆಂಗಳೂರು, ಮೇ 5– ರಾಜ್ಯದ 11 ಮಂದಿ ಭಿನ್ನಮತೀಯ ಕಾಂಗ್ರೆಸ್ ಶಾಸಕರು ಇಂದು ಸಂಜೆ ಕಾಂಗ್ರೆಸ್ ಅಧ್ಯಕ್ಷ ಡಾ. ಶಂಕರ ದಯಾಳ ಶರ್ಮ ಅವರನ್ನು ಭೇಟಿ ಮಾಡಿ ರಾಜ್ಯದ ಮಂತ್ರಿಮಂಡಲದ ವಿರುದ್ಧ ಆಪಾದನೆಗಳ ಪಟ್ಟಿಯನ್ನು ಸಲ್ಲಿಸಿದರು.

ವಿಧಾನಸಭಾ ಸದಸ್ಯರಾದ ಬಿ. ಸತ್ಯನಾರಾಯಣಸಿಂಗ್, ಪಿ.ಸಿ. ಶೆಟ್ಟರ್, ಎ.ಎಂ. ಸೂರ್ಯನಾರಾಯಣ ಗೌಡ, ಡಿ.ಬಿ. ಕಲಮಣಕರ್, ಸುಬ್ಬಯ್ಯ ಶೆಟ್ಟಿ, ಎಸ್. ಕರಿಯಪ್ಪ, ಕೆ.ಎನ್. ವೀರಪ್ಪಗೌಡ, ಎಂ.ಬಿ. ರಾಮಸ್ವಾಮಿ, ಕೆ. ಶ್ರೀರಾಮುಲು, ತಾರೇಗೌಡ, ವಿಧಾನ ಪರಿಷತ್ ಸದಸ್ಯ ಡಿ. ರಾಜಗೋಪಾಲ್ ಅವರು ಗಾಜಿನ ಮನೆಯಲ್ಲಿ ಭೇಟಿ ಮಾಡಿ ಮನವಿ ಹಾಗೂ ಅದಕ್ಕೆ ಸೇರಿದಂತಹ ಆಪಾದನೆಗಳ ಪಟ್ಟಿಯೊಂದನ್ನು ನೀಡಿದರು.

● **ಪ್ರಿಯವಾದ ಖಾದ್ಯ ಪ್ರಧಾನಿಗೆ ತಲುಪಲಿಲ್ಲ**

ಮೈಸೂರು, ಮೇ 5– ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರಿಗೆ ಪ್ರಿಯವಾದ ಖಾದ್ಯವನ್ನು ವಿಶೇಷವಾಗಿ ತಯಾರಿಸಿ ಅದನ್ನು ಕೊಡಲು ನಿನ್ನೆ ರಾತ್ರಿ ಇಲ್ಲಿನ ಸರ್ಕಾರಿ ಭವನಕ್ಕೆ ತೆರಳಿದ ಮಾಜಿ ಸಚಿವರೂ, ನೆಹರೂ ಕುಟುಂಬದ ಹಳೆಯ ಸಂಗಾತಿಯೂ ಆದ ಯಶೋಧರಮ್ಮ ದಾಸಪ್ಪ ಅವರು ಹೊರ ಆವರಣದ ಗೇಟಿನಲ್ಲಿ ಸುಮಾರು 45 ನಿಮಿಷ ಕಾಯುವ ಪ್ರಸಂಗ ಒದಗಿತು.

ಭದ್ರತಾ ವಿಭಾಗದ ಕಟ್ಟುನಿಟ್ಟಾದ ಪಹರೆಯ ಫಲವೇ ಈ ಪ್ರಕರಣ.

ಯಶೋಧರಮ್ಮ ಅವರನ್ನು ಒಳಕ್ಕೆ ಬಿಡುವುದು ಹೋಗಲಿ, ಪ್ರಧಾನಿಯವರ ಆಪ್ತ ಸಿಬ್ಬಂದಿಗೆ ತಿಳಿಸಲೂ ಪಹರೆಯವರು ಒಪ್ಪಲಿಲ್ಲ. ಆಕಸ್ಮಿಕವಾಗಿ ಬಂದ ಸಚಿವ ಅಜೀಜ್ ಸೇಠ್ ಅವರು ಗಲಾಟೆ ಮಾಡಿದ ಮೇಲೆ ಒಳಕ್ಕೆ ಬಿಡಲಾಯಿತಾದರೂ ಅಷ್ಟು ಹೊತ್ತಿಗೆ ಪ್ರಧಾನಿಯವರ ಊಟ ಮುಗಿದಿತ್ತು.

ಸಂಗತ

ಚುನಾವಣೆ, ಪ್ರಚಾರ, ಕಿರಿಕಿರಿ

ಜನಸಾಮಾನ್ಯರ ತೊಂದರೆಯನ್ನು ಪರಿಗಣಿಸದೆ ಚುನಾವಣೆಯ ಹೆಸರಿನಲ್ಲಿ ನಡೆಯುವ ಬೀದಿಪ್ರದರ್ಶನಗಳು ಒಬ್ಬ ಅಭ್ಯರ್ಥಿಯ ಜನಸೇವೆಗೆ ದಿಕ್ಸೂಚಿಯಾಗಲು ಸಾಧ್ಯವೇ?

● ಪ.ರಾಮಕೃಷ್ಣ ಶಾಸ್ತ್ರಿ

ಉಜಿರೆ ಪುಟ್ಟ ಪೇಟೆ. ಮೂರು ಹಾದಿಗಳು ಸೇರುವ ಸಂಗಮ ಸ್ಥಳ. ಶಿಕ್ಷಣ ಕಾಶಿ. ಇಲ್ಲಿ ಇತ್ತೀಚೆಗೆ ಸಂಜೆ ಐದು ಗಂಟೆಯ ಹೊತ್ತಿಗೆ ಪೊಲೀಸರ ಚುನಾವಣಾ ಪೂರ್ವ ತಾಲೀಮು. ಸಾವಿರಾರು ಮೀಸಲು ಪೊಲೀಸರು ಕೈಯಲ್ಲಿ ಬಂದೂಕು ಹಿಡಿದುಕೊಂಡು ರಸ್ತೆಯುದ್ದಕ್ಕೂ ಪಥಸಂಚಲನ ಮಾಡಿದರು. ಎಷ್ಟೊಂದು ವಾಹನಗಳು, ಜನಸಾಮಾನ್ಯರು ನಿಂತಲ್ಲೇ ಸ್ತಬ್ಧವಾಗಬೇಕಾಯಿತು.

ದ್ವಿಚಕ್ರ ವಾಹನ ಸವಾರರಂತೂ ದೊಡ್ಡ ವಾಹನಗಳ ನಡುವೆ ಸಿಕ್ಕಿಬಿದ್ದು, ಚಕ್ರವ್ಯೂಹ ಹೊಕ್ಕ ಅಭಿಮನ್ಯುವಿನಂತಾದರು. ಕಚೇರಿಗಳಿಂದ ಕೆಲಸ ಮುಗಿಸಿ ಮನೆಗೆ ಹೋಗುವವರ ಸಂಖ್ಯೆ ದೊಡ್ಡದಿತ್ತು. ಕೆಲವರು ‘ಇದು ಯಾವ ಗಣ್ಯರ ಶವಯಾತ್ರೆ?’ ಎಂದು ವಿಚಾರಿಸುತ್ತಿದ್ದರು.

ಒಂದು ಪುಟ್ಟ ಊರಿನಲ್ಲಿ ಇಂತಹ ಪಥಸಂಚಲನ ಬೇಕಿತ್ತಾ? ಚುನಾವಣೆ ಕಾಲದಲ್ಲಿ ಗಲಾಟೆ ಮಾಡಿದವರಿಗೆ ಇದು ಎಚ್ಚರಿಕೆಯ ಸಂದೇಶವೇ ಇರಬಹುದು. ಆದರೆ ಸಾರ್ವಜನಿಕ ಸಂಚಾರಕ್ಕೆ ಅಡ್ಡಿ ಮಾಡಿ ನಡುರಸ್ತೆಯಲ್ಲಿ ಇದನ್ನು ಮಾಡುವುದರಿಂದ ತೊಂದರೆಯಾಗುತ್ತದೆ ಎಂಬುದು ಪೊಲೀಸರಿಗೆ ತಿಳಿಯಬೇಡವೇ? ಉಜಿರೆ ಯಾವತ್ತಿಗೂ ಸೂಕ್ಷ್ಮ ಸಂವೇದನೆಯ ಮತಕ್ಷೇತ್ರ ಅಲ್ಲ. ಇಲ್ಲಿ ಪೊಲೀಸ್ ಬಲ ಪ್ರದರ್ಶನ ಉಚಿತವೂ ಅಲ್ಲ. ಕರ್ನಾಟಕದ ಯಾವ ಭಾಗದಲ್ಲಿ ಎಷ್ಟು ಜನರಿಗೆ ಇಂತಹ ಸಂಚಲನದಿಂದ ತೊಂದರೆಯಾಯಿತೋ ಹೇಳುವವರಿಲ್ಲ.

ಈ ಸಲ ಕರ್ನಾಟಕಕ್ಕೆ ಮತ್ತೆ ಮತ್ತೆ ಮತ ಪ್ರಚಾರಕ್ಕೆ ಪ್ರಧಾನಿ ಭೇಟಿ ನೀಡಿದರು. ಪಕ್ಷಗಳ ಗಣ್ಯರು ಅನೇಕರು ಬಂದರು. ಪ್ರಧಾನಿ ಬಂದದ್ದು ಪಕ್ಷದ ಪ್ರಚಾರಕ್ಕೆ. ಆದರೆ ಅಂದು ದಕ್ಷಿಣ ಕನ್ನಡ ಜಿಲ್ಲೆಯ ಬಹುಭಾಗದ ಸಂಚಾರಕ್ಕೆ ತೊಂದರೆಯುಂಟಾಯಿತು. ಭಾಷಣ ಕೇಳಲು ಬಹುಸಂಖ್ಯೆಯಲ್ಲಿ ಜನರನ್ನು ಕರೆದೊಯ್ಯಲು ಸರ್ಕಾರಿ ಬಸ್ಸುಗಳನ್ನು ಬಳಸಿದ್ದರಿಂದ ನಿತ್ಯ ಸಂಚಾರ ಮಾಡುವವರಿಗೆ ತೊಡಕುಂಟಾಯಿತು. ಹಲವು ರಸ್ತೆಗಳನ್ನು ಮುಚ್ಚಿದ್ದರಿಂದ ಮದುವೆಯಂತಹ ಕಾರ್ಯಕ್ರಮಗಳಿಗೆ ನೆಂಟರು ಹಾಗಿರಲಿ, ಸ್ವತಃ ವಧು, ವರರೂ ಸರಿಯಾದ ಸಮಯಕ್ಕೆ ಮದುವೆ ಮಂಟಪಕ್ಕೆ ಹೋಗಲಾಗದೆ ಅಡಚಣೆಯುಂಟಾಯಿತು.

ಜನಸಾಮಾನ್ಯರ ತೊಂದರೆಯನ್ನು ಪರಿಗಣಿಸದೆ ಚುನಾವಣೆಯ ಹೆಸರಿನಲ್ಲಿ ಬೀದಿಪ್ರದರ್ಶನಗಳಾದವು. ಒಂದೊಂದು ಪಕ್ಷದಿಂದ ಒಂದೊಂದು ದಿನ ತೋಳ್ಬಲ ಪ್ರದರ್ಶಿಸಲು ಅದೇ ಊರನ್ನು ಬಳಸಿದ ಪರಿಣಾಮವಾಗಿ, ತೊಂದರೆಗೊಳಗಾದವರು ಹಿಡಿಶಾಪ ಹಾಕಿರಬಹುದೇ ವಿನಾ ಒಬ್ಬ ಅಭ್ಯರ್ಥಿಯ ಆಯ್ಕೆಗೆ, ಆತ ಮುಂದೆ ಮಾಡಬಹುದಾದ ಜನಸೇವೆಗೆ ಈ ಮೆರವಣಿಗೆಗಳು ದಿಕ್ಸೂಚಿಯಾಗಲು ಸಾಧ್ಯವಿದೆಯೇ?

ಚುನಾವಣಾ ಆಯೋಗ ಕೆಲವು ದೃಷ್ಟಿಯಿಂದ ಉತ್ತಮ ನಿರ್ಧಾರಗಳನ್ನು ಜಾರಿಗೊಳಿಸಿದೆ. ರಸ್ತೆ ಬದಿಯಲ್ಲಿ ಮಹಾನ್ ನಾಯಕರ ಬೃಹದಾಕೃತಿಯ ಫಲಕಗಳನ್ನು ನೆಡುವುದು, ಭಿತ್ತಿಪತ್ರಗಳನ್ನು ಅಂಟಿಸುವುದಕ್ಕೆಲ್ಲ ಲಗಾಮು ಹಾಕಿದೆ. ಆದರೆ ಬೀದಿ ಸಂಚಾರವನ್ನು ನಿರ್ಬಂಧಿಸುವ ಈ ಮಹಾಪ್ರಭುಗಳ ಮೆರವಣಿಗೆಗೆ ಯಾಕೆ ತಡೆಯೊಡ್ಡುವುದಿಲ್ಲ?

ಶಾಲೆಗೆ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿರಬಹುದು, ಹೆರಿಗೆ ನೋವಿನಿಂದ ಬಳಲುವ ಗರ್ಭಿಣಿಯಿರಬಹುದು, ಇವರ ಸಂಚಾರಕ್ಕೆ ಉಂಟಾಗುವ ಬಾಧೆಯನ್ನು ಯಾಕೆ ಪರಿಗಣಿಸುವುದಿಲ್ಲ? ಪೊಲೀಸರು ನಿಷ್ಕ್ರಿಯರಾಗಿ ನೋಡುತ್ತ ನಿಲ್ಲುವುದೇಕೆ?

ಬಹಳಷ್ಟು ಪಕ್ಷಗಳು ಆಶ್ವಾಸನೆಯ ಮಹಾಪೂರವನ್ನೇ ಪ್ರಣಾಳಿಕೆಯ ರೂಪದಲ್ಲಿ ಮುದ್ರಿಸಿ ಹಂಚುತ್ತಿವೆ. ಸರ್ಕಾರದ ಖಜಾನೆಯನ್ನು ಬೀದಿಯಲ್ಲಿ ತಂದಿಡಲು ಬೇಕಾದಷ್ಟು ಆಮಿಷಗಳನ್ನು ಒಡ್ಡುತ್ತಿವೆ. ಮತದಾರರಿಗೂ ಇದರಿಂದ ಸಂತೋಷವಾಗುತ್ತಿದೆ. ಆದರೆ ಒಂದೇ ಒಂದು ಪಕ್ಷದವರ ಗ್ಯಾರಂಟಿ ಕಾರ್ಡಿನಲ್ಲೂ ‘ನಾನು ಶಾಸಕನಾಗಿ ನಿಮ್ಮ ಸೇವೆ ಮಾಡುವ ಅವಧಿಯಲ್ಲಿ ಅನ್ಯ ಪಕ್ಷಕ್ಕೆ ಹಾರುವುದಿಲ್ಲ’ ಎಂದವರಿಲ್ಲ. ‘ರೆಸಾರ್ಟ್ ಸೇರಿಕೊಂಡು ಭೋಗವಿಲಾಸಗಳಲ್ಲಿ ಮೈಮರೆಯುವುದಿಲ್ಲ’, ‘ಕಮಿಷನ್ ಪಡೆಯುವುದಿಲ್ಲ’, ‘ಮಗನಿಗೆ ಸೀಟುಕೊಡಿ ಎಂದು ದುಂಬಾಲು ಬೀಳುವುದಿಲ್ಲ’, ‘ಭ್ರಷ್ಟಾಚಾರ ಮಾಡುವುದಿಲ್ಲ’, ‘ಶಾಸಕನಾಗಿ ವೇತನ ಮತ್ತು ಬಳಿಕ ನಿವೃತ್ತಿ ವೇತನ ಪಡೆಯುವುದಿಲ್ಲ’ ಎಂದು ಒಬ್ಬರಾದರೂ ಭರವಸೆ ಕೊಟ್ಟಿದ್ದಾರೆಯೇ? ಕೊಡುಗೆಗಳನ್ನು ನೀಡಿ, ಪ್ರಶ್ನಿಸಬೇಕಾದ ಜನರ ಬಾಯಿಯನ್ನು ಅವರು ಮೊದಲೇ ಮುಚ್ಚಿಸಿದ ಬಳಿಕ, ಜನಸಾಮಾನ್ಯರು ಇದನ್ನೆಲ್ಲ ಕೇಳುವುದೂ ಇಲ್ಲ.



ಇಂತಹ ಮೆರವಣಿಗೆಗಳು, ಭಾಷಣ ಕೇಳಲು ಎಲ್ಲಿಂದಲೋ ಜನರ ಸಾಗಾಟ, ಮನೆ ಮನೆ ಪ್ರಚಾರಕ್ಕೆ ಹಿಂಡುಗಟ್ಟಲೆ ಸಾಗುವ ಸ್ವಯಂ ಸೇವಕರು ಎಲ್ಲದಕ್ಕೂ ವೆಚ್ಚಕ್ಕೆ ಎಷ್ಟು ಹೊನ್ನು ಬೇಕಾಗುತ್ತದೆ ಎಂಬುದು ಚುನಾವಣಾ ಆಯೋಗಕ್ಕೆ ತಿಳಿಯದ ಸಂಗತಿಯೇನಲ್ಲ. ಒಬ್ಬ ಅಭ್ಯರ್ಥಿ ಎಷ್ಟು ವೆಚ್ಚ ಮಾಡಬಹುದು ಎಂಬುದರ ಗರಿಷ್ಠ ಮಿತಿಯನ್ನೂ ಆಯೋಗ ಹೇರಿದೆ. ಹೀಗಿದ್ದರೂ ಪ್ರತಿ ಚುನಾವಣೆಯಲ್ಲಿಯೂ ಹಿಂದಿನ ಸಲ ಮಾಡಿದ ಉತ್ತಮ ಕೆಲಸಗಳೇ ಅಭ್ಯರ್ಥಿಯ ಪುನರಾಯ್ಕೆಗೆ ಮಾನದಂಡವಾಗುವುದಿಲ್ಲ. ಸಿನಿಮಾ ನಟರನ್ನು, ಆ ಊರಿನ ಜನಕ್ಕೆ ಅರ್ಥವಾಗದ ಭಾಷೆಯಲ್ಲಿ ಭಾಷಣ ಮಾಡುವವರನ್ನು ಬರಹೇಳಿ ಮೆರವಣಿಗೆ ನಡೆಸುತ್ತಾರೆ. ಸಂಚಾರ ಅಸ್ತವ್ಯಸ್ತಗೊಳಿಸುತ್ತಾರೆ. ಸಾಲದ್ದಕ್ಕೆ ಪೊಲೀಸರ ಪಥಸಂಚಲನದಂತಹ ಮಹಾಹಿಂಸೆ.

ಮೊದಲೇ ಜನರ ಕಿವಿಗಳು ಕೆಟ್ಟುಹೋಗಿವೆ. ಅವರ ಸ್ವಂತ ಕೆಲಸಕ್ಕೂ ಸಂಚಾರ ಅಡಚಣೆ ತರುವ ಮಂದಿಗೆ ಪ್ರಾಯಶ್ಚಿತ್ತವೇ ಇಲ್ಲವೇ?

ವಾಚಕರ ವಾಣಿ

ಬೇಡ ಹುಸಿ ಕಾಳಜಿ, ಸಂಕಷ್ಟ ಆಲಿಸಿ

ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷರ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಹೊರಿಸಿ ಕೆಲವು ದಿನಗಳಿಂದ ನವದೆಹಲಿಯಲ್ಲಿ ಧರಣಿ ನಡೆಸುತ್ತಿರುವ ಕುಸ್ತಿಪಟುಗಳ ಸಂಕಟಕ್ಕೆ ಪರಿಹಾರ ಒದಗಿಸಲು ಯಾರೂ ಮುಂದಾಗದಿರುವುದು ದುರದೃಷ್ಟಕರ. ಅದರ ಬದಲಾಗಿ ಅವರನ್ನೇ ಹತ್ತಿಕ್ಕಲು ಯತ್ನಿಸುತ್ತಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ದಿಲ್ಲಿಯ ನಾಯಕರು ಕರ್ನಾಟಕದ ಚುನಾವಣಾ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದಾರೆ. ಸಂತ್ರಸ್ತರ ಕಷ್ಟವನ್ನು ಕೇಳುವವರೇ ಇಲ್ಲವಾಗಿದ್ದು, ಆ ಹೆಣ್ಣುಮಕ್ಕಳು ಸ್ವತಃ ಧೈರ್ಯ ವಹಿಸಿ ಹೋರಾಡುತ್ತಿದ್ದಾರೆ. ಜೊತೆಗೆ ಇವರ ಪರವಾಗಿ ಮಹಿಳಾ ಆಯೋಗವಾಗಲೀ ಮಹಿಳಾ ಸಂಘಟನೆಗಳಾಗಲೀ ಧ್ವನಿ ಎತ್ತದಿರುವುದು ಆಶ್ಚರ್ಯಕರವಾಗಿದೆ.

ರಾಜಕೀಯ ಪಕ್ಷಗಳು ಮತಬ್ಯಾಂಕ್‌ಗಾಗಿ ಹೆಣ್ಣುಮಕ್ಕಳ ಬಗ್ಗೆ ಹುಸಿ ಕಾಳಜಿ ಪ್ರದರ್ಶಿಸುವುದು ಬಿಟ್ಟು, ಕರುಳಾಳದ ನಿಜ ಕಾಳಜಿಯಿಂದ ಅವರ ಸಂಕಷ್ಟವನ್ನು ದೂರ ಮಾಡುವ ಪ್ರಯತ್ನ ಮಾಡಲಿ.

ಬಾ.ಹ.ರಮಾಕುಮಾರಿ, ತುಮಕೂರು

ಹಳ್ಳಿಗಳಲ್ಲೂ ಇದೆ ತ್ಯಾಜ್ಯ ನಿರ್ವಹಣೆ ವ್ಯವಸ್ಥೆ

ಕೊಟ್ಟಿಗೆ ಗೊಬ್ಬರದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಸೇರಿಕೊಳ್ಳುತ್ತಿರುವ ಬಗ್ಗೆ ಎಸ್. ರವಿ ಅವರ ಕಾಳಜಿ (ವಾ.ವಾ., ಮೇ 4) ಜನರಲ್ಲಿ ಅರಿವು ಮೂಡಿಸುವಂತಿದೆ. ಆದರೆ ‘ಪಟ್ಟಣ ಪ್ರದೇಶಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸುವ ವ್ಯವಸ್ಥೆ ಇದ್ದು, ಹಳ್ಳಿಗಳಲ್ಲಿ ಇಂಥ ವ್ಯವಸ್ಥೆ ಇನ್ನೂ ಬಂದಿಲ್ಲವಾದ್ದರಿಂದ ಸ್ವಯಂಪ್ರೇರಿತರಾಗಿ ಜನರೇ ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸಬೇಕು’ ಎಂಬ ಅವರ ಅಭಿಪ್ರಾಯ ಒಪ್ಪುವಂಥದ್ದಲ್ಲ.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಯಾಗಿದ್ದು, ಅದಕ್ಕೆ ಅವಶ್ಯವಿರುವ ಸಿಬ್ಬಂದಿ ಹಾಗೂ ತ್ಯಾಜ್ಯ ವಿಲೇವಾರಿ ವಾಹನವನ್ನು ಕೂಡ ಸರ್ಕಾರ ಒದಗಿಸಿದೆ. ಆದರೆ, ಇಂಥ ವ್ಯವಸ್ಥೆ ಇದೆ ಬಳಸಿಕೊಳ್ಳಿ ಎಂದು ಜನರಲ್ಲಿ ಅರಿವು ಮೂಡಿಸುವ ಕಾರ್ಯವಾಗುತ್ತಿಲ್ಲ. ಆದ್ದರಿಂದ ಪ್ಲಾಸ್ಟಿಕ್ ಬಳಸುವುದನ್ನು ನಿಯಂತ್ರಿಸುವ ಚಿಂತನೆಗಿಂತ ಹೆಚ್ಚಿನದಾಗಿ ತ್ಯಾಜ್ಯ ಸಂಗ್ರಹ, ವೈಜ್ಞಾನಿಕ ವಿಧಾನಗಳನ್ನು ಬಳಸಿ ವಿಲೇವಾರಿ ಮಾಡುವಂತಹ, ಈಗಾಗಲೇ ಗ್ರಾಮಗಳಲ್ಲಿ ಇರುವ ವ್ಯವಸ್ಥೆಯನ್ನು ಬಲಪಡಿಸಬೇಕಾಗಿದೆ.

ಪ್ಲಾಸ್ಟಿಕ್ ಅನ್ನು ಸುಡುವುದೇ ವಿಲೇವಾರಿಗೆ ಇರುವ ಸೂಕ್ತ ಮತ್ತು ಸರಳ ವಿಧಾನ ಎಂದು ಸಮರ್ಥಿಸಿಕೊಳ್ಳುವ ಜನರಿದ್ದಾರೆ. ಆದರೆ, ಇದು ಅವರ ತಪ್ಪಲ್ಲ, ಆ ಬಗ್ಗೆ ಅವರಿಗಿರುವ ಅರಿವಿನ ಕೊರತೆ ಅಷ್ಟೇ. ಆದ್ದರಿಂದ, ಮೊದಲು ಪಂಚಾಯಿತಿ ಅಧ್ಯಕ್ಷರು, ಸದಸ್ಯರು, ಕಚೇರಿ ಸಿಬ್ಬಂದಿ, ಮಾಜಿ ಸದಸ್ಯರು, ಸಂಘ ಸಂಸ್ಥೆಗಳ ಸದಸ್ಯರಿಗೆ ತ್ಯಾಜ್ಯ ವಿಲೇವಾರಿ ಬಗ್ಗೆ ಅರಿವು ಮತ್ತು ತರಬೇತಿಯನ್ನು ನೀಡಿದರೆ, ಕ್ರಮೇಣ ಜನರಲ್ಲಿಯೂ ಅರಿವು ಮೂಡಿಸಲು ಸುಲಭವಾಗುತ್ತದೆ.

ಡಾ. ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ಸಭಾ ನಿರೂಪಣೆ: ಸಮಯದ ಅಭಾವ ಉಂಟಾಗದಿರಲಿ

ಸಭಾ ನಿರೂಪಣೆಯ ಮಹತ್ವ ಮತ್ತು ಸರಿಯಾದ ವಿಧಾನಗಳ ಕುರಿತಂತೆ ಡಾ. ಮುರಳೀಧರ ಕಿರಣಕೆರೆ ಅವರು ಉಪಯುಕ್ತ ಮತ್ತು ದೀರ್ಘ ಮಾಹಿತಿಯನ್ನು ನೀಡಿದ್ದಾರೆ (ಸಂಗತ, ಮೇ 2). ಆದರೆ ಅವರು ಒಂದು ಕಡೆ ‘ಒಬ್ಬರ ಮಾತು ಮುಗಿದೊಡನೆ ಧನ್ಯವಾದ ಹೇಳಿ, ಮುಂದಿನ ಕಾರ್ಯಕ್ರಮ ಇಂಥದ್ದು ಎಂದು ಘೋಷಿಸುವುದು ಖಂಡಿತಾ ನಿರೂಪಣೆಯಾಗದು, ಅದು ಬರೀ ಉದ್ಘೋಷವಷ್ಟೆ’ ಎಂದಿದ್ದಾರೆ. ಒಬ್ಬರ ಮಾತು ಮುಗಿದೊಡನೆ ನಿರೂಪಕ ಏನು ಹೇಳಬೇಕು ಎಂಬುದನ್ನೂ ಅವರು ಹೇಳಿದ್ದರೆ ನಿರೂಪಣೆ ಮಾಡುವವರಿಗೆ ತುಂಬ ಉಪಕಾರವಾಗುತ್ತಿತ್ತು.

ಉಪನ್ಯಾಸಗಳನ್ನು ಕೇಳುವುದು ನನ್ನ ಪ್ರಿಯವಾದ ಹವ್ಯಾಸಗಳಲ್ಲಿ ಒಂದು. ಸಭಾ ಕಾರ್ಯಕ್ರಮಗಳಲ್ಲಿ ಸ್ವಾಗತ ಭಾಷಣ, ನಿರೂಪಣೆ ಮತ್ತು ವಂದನಾರ್ಪಣೆ ಬಹಳ ಮುಖ್ಯವಾದವು. ಈ ಮೂರರಲ್ಲಿ ನಿರೂಪಣೆಗೆ ಮೊದಲ ಸ್ಥಾನ. ಒಬ್ಬರ ಭಾಷಣ ಮುಗಿದ ಮೇಲೆ ಅವರಿಗೆ ಧನ್ಯವಾದ ಹೇಳಿ, ಮುಂದಿನ ಕಾರ್ಯಕ್ರಮ ಇಂಥದ್ದು ಎಂದು ನಿರೂಪಕರು ಹೇಳುವ ನಿರೂಪಣೆಯೇ ನನಗೆ ಅಚ್ಚುಮೆಚ್ಚು. ಹೆಚ್ಚಿನ ನಿರೂಪಕರು ಒಬ್ಬರ ಭಾಷಣ ಮುಗಿದ ಮೇಲೆ ಭಾಷಣದ ಸಾರಾಂಶವನ್ನು ಹೇಳುತ್ತಾರೆ. ಭಾಷಣಕಾರರು ಹೇಳಿದ್ದನ್ನೇ ಪುನಃ ಹೇಳುವುದರ ಅಗತ್ಯವಾದರೂ ಏನಿದೆ? ಇದರಿಂದ ಶ್ರೋತೃಗಳಿಗೆ ತುಂಬಾ ಕಿರಿಕಿರಿಯಾಗುತ್ತದೆ. ಮುಂದಿನ ಕಾರ್ಯಕ್ರಮವನ್ನು ಕಾತರದಿಂದ ನಿರೀಕ್ಷಿಸುತ್ತಿರುವ ಸಭಿಕರಿಗೆ ನಿರೂಪಕರ ಮಿನಿ ಭಾಷಣ ಬೇಸರ ತರಿಸುತ್ತದೆ. ಆದ್ದರಿಂದ ಸಭೆಗಳಲ್ಲಿ ಸ್ವಾಗತ ಕೋರುವವರು, ನಿರೂಪಕರು ಮತ್ತು ವಂದನಾರ್ಪಣೆ ಮಾಡುವವರು ಹಿತವಾಗಿಯೂ ಮಿತವಾಗಿಯೂ ಮಾತನಾಡುವುದನ್ನು ರೂಢಿಸಿಕೊಳ್ಳಬೇಕು. ತಾವೇ ಹೆಚ್ಚು ಮಾತನಾಡಿ ಮುಖ್ಯ ಭಾಷಣಕಾರರಿಗೆ ಸಮಯದ ಅಭಾವವನ್ನು ಉಂಟುಮಾಡಬಾರದು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಆಸ್ಪತ್ರೆಯಲ್ಲಿ ಸ್ಥಾಪಿಸಬೇಕಿದೆ ಮತಗಟ್ಟೆ

ಅರ್ಹರಾದ ಯಾರೂ ಮತ ಚಲಾವಣೆಯಿಂದ ವಂಚಿತರಾಗಬಾರದು ಎಂಬ ಗಹನವಾದ ಉದ್ದೇಶದಿಂದ, ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ, 80 ವರ್ಷ ಮೇಲ್ಪಟ್ಟವರಿಗೆ ಮನೆಯಿಂದ ಹಾಗೂ ಅಗತ್ಯ ಸೇವೆಯಲ್ಲಿರುವವರಿಗೆ ಅಂಚೆ ಮೂಲಕ ಮತದಾನಕ್ಕೆ ವ್ಯವಸ್ಥೆ ಕಲ್ಪಿಸಿರುವುದು ಸ್ತುತ್ಯರ್ಹ. ಆದರೆ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಒಳರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿರುವ ಸಾವಿರಾರು ಮತದಾರರನ್ನು ಚುನಾವಣಾ ಆಯೋಗ ಮರೆತುಬಿಟ್ಟಿದೆ. ಹೌದು, ಹೀಗೆ ಆಸ್ಪತ್ರೆಗಳಲ್ಲಿ ದಾಖಲಾಗಿರುವವರಲ್ಲಿ ಗರ್ಭಿಣಿಯರು, ಬಾಣಂತಿಯರು, ಅಪಘಾತಕ್ಕೆ ತುತ್ತಾದವರು, ವಿವಿಧ ಬಗೆಯ ಶಸ್ತ್ರಚಿಕಿತ್ಸೆಗೆ ಒಳಗಾದವರು ಸೇರಿರುತ್ತಾರೆ. ಜೊತೆಗೆ, ರೋಗಿಯನ್ನು ನೋಡಿಕೊಳ್ಳಲು ಕುಟುಂಬದ ಒಬ್ಬರಾದರೂ ಆಸ್ಪತ್ರೆಯಲ್ಲಿಯೇ ವಾಸ್ತವ್ಯ ಹೂಡಿರುತ್ತಾರೆ. ಇವರೆಲ್ಲ ಮತದಾನದ ದಿನ ತಮ್ಮ ವಾಸಸ್ಥಳದ ಮತಗಟ್ಟೆಗೆ ಹೋಗಿ ಮತ ಚಲಾಯಿಸಲು ಸಾಧ್ಯವಿಲ್ಲ. ಮತದ ಹಕ್ಕು ಇದ್ದರೂ ಚಲಾಯಿಸಲಾಗದ ಸ್ಥಿತಿಯಲ್ಲಿ ಇರುತ್ತಾರೆ. ಬಹುತೇಕ ಇವರೆಲ್ಲರೂ ಆಸ್ಪತ್ರೆಯಿರುವ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತಾಲ್ಲೂಕು ಅಥವಾ ಜಿಲ್ಲೆಗೆ ಸೇರಿದವರೇ ಆಗಿರುತ್ತಾರೆ.

ಚುನಾವಣಾ ಕರ್ತವ್ಯಕ್ಕೆ ನಿಯೋಜಿತರಾದ ಸಿಬ್ಬಂದಿಗೆ ಆಯೋಗವು ತರಬೇತಿ ನೀಡುವ ಸ್ಥಳದಲ್ಲಿಯೇ ಮತ ಚಲಾಯಿಸಲು ಅನುವು ಮಾಡಿಕೊಟ್ಟಂತೆ, ರೋಗಿಗಳು ಹಾಗೂ ಅವರ ಜೊತೆ ಸಹಾಯಕರಾಗಿ ಇರುವವರು ಮತ ಚಲಾಯಿಸಲು ಅನುವಾಗುವಂತೆ ಆಸ್ಪತ್ರೆಗಳಲ್ಲಿ ಮತಗಟ್ಟೆಗಳನ್ನು ಸ್ಥಾಪಿಸಬೇಕು. ಈ ಮೂಲಕ, ಅವರಿಗಿರುವ ಮತದ ಹಕ್ಕನ್ನು ಚಲಾಯಿಸಲು ಅನುವು ಮಾಡಿಕೊಡಬೇಕು.

ಟಿ. ಸತೀಶ್ ಜವರೇಗೌಡ, ಮಂಡ್ಯ

ರಾಜಕೀಯ ಪಕ್ಷಗಳ ಪ್ರಣಾಳಿಕೆ ಘೋಷಣೆಗಳು ಕಾರ್ಯಸಾಧುವೇ?

ಪ್ರಜಾವಾಣಿ ಚರ್ಚೆ

ರಾಜ್ಯ ವಿಧಾನಸಭಾ ಚುನಾವಣಾ ಕಣಕ್ಕೆ ಎಲ್ಲ ಪಕ್ಷಗಳೂ ಭಾರಿ ಸಿದ್ಧತೆಯೊಂದಿಗೆ ಇಳಿದಿವೆ. ಮೂರು ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ತಮ್ಮ ತಮ್ಮ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿವೆ. ಮೂರೂ ಪಕ್ಷಗಳು ಮತದಾರರಿಗೆ ತಮ್ಮ ಪ್ರಣಾಳಿಕೆಗಳಲ್ಲಿ ಭರಪೂರ ಭರವಸೆಗಳನ್ನು ನೀಡಿವೆ. ಈ ಪಕ್ಷಗಳ ನಾಯಕರು, ಎದುರಾಳಿ ಪಕ್ಷಗಳ ಪ್ರಣಾಳಿಕೆಯಲ್ಲಿ ಇರುವ ಭರವಸೆಗಳನ್ನು ಈಡೇರಿಸಲು ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ, ತಮ್ಮ ತಮ್ಮ ಪ್ರಣಾಳಿಕೆಗಳನ್ನು ಸಮರ್ಥಿಸಿಕೊಂಡಿದ್ದಾರೆ



‘ಅನುಷ್ಠಾನ ಸಾಧ್ಯ ಭರವಸೆಗಷ್ಟೇ ಜಾಗ’



• ಡಾ.ಜಿ.ಪರಮೇಶ್ವರ

ಮೊದಲನೆಯದಾಗಿ ಭ್ರಷ್ಟಾಚಾರ ರಹಿತ ಆಡಳಿತ ಕೊಡಬೇಕು ಎಂಬ ಮೂಲ ಉದ್ದೇಶ ಇಟ್ಟುಕೊಂಡೇ ಕಾಂಗ್ರೆಸ್ ಪಕ್ಷ ಈ ಬಾರಿ ಪ್ರಣಾಳಿಕೆ ಸಿದ್ಧಪಡಿಸಿದೆ. ಲೋಕಾಯುಕ್ತವನ್ನು ಮತ್ತಷ್ಟು ಬಲಪಡಿಸುವುದು, ಭ್ರಷ್ಟಾಚಾರ ತಡೆಗೆ ಇರುವ ಕಾನೂನುಗಳಿಗೆ ಇನ್ನಷ್ಟು ಸ್ಪಷ್ಟತೆ ತರುವ ಉದ್ದೇಶವಿದೆ. ಕಾನೂನು ಬಲಗೊಂಡರೆ ಭ್ರಷ್ಟಾಚಾರ ನಿಯಂತ್ರಿಸಬಹುದು.

ಈಡೇರಿಸುವ ಉದ್ದೇಶ ಹಾಗೂ ಎಲ್ಲಾ ರೀತಿಯ ಲೆಕ್ಕಾಚಾರ ಮಾಡಿಯೇ ಪ್ರಣಾಳಿಕೆಯಲ್ಲಿ ಭರವಸೆಗಳನ್ನು ಸೇರಿಸಲಾಗಿದೆ. ಆರ್ಥಿಕ ಸಂಪನ್ಮೂಲ ಕ್ರೋಡೀಕರಣ, ರಾಜ್ಯ ಸರ್ಕಾರದ ಮೇಲೆ ಯಾವ ರೀತಿ ಹಣಕಾಸಿನ ಹೊರೆ ಬೀಳಲಿದೆ ಎಂಬ ಲೆಕ್ಕಾಚಾರ ನಡೆಸಿ ಭರವಸೆಗಳನ್ನು ಕೊಡಲಾಗಿದೆ. ಪ್ರತಿ ವರ್ಷವೂ ಜಿಎಸ್‌ಟಿ ಸೇರಿದಂತೆ ತೆರಿಗೆ ಸಂಗ್ರಹವು ಹೆಚ್ಚುತ್ತಲೇ ಇರುತ್ತದೆ. ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸರಿಯಾಗಿ ನಿರ್ವಹಣೆ ಮಾಡಿದರೆ ಕಷ್ಟಕರವಾಗಲಾರದು. ಕೆಲವು ಯೋಜನೆಗಳಿಗೆ ಕೇಂದ್ರವೂ ನೆರವು ನೀಡುತ್ತದೆ.

ಉದಾಹರಣೆಗೆ ಹಳೆ ಪಿಂಚಣಿ ಯೋಜನೆ ಜಾರಿ ಮಾಡುವುದಾದರೆ ಸುಮಾರು ₹1 ಲಕ್ಷ ಕೋಟಿಗೂ ಹೆಚ್ಚು ಹಣ ಬೇಕಾಗಬಹುದು. ಆದರೆ ಇಷ್ಟೊಂದು ದೊಡ್ಡ ಮೊತ್ತದ ಹಣ ನಾಳೆಯೇ ಬೇಕಾಗಿಲ್ಲ. 2036-2038ರ ವೇಳೆ ಬೇಕಾಗುತ್ತದೆ. ಅದಕ್ಕಾಗಿ ಪ್ರತಿ ವರ್ಷ ₹5 ಸಾವಿರ ಕೋಟಿ ನೀಡುತ್ತಾ ಹೋಗಬೇಕಾಗುತ್ತದೆ. ಈ ಹಣದ ಜತೆಗೆ ಬಡ್ಡಿ ಸೇರಿದರೆ ದೊಡ್ಡ ಮೊತ್ತವಾಗುತ್ತದೆ. ಆಗ ಜಾರಿ ಮಾಡುವುದು ಸುಲಭ. ನೀರಾವರಿ ಯೋಜನೆಗೆ ₹1.50 ಲಕ್ಷ ಕೋಟಿ ಖರ್ಚು ಮಾಡುತ್ತೇವೆ ಎಂದು ಹೇಳಿದ್ದೇವೆ. ಪ್ರತಿ ವರ್ಷ ₹25 ಸಾವಿರ ಕೋಟಿ ಕೊಡುವುದು ಹೊರೆಯಾಗುವುದಿಲ್ಲ. ರಾಜ್ಯದ ಬಜೆಟ್ ಗಾತ್ರ ₹2 ಲಕ್ಷ ಕೋಟಿ ಒಳಗೆ ಇದ್ದ ಸಮಯದಲ್ಲಿ ನೀರಾವರಿಗೆ ಪ್ರತಿ ವರ್ಷ ₹10 ಸಾವಿರ ಕೋಟಿ ಖರ್ಚು ಮಾಡಲಾಗಿದೆ. ಬಜೆಟ್ ಗಾತ್ರ ₹3 ಲಕ್ಷ ಕೋಟಿ ದಾಟಿದ್ದು, ಪ್ರತಿ ವರ್ಷವೂ ಅದರ ಗಾತ್ರ ಶೇ 10-15ರಷ್ಟು ಹೆಚ್ಚಳವಾಗುತ್ತಿದೆ.

ಪ್ರತಿ ಬಿಪಿಎಲ್ ಕುಟುಂಬಕ್ಕೆ ಪ್ರತಿ ತಿಂಗಳು ಉಚಿತವಾಗಿ 200 ಯೂನಿಟ್ ವಿದ್ಯುತ್ ನೀಡುವ ಭರವಸೆ ಕೊಟ್ಟಿದ್ದೇವೆ. ರಾಜ್ಯದಲ್ಲಿ ಬೇಡಿಕೆಗಿಂತ ಹೆಚ್ಚು ಉತ್ಪಾದನೆ ಆಗುತ್ತಿದ್ದು, ಅದನ್ನು ಮಾರಾಟ ಮಾಡಲಾಗುತ್ತಿದೆ. ಈಗಾಗಲೇ ಪಾವಗಡದಲ್ಲಿ ಸೋಲಾರ್ ವಿದ್ಯುತ್ ಪಾರ್ಕ್ ನಿರ್ಮಿಸಲಾಗಿದೆ. ಅದೇ ರೀತಿ 2,500 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಎರಡು ಸೋಲಾರ್ ಪಾರ್ಕ್ ನಿರ್ಮಿಸಿದರೆ ಉಚಿತವಾಗಿ ವಿದ್ಯುತ್ ನೀಡಬಹುದು. ಒಮ್ಮೆ ಬಂಡವಾಳ ತೊಡಗಿಸಿದರೆ, ಸೂರ್ಯನ ಬಿಸಿಲಿಗೆ ದುಡ್ಡು ಕೊಡಬೇಕಾಗಿಲ್ಲ. ಕಡಿಮೆ ವೆಚ್ಚದಲ್ಲಿ ಉತ್ಪಾದಿಸಬಹುದು. ಉಚಿತವಾಗಿ 200 ಯೂನಿಟ್ ಕೊಟ್ಟ ತಕ್ಷಣ ಅಷ್ಟನ್ನೂ ಎಲ್ಲರೂ ಬಳಸುವುದಿಲ್ಲ. ಅಲ್ಲೂ ಉಳಿತಾಯವಾಗುತ್ತದೆ.



ಉಚಿತ, ಜನಪ್ರಿಯ ಕಾರ್ಯಕ್ರಮಗಳನ್ನು ಜಾರಿ ಮಾಡುವುದು ‘ಎರಡು ಕಡೆಯೂ ಹರಿತವಾದ ಖಡ್ಗ’ ಇದ್ದಂತೆ. ಉಚಿತ ಯೋಜನೆಗಳಿಂದ ಜನರಿಗೂ ಸವಲತ್ತು ಕೈಗೆ ಸಿಕ್ಕಂತಾಗುತ್ತದೆ. ಬೊಕ್ಕಸದ ಮೇಲೂ ಹೊರೆ ಬೀಳುತ್ತದೆ. ಅಂತಹ ಸಮಯದಲ್ಲಿ ಸಮತೋಲನ ಕಾಯ್ದುಕೊಳ್ಳಬೇಕಾಗುತ್ತದೆ. ಉಚಿತವಾಗಿ ಮನೆ ಕಟ್ಟಿಸಿಕೊಡುವ ಕಾರ್ಯಕ್ರಮ ಏಕೆ ಮಾಡಬೇಕು ಎಂಬ ಪ್ರಶ್ನೆ ಬರಬಹುದು. ದುಡಿಯದವರು, ಬಡವರಿಗೆ ಉಚಿತವಾಗಿ ಏಕೆ ಅಕ್ಕಿ ಕೊಡಬೇಕು ಎನ್ನುತ್ತಾರೆ. ಇದೊಂದು ಸಾಮಾಜಿಕ ಬದ್ಧತೆ. ಯಾವುದೇ ಸರ್ಕಾರಕ್ಕೆ ಇಂತಹದೊಂದು ಜವಾಬ್ದಾರಿ ಇರಬೇಕಾಗುತ್ತದೆ.

ರಾಜಕೀಯ ಪಕ್ಷಗಳು ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳನ್ನು ನಂಬಿ ಮತ ಹಾಕುವ ಪ್ರಮಾಣ ಕಡಿಮೆಯಾಗಿದೆ. ಹಾಗಂತ ಪ್ರಣಾಳಿಕೆಯೇ ಇಲ್ಲವಾದರೆ ನಮ್ಮ ಕಾರ್ಯಕ್ರಮಗಳು ಏನು? ನಮ್ಮ ಬದ್ಧತೆ ಏನು ಎಂಬುದು ಗೊತ್ತಾಗುವುದಿಲ್ಲ. ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಎಲ್ಲಾ ರಾಜಕೀಯ ಪಕ್ಷಗಳಿಗೂ ಪ್ರಣಾಳಿಕೆ ಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ವೈಯಕ್ತಿಕವಾಗಿ ಏನೆಲ್ಲ ಅನುಕೂಲ ಆಗುತ್ತದೆ ಎಂದೂ ನೋಡುತ್ತಾರೆ. ಬಿಪಿಎಲ್ ಕುಟುಂಬದ ಒಬ್ಬ ಮಹಿಳೆಗೆ ಪ್ರತಿ ತಿಂಗಳು ₹2 ಸಾವಿರ ನೆರವು, ಮಹಿಳೆಯರಿಗೆ ಬಸ್‌ನಲ್ಲಿ ಉಚಿತ ಪ್ರಯಾಣದ ಭರವಸೆ ಕೊಟ್ಟಿದ್ದೇವೆ. ಇಂತಹ ಕಾರ್ಯಕ್ರಮಗಳು ವೈಯಕ್ತಿಕವಾಗಿ ಅನುಕೂಲ ಆಗುವುದರ ಜತೆಗೆ ಆಕರ್ಷಕವಾಗಿಯೂ ಕಾಣುತ್ತವೆ. ಹಳ್ಳಿಗೆ ರಸ್ತೆ, ನೀರು, ಶಾಲೆ ಕಟ್ಟಡ ಇತರೆ ಹಲವು ರೀತಿಯ ಕೆಲಸ ಮಾಡಿಕೊಟ್ಟರೂ ವೈಯಕ್ತಿಕವಾಗಿ ಏನು ಅನುಕೂಲ ಮಾಡಿಕೊಟ್ಟಿದ್ದೀರಿ ಎಂದು ಕೇಳುತ್ತಾರೆ. ಹಾಗಾಗಿ ವೈಯಕ್ತಿಕವಾಗಿ ನೆರವಾಗುವ ಕೆಲವು ಯೋಜನೆಗಳನ್ನು ಜಾರಿಗೆ ತರುವುದು ಅನಿವಾರ್ಯವಾಗಿದೆ.

ಅನುಷ್ಠಾನ ಸಾಧ್ಯವಿಲ್ಲದ ಭರವಸೆಗಳನ್ನು ಪ್ರಣಾಳಿಕೆಯಲ್ಲಿ ಸೇರಿಸಿಲ್ಲ. ಜಾರಿಗೆ ತರುವ ಕಾರ್ಯಕ್ರಮಗಳಿಗೆ ಒತ್ತು ನೀಡಲಾಗಿದೆ. ಸರ್ಕಾರದ ಹಣಕಾಸು ಪರಿಸ್ಥಿತಿ, ಸಾಮಾಜಿಕ ಸ್ಥಿತಿಗತಿ, ಪ್ರತಿಯೊಂದು ಕಾರ್ಯಕ್ರಮದ ಹಿನ್ನೆಲೆ, ಸಾಧಕ-ಬಾಧಕಗಳನ್ನು ಗಮನಿಸಿ ಚರ್ಚಿಸಿದ ನಂತರ ಸೇರ್ಪಡೆ ಮಾಡಲಾಗಿದೆ. ಸುಮ್ಮನೆ ಏನೋ ಸೇರಿಸಬೇಕು ಎಂಬ ಕಾರಣಕ್ಕೆ ಸೇರಿಸಿಲ್ಲ. ಒಟ್ಟಾರೆಯಾಗಿ ಅಭಿವೃದ್ಧಿ ದೃಷ್ಟಿಕೋನ, ಎಲ್ಲಾ ವರ್ಗವನ್ನೂ ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶ ಇದೆ. 2013ರ ಚುನಾವಣೆ ಸಮಯದಲ್ಲಿ 160 ಭರವಸೆಗಳನ್ನು ನೀಡಲಾಗಿತ್ತು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಣ್ಣಪುಟ್ಟವನ್ನು ಹೊರತುಪಡಿಸಿ ಉಳಿದವನ್ನು ಈಡೇರಿಸಲಾಗಿದೆ. ಈ ಬಾರಿ 500ಕ್ಕೂ ಹೆಚ್ಚು ಭರವಸೆ ನೀಡಲಾಗಿದೆ.

ಸಮ್ಮಿಶ್ರ ಸರ್ಕಾರದ ಬಗ್ಗೆ ಯೋಚಿಸಿಲ್ಲ. 130ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಲಿದೆ ಎಂದು ಎಲ್ಲಾ ಸಮೀಕ್ಷೆಗಳೂ ಹೇಳುತ್ತಿವೆ. ಉತ್ತರ ಪ್ರದೇಶ, ಗುಜರಾತ್ ಸೇರಿದಂತೆ ಇತರೆ ರಾಜ್ಯಗಳಲ್ಲಿ ಚುನಾವಣೆ ನಡೆದ ಸಮಯದಲ್ಲಿ ಹೊರ ಬಂದ ಸಮೀಕ್ಷೆಗಳು ನಿಜವಾಗಿವೆ. ರಾಜ್ಯದಲ್ಲೂ ನಾವು ಸಮೀಕ್ಷೆ ನಂಬಿದ್ದೇವೆ. ಸಮ್ಮಿಶ್ರ ಸರ್ಕಾರ ರಚನೆ ಅಗತ್ಯ ಬರುವುದಿಲ್ಲ. ಆ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಒಂದು ವೇಳೆ ಅಂತಹ ಪರಿಸ್ಥಿತಿ ಬಂದರೆ ಅದು ‘ಕೊನೆಯ ಪ್ರಶ್ನೆ’ ಆಗಿರುತ್ತದೆ.

ಲೇಖಕ: ಅಧ್ಯಕ್ಷ, ಕಾಂಗ್ರೆಸ್ ಪ್ರಣಾಳಿಕೆ ಸಮಿತಿ

‘ವಾಸ್ತವಿಕತೆಯೇ ನಮ್ಮ ಪ್ರಣಾಳಿಕೆಯ ಆಧಾರ’



• ಬಿ.ಎಂ. ಫಾರೂಕ್

ಜೆಡಿಎಸ್ ಪಕ್ಷವು ಜನರನ್ನು ಸೆಳೆಯುವ ಉದ್ದೇಶದಿಂದ ಚುನಾವಣಾ ಪ್ರಣಾಳಿಕೆಯಲ್ಲಿ ಅವಾಸ್ತವಿಕ ಸಂಗತಿಗಳನ್ನು ಪ್ರಸ್ತಾಪಿಸಿಲ್ಲ. ನಮ್ಮ ಪ್ರಣಾಳಿಕೆಯ ಎಲ್ಲ ಭರವಸೆಗಳೂ ವಾಸ್ತವಿಕ ತಳಹದಿ ಮತ್ತು ಅನುಷ್ಠಾನ ಸಾಧ್ಯತೆಯನ್ನೇ ಆಧರಿಸಿವೆ. ‘ಪಂಚರತ್ನ ಯೋಜನೆ’ ನಮ್ಮ ಪ್ರಣಾಳಿಕೆಯ ಪ್ರಮುಖ ಭಾಗ. ನಾವು ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆಗಳನ್ನು ಈಡೇರಿಸಲು ದೊಡ್ಡ ಮೊತ್ತದ ಆರ್ಥಿಕ ಸಂಪನ್ಮೂಲ ಅಗತ್ಯ ಎಂಬುದು ನಮಗೆ ಗೊತ್ತಿದೆ. ಭರವಸೆಗಳ ಜತೆಯಲ್ಲೇ ಸಂಪನ್ಮೂಲ ಸಂಗ್ರಹದ ಯೋಜನೆಯನ್ನೂ ಸಿದ್ಧಪಡಿಸಿಕೊಂಡಿದ್ದೇವೆ. ಮೀನು ಮತ್ತಿತರ ಸಾಗರ ಮೂಲದ ಆಹಾರ ಉತ್ಪನ್ನಗಳ ರಫ್ತು ಹೆಚ್ಚಿಸಲು ಹೊಸ ಬಂದರುಗಳ ನಿರ್ಮಾಣ, ಸಾಫ್ಟ್‌ವೇರ್ ರಫ್ತಿನಲ್ಲಿ ಹೆಚ್ಚಿನ ವರಮಾನ ಪಡೆಯುವುದು, ನವೀಕರಿಸಬಹುದಾದ ಇಂಧನ ಉತ್ಪಾದನೆ ಹೆಚ್ಚಳ, ಹೊಸ ಕೈಗಾರಿಕಾ ಪ್ರದೇಶಗಳ ನಿರ್ಮಾಣದ ಮೂಲಕ ಹೊಸ ವರಮಾನ ಮೂಲಗಳನ್ನು ಕಂಡುಕೊಳ್ಳುವ ಗುರಿ ಇದೆ.

ಎಲ್ಲ ಪಕ್ಷಗಳ ಪ್ರಣಾಳಿಕೆಯನ್ನೂ ಜನರು ಒಂದೇ ರೀತಿ ಸ್ವೀಕರಿಸುವುದಿಲ್ಲ. ನಮ್ಮ ಪಕ್ಷವು ನಂಬಿಕೆಗೆ ಅರ್ಹವಾದ ಪ್ರಣಾಳಿಕೆಯನ್ನು ನೀಡಿದೆ. ಬಿಪಿಎಲ್ ಕುಟುಂಬಗಳಿಗೆ ಉತ್ತರ ಪ್ರದೇಶದ ಚುನಾವಣೆಯಲ್ಲಿ ವರ್ಷಕ್ಕೆ ತಲಾ ಎರಡು ಎಲ್‌ಪಿಜಿ ಸಿಲಿಂಡರ್ ಉಚಿತವಾಗಿ ನೀಡುವ ಭರವಸೆಯನ್ನು ಬಿಜೆಪಿ ಕೊಟ್ಟಿತ್ತು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೇ ಈ ಭರವಸೆಯನ್ನು ತ್ವರಿತವಾಗಿ ಈಡೇರಿಸುವ ವಾಗ್ದಾನ ನೀಡಿದ್ದರು. ಅದು ಈವರೆಗೂ ಈಡೇರಿಲ್ಲ. ಕರ್ನಾಟಕದಲ್ಲಿ ಮೂರು ಸಿಲಿಂಡರ್ ಭರವಸೆ ನೀಡಿದ್ದಾರೆ. ಕಾಂಗ್ರೆಸ್ ಕೂಡ ಉಚಿತವಾಗಿ ವಿದ್ಯುತ್ ವಿತರಿಸುವ ಭರವಸೆ ನೀಡಿದೆ. ಅದು ಕೂಡ ಕಾರ್ಯಸಾಧುವಲ್ಲ. ಜೆಡಿಎಸ್ ಘೋಷಿಸಿರುವ ಯೋಜನೆಗಳಿಗೂ ಫಲಾನುಭವಿಗಳ ಆಯ್ಕೆಗೆ ಮಾನದಂಡ ವಿಧಿಸಲಾಗುತ್ತದೆ. ನಮ್ಮ ಎಲ್ಲ ಭರವಸೆಗಳೂ ಅನುಷ್ಠಾನಯೋಗ್ಯವಾಗಿವೆ. ಪ್ರಣಾಳಿಕೆಯಲ್ಲಿನ ಭರವಸೆಗಳನ್ನು ಈಡೇರಿಸಲು ಬಜೆಟ್ ಹೇಗೆ ರೂಪಿಸಬೇಕು ಎಂಬ ಪರಿಕಲ್ಪನೆಯೂ ಸಿದ್ಧವಾಗಿದೆ. ನಮ್ಮ ಪಕ್ಷ ಅಧಿಕಾರಕ್ಕೆ ಬಂದಲ್ಲಿ ಪ್ರಣಾಳಿಕೆಯನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಬೇಕಾದರೆ ಬಜೆಟ್ ಗಾತ್ರವನ್ನು ಎಷ್ಟು ಹೆಚ್ಚಿಸಬೇಕು? ಯಾವ ಮೂಲದಿಂದ ಹೆಚ್ಚಿನ ವರಮಾನ ಸಂಗ್ರಹಿಸಬೇಕು? ಎಂಬ ನೀಲನಕ್ಷೆಯೂ ಸಿದ್ಧವಾಗಿದೆ.

ಹಿಂದಿನ ಜೆಡಿಎಸ್- ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ನಮ್ಮ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು, ರೈತರ ಕೃಷಿ ಸಾಲ ಮನ್ನಾ ವಿಚಾರದಲ್ಲಿ ನುಡಿದಂತೆ ನಡೆದಿದ್ದರು. ₹ 25,000 ಕೋಟಿಯಷ್ಟು ಹೊರೆಯಾಗಬಲ್ಲ ಯೋಜನೆಯನ್ನು ಯಾವುದೇ ಅಳುಕಿಲ್ಲದೆ ಅನುಷ್ಠಾನಕ್ಕೆ ತಂದಿದ್ದರು. ಈಗಲೂ ನಾವು ಅಂತಹ ಧೈರ್ಯ ಮಾಡಿದ್ದೇವೆ. ಯೂರೋಪ್ ರಾಷ್ಟ್ರಗಳಲ್ಲಿರುವ ಹಸಿರು ಇಂಧನಕ್ಕೆ ಆದ್ಯತೆ ನೀಡಲಾಗುತ್ತಿದೆ. ಹಸಿರು ಇಂಧನ ಉತ್ಪಾದನೆಯಿಂದ ಹೆಚ್ಚು ವರಮಾನ ಪಡೆಯುವುದು ಮತ್ತು ಬಳಕೆದಾರರಿಗೆ ಉತ್ತೇಜನ ನೀಡುವುದು ಜೆಡಿಎಸ್ ಪ್ರಣಾಳಿಕೆಯ ಭಾಗವಾಗಿವೆ. ಸುಸ್ಥಿರ ಅಭಿವೃದ್ಧಿಗೆ ಪೂರಕವಾದ ಇಂತಹ ಯೋಚನೆಗಳೇ ನಮ್ಮ ಪ್ರಣಾಳಿಕೆ ವೈಜ್ಞಾನಿಕ ತಳಹದಿ ಮೇಲೆ ರೂಪುಗೊಂಡಿದೆ ಎಂಬುದಕ್ಕೆ ಸಾಕ್ಷಿ.



ಜೆಡಿಎಸ್ ಪ್ರಣಾಳಿಕೆಯು ಉಚಿತ ಸೌಲಭ್ಯಗಳ ಘೋಷಣೆಗೆ ಸೀಮಿತವಾಗಿಲ್ಲ. ಇಡೀ ರಾಜ್ಯವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವುದಕ್ಕೆ ಪೂರಕವಾದ ಯೋಜನೆಗಳಿಗೆ ಆದ್ಯತೆ ನೀಡಲಾಗಿದೆ. ರೈತರು, ಯುವಜನರು, ಮಹಿಳೆಯರು, ಕಾರ್ಮಿಕರು, ಉದ್ಯಮಿಗಳು ಸೇರಿದಂತೆ ಎಲ್ಲ ಜನ ಸಮುದಾಯಗಳಿಗೂ ಪ್ರೋತ್ಸಾಹ ನೀಡುವುದಕ್ಕೆ ಪೂರಕವಾಗಿ ಭರವಸೆಗಳನ್ನು ನೀಡಲಾಗಿದೆ. ಕೃಷಿ, ಶಿಕ್ಷಣ, ಆರೋಗ್ಯ, ವಸತಿ ಮತ್ತು ಉದ್ಯೋಗ ಈ ಕ್ಷೇತ್ರಗಳನ್ನು ಕೇಂದ್ರೀಕರಿಸಿ ಪ್ರಣಾಳಿಕೆ ರೂಪಿಸಲಾಗಿದೆ. ಕರ್ನಾಟಕ ಸೌಹಾರ್ದದ ನೆಲೆವೀಡಾಗಿ ಮುಂದುವರಿದು, ಅಭಿವೃದ್ಧಿಯ ಪಥದಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿರಲು ಬೇಕಾದ ಎಲ್ಲ ಯೋಜನೆಗಳೂ ನಮ್ಮ ಪ್ರಣಾಳಿಕೆಯಲ್ಲಿವೆ.

ರಾಜಕೀಯ ಲಾಭ ಗಳಿಸುವುದೇ ಜೆಡಿಎಸ್ ಪ್ರಣಾಳಿಕೆಯ ಉದ್ದೇಶವಲ್ಲ. ಪಕ್ಷ ಈಗಾಗಲೇ ಘೋಷಿಸಿರುವಂತೆ ಇದು ಜನರನ್ನೇ ಕೇಂದ್ರೀಕರಿಸಿ ಸಿದ್ಧಪಡಿಸಿದ ‘ಜನತಾ ಪ್ರಣಾಳಿಕೆ’. ಅನುಷ್ಠಾನ ಸಾಧ್ಯವಿಲ್ಲದಂತಹ ಯಾವುದೇ ಭರವಸೆಯನ್ನು ಪ್ರಣಾಳಿಕೆಯಲ್ಲಿ ಸೇರಿಸಬಾರದು ಎಂಬ ನಿಲುವನ್ನು ಪಕ್ಷದ ವರಿಷ್ಠರಾದ ಎಚ್.ಡಿ. ದೇವೇಗೌಡ ಮತ್ತು ಕುಮಾರಸ್ವಾಮಿ ತೆಗೆದುಕೊಂಡಿದ್ದರು. ಭಾವನಾತ್ಮಕ ವಿಚಾರಗಳನ್ನು ಪ್ರಸ್ತಾಪಿಸಿ ಮತ ಗಳಿಸುವ ಉದ್ದೇಶವೂ ಪಕ್ಷಕ್ಕಿಲ್ಲ. ಅದನ್ನು ಪ್ರಣಾಳಿಕೆ ಸಮಿತಿ ಚಾಚೂತಪ್ಪದೆ ಪಾಲಿಸಿದೆ.

ಕರ್ನಾಟಕಕ್ಕೆ ಸಂಬಂಧವೇ ಇಲ್ಲದ ವಿಷಯಗಳನ್ನು ಪ್ರಸ್ತಾಪಿಸಿ ಜನರನ್ನು ಮೋಸಗೊಳಿಸುವ ಕೆಲಸವನ್ನು ನಾವು ಮಾಡಿಲ್ಲ. ಉದ್ಯೋಗ ಮತ್ತು ಆದಾಯ ಸೃಜಿಸುವ ಯೋಜನೆಗಳಿಗೆ ಆದ್ಯತೆ ನೀಡಲಾಗಿದೆ. ಜೆಡಿಎಸ್ ಸಂಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬಂದು, ಎಲ್ಲ ಭರವಸೆಗಳನ್ನೂ ಈಡೇರಿಸುತ್ತದೆ ಎಂಬ ವಿಶ್ವಾಸವಿದೆ. ನಮ್ಮ ಹೈಕಮಾಂಡ್ ಸ್ಥಳೀಯವಾಗಿಯೇ ಇರುವುದರಿಂದ ಯೋಜನೆಗಳ ಅನುಷ್ಠಾನಕ್ಕೆ ಒಪ್ಪಿಗೆ ಪಡೆಯಲು ದೆಹಲಿಗೆ ಹೋಗಬೇಕಾದ ಪರಿಸ್ಥಿತಿ ಇಲ್ಲ. ಸಮ್ಮಿಶ್ರ ಸರ್ಕಾರ ಅನಿವಾರ್ಯ ಆದರೆ ಎರಡೂ ಪಕ್ಷಗಳ ವರಿಷ್ಠರು ಚರ್ಚಿಸಿ ಯಾವ ಭರವಸೆಗಳನ್ನು ಈಡೇರಿಸಬೇಕು ಎಂಬುದನ್ನು ನಿರ್ಧರಿಸುತ್ತಾರೆ.

ಲೇಖಕ: ಜೆಡಿಎಸ್ ಪ್ರಣಾಳಿಕೆ ಸಮಿತಿ ಅಧ್ಯಕ್ಷ

‘ಖಜಾನೆಗೆ ಹೊರೆಯಾಗುವ ಆಶ್ವಾಸನೆಗಳನ್ನು ಕೊಟ್ಟಿಲ್ಲ’



• ಡಾ.ಕೆ.ಸುಧಾಕರ್

ಬಿಜೆಪಿಯ ಪ್ರಣಾಳಿಕೆ ಜನರ ಅಭಿಪ್ರಾಯ ಮತ್ತು ಪರಿಣಿತರ ಸಲಹೆಗಳನ್ನು ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಓರೆಗೆ ಹಚ್ಚಿ ಕರ್ನಾಟಕದ ಮುಂದಿನ 25 ವರ್ಷಗಳ ಸರ್ವಾಂಗೀಣ ಅಭ್ಯವೃದ್ಧಿಯ ದೂರದೃಷ್ಟಿಯೊಂದಿಗೆ ರೂಪಿಸಲಾಗಿರುವ ಸಂಕಲ್ಪ ಪತ್ರ . ಶಿಕ್ಷಣ, ಆರೋಗ್ಯ ಸೇರಿದಂತೆ 33 ವಲಯಗಳ ಪ್ರಮುಖರೊಂದಿಗೆ ಸಭೆ, 138 ವಿಧಾನಸಭಾ ಕ್ಷೇತ್ರಗಳಲ್ಲಿ ಸಭೆ, ಸಲಹಾ ಪೆಟ್ಟಿಗೆಗಳಿಂದ 6 ಲಕ್ಷ ಸಲಹೆ ಸ್ವೀಕಾರ, 40ಕ್ಕೂ ಹೆಚ್ಚು ವಲಯಗಳ ಪರಿಣಿತರಿಂದ 250 ಸಲಹೆ ಸೇರಿದಂತೆ ಹಲವಾರು ರೀತಿಯಲ್ಲಿ ಸಲಹೆ ಪಡೆದು ಪ್ರಣಾಳಿಕೆ ರೂಪಿಸಲಾಗಿದೆ. ಪ್ರತಿ ಭರವಸೆ ರೂಪಿಸುವ ಮುನ್ನ, ಇದಕ್ಕೆ ಬಜೆಟ್‌ನಲ್ಲಿ ಸಂಪನ್ಮೂಲ ಲಭ್ಯವಿದೆಯೇ ಎಂದು ದೀರ್ಘ ಚರ್ಚೆ ನಡೆಸಲಾಗಿದೆ. ರಾಜ್ಯದ ಒಟ್ಟು ಆರ್ಥಿಕ ವ್ಯವಸ್ಥೆ, ಸರ್ಕಾರದ ಖಜಾನೆಗೆ ಬರುತ್ತಿರುವ ಆದಾಯ, ಪ್ರತಿ ವರ್ಷ ಸರ್ಕಾರ ಮಾಡುವ ವೆಚ್ಚಗಳು, ಸಾಲ ಮೊದಲಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡೇ ಭರವಸೆಗಳನ್ನು ನೀಡಲಾಗಿದೆ. ಇದನ್ನು ಯಾವುದೋ ಕೊಠಡಿಯಲ್ಲಿ ನಾಲ್ಕು ಜನರು ಕುಳಿತು ರೂಪಿಸಿದ್ದಲ್ಲ. ಅಥವಾ ಚುನಾವಣಾ ರಣತಂತ್ರದ ಭಾಗವಾಗಿ ಚುನಾವಣಾ ಕಾರ್ಯತಂತ್ರ ನಿಪುಣರು ರೂಪಿಸಿದ ಅಸ್ತ್ರವಲ್ಲ.

ಕೆಪಿಸಿಸಿ ಅಧ್ಯಕ್ಷರು ಇತ್ತೀಚಿನ ಟಿ.ವಿ ಸಂದರ್ಶನದಲ್ಲಿ 200 ಯೂನಿಟ್ ಉಚಿತ ವಿದ್ಯುತ್ ಬಗ್ಗೆ ಮಾತಾಡುವುದನ್ನು ಗಮನಿಸಿದೆ. 200 ಯೂನಿಟ್‌ವರೆಗೆ ರಾಜ್ಯದ ಎಲ್ಲ ಬಳಕೆದಾರರಿಗೆ ಈ ಯೋಜನೆ ಅನ್ವಯವಾಗುವುದೋ ಅಥವಾ 200 ಯೂನಿಟ್‌ಗಿಂತ ಕಡಿಮೆ ಬಳಸುವ ಕುಟುಂಬಗಳಿಗೆ ಮಾತ್ರ ಇದು ಅನ್ವಯ ಆಗುತ್ತೋ ಎಂಬ ಬಗ್ಗೆ ಅವರಿಗೆ ಖಚಿತತೆಯೇ ಇಲ್ಲ. ಈ ರೀತಿ ಚುನಾವಣೆ ಸಮಯದಲ್ಲಿ ಘೋಷಣೆ ಮಾಡಿ, ನಂತರ ನಿರ್ಧಾರ ಮಾಡುವ ಬೇಜವಾಬ್ದಾರಿತನವನ್ನು ಪ್ರಣಾಳಿಕೆಯಲ್ಲಿ ತೋರಬಾರದು. ಬಿಜೆಪಿ ಈ ರೀತಿ ಮುಂದಾಲೋಚನೆ ಅಥವಾ ಸ್ಪಷ್ಟತೆ ಇಲ್ಲದ ಭರವಸೆ ನೀಡಿಲ್ಲ.




ಮತದಾರರು ಕೇವಲ ಪ್ರಣಾಳಿಕೆ ನೋಡಿ ಮತ ಚಲಾಯಿಸುವುದಿಲ್ಲ. ಆದರೆ ಮತ ಚಲಾಯಿಸುವ ವೇಳೆ ಪ್ರಣಾಳಿಕೆಯನ್ನೂ ಗಮನದಲ್ಲಿರಿಸಿಕೊಳ್ಳುತ್ತಾರೆ. ಪಕ್ಷದ ಸಿದ್ಧಾಂತ, ಅಭ್ಯರ್ಥಿ, ನಾಯಕತ್ವ ಮುಂತಾದ ಅನೇಕ ಅಂಶಗಳು ಮತದಾರರ ಮೇಲೆ ಪ್ರಭಾವ ಬೀರುತ್ತವೆ. ಪ್ರಣಾಳಿಕೆಯು ಒಂದು ಪಕ್ಷದ ಸಿದ್ಧಾಂತ, ಬದ್ಧತೆ, ಜನ ಕಾಳಜಿ ಹಾಗೂ ಆದ್ಯತೆಗಳನ್ನು ಎತ್ತಿ ತೋರಿಸುತ್ತದೆ. ಬಜರಂಗದಳ ನಿಷೇಧ, 34 ವರ್ಷಗಳ ಬಳಿಕ ಕೇಂದ್ರ ಸರ್ಕಾರ ತಂದ ರಾಷ್ಟ್ರೀಯ ಶಿಕ್ಷಣ ನೀತಿಯ ರದ್ದು, ಮೊದಲಾದ ಭರವಸೆಗಳು ಕಾಂಗ್ರೆಸ್‌ನ ಆದ್ಯತೆಯನ್ನು ತೋರಿಸುತ್ತದೆ. ಬಿಜೆಪಿ ಇಂತಹ ದ್ವೇಷಪೂರಿತ ರಾಜಕಾರಣದಲ್ಲಿ ನಂಬಿಕೆ ಇಟ್ಟಿಲ್ಲ. ಬಿಜೆಪಿ ಜನರ ಜೀವನ ಗುಣಮಟ್ಟ ಸುಧಾರಿಸುವ ಭರವಸೆಗಳನ್ನು ನೀಡಿದೆ. ಹಬ್ಬದ ಸಮಯದಲ್ಲಿ ಜನಸಾಮಾನ್ಯರ ಖರ್ಚಿನ ಹೊರೆ ತಗ್ಗಿಸಲು ಉಚಿತ ಸಿಲಿಂಡರ್ ನೀಡುವ ಭರವಸೆ ನೀಡಲಾಗಿದೆ. ಅಪೌಷ್ಟಿಕತೆ ನಿವಾರಣೆಗೆ ಬಡ ಕುಟುಂಬಗಳಿಗೆ ಆಹಾರ ಧಾನ್ಯಗಳ ಜೊತೆಗೆ ಸಿರಿಧಾನ್ಯ ಮತ್ತು ಹಾಲು ನೀಡುವ ಯೋಜನೆ ರೂಪಿಸಿದ್ದೇವೆ. ಇದು ಜನರ ಆರೋಗ್ಯದ ಮೇಲೆ ಮಾತ್ರವಲ್ಲದೆ ಸಿರಿಧಾನ್ಯ ಕೃಷಿ ಹಾಗೂ ಪರಿಸರ ಸಂರಕ್ಷಣೆಯ ಮೇಲೂ ಸಕಾರಾತ್ಮಕ ಪರಿಣಾಮ ಬೀರಲಿದೆ. ಇದು ಬೇರೆ ಪಕ್ಷಗಳಂತೆ ಸರ್ಕಾರಿ ಖಜಾನೆಗೆ ಹೊರೆಯಾಗುವ ಯೋಜನೆಗಳಲ್ಲ, ಬದಲಾಗಿ ನಮ್ಮ ಆರ್ಥಿಕತೆಗೆ ಉತ್ತೇಜಕವಾಗಿ ಪರಿಣಮಿಸಲಿದೆ ಹಾಗೂ ಸಾಮಾಜಿಕ ಮತ್ತು ಆರ್ಥಿಕವಾಗಿ ಸಕಾರಾತ್ಮಕ ಪರಿಣಾಮ ಬೀರುವಂತಹ ಯೋಜನೆಗಳು. ಕರ್ನಾಟಕದ ಪ್ರಬುದ್ಧ ಮತ್ತು ಪ್ರಜ್ಞಾವಂತ ಮತದಾರರು ಇವೆಲ್ಲವನ್ನೂ ಗಮನಿಸಿ, ಬೇರೆ ಪಕ್ಷಗಳ ಪ್ರಣಾಳಿಕೆಗಳೊಂದಿಗೆ ತುಲನೆ ಮಾಡಿ ವಿಶ್ಲೇಷಣೆ ಮಾಡುತ್ತಾರೆ. ಬಿಜೆಪಿ ಪ್ರಣಾಳಿಕೆಯಲ್ಲಿ ಇರುವುದೆಲ್ಲವೂ ವಾಸ್ತವ ಪ್ರಜ್ಞೆಯಿಂದ ಕೂಡಿದ್ದು, ಅನುಷ್ಠಾನ ಮಾಡಲೆಂದೇ ನೀಡಲಾಗಿದೆ. ಚುನಾವಣಾ ಗಿಮಿಕ್‌ಗಾಗಿ ಭರವಸೆ ನೀಡುವಷ್ಟು ಕೆಳಮಟ್ಟದ ರಾಜಕಾರಣವನ್ನು ಬಿಜೆಪಿ ಮಾಡುವುದಿಲ್ಲ.

ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಬಂದರೆ ಭರವಸೆ ಈಡೇರಿಕೆ ಹೇಗೆ ಎಂಬ ಪ್ರಶ್ನೆಯೂ ಕೇಳಿಬಂದಿದೆ. ಆದರೆ ಇಂತಹ ಸನ್ನಿವೇಶವೇ ರಾಜ್ಯದಲ್ಲಿ ಉದ್ಭವ ಆಗುವುದಿಲ್ಲ. 2014ರ ಮುಂಚೆ ಸುಮಾರು 25 ವರ್ಷಗಳ ಕಾಲ ನಮ್ಮ ದೇಶ ಸಮ್ಮಿಶ್ರ ಸರ್ಕಾರಗಳನ್ನು ಕಂಡಿತ್ತು. ಆದರೆ 2014ರ ನಂತರ ಸತತವಾಗಿ ಎರಡು ಬಾರಿ ಪೂರ್ಣ ಬಹುಮತದ ಬಿಜೆಪಿ ಸರ್ಕಾರ ಬಂತು. ಹಾಗಾಗಿ ಆಡಳಿತ ವಿರೋಧಿ ಅಲೆ ಅನ್ನುವುದು ಸದಾ ಅನ್ವಯವಾಗುವುದಿಲ್ಲ, ನಮ್ಮ ರಾಜ್ಯದ ಜನತೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಡಬಲ್ ಎಂಜಿನ್ ಸರ್ಕಾರದಿಂದ ಆಗುವ ಲಾಭವನ್ನು ಅರಿತಿದ್ದಾರೆ. ಆದ್ದರಿಂದ ನಮಗೆ ಆಡಳಿತ ಪರ ಅಲೆ ಇದೆ. ಕನ್ನಡ ನಾಡಿನ ಜನತೆ ಬಿಜೆಪಿಗೆ ಮತ್ತೊಮ್ಮೆ ಆಶೀರ್ವಾದ ಮಾಡಲಿದ್ದು, ಪೂರ್ಣ ಬಹುಮತದ ಬಿಜೆಪಿ ಸರ್ಕಾರ ರಚನೆಯಾಗಿ ಈ ಎಲ್ಲಾ ಭರವಸೆಗಳನ್ನು ಸಾಕಾರಗೊಳಿಸಲಿದೆ ಎನ್ನುವುದರಲ್ಲಿ ಯಾವುದೇ ಅನುಮಾನ ಬೇಡ.

ಲೇಖಕ: ಬಿಜೆಪಿ ಪ್ರಣಾಳಿಕೆ ಸಮಿತಿ ಸಂಚಾಲಕ

ಪದಬಂಧ 5310

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಚುಂಬನದೊಂದಿಗೆ ಸಿಕ್ಕಿದ್ದು ನವರತ್ನಗಳಲ್ಲೊಂದು! (2)
2.ಕಾಯ ಬಗ್ಗಿಸಿ ಮಾಡಿರುವ ಕೆಲಸ (3)
4.ಕಣದಲ್ಲಿ ಸಿಕ್ಕಿರುವ ಹತೋಟಿ (4)
6.ಇದು ವೀರಶೈವರ ಸ್ಮಶಾನ (4)
8.ರಾವು ಬಡಿದಂತಿರುವ ಕುದುರೆ ಸವಾರ (3)
9.ಇವನು ಜ್ಞಾನವಿಲ್ಲದವನು (3)
11.ಮಂಜ ನಡುವಿದ್ದಾಗಲೇ ಇದು ಸೂಕ್ತವಾದುದು (4)
13.ಮರದೊಳಗೆ ಸುತ್ತುತ್ತಿರುವ ದುಂಬಿ (4)
15.ಲೋಹದ ಅಥವಾ ಮರದ ಹಾಳೆ (3)
16.ಖನಿಜಗಳ ನೆಲೆ (2)

ಮೇಲಿಂದ ಕೆಳಕ್ಕೆ

1.ದುಮುಗುಟ್ಟುತ್ತಿರುವ ಅಜ್ಜ! (3)
2.ರಾಜಕಾರಣದಲ್ಲಿರುವ ಉದ್ದೇಶ! (3)
3.ಕರುವನ್ನು ಮಾರುವಾತನ ಷರತ್ತು! (3)
5.ಕಾವು ಬಡಿದರೂ ತೋರಿಸಿದ ಡೌಲು! (3)
7.ನಿಯಮಿಸಿದಾತ ತೋರಿಸಿದ ಬಂಗಾರ (3)
8.ರಾಯರಿಂದ ಬಂದಿರುವ ನಿರೂಪ (3)
10.ಪಕ ಪಕ ನಕ್ಕಾಗಲೇ ಆಗಿರುವ ನೆನಪು (3)
12.ಸಹನೀಯವೆನಿಸಿದ್ದಕ್ಕೇ ಇಷ್ಟು ಹತ್ತಿರ (3)
13.ಮೆಲ್ಲಗೆ ಕಿತ್ತು ಮುಡಿದ ಸುವಾಸಿತ ಹೂ (3)
14.ಮಣಿ ಧರಿಸಿದ ಚಲುವೆ (3)

5309ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಣಯಕಲಹ
4.ರಸಮಯ 5.ವಾಚಕ
7.ಸ್ಥಾವರ 10.ಲುಬ್ಧಕ
12.ವಲ್ಲರಿ
13.ಬಾಲರವಿ
15.ಪ್ರತ್ಯಕ್ಷಪ್ರಮಾಣ

ಮೇಲಿಂದ ಕೆಳಕ್ಕೆ:
1.ಪ್ರತಿವಾದಿ 2.ಹರ
3.ಆಯುಷ್ಕರ್ಮ
6.ಕಮಂಡಲು 7.ಸ್ಥಾಪಕ
8.ರಕ್ತಸ್ರಾವ
9.ಪುಷ್ಪಬಾಣ
11.ಹರಿವಾಣ 14.ವಿಪ್ರ

ಸುಡೊಕು 5696

	7			2				5
3		6	5		8			
	4			7		2		
	6				5			
9		1		8			6	2
4			2			1	3	
		2	3		7		5	
7	1			5		6		3
5		3	4					1

5695 ಸುಡೊಕು

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಮೇ 6, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಕೃಷ್ಣ ಪ್ರತಿಪದ್ ಗಂ. 21-53 ನಕ್ಷತ್ರ: ವಿಶಾಖಾ ಗಂ. 21.13 ಯೋಗ: ವ್ಯತೀಪಾತ ಗಂ. 07-30 ನಂತರ ವರಿಯಾನ್, ಗಂ. 29-21 ಕರಣ: ಬಾಲವ ಗಂ. 10-32, ಮೇಷ ಮಾಸದ 22 ನೇ ದಿನ, ಮಳೆನಕ್ಷತ್ರ: ಭರಣಿ 3. ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-11 ಸೂರ್ಯಾಸ್ತ : 06-43
ಮುಸ್ಲಿಂ ದಿನಾಂಕ : 15 ಶವ್ವಾಲ್
ಅದೃಷ್ಟ ಸಂಖ್ಯೆ : 1, 9

ಮೇಷ: ಸ್ನೇಹಿತರ ಭರವಸೆಯ ಮಾತುಗಳು ಸೋಲುಗಳನ್ನು ಮೆಟ್ಟಿ ಆಶಾ ಭಾವನೆ ತರುತ್ತದೆ. ಮನಸ್ಸಿನಲ್ಲಿ ನೋವಿದ್ದರೂ ಇತರರ ಎದುರು ನಗುಮೊಗದ ಮುಖವಾಡವನ್ನು ಧರಿಸಬೇಕಾಗುವಂಥ ಪರಿಸ್ಥಿತಿ ನಿಮ್ಮದಾಗುತ್ತದೆ.

ವೃಷಭ: ನಿಶ್ಚಿತ ಗುರಿ ಸಾಧಿಸಲು ಬಹಳ ಶ್ರಮಪಡಬೇಕಾಗುವುದಿಲ್ಲ. ಜಯದ ಜೊತೆಗೆ ನೆಮ್ಮದಿ ಕೂಡ ನಿಮ್ಮದಾಗುತ್ತದೆ. ನಿಮ್ಮ ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ನಿಮಗೆ ಹೆಚ್ಚು ಆನಂದ ಸಿಗಬಹುದು.

ಮಿಥುನ: ಎಣ್ಣೆಯಲ್ಲಿ ಕರಿದ ಖಾದ್ಯಗಳ ಸೇವನೆಯಿಂದ ಅನಾರೋಗ್ಯ ಎದುರಾಗಬಹುದು. ಗುರುಗಳ ಮನಸ್ಸಿಗೆ ನೋವು ಉಂಟುಮಾಡುವಂತಹ ಕೆಲಸವನ್ನು ಮಾಡದಿರಿ.

ಕರ್ಕಾಟಕ: ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಜವಾಬ್ದಾರಿ ವಹಿಸಬೇಕಾಗುವುದು. ಆತ್ಮೀಯರೊಂದಿಗಿಗೆ ವ್ಯವಹಾರಗಳ ಕುರಿತು ಅಥವಾ ವ್ಯವಹಾರದಲ್ಲಿನ ಪಾಲುದಾರಿಕೆಯ ಸಲುವಾಗಿ ಚರ್ಚಿಸಬಹುದು.

ಸಿಂಹ: ಸಹವರ್ತಿಗಳ ಜೊತೆಯಲ್ಲಿ ಉತ್ತಮವಾದ ಸಂಪರ್ಕ ಬೆಳೆಸಿಕೊಳ್ಳುವುದು ಸುಲಭ ಸಾಧ್ಯ. ಹಣಕಾಸಿನ ವಿವಾದಗಳನ್ನು ಬಗೆಹರಿಸಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಉತ್ತಮ ನೆನಪಿನಶಕ್ತಿ, ಜ್ಞಾನ ದೊರೆತು ಆನಂದವಾಗಲಿದೆ.

ಕನ್ಯಾ: ಕೆಲವು ವಿಷಯಗಳು ಬೇಸರ ಹುಟ್ಟಿಸಿದರೂ, ಪ್ರೀತಿ ಪಾತ್ರರೊಂದಿಗೆ ಕಳೆಯುವ ಸಮಯ ಲವಲವಿಕೆ ಮೂಡಿಸುತ್ತದೆ. ಸಂಗೀತ ಕಛೇರಿ, ನೃತ್ಯಕಾರ್ಯಕ್ರಮ ನೀಡುವ ಕಲಾವಿದರಿಗೆ ಬೇಡಿಕೆ ಹೆಚ್ಚಲಿದೆ.

ತುಲಾ: ಕೆಲಸಗಳನ್ನು ಸಾಧಿಸಿಕೊಳ್ಳ ಬೇಕಿದ್ದರೆ ಅವಿರತ ಶ್ರಮ ಅಗತ್ಯ. ವೃತ್ತಿ ಜೀವನದಲ್ಲಿ ಧೈರ್ಯದಿಂದ ಪರಿಣಾಮಕಾರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಕೆಲಸವನ್ನು ಗುತ್ತಿಗೆ ನೀಡುವುದು ಸರಿಯಲ್ಲ.

ವೃಶ್ಚಿಕ: ಕಟ್ಟಡದ ಕಂಟ್ರಾಕ್ಟರ್‌ಗಳಿಗೆ ಕೆಲಸಗಾರರ ಕೊರತೆ ಕಾಣಲಿದೆ ಅಥವಾ ಪರಿಣತ ಕೆಲಸಗಾರರ ಗೈರುಹಾಜರಿಯಿಂದ ನಷ್ಟ ಸಂಭವಿಸುವುದು. ಕುಟುಂಬದವರೊಡನೆ ಸಂಜೆಯನ್ನು ಸಂತೋಷದಿಂದಕಳೆಯುವಂತಾಗಲಿದೆ.

ಧನು: ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆಯಾಗಿರುವಂತೆ ತೋರಿ ಮನಸ್ಸಿಗೆ ನಿರಾಳವಾಗುವುದು. ಸರಳಜೀವನ ನಡೆಸುವುದರಿಂದಾಗಿ ಶ್ರೀಮಂತಿಕೆ ಗಳಿಸಬಹುದು.

ಮಕರ: ದೈವಾನುಗ್ರಹದಿಂದ ಸಕಲ ಅಭೀಷ್ಟವು ಸಿದ್ಧಿಯಾಗಿ ಸಂತೃಪ್ತಿ ಪಡೆಯುತ್ತೀರಿ. ಕೌಟುಂಬಿಕ ಸಮಸ್ಯೆಯು ನೂತನ ಆಯಾಮವನ್ನು ಹೊಂದಲಿದೆ. ಯೋಜನೆಗಳು ಪೂರ್ವ ನಿಯೋಜಿತವಾಗಿ ವ್ಯವಸ್ಥಿತ ರೂಪದಲ್ಲಿ ಸಾಗಲಿವೆ

ಕುಂಭ: ನಿಷ್ಠೆ ಹಾಗೂ ಬುದ್ಧಿವಂತಿಕೆಗೆ ಒಳ್ಳೆಯ ಪ್ರತಿಫಲ ಸಿಗಲಿದೆ. ಹಣದ ವಿಷಯದಲ್ಲಿ ದಾಕ್ಷಿಣ್ಯದ ಮಾತುಗಳಿಗೆ ಮರುಳಾಗಬೇಡಿ. ಸತತ ಪ್ರಯತ್ನದಿಂದ ಕಳೆದು ಹೋಗಿದ್ದ ವಸ್ತುಗಳು ಸಿಗಲಿದೆ.

ಮೀನ: ಪ್ರಾಪಂಚಿಕ ವಿಷಯಗಳಲ್ಲಿ ಮಹತ್ವಕಾಂಕ್ಷೆ ಇರುವವರಿಗೆ ಶುಭ ದಿನ. ಕೃಷಿ ಕೆಲಸಗಳಿಗೆ ಹೆಚ್ಚಿನ ಸಮಯ ಸಿಗುವುದು. ಅನಿವಾರ್ಯ ಪ್ರಯಾಣವಿದ್ದಲ್ಲಿ, ರಾಹುಕಾಲದ ಮೊದಲು ಅಥವಾ ನಂತರ ಪ್ರಯಾಣ ಬೆಳೆಸಿ.


ಶಿವಮೊಗ್ಗ ನೇಪಥ್ಯಕ್ಕೆ ಸರಿದ ಯಡಿಯೂರಪ್ಪ, ಈಶ್ವರಪ್ಪ, ಕಾಗೋಡು ತಿಮ್ಮಪ್ಪ • ಎರಡನೇ ಸಾಲಿನ ನಾಯಕರದೇ ಪೈಪೋಟಿ

ಅತಿರಥರಿಲ್ಲದ ಕಣ; ಹಿಂದುತ್ವವೇ ಪಾರಮ್ಯ

• ವೆಂಕಟೇಶ ಜಿ.ಎಚ್



ಬಿ.ವೈ. ವಿಜಯೇಂದ್ರ | ಆಯನೂರು ಮಂಜುನಾಥ್ | ಕುಮಾರ ಬಂಗಾರಪ್ಪ | ಕಿಮ್ಮನೆ ರತ್ನಾಕರ್ | ಆರಗ ಜ್ಞಾನೇಂದ್ರ | ಶಾರದಾ ಪೂರ್ಯಾನಾಯ್ಕ್ | ಮಧು ಬಂಗಾರಪ್ಪ



ಶಿವಮೊಗ್ಗ: ಬಿಜೆಪಿಯ ಜೋಡೆತ್ತುಗಳಾದ ಬಿ.ಎಸ್.ಯಡಿಯೂರಪ್ಪ, ಕೆ.ಎಸ್.ಈಶ್ವರಪ್ಪ ಹಾಗೂ ಕಾಂಗ್ರೆಸ್‌ನ ಹಿರಿಯ ಮುಖಂಡ ಕಾಗೋಡು ತಿಮ್ಮಪ್ಪ ನಾಲ್ಕು ದಶಕಗಳ ನಂತರ ಮೊದಲ ಬಾರಿಗೆ ಕಣದಲ್ಲಿ ಇಲ್ಲ. ಹೀಗಾಗಿ ಜಿಲ್ಲೆಯಲ್ಲಿ ಈ ಬಾರಿ ವ್ಯಕ್ತಿಗತ ವರ್ಚಸ್ಸು ಗೌಣ. ಪಕ್ಷ ರಾಜಕಾರಣ ಮತ್ತು ಹಿಂದುತ್ವದ ಕಾರ್ಯಸೂಚಿಯೇ ಪ್ರಧಾನ.

ಶರಾವತಿ ಮುಳುಗಡೆ ಸಂತ್ರಸ್ತರ ಸಮಸ್ಯೆ, ಬಗರ್‌ಹುಕುಂ ಸಾಗುವಳಿದಾರರ ಸಂಕಷ್ಟ, ಭದ್ರಾವತಿಯ ವಿಐಎಸ್‌ಎಲ್ ಮುಚ್ಚುತ್ತಿರುವುದು, ಅಡಿಕೆಗೆ ಹಳದಿ ರೋಗದ ಬಾಧೆ, ಚುನಾವಣೆ ಘೋಷಣೆ ಮುನ್ನ ಮುನ್ನೆಲೆಗೆ ಬರುತ್ತಿದ್ದವು. ಈಗ ಪಾಕಿಸ್ತಾನ, ಕಾಶ್ಮೀರ, ಪಿಎಫ್‌ಐ, ಬಜರಂಗದಳ ನಿಷೇಧದ ಹೇಳಿಕೆ, ಹರ್ಷನ ಕೊಲೆ, 40 ಪರ್ಸೆಂಟ್ ಕಮಿಷನ್ ವಿಚಾರಗಳೇ ಸದ್ದು ಮಾಡುತ್ತಿವೆ.

ಶಿವಮೊಗ್ಗ ನಗರ ಕ್ಷೇತ್ರವು ಶಾಸಕ ಕೆ.ಎಸ್. ಈಶ್ವರಪ್ಪ ರಾಜಕೀಯ ನಿವೃತ್ತಿ ಫಲವಾಗಿ ಕಳೆಗುಂದಿದೆ. ಪುತ್ರನಿಗೆ ಟಿಕೆಟ್ ಸಿಗದಿದ್ದರೂ 'ಮಾನಸ ಪುತ್ರ' ಎಸ್.ಎನ್.ಚನ್ನಬಸಪ್ಪ-ಗೆ (ಚನ್ನಿ) ಅವಕಾಶ ಸಿಕ್ಕಿದೆ. ಟಿಕೆಟ್ ಕೈ ತಪ್ಪಿ ಮಂಕಾಗಿದ್ದ ಈಶ್ವರಪ್ಪಗೆ ಪ್ರಧಾನಿ ನರೇಂದ್ರ ಮೋದಿ ಕರೆ ಮಾಡಿ ಉತ್ತೇಜಿಸಿದ್ದಾರೆ. ಹೀಗಾಗಿ 'ಬಿಜೆಪಿಯ ವಿಜಯ ರಥಕ್ಕೆ ನಾನೇ ಸಾರಥಿ' ಎಂದು ಘೋಷಿಸಿ ಸಕ್ರಿಯರಾಗಿದ್ದಾರೆ.

'ಈಶ್ವರಪ್ಪ ಶಸ್ತ್ರತ್ಯಾಗ ಮಾಡಿದ್ದಾರೆ. ಅವರಿಗೆ ಹತ್ತಿರವಾಗಿರುವ ಚನ್ನಿಯನ್ನು ಸದೆಬಡಿಯುವ' ಎಂಬ ಉಮೇದಿಯೊಂದಿಗೆ ವಿಧಾನ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುವ ಆಯನೂರು ಮಂಜುನಾಥ್ ಜೆಡಿಎಸ್‌ನಿಂದ ಸ್ಪರ್ಧಿಸಿದ್ದಾರೆ. ಹೊಸ ಮುಖ ಎಚ್.ಸಿ. ಯೋಗೀಶ್ (ಮಾಜಿ ಶಾಸಕ ಎಚ್.ಎಂ.ಚಂದ್ರಶೇಖರಪ್ಪ ಪುತ್ರ) ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ. ಮೂವರೂ ಲಿಂಗಾಯತರು ಎಂಬುದು ವಿಶೇಷ.

ಮುಸ್ಲಿಮರ ಮತಗಳು ಇಡಿಯಾಗಿ ಧಕ್ಕಿದರೆ ಕಾಂಗ್ರೆಸ್ ಇಲ್ಲವೇ ಜೆಡಿಎಸ್ ಅಭ್ಯರ್ಥಿಯ ಗೆಲುವು ನಿಶ್ಚಿತ. ಜಾತಿ ಗೌಣವಾಗಿಸಿ ಹಿಂದುತ್ವದ ನೆಲೆಯಲ್ಲಿ ಬಿಜೆಪಿ ಇಲ್ಲಿ ಮತಬ್ಯಾಂಕ್ ರೂಪಿಸಿ ಕೊಂಡಿದೆ. ಮುಸ್ಲಿಮರ ಮತಗಳು ಕಾಂಗ್ರೆಸ್– ಜೆಡಿಎಸ್ ನಡುವೆ ಹಂಚಿಕೆಯಾದರೆ ಬಿಜೆಪಿಯ ಗೆಲುವು ಸುಲಭ. ಮಾಜಿ ಶಾಸಕ ಕೆ.ಬಿ.ಪ್ರಸನ್ನಕುಮಾರ್ ಜೆಡಿಎಸ್ ಸೇರ್ಪಡೆ ಆಗಿರುವುದು ಆಯನೂರು ಉತ್ಸಾಹ ಹೆಚ್ಚಿಸಿದೆ. ಸಾದರ ಲಿಂಗಾಯತ ಒಳಪಂಗಡದ ಮತ ಕ್ರೋಢೀಕರಣದತ್ತ ಎಚ್.ಸಿ.ಯೋಗೀಶ್ ಮುಂದಾಗಿದ್ದಾರೆ. ಟಿಕೆಟ್ ವಂಚಿತರಲ್ಲಿ ಕೆಲವರ 'ಒಳಪೆಟ್ಟು' ಕಾಂಗ್ರೆಸ್‌ನ ವೇಗಕ್ಕೆ ತೊಡಕಾಗಿದೆ.

ಶಿವಮೊಗ್ಗ ಗ್ರಾಮೀಣ ಕ್ಷೇತ್ರ ಪರಿಶಿಷ್ಟ ಜಾತಿಗೆ ಮೀಸಲಾಗಿದೆ. ಬಿಜೆಪಿಯಿಂದ ಶಾಸಕ ಕೆ.ಬಿ.ಅಶೋಕ ನಾಯ್ಕ, ಜೆಡಿಎಸ್‌ನಿಂದ ಶಾರದಾ ಪೂರ್ಯಾನಾಯ್ಕ, ಕಾಂಗ್ರೆಸ್‌ನಿಂದ ಡಾ.ಶ್ರೀನಿವಾಸ್ ಕರಿಯಣ್ಣ (ಮಾಜಿ ಶಾಸಕ ಕರಿಯಣ್ಣ ಪುತ್ರ) ಮರು ಸ್ಪರ್ಧೆ ಮಾಡಿದ್ದಾರೆ.

ಅಭಿವೃದ್ಧಿ ಕಾರ್ಯ, ನರೇಂದ್ರ ಮೋದಿ ವರ್ಚಸ್ಸು ಒರೆಗಿಟ್ಟು ಅಶೋಕ ನಾಯ್ಕ ಪ್ರಚಾರ ನಡೆಸಿದ್ದಾರೆ. ಆಯನೂರು ಮಂಜುನಾಥ್ ಪಕ್ಷಕ್ಕೆ ಬಂದಿರುವುದು ಶಾರದಾ ಪೂರ್ಯಾನಾಯ್ಕ ಉತ್ಸಾಹ ಇಮ್ಮಡಿಯಾಗಿಸಿದೆ. ಒಳಮೀಸಲಾತಿಯ ಕಾರಣಕ್ಕೆ ಬಿಜೆಪಿ ವಿರುದ್ಧ ಮುನಿಸಿಕೊಂಡಿರುವ ಲಂಬಾಣಿ ಹಾಗೂ ಭೋವಿ ಸಮುದಾಯದ ಮತ ಸೆಳೆಯಲು ಕಾಂಗ್ರೆಸ್ ಹಾಗೂ ಜೆಡಿಎಸ್ ಕಸರತ್ತು ನಡೆಸಿವೆ.

ಈಡಿಗ ಸಮುದಾಯ ಪ್ರಾಬಲ್ಯದ ಕ್ಷೇತ್ರ ಸಾಗರ. ಬ್ರಾಹ್ಮಣರು, ಲಿಂಗಾಯತರು ಗಣನೀಯವಾಗಿದ್ದಾರೆ. ಬೇಳೂರು ಗೋಪಾಲಕೃಷ್ಣ ಕಾಂಗ್ರೆಸ್ ಟಿಕೆಟ್ ಪಡೆದಾಗ ಕಾಗೋಡು ತಿಮ್ಮಪ್ಪ ನೇತೃತ್ವದಲ್ಲಿ ಉಳಿದ ಆಕಾಂಕ್ಷಿಗಳು ಬಂಡೇಳುತ್ತಾರೆ ಎಂದು ವಿರೋಧಿಗಳು ನಿರೀಕ್ಷಿಸಿದ್ದರು. ಮಗಳು ಮುನಿಸಿಕೊಂಡರೂ (ಡಾ.ರಾಜನಂದಿನಿ) ಸೋದರಳಿಯನನ್ನು (ಗೋಪಾಲಕೃಷ್ಣ) ಬಹಿರಂಗವಾಗಿ ತಬ್ಬಿಕೊಂಡ ಕಾಗೋಡು, ಬೆಂಬಲ ವ್ಯಕ್ತಪಡಿಸಿದರು. ಹೀಗಾಗಿ ಬಿಜೆಪಿಯಿಂದ ಮರು ಆಯ್ಕೆ ಬಯಸಿರುವ ಶಾಸಕ ಹರತಾಳು ಹಾಲಪ್ಪಗೆ ಕ್ಷೇತ್ರದಲ್ಲಿ ಸವಾಲು ಹೆಚ್ಚಿದೆ.

ಕ್ಷೇತ್ರದ 'ಅಭಿವೃದ್ಧಿ'ಯನ್ನೇ ಮುಂದಿಟ್ಟು ಕೊಂಡು ಹಾಲಪ್ಪ ಮತ ಕೇಳುತ್ತಿದ್ದಾರೆ. ಸಂಘಟನೆ ದೃಷ್ಟಿಯಿಂದಲೂ ಬಿಜೆಪಿ ಬಲ ವಾಗಿದೆ. ಬ್ರಾಹ್ಮಣರು, ಲಿಂಗಾಯತರಿಗೆ ವಿರುದ್ಧ ವಾಗಿ ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನ ಸಂಸ್ಥೆಯ (ಎಂಡಿಎಫ್) ವಿಚಾರದಲ್ಲಿ ಶಾಸಕ ಹಾಲಪ್ಪ ಹಸ್ತಕ್ಷೇಪ ಮಾಡಿದ್ದರು. ಸಿಗಂದೂರು ಕ್ಷೇತ್ರದ ವಿಚಾರದಲ್ಲೂ ಈಡಿಗ ಸಮುದಾಯದ ಪರ ಗಟ್ಟಿಯಾಗಿ ನಿಲ್ಲಲಿಲ್ಲ ಎಂಬ ಆರೋಪವನ್ನು ಕಾಂಗ್ರೆಸ್ ಮುನ್ನೆಲೆಗೆ ತಂದಿದೆ.

ಆಮ್ ಆದ್ಮಿ ಪಾರ್ಟಿ ಇಲ್ಲಿ ಹೆಚ್ಚು ಸದ್ದು ಮಾಡಿದೆ. ವಕೀಲ ಎಸ್.ದಿವಾಕರ್ ಸ್ಪರ್ಧಿಸಿದ್ದಾರೆ. ಪಕ್ಷೇತರ ಅಭ್ಯರ್ಥಿ, ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷ ತೀ.ನಾ. ಶ್ರೀನಿವಾಸ್, ಜೆಡಿಎಸ್‌ನ ಸೈಯದ್ ಜಾಕೀರ್ ಬಿಜೆಪಿ, ಕಾಂಗ್ರೆಸ್‌ಗೆ ಬಿಸಿ ತುಪ್ಪವಾಗಿದ್ದಾರೆ.

ಸೊರಬ ಕ್ಷೇತ್ರ ಮತ್ತೊಮ್ಮೆ ಸಹೋದರರ ಸವಾಲಿಗೆ ತೆರೆದುಕೊಂಡಿದೆ. ಮಧು ಬಂಗಾರಪ್ಪ ಮೊದಲ ಬಾರಿಗೆ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದಾರೆ. ಶಾಸಕ ಕುಮಾರ್ ಬಂಗಾರಪ್ಪ ಬಿಜೆಪಿ ಅಭ್ಯರ್ಥಿ. ಜೆಡಿಎಸ್‌ನಿಂದ ಬಾಸೂರು ಚಂದ್ರೇಗೌಡ ಸ್ಪರ್ಧಿಸಿದ್ದಾರೆ. ಕಳೆದ ಬಾರಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ರಾಜು ತಲ್ಲೂರು, ಈಗ ಬಿಜೆಪಿಯಲ್ಲಿದ್ದಾರೆ. ಇದು ಕುಮಾರ್ ಬಲ ಹೆಚ್ಚಿಸಿದ್ದರೂ, ಬಿಜೆಪಿಯ ಭಿನ್ನರ ಬಣ ನಮೋ ವೇದಿಕೆ ಅವರಿಗೆ ಮಗ್ಗಲು ಮುಳ್ಳಾಗಿದೆ.

ಕ್ಷೇತ್ರದಲ್ಲಿ ಆಗಿರುವ ಅಭಿವೃದ್ಧಿ ಪಟ್ಟಿ ಹಿಡಿದು ಕುಮಾರ್ ಮತದಾರರ ಮನೆಬಾಗಿಲಿಗೆ ಹೋಗುತ್ತಿದ್ದಾರೆ. ಬಗರ್‌ಹುಕುಂ ಸಾಗುವಳಿದಾರರು, ಶರಾವತಿ ಮುಳುಗಡೆ ಸಂತ್ರಸ್ತರ ಸಮಸ್ಯೆ ಮುಂದಿಟ್ಟುಕೊಂಡು ಮಧು ಪಾದಯಾತ್ರೆ ಮಾಡಿದ್ದಾರೆ. ಇಲ್ಲಿ ಈಡಿಗ ಸಮುದಾಯದ ಪ್ರಾಬಲ್ಯವಿದ್ದು, ಮಧು ಹಾಗೂ ಕುಮಾರ್ ನಡುವೆ ಸ್ಪರ್ಧೆ ಇದೆ.

ತೀರ್ಥಹಳ್ಳಿಯಲ್ಲಿ ಬಿಜೆಪಿಯಿಂದ ಗೃಹ ಸಚಿವ ಆರಗ ಜ್ಞಾನೇಂದ್ರ, ಕಾಂಗ್ರೆಸ್‌ನಿಂದ ಮಾಜಿ ಸಚಿವ ಕಿಮ್ಮನೆ ರತ್ನಾಕರ ಕಣದಲ್ಲಿದ್ದಾರೆ. ಇದು ಕೊನೆಯ ಚುನಾವಣೆ ಎಂದು ಮತದಾರರನ್ನು ಇಬ್ಬರೂ ಭಾವನಾತ್ಮಕವಾಗಿ ಸೆಳೆಯುತ್ತಿದ್ದಾರೆ. ಕಳೆದ ಬಾರಿ ಜೆಡಿಎಸ್‌ನಲ್ಲಿದ್ದ ಆರ್.ಎಂ. ಮಂಜುನಾಥಗೌಡ ಈ ಬಾರಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು. ಡಿ.ಕೆ. ಶಿವಕುಮಾರ್ ಸಂಧಾನದ ಫಲವಾಗಿ ಮಂಜುನಾಥಗೌಡ ಕಿಮ್ಮನೆ ಪರ ಚುನಾವಣೆ ಉಸ್ತುವಾರಿ ವಹಿಸಿಕೊಂಡಿದ್ದಾರೆ. ಒಕ್ಕಲಿಗ ಸಮುದಾಯದ ಪ್ರಾಬಲ್ಯದ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಕೃಷಿಕ ರಾಜಾರಾಮ್ ಸ್ಪರ್ಧಿಸಿದ್ದಾರೆ.

ವಿಐಎಸ್‌ಎಲ್ ಕಾರ್ಖಾನೆ ಮುಚ್ಚುವ ನಿರ್ಧಾರವೇ ಭದ್ರಾವತಿಯಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್‌ಗೆ ಚುನಾವಣೆಯ ಅಸ್ತ್ರ. ಕಾಂಗ್ರೆಸ್‌ನಿಂದ ಶಾಸಕ ಬಿ.ಕೆ. ಸಂಗಮೇಶ, ಜೆಡಿಎಸ್‌ನಿಂದ ಶಾರದಾ ಅಪ್ಪಾಜಿಗೌಡ, ಬಿಜೆಪಿಯಿಂದ ಹೊಸ ಮುಖ ಮಂಗೋಟೆ ರುದ್ರೇಶ್ ಕಣದಲ್ಲಿದ್ದಾರೆ. ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳು ಲಿಂಗಾಯತರು.

ಜೆಡಿಎಸ್ ಈ ಬಾರಿ ಅಪ್ಪಾಜಿಗೌಡ ಇಲ್ಲದೇ ಚುನಾವಣೆ ಎದುರಿಸುತ್ತಿದೆ. ಪತ್ನಿ ಶಾರದಾ ಅಭ್ಯರ್ಥಿ. ಪತಿಯ ಸಾವಿನ ಅನುಕಂಪ, ಕ್ಷೇತ್ರದಲ್ಲಿನ ಆಡಳಿತ ವಿರೋಧಿ ಅಲೆ ಅವರ ಬೆನ್ನಿಗಿದೆ. ಎದುರಾಳಿ ಅಪ್ಪಾಜಿಗೌಡ ಅಲ್ಲ ಎಂಬುದೇ ಗೆಲುವಿಗೆ ಹಾದಿ ಎಂಬುದು ಕಾಂಗ್ರೆಸ್ ಲೆಕ್ಕಾಚಾರ. ಕ್ಷೇತ್ರದ ಮತದಾರರು ಇಲ್ಲಿ ಬಿಜೆಪಿಗೆ ಮೊದಲಿನಿಂದಲೂ ಮಣೆ ಹಾಕಿಲ್ಲ. ಒಕ್ಕಲಿಗರು, ಲಿಂಗಾಯತರು ಗಣನೀಯವಾಗಿದ್ದು, ತಮಿಳರು, ಮುಸ್ಲಿಮರ ಮತಗಳು ನಿರ್ಣಾಯಕ.

ವಿಜಯೇಂದ್ರ ಹಾದಿಗೆ 'ಅನುಕಂಪ'ದ ತೊಡಕು



ನಾಗರಾಜಗೌಡ

ಶಿಕಾರಿಪುರದಲ್ಲಿ ಬಿ.ವೈ.ವಿಜಯೇಂದ್ರ ಬಿಜೆಪಿ ಅಭ್ಯರ್ಥಿ. ಕಳೆದ ಬಾರಿ ಯಡಿಯೂರಪ್ಪ ವಿರುದ್ಧ ಸೋಲು ಕಂಡಿದ್ದ ಗೋಣಿ ಮಾಲತೇಶ್ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದಾರೆ. ಕಾಂಗ್ರೆಸ್ ಟಿಕೆಟ್ ಸಿಗದೇ ನಾಗರಾಜಗೌಡ ಸ್ವತಂತ್ರವಾಗಿ ಕಣಕ್ಕಳಿದಿದ್ದಾರೆ. ವಿಜಯೇಂದ್ರ ಹಾಗೂ ನಾಗರಾಜಗೌಡ ಲಿಂಗಾಯತರು. ಗೋಣಿ ಮಾಲತೇಶ್ ಕುರುಬರು.

ಯಡಿಯೂರಪ್ಪ ಕುಟುಂಬದ ರಾಜಕೀಯ ವಿರೋಧಿ, ವಿಧಾನಪರಿಷತ್ ಮಾಜಿ ಸದಸ್ಯ ಶಾಂತವೀರಪ್ಪ ಗೌಡ ಸಹೋದರನ ಮಗ ನಾಗರಾಜಗೌಡ. ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾದರ ಲಿಂಗಾಯತ ಸಮುದಾಯ ಇದ್ದರೂ ಕಾಂಗ್ರೆಸ್–ಬಿಜೆಪಿ ಒಳಒಪ್ಪಂದದ ಕಾರಣ ನಾಗರಾಜಗೌಡಗೆ ಟಿಕೆಟ್ ಕೈತಪ್ಪಿದೆ ಎಂಬ ವದಂತಿ ಹರಡಿ ಅದು 'ಅನುಕಂಪ'ವಾಗಿ ಮಾರ್ಪಟ್ಟಿದೆ. ಹೀಗಾಗಿ ವಿಜಯೇಂದ್ರ ಗೆಲುವಿಗೆ ಹೆಚ್ಚಿನ ಬೆವರು ಹರಿಸುವಂತಾಗಿದೆ. ಕ್ಷೇತ್ರ ಬಿಟ್ಟು ಬೇರೆ ಕಡೆ ಪ್ರಚಾರಕ್ಕೆ ಹೋಗದಂತಾಗಿದೆ. ಶಿಕಾರಿಪುರ ಕ್ಷೇತ್ರದಲ್ಲಿ ಬಂಜಾರ, ಬೋವಿ ಸಮಾಜದವರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಒಳಮೀಸಲಾತಿ ವಿರುದ್ಧದ ಕಿಚ್ಚು ಬೂದಿ ಮುಚ್ಚಿದ ಕೆಂಡವಾಗಿದೆ.

ಪಕ್ಷಗಳ ಬಲಾಬಲ

ಕ್ಷೇತ್ರ	2013	2018
ಶಿವಮೊಗ್ಗ ನಗರ	ಕಾಂಗ್ರೆಸ್	ಬಿಜೆಪಿ
ಶಿವಮೊಗ್ಗ ಗ್ರಾಮಾಂತರ	ಜೆಡಿಎಸ್	ಬಿಜೆಪಿ
ತೀರ್ಥಹಳ್ಳಿ	ಕಾಂಗ್ರೆಸ್	ಬಿಜೆಪಿ
ಭದ್ರಾವತಿ	ಜೆಡಿಎಸ್	ಕಾಂಗ್ರೆಸ್
ಸಾಗರ	ಕಾಂಗ್ರೆಸ್	ಬಿಜೆಪಿ
ಶಿಕಾರಿಪುರ	ಬಿಜೆಪಿ	ಬಿಜೆಪಿ
ಸೊರಬ	ಜೆಡಿಎಸ್	ಬಿಜೆಪಿ

ಸಾಕ್ಷಾತ್ ಸಮೀಕ್ಷೆ


ಬಳ್ಳಾರಿ ಗಣಿನಾಡಿನಲ್ಲಿ ಗಣಿ ಉದ್ಯಮಿ ಪಕ್ಷ ಖಾತೆ ತೆರೆಯುವುದೇ?

ಕಾಂಗ್ರೆಸ್– ಬಿಜೆಪಿ ಜಿದ್ದಾಜಿದ್ದಿ

• ಹೊನಕೆರೆ ನಂಜುಂಡೇಗೌಡ



ಬಿ. ಶ್ರೀರಾಮುಲು | ಬಿ. ನಾಗೇಂದ್ರ | ಅನಿಲ್ ಲಾಡ್ | ತುಕಾರಾಂ | ರಾಜು ನಾಯ್ಕ | ಸೋಮಲಿಂಗಪ್ಪ | ಲಕ್ಷ್ಮೀ ಅರುಣಾ | ಸೋಮಶೇಖರ ರೆಡ್ಡಿ | ಸೋಮಪ್ಪ | ಭರತ್ ರೆಡ್ಡಿ



ಬಳ್ಳಾರಿ: ಅಕ್ರಮ ಗಣಿಗಾರಿಕೆ ಆರೋಪದ ಬಳಿಕ ಬಳ್ಳಾರಿ ಜಿಲ್ಲೆ ಗಣಿಗಳು ಬಹುತೇಕ ಸ್ಥಗಿತಗೊಂಡಿದ್ದರೂ ರಾಜಕಾರಣ ಬಲು ಜೋರಾಗಿದೆ. ಜಿಲ್ಲೆಯ ಐದು ಕ್ಷೇತ್ರಗಳ ಪೈಕಿ ಬಳ್ಳಾರಿ ಗ್ರಾಮೀಣ ಮತ್ತು ಬಳ್ಳಾರಿ ನಗರ ಕ್ಷೇತ್ರಗಳ ಪೈಪೋಟಿ ಕುತೂಹಲ ಕೆರಳಿಸಿದೆ.

ಜಿಲ್ಲಾ ಉಸ್ತುವಾರಿ ಸಚಿವ, ಬಿಜೆಪಿಯ ಬಿ. ಶ್ರೀರಾಮುಲು ಮತ್ತು ಶಾಸಕ ಕಾಂಗ್ರೆಸ್‌ನ ನಾಗೇಂದ್ರ ನಡುವಣ ನೇರ ಹಣಾಹಣಿಗೆ ಬಳ್ಳಾರಿ ಗ್ರಾಮೀಣ ಕ್ಷೇತ್ರ ಸಾಕ್ಷಿಯಾಗಲಿದೆ. ಜಿಲ್ಲೆಯಲ್ಲಿ ವಾಲ್ಮೀಕಿ ಬಹುಸಂಖ್ಯಾತ ಸಮುದಾಯ. ಶ್ರೀರಾಮುಲು ಈ ಸಮುದಾಯದ ದೊಡ್ಡ ನಾಯಕ.

2018ರ ವಿಧಾನಸಭೆ ಚುನಾವಣೆಯಲ್ಲಿ ಶ್ರೀರಾಮುಲು ಮೊಳಕಾಲ್ಮೂರಿನಿಂದ ಗೆದ್ದಿದ್ದರು. ಬಾಗಲಕೋಟೆ ಜಿಲ್ಲೆ ಬಾದಾಮಿಯಲ್ಲೂ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರ ವಿರುದ್ಧ ಸ್ಪರ್ಧಿಸಿ ಸೋತಿದ್ದರು. ದಶಕದ ಬಳಿಕ ತವರು ಕ್ಷೇತ್ರಕ್ಕೆ ಮರಳಿದ್ದಾರೆ. ಶ್ರೀರಾಮುಲು ಸೋಲಿನ ಭಯದಿಂದ ವಾಪಸ್ ಬಂದಿದ್ದಾರೆ ಎಂದು ಹೇಳಲಾಗುತ್ತಿದೆ.

ಶ್ರೀರಾಮುಲುಗೆ ಇಲ್ಲಿ ಗೆಲುವಿನ ಹಾದಿ ಸುಲಭವಲ್ಲ ಎಂಬ ವಾತಾವರಣವಿದೆ. ನಾಗೇಂದ್ರ ಭಾರಿ ಪೈಪೋಟಿಯೊಡ್ಡುತ್ತಿರುವುದೇ ಇದಕ್ಕೆ ಕಾರಣ. ಬಳ್ಳಾರಿಯವರಾದ ನಾಗೇಂದ್ರ 2018ರಲ್ಲಿ ಇಲ್ಲಿಂದ ಆಯ್ಕೆಯಾಗಿದ್ದಾರೆ. ಕೂಡ್ಲಿಗಿಯಿಂದ ಎರಡು ಸಲ ಶಾಸಕರಾಗಿದ್ದರು. ನಾಗೇಂದ್ರ ಅವರೂ ವಾಲ್ಮೀಕಿ ಸಮಾಜದವರು. ಆರಂಭದಲ್ಲಿ ಕ್ಷೇತ್ರದಲ್ಲಿ ಕಾಣಿಸಿಕೊಳ್ಳಲಿಲ್ಲ. ಅನಂತರ, ಕ್ಷೇತ್ರ ಬಿಟ್ಟು ಕದಲಲಿಲ್ಲ. ಬಿಜೆಪಿ-ಕಾಂಗ್ರೆಸ್ ಸಮಬಲದ ಪೈಪೋಟಿ ನೀಡುವಂತೆ ಕಂಡುಬರುತ್ತಿದೆ.

ಬಳ್ಳಾರಿ ನಗರಕ್ಕೆ ಹೊಂದಿಕೊಂಡ ಕೌಲ್ ಬಜಾರ್‌ನ 11 ವಾರ್ಡ್‌ಗಳಲ್ಲಿ ಮುಸ್ಲಿಮರು, ಕ್ರೈಸ್ತರ ಮತಗಳು ನಿರ್ಣಾಯಕ. ಮುಸ್ಲಿಮರ ಮತಗಳನ್ನು ಸೆಳೆಯಲು ಶ್ರೀರಾಮುಲು ಕಸರತ್ತು ಮಾಡುತ್ತಿದ್ದಾರೆ.

ಕಂಪ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಹಣಾಹಣಿ ಇದೆ. ಶ್ರೀರಾಮುಲು ಅವರ ಅಳಿಯ, ಮಾಜಿ ಶಾಸಕ ಸುರೇಶ್‌ಬಾಬು ಬಿಜೆಪಿ ಅಭ್ಯರ್ಥಿ. ಶಾಸಕ ಜೆ.ಎನ್. ಗಣೇಶ್ ಕಾಂಗ್ರೆಸ್‌ನಿಂದ, ರಾಜು ನಾಯ್ಕ ಜೆಡಿಎಸ್‌ನಿಂದ ಕಣದಲ್ಲಿದ್ದಾರೆ.

ಕುರುಗೋಡು ಕಾಂಗ್ರೆಸ್ ಮುಖಂಡರಲ್ಲಿ ಕೆಲವರು ಬಿಜೆಪಿಗೆ ವಲಸೆ ಹೋಗಿದ್ದಾರೆ. ಹಿರಿಯ ನಾಯಕರೂ ಗಣೇಶ್ ಪರ ಕೆಲಸ ಮಾಡುತ್ತಿಲ್ಲವೆಂಬ ಮಾತುಗಳಿವೆ. ಗಣೇಶ್ ಜನರ ನಡುವೆ ಇರುತ್ತಾರೆ. ವಿರೋಧ ಪಕ್ಷದಲ್ಲಿದ್ದರೂ, ಕೆಲವು ಯೋಜನೆಗಳನ್ನು ಕ್ಷೇತ್ರಕ್ಕೆ ತಂದಿದ್ದಾರೆ. ಸುರೇಶ್ ಬಾಬು ಜನರ ಕೈಗೇ ಸಿಗುವುದಿಲ್ಲ ಎಂಬ ದೂರುಗಳಿವೆ.

ಸಿರುಗುಪ್ಪ ಕ್ಷೇತ್ರದಲ್ಲೂ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ಜಿದ್ದಾಜಿದ್ದಿ ನಡೆಯುತ್ತಿದೆ. ಬಿಜೆಪಿ ಶಾಸಕ ಸೋಮಲಿಂಗಪ್ಪ, ಮಾಜಿ ಶಾಸಕ ಕಾಂಗ್ರೆಸ್‌ನ ಬಿ.ಎಂ. ನಾಗರಾಜ್, ಅರಣ್ಯ ಇಲಾಖೆ ನಿವೃತ್ತ ಸರ್ವೇಯರ್ ಧರಪ್ಪ ನಾಯಕ ಕೆಆರ್‌ಪಿಪಿಯಿಂದ ಕಣದಲ್ಲಿದ್ದಾರೆ. ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಮುರಳಿ ಕೃಷ್ಣ, ಅವರ ಬೆಂಬಲಿಗರು ಕಾಂಗ್ರೆಸ್ ಪರ ಕೆಲಸ ಮಾಡುತ್ತಿಲ್ಲ ಎಂದು ಹೇಳಲಾಗುತ್ತಿದೆ. ಕೆಆರ್‌ಪಿಪಿಯ ಧರಪ್ಪ ನಾಯಕ ಯಾವ ಪಕ್ಷದ ಮತಗಳಿಗೆ ಕೈ ಹಾಕುವರು ಎಂಬುದರ ಮೇಲೆ ಫಲಿತಾಂಶ ನಿರ್ಧಾರವಾಗಲಿದೆ.

ಸಂಡೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕ ತುಕಾರಾಂ ನಾಲ್ಕನೇ ಸಲ ಮರು ಆಯ್ಕೆ ಬಯಸಿದ್ದಾರೆ. ಶಿಲ್ಪಾ ರಾಘವೇಂದ್ರ ಬಿಜೆಪಿ ಅಭ್ಯರ್ಥಿ. 2018ರ ಚುನಾವಣೆಯಲ್ಲಿ ಸಂಡೂರಿನಲ್ಲಿ ಸೋತಿದ್ದ ರಾಘವೇಂದ್ರ ಕೋವಿಡ್‌ನಿಂದ ಮೃತಪಟ್ಟರು. ಅನುಕಂಪವನ್ನೇ ಬಂಡವಾಳ ಮಾಡಿಕೊಳ್ಳಲು ಬಿಜೆಪಿ ಶಿಲ್ಪಾ ಅವರನ್ನು ಕಣಕ್ಕಿಳಿಸಿದೆ. ಬಿಜೆಪಿ ಟಿಕೆಟ್ ಮೇಲೆ ಕಣ್ಣಿಟ್ಟು ಕ್ಷೇತ್ರದಲ್ಲಿ ಸಕ್ರಿಯರಾಗಿದ್ದ ಕೆ.ಎಸ್. ದಿವಾಕರ್ ಕೆಆರ್‌ಪಿಪಿ ಅಭ್ಯರ್ಥಿ.

ಜೆಡಿಎಸ್ ಎಲ್ಲರಿಗಿಂತ ಮೊದಲೇ ಸೋಮಪ್ಪ ಅವರನ್ನು ಕಣಕ್ಕಿಳಿಸಿದೆ. ಸಾಮಾನ್ಯ ಕುಟುಂಬದವರಾದ ಸೋಮಪ್ಪ ಅವರಿಗೆ ಮತದಾರರು ಅಲ್ಪಸ್ವಲ್ಪ ದೇಣಿಗೆ ನೀಡಿದ್ದಾರೆ. ದಿವಾಕರ್ ಸ್ಪರ್ಧೆಯಿಂದ ತುಕಾರಾಂಗೆ ಲಾಭ ಆಗಬಹುದೇ? ಶಿಲ್ಪಾ ಅನುಕಂಪದ ಅಲೆಯಲ್ಲಿ ತೇಲಿ ದಡ ಸೇರುವರೇ? ಮತದಾರರು ದಿವಾಕರ ಕೈ ಹಿಡಿಯುವರೇ? ಅಥವಾ ಜೆಡಿಎಸ್ ಪರ 'ಪವಾಡ' ನಡೆಯುವುದೇ? ಎನ್ನುವ ಕುತೂಹಲ ಉಳಿದಿದೆ.

ಕೋಟ್ಯಧಿಪತಿಗಳ ಕಾಳಗ: ಬಳ್ಳಾರಿ ನಗರ ಎರಡು ಕಾರಣಕ್ಕೆ ಪ್ರತಿಷ್ಠೆ ಕಣವಾಗಿದೆ. ಒಂದು, ಬಿಜೆಪಿ ಅಭ್ಯರ್ಥಿ, ಶಾಸಕ ಸೋಮಶೇಖರರೆಡ್ಡಿ, ಕಾಂಗ್ರೆಸ್‌ನ ಭರತ್ ರೆಡ್ಡಿ, ಕೆಆರ್‌ಪಿಪಿ ಲಕ್ಷ್ಮೀ ಅರುಣಾ ಮತ್ತು ಮಾಜಿ ಶಾಸಕ ಜೆಡಿಎಸ್ ಅಭ್ಯರ್ಥಿ ಅನಿಲ್ ಲಾಡ್ ಎಲ್ಲರೂ 'ಭಾರಿ ಕುಳ'ಗಳು. ಲಾಡ್ ಬಿಟ್ಟರೆ ಮಿಕ್ಕವರು ರೆಡ್ಡಿ ಸಮುದಾಯದವರು.

ಎರಡನೆಯದು, ಸೋಮಶೇಖರ ರೆಡ್ಡಿ ಮತ್ತು ಲಕ್ಷ್ಮೀ ಅರುಣಾ (ಜನಾರ್ದನ ರೆಡ್ಡಿ ಪತ್ನಿ) ಬಾವ ಹಾಗೂ ಸೊಸೆ. ಒಂದೇ ಕುಟುಂಬದ ಇಬ್ಬರ ಸ್ಪರ್ಧೆಯಿಂದ ಈ ಕ್ಷೇತ್ರ ಗಮನ ಸೆಳೆದಿದೆ. ಕೆಲವರಿಗೆ ಗೆಲ್ಲುವ ಛಲ. ಇನ್ನೂ ಕೆಲವರಿಗೆ ಎದುರಾಳಿಗಳನ್ನು ಸೋಲಿಸುವ ಹಟ.

ಸೋಮಶೇಖರ ರೆಡ್ಡಿ ಎರಡು ಸಲ, ಅನಿಲ್ ಲಾಡ್ ಒಮ್ಮೆ ಆಯ್ಕೆಯಾಗಿದ್ದರು. ಕಾಂಗ್ರೆಸ್‌ನಿಂದ ಟಿಕೆಟ್ ವಂಚಿತರಾದ ಲಾಡ್ ಈಗ ಜೆಡಿಎಸ್ ಅಭ್ಯರ್ಥಿ.

ಪ್ರಬಲ ವಿರೋಧದ ನಡುವೆಯೂ ಕಾಂಗ್ರೆಸ್ ಭರತ್ ರೆಡ್ಡಿಗೆ ಟಿಕೆಟ್ ನೀಡಿದೆ. ಇದರಿಂದಾಗಿ 'ಬಂಡಾಯದ ಬಿಸಿ' ತಟ್ಟಿದೆ. ಇದರಿಂದ ಅಸಮಾಧಾನಗೊಂಡಿರುವ ಮಾಜಿ ಸಚಿವ ದಿವಾಕರ ಬಾಬು, ಕೆಆರ್‌ಪಿಪಿಯ ಲಕ್ಷ್ಮೀ ಅರುಣಾ ಅವರನ್ನು ಬೆಂಬಲಿಸಿದ್ದಾರೆ. ಇನ್ನೂ ಅನೇಕ ನಾಯಕರು ಕಾಂಗ್ರೆಸ್‌ನಲ್ಲಿ ಇದ್ದುಕೊಂಡೇ ತೆರೆಮರೆಯಲ್ಲಿ ಎದುರಾಳಿಗಳಿಗೆ ಸಹಾಯ ಮಾಡುತ್ತಿದ್ದಾರೆ ಎನ್ನುವ ಮಾತಿದೆ.

ಚುನಾವಣೆ ಘೋಷಣೆಗೆ ಮೊದಲೇ ಭರತ್ ರೆಡ್ಡಿ ತಮ್ಮ ಹುಟ್ಟುಹಬ್ಬದ ಹೆಸರಿನಲ್ಲಿ ಮತದಾರರಿಗೆ ಕುಕ್ಕರ್ ಹಂಚಿರುವುದರಿಂದ ಲಾಭವಾಗಬಹುದು. ಕಾಂಗ್ರೆಸ್ ಬಂಡಾಯವನ್ನು ಕೆಆರ್‌ಪಿಪಿ ಬಂಡವಾಳ ಮಾಡಿಕೊಳ್ಳಲು ಹೊರಟಿದೆ. ಬಂಡಾಯ ನಾಯಕರ ಮನೆ ಬಾಗಿಲಿಗೆ ಎಡ ತಾಕುತ್ತಿದೆ. ಅದರಲ್ಲಿ ಬಹಳಷ್ಟು ಯಶಸ್ಸನ್ನೂ ಕಂಡಿದೆ.

'ಜನಾರ್ದನ ರೆಡ್ಡಿ ಜತೆಗಿಲ್ಲದಿರುವುದು ನೋವುಂಟು ಮಾಡಿದೆ' ಎಂದು ಲಕ್ಷ್ಮೀ ಅರುಣಾ ಕಣ್ಣೀರು ಹಾಕಿದ್ದು ಅನುಕಂಪದ ಮತಗಳನ್ನು ತಂದುಕೊಡಬಹುದೇ ಎಂಬ ಲೆಕ್ಕಾಚಾರ ರಾಜಕೀಯ ವಲಯದಲ್ಲಿ ನಡೆಯುತ್ತಿದೆ.

ಬಿಜೆಪಿಯು ಸಾಂಪ್ರದಾಯಿಕ ಮತಗಳ ಜತೆ, ಪ್ರಧಾನಿ ಮೋದಿ ಅವರ ವರ್ಚಸ್ಸನ್ನು ನಂಬಿಕೊಂಡಿದೆ. ಕಾಂಗ್ರೆಸ್, ಕೆಆರ್‌ಪಿಪಿಯ ಅಬ್ಬರದ ನಡುವೆ ಸೋಮಶೇಖರ ರೆಡ್ಡಿ ತಣ್ಣಗೆ ಪ್ರಚಾರ ಮಾಡುತ್ತಿದ್ದಾರೆ. 'ರೆಡ್ಡಿ, ಕೈಗೆ ಸಿಗುತ್ತಾರೆ. ಕರೆದಾಗ ಬರುತ್ತಾರೆ. ಸಮಸ್ಯೆ ಕೇಳುತ್ತಾರೆ' ಎಂಬುದು ಅವರಿಗಿರುವ ಸಕಾರಾತ್ಮಕ ಅಂಶಗಳು.


ಯಾವ ಜಾತಿ ಮತಗಳು ಯಾರಿಗೆ ಬೀಳುತ್ತವೆ ಎಂಬ ಲೆಕ್ಕಾಚಾರ ಬಳ್ಳಾರಿಯಲ್ಲಿ ಜೋರಾಗಿದೆ. ಕಾಂಗ್ರೆಸ್, ಜೆಡಿಎಸ್ ಹಾಗೂ ಬಿಜೆಪಿ ಮಧ್ಯೆ ತೀವ್ರ ಪೈಪೋಟಿ ಇದೆ. ಲಕ್ಷ್ಮೀ ಅರುಣಾ ಬಿಜೆಪಿ ಮತ್ತು ಕಾಂಗ್ರೆಸ್ ಮತಗಳಿಗೆ ಕೈಹಾಕಬಹುದು ಎಂದು ಹೇಳಲಾಗುತ್ತಿದೆ. ಜೆಡಿಎಸ್ ಅಭ್ಯರ್ಥಿ ಎಷ್ಟು ಮತ ಪಡೆಯಲಿದ್ದಾರೆ. ಅವರು ಪಡೆಯುವುದು ಯಾವ ಪಕ್ಷದ ಮತಗಳು ಎಂಬ ಅಂಶ ಫಲಿತಾಂಶದ ಮೇಲೆ ಪರಿಣಾಮ ಬೀರಲಿದೆ.

ಪಕ್ಷಗಳ ಬಲಾಬಲ

ಕ್ಷೇತ್ರ	2013	2018
ಕಂಪ್ಲಿ	ಬಿಎಸ್‌ಆರ್	ಕಾಂಗ್ರೆಸ್
ಸಿರುಗುಪ್ಪ	ಕಾಂಗ್ರೆಸ್	ಬಿಜೆಪಿ
ಬಳ್ಳಾರಿ ಗ್ರಾಮೀಣ	ಬಿಎಸ್‌ಆರ್	ಕಾಂಗ್ರೆಸ್
ಬಳ್ಳಾರಿ ನಗರ	ಕಾಂಗ್ರೆಸ್	ಬಿಜೆಪಿ
ಸಂಡೂರು	ಕಾಂಗ್ರೆಸ್	ಕಾಂಗ್ರೆಸ್

'ಪ್ರಾದೇಶಿಕ ಪಕ್ಷ ಅಧಿಕಾರಕ್ಕೆ ತಂದೇ ಕಣ್ಣು ಮುಚ್ಚುವೆ'

ಪ್ರಜಾವಾಣಿ ವಾರ್ತೆ



ದೇವೇಗೌಡ

ರಾಮನಗರ: '90ರ ವಯಸ್ಸಿನಲ್ಲಿ ರಾಜ್ಯದಲ್ಲಿ ಪ್ರಾದೇಶಿಕ ಪಕ್ಷವನ್ನು ಅಧಿಕಾರಕ್ಕೆ ತಂದೇ ಕಣ್ಣು ಮುಚ್ಚುವೆ' ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಭಾವನಾತ್ಮಕವಾಗಿ ನುಡಿದರು.

ಚನ್ನಪಟ್ಟಣದಲ್ಲಿ ಶುಕ್ರವಾರ ಸಂಜೆ ನಡೆದ ಜೆಡಿಎಸ್ ಬಹಿರಂಗ ಸಮಾವೇಶದಲ್ಲಿ ಅವರು ಮಾತನಾಡಿದರು.

'ತಮಿಳುನಾಡಿನಲ್ಲಿ ಪ್ರಾದೇಶಿಕ ಪಕ್ಷಗಳನ್ನು ಜನ ಬೆಂಬಲಿಸಿದ್ದಾರೆ. ಆದರೆ, ಕರ್ನಾಟಕದ ಜನರಿಗೆ ಏನಾಗಿದೆಯೋ ಗೊತ್ತಿಲ್ಲ. ಕುಮಾರಸ್ವಾಮಿ ಇಷ್ಟು ಕೆಲಸ ಮಾಡಿದ್ದರೂ ನಾನು ಬಂದು ಮತ ಕೇಳಬೇಕಾಗಿದೆ. ಜನರು ಈ ಬಗ್ಗೆ ತೀರ್ಮಾನ ಮಾಡಬೇಕು' ಎಂದರು.


'ಕಾಶ್ಮೀರಕ್ಕೆ 10 ವರ್ಷ ದೇಶದ ಯಾವ ಪ್ರಧಾನಿಯೂ ಹೋಗಿರಲಿಲ್ಲ. ಹೋದರೆ ಹೊಡೆದು ಹಾಕುತ್ತಾರೆ ಎನ್ನುವ ಭಯ ಇತ್ತು. ಆದರೆ, ನಾನು ಪ್ರಧಾನಿಯಾದ ನಂತರ, ಸತ್ತರೆ ನನ್ನನ್ನು ಹೊಳೆನರಸೀಪುರದಲ್ಲಿ ಮಣ್ಣು ಮಾಡುವಂತೆ ಹೇಳಿ ಹೋಗಿದ್ದೆ. ನಾಲ್ಕು ಬಾರಿ ಕಾಶ್ಮೀರಕ್ಕೆ ಹೋಗಿ ಶಾಂತಿ ತಂದೆ. ಮುಸ್ಲಿಮರಿಗೆ ಮೀಸಲಾತಿ ನೀಡಿದ್ದು ನಾವು. ಮುಸ್ಲಿಮರು ಇದನ್ನು ಅರ್ಥ ಮಾಡಿಕೊಳ್ಳಬೇಕು' ಎಂದು ಹೇಳಿದರು.

ಚನ್ನಪಟ್ಟಣ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ಪುತ್ರ ಎಚ್.ಡಿ.ಕುಮಾರಸ್ವಾಮಿ ಪರ ಮತಯಾಚಿಸಿದ ಅವರು 'ಮಂಡ್ಯದಲ್ಲಿ ನಿಲ್ಲುವಂತೆ ಕಾರ್ಯಕರ್ತರು ಹೇಳಿದ್ದರೂ ಕುಮಾರಸ್ವಾಮಿ ಕೇಳಲಿಲ್ಲ. ಇಲ್ಲಿಯೇ ಸ್ಪರ್ಧೆ ಮಾಡಿದ್ದಾರೆ. ಯಾರು ಎಷ್ಟೇ ದುಡ್ಡು ಕೊಟ್ಟು, ಅಪಪ್ರಚಾರ ಮಾಡಿದರೂ ನೀವೆಲ್ಲ ಕುಮಾರಸ್ವಾಮಿ ಅವರನ್ನೇ ಗೆಲ್ಲಿಸಲು ಪಣ ತೊಡಿ' ಎಂದರು.


ದಾವಣಗೆರೆ ಪ್ರತಿಷ್ಠೆ ಒರೆಗೆ ಹಚ್ಚಿರುವ ಪಕ್ಷಗಳು

ಹೊಸ ಮುಖಗಳ ಪ್ರಯೋಗ

• ಸಿದ್ದಯ್ಯ ಹಿರೇಮಠ



ಶಾಮನೂರು ಶಿವಶಂಕರಪ್ಪ | ಎಸ್.ಎಸ್. ಮಲ್ಲಿಕಾರ್ಜುನ | ರೇಣುಕಾಚಾರ್ಯ | ಎಚ್.ಎಸ್. ಶಿವಶಂಕರ್ | ಡಿ.ಜಿ. ಶಾಂತನಗೌಡ | ಎಸ್ ವಿ.ರಾಮಚಂದ್ರ | ತೇಜಸ್ವಿ ಪಟೇಲ್ | ಬಿ.ಪಿ. ಹರೀಶ್ | ಬಸವರಾಜ ನಾಯ್ಕ್ | ಲೋಕಿಕೆರೆ ನಾಗರಾಜ್ | ಕೆ.ಎಸ್. ಬಸವಂತಪ್ಪ | ಬಿ.ಜಿ. ಅಜಯ್ ಕುಮಾರ್



ಪಕ್ಷಗಳ ಬಲಾಬಲ

ಕ್ಷೇತ್ರ	2013	2018
ದಾವಣಗೆರೆ ಉತ್ತರ	ಕಾಂಗ್ರೆಸ್	ಬಿಜೆಪಿ
ದಾವಣಗೆರೆ ದಕ್ಷಿಣ	ಕಾಂಗ್ರೆಸ್	ಕಾಂಗ್ರೆಸ್
ಮಾಯಕೊಂಡ	ಕಾಂಗ್ರೆಸ್	ಬಿಜೆಪಿ
ಚನ್ನಗಿರಿ	ಕಾಂಗ್ರೆಸ್	ಬಿಜೆಪಿ
ಹೊನ್ನಾಳಿ	ಕಾಂಗ್ರೆಸ್	ಬಿಜೆಪಿ
ಜಗಳೂರು	ಕಾಂಗ್ರೆಸ್	ಬಿಜೆಪಿ
ಹರಿಹರ	ಜೆಡಿಎಸ್	ಕಾಂಗ್ರೆಸ್

ದಾವಣಗೆರೆ: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ 75ನೇ ಜನ್ಮದಿನದ ಅಂಗವಾಗಿ ಇಲ್ಲಿ 9 ತಿಂಗಳ ಹಿಂದೆ (ಆಗಸ್ಟ್ 3) ಆಯೋಜಿಸಿದ್ದ 'ಅಮೃತೋತ್ಸವ' ಸಮಾರಂಭದ ಮೂಲಕ ಚುನಾವಣೆಯ ರಣಕಹಳೆ ಮೊಳಗಿಸಿದ್ದ ಕಾಂಗ್ರೆಸ್, ರಾಜ್ಯದಲ್ಲಿ ಕೈತಪ್ಪಿ ಹೋಗಿದ್ದ ತನ್ನ ನೆಲೆಯನ್ನು ಮರಳಿ ತೆಕ್ಕೆಗೆ ತೆಗೆದುಕೊಳ್ಳುವ ಮಂತ್ರ ಜಪಿಸಲು ಆರಂಭಿಸಿತ್ತು.

ಅಂದು ರಾಜ್ಯದ ಮೂಲೆಮೂಲೆಯಿಂದ ಧಾವಿಸಿದ್ದ ಸಿದ್ದರಾಮಯ್ಯ ಅವರ ಲಕ್ಷ ಲಕ್ಷ ಅಭಿಮಾನಿಗಳು ಕಾಂಗ್ರೆಸ್ ಪಕ್ಷಕ್ಕೂ, ಸಿದ್ದರಾಮಯ್ಯ ನಾಯಕತ್ವಕ್ಕೂ 'ಬಹುಪರಾಕ್' ಹೇಳುವ ಮೂಲಕ ಆಡಳಿತದಲ್ಲಿ ಬದಲಾವಣೆ ಬಯಸುತ್ತಿರುವ ಸುಳಿವನ್ನು ನೀಡಿದ್ದರು.

ಆಡಳಿತಾರೂಢ ಬಿಜೆಪಿಯು ಅದಕ್ಕೆ ಪ್ರತ್ಯುತ್ತರ ಎಂಬಂತೆ, ರಾಜ್ಯಾದ್ಯಂತ ನಡೆಸಿದ 'ಜನಸಂಕಲ್ಪ ಯಾತ್ರೆ'ಯ ಸಮಾರೋಪ ಸಮಾರಂಭವನ್ನು ಚುನಾವಣೆ ಘೋಷಣೆಯ ನಾಲ್ಕು ದಿನ ಮೊದಲು ಇದೇ ಊರಿನಲ್ಲಿ ಆಯೋಜಿಸಿ, ಗೆಲುವಿನ ನಾಗಾಲೋಟ ಮುಂದುವರಿಸುವುದಾಗಿ ಜಾಗಟೆ ಬಾರಿಸಿದೆ. ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದ್ದ ಆ ಕಾರ್ಯಕ್ರಮದಲ್ಲೂ ಲಕ್ಷ ಲಕ್ಷ ಜನ ಪಾಲ್ಗೊಂಡು 'ಕಮಲ' ಪಾಳಯದ ನಿರೀಕ್ಷೆ ಹೆಚ್ಚಿಸಿದ್ದರು.

ಈ ಹಿಂದಿನ ಚುನಾವಣೆಯಲ್ಲಿ ಜಿಲ್ಲೆಯ 7ರ ಪೈಕಿ 5 ಕ್ಷೇತ್ರಗಳಲ್ಲಿ ಜಯಿಸಿ ಬೀಗಿದ್ದ ಬಿಜೆಪಿ, ಈ ಬಾರಿ ಪ್ರಯೋಗಕ್ಕೆ ಕೈಹಾಕಿದೆ. ಆಗ ಗೆದ್ದಿದ್ದ ಐವರ ಪೈಕಿ ಈ ಬಾರಿ ಇಬ್ಬರಿಗೆ ಮಾತ್ರ ಟಿಕೆಟ್ ಘೋಷಿಸಿದ್ದು, ಮೂರು ಕಡೆ ಹೊಸ ಮುಖಗಳಿಗೂ, ಇನ್ನೆರಡು ಕಡೆ ಹಳಬರಿಗೂ ಅವಕಾಶ ನೀಡಿದೆ.

ಕಾಂಗ್ರೆಸ್ ಪಕ್ಷವೂ ಮೂವರು ಹೊಸಬರಿಗೆ ಆದ್ಯತೆ ನೀಡುವ ಮೂಲಕ ಬಿಜೆಪಿಗೆ ಪಂಥಾಹ್ವಾನ ನೀಡಿದೆ. ಈ ಚುನಾವಣೆಯಲ್ಲಿ ಸ್ಪರ್ಧಿಸಿದವರ ಪೈಕಿ 'ವಯಸ್ಸಿನಲ್ಲಿ ಅತ್ಯಂತ ಹಿರಿಯ' ಎನ್ನಿಸಿಕೊಂಡಿರುವ ಮಾಜಿ ಸಚಿವ ಶಾಮನೂರು ಶಿವಶಂಕರಪ್ಪ (92) ಅವರನ್ನು ಮತ್ತೆ ಕಣಕ್ಕಿಳಿಸಿದೆ.

ದಾವಣಗೆರೆ ದಕ್ಷಿಣ: ಕ್ಷೇತ್ರದಲ್ಲಿ ಗೆಲ್ಲುತ್ತಲೇ ಸಾಗಿರುವ ಶಾಮನೂರು ಶಿವಶಂಕರಪ್ಪ ಅವರನ್ನು ಕಟ್ಟಿಹಾಕಲು ಮಾಜಿ ಮೇಯರ್ ಬಿ.ಜಿ. ಅಜಯ ಕುಮಾರ್ ಅವರಿಗೆ ಮಣೆ ಹಾಕಿರುವ ಬಿಜೆಪಿ, ದೊಡ್ಡಮಟ್ಟದ ನಾಯಕರ ಪ್ರಚಾರದಿಂದ ದೂರವೇ ಉಳಿದಿದೆ. ಈ ಮೂಲಕ ವಿಭಿನ್ನ ರೀತಿಯ ಪ್ರಚಾರ ತಂತ್ರ ಅನುಸರಿಸುತ್ತಿದೆ. ಚಿತ್ರನಟ 'ಕಿಚ್ಚ' ಸುದೀಪ್ ಕ್ಷೇತ್ರದಲ್ಲಿ ಸಂಚರಿಸಿ ಸಂಚಲನ ಮೂಡಿಸಿದ್ದು ಬಿಟ್ಟರೆ, ಮತಗಳನ್ನು ಸೆಳೆಯುವ ಯಾವುದೇ ಮುಖಂಡರನ್ನು ಕರೆತಂದಿಲ್ಲ ಎಂಬುದೇ ವಿಶೇಷ. ಮುಸ್ಲಿಂ, ವೀರಶೈವ ಲಿಂಗಾಯತ, ಕುರುಬ ಮತಗಳೇ ಅಧಿಕ ಸಂಖ್ಯೆಯಲ್ಲಿರುವ ಕ್ಷೇತ್ರದಲ್ಲಿ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರ ಸುಲಭ ಗೆಲುವಿನ ಓಟಕ್ಕೆ, ಜೆಡಿಎಸ್‌ನಿಂದ ಕಣಕ್ಕಿಳಿದಿರುವ ಜೆ. ಅಮಾನುಲ್ಲಾ ಖಾನ್ ಮುಸ್ಲಿಂ ಮತಗಳನ್ನು ಕಸಿಯುವ ಮೂಲಕ ತೊಡರುಗಾ ಲಾಗಬಹುದು ಎಂದು ಬಿಜೆಪಿ ಆಸೆಗಣ್ಣಿನಿಂದ ನೋಡುತ್ತಿದೆ.

ದಾವಣಗೆರೆ ಉತ್ತರ: ಶಾಮನೂರು ಶಿವಶಂಕರಪ್ಪ ಅವರ ಪುತ್ರ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ದಾವಣಗೆರೆ ಉತ್ತರ ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ. ವಯಸ್ಸು ಮತ್ತು ಅನಾರೋಗ್ಯದ ಕಾರಣ ಮುಂದಿರಿಸಿ ಶಾಸಕ ಎಸ್.ಎ. ರವೀಂದ್ರನಾಥ್ ಚುನಾವಣಾ ರಾಜಕೀಯದಿಂದ ಹಿಂದೆ ಸರಿದಿದ್ದರಿಂದ ಬಿಜೆಪಿ ಹೊಸ ಮುಖ ಲೋಕಿಕೆರೆ ನಾಗರಾಜ ಮೂಲಕ ಸೆಣಸಾಟಕ್ಕೆ ಮುಂದಾಗಿದೆ. ಬಿಜೆಪಿ–ಕಾಂಗ್ರೆಸ್ ನಡುವೆ ನೇರ ಸ್ಪರ್ಧೆ ಇದೆ. ಆದರೆ, 'ಒಮ್ಮೆ ಅವರು, ಒಮ್ಮೆ ಇವರು' ಎಂಬ ಧೋರಣೆಯನ್ನು ಮತದಾರರು ಅನುಸರಿಸಿಕೊಂಡು ಬಂದಿರು ವುದರಿಂದ ಈ ಬಾರಿ ಕಾಂಗ್ರೆಸ್‌ನ ಗೆಲುವಿನ ವಿಶ್ವಾಸ ಇಮ್ಮಡಿಗೊಂಡಿದೆ.

ಮಾಯಕೊಂಡ: ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಮಾಯಕೊಂಡದಲ್ಲಿ ಈ ಬಾರಿಯೂ ಬಿಜೆಪಿ – ಕಾಂಗ್ರೆಸ್ ನಡುವೆಯೇ ನೇರ ಸ್ಪರ್ಧೆ ಏರ್ಪಟ್ಟಿದೆ. ವೀರಶೈವ ಲಿಂಗಾಯತ ಮತಗಳೇ ನಿರ್ಣಾಯಕವಾಗಿರುವ ಈ ಕ್ಷೇತ್ರದಲ್ಲಿ ಶಾಸಕ ಪ್ರೊ.ಎನ್. ಲಿಂಗಣ್ಣ ಅವರನ್ನು ದೂರವಿರಿಸಿ, 2008ರಲ್ಲಿ ಶಾಸಕರಾಗಿದ್ದ ಎಂ. ಬಸವರಾಜ ನಾಯ್ಕ್ ಅವರಿಗೆ ಟಿಕೆಟ್ ಘೋಷಿಸಿರುವ ಬಿಜೆಪಿಗೆ ಕಾಂಗ್ರೆಸ್ ಪ್ರಮುಖ ಎದುರಾಳಿ. ಬಂಡಾಯ ಎದುರಿಸುತ್ತಿರುವ ಕಾಂಗ್ರೆಸ್‌ಗೆ ಮತಗಳು ಹಂಚಿಹೋಗುವ ಆತಂಕ. ಒಂದೂವರೆ ವರ್ಷದ ಹಿಂದಷ್ಟೇ ಕಾಂಗ್ರೆಸ್ ಸೇರಿದ್ದ ಎಚ್. ಆನಂದಪ್ಪ, ಕೊನೆಯ ಗಳಿಗೆಯಲ್ಲಿ ಟಿಕೆಟ್ ಕೈತಪ್ಪಿದ್ದರಿಂದ ಜೆಡಿಎಸ್ ಟಿಕೆಟ್ ಪಡೆದು ಸ್ಪರ್ಧಿಸಿದ್ದಾರೆ.

ಲಂಬಾಣಿ ಸಮುದಾಯದ ಸವಿತಾಬಾಯಿ ಮಲ್ಲೇಶ್ ನಾಯ್ಕ ಅವರು ಕಾಂಗ್ರೆಸ್ ಪಕ್ಷ ಅವಕಾಶ ನೀಡದ್ದರಿಂದ ಬಂಡೆದ್ದು, ಸ್ವತಂತ್ರವಾಗಿ ಕಣಕ್ಕಿಳಿದಿದ್ದಾರೆ. ಈ ಇಬ್ಬರ ಸ್ಪರ್ಧೆಯು ಕಾಂಗ್ರೆಸ್‌ನ ಕೆ.ಎಸ್. ಬಸವಂತಪ್ಪ ಅವರ ಮತಗಳನ್ನು ಕಸಿದುಕೊಂಡಲ್ಲಿ ಅನಿರೀಕ್ಷಿತ ಫಲಿತಾಂಶ ಹೊರಬೀಳುವ ಸಾಧ್ಯತೆ ಇದೆ.


ಹೊನ್ನಾಳಿ: ಗಿಮಿಕ್‌ಗಳಿಂದಲೇ ಗಮನ ಸೆಳೆಯುವ ಎಂ.ಪಿ. ರೇಣುಕಾಚಾರ್ಯ ಹೊನ್ನಾಳಿಯಲ್ಲಿ ಮತ್ತೊಂದು ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಎಂದಿನ ಪ್ರತಿಸ್ಪರ್ಧಿ ಡಿ.ಜಿ. ಶಾಂತನಗೌಡ ಕಾಂಗ್ರೆಸ್ ಅಭ್ಯರ್ಥಿ. 'ಅಭಿವೃದ್ಧಿ ಮಾಡಿದ್ದೇನೆ' ಎನ್ನುತ್ತಲೇ ಪ್ರಚಾರ ಕಾರ್ಯದಲ್ಲಿ ತೊಡಗಿರುವ ರೇಣುಕಾಚಾರ್ಯ ಅವರಿಗೆ ಲಂಬಾಣಿ ಮತಗಳು ಕೈತಪ್ಪುವ ಚಿಂತೆ ಕಾಡುತ್ತಿದೆ. ಕಾಂಗ್ರೆಸ್‌ನ ಶಾಂತನಗೌಡ ಸಹ ವೀರಶೈವ ಲಿಂಗಾಯತರಾಗಿದ್ದು, ಸಮುದಾಯದ ಮತಗಳು ಹಂಚಿಹೋಗಲಿವೆ.

ಇಲ್ಲಿ ಜೆಡಿಎಸ್ ಟಿಕೆಟ್ ಪಡೆದಿದ್ದ ಬಿ.ಜಿ. ಶಿವಮೂರ್ತಿಗೌಡ ಕೊನೆ ಕ್ಷಣದಲ್ಲಿ ನಾಮಪತ್ರ ಹಿಂದಕ್ಕೆ ಪಡೆಯುವಂತೆ ಮಾಡುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದೆ.

ಜಗಳೂರು: ಶಾಸಕ ಎಸ್.ವಿ. ರಾಮಚಂದ್ರ ಅವರಿಗೇ ಬಿಜೆಪಿ ಟಿಕೆಟ್ ನೀಡಿದೆ. ಕಾಂಗ್ರೆಸ್‌ನಿಂದ ಸಾಂಪ್ರದಾಯಿಕ ಪ್ರತಿಸ್ಪರ್ಧಿ ಎಚ್.ಪಿ. ರಾಜೇಶ್‌ಗೆ ಟಿಕೆಟ್ ಸಿಗಲಿದೆ ಎಂಬ ನಿರೀಕ್ಷೆ ಇತ್ತು. ಕಾಂಗ್ರೆಸ್ ಹೈಕಮಾಂಡ್ ದೇವೇಂದ್ರಪ್ಪ ಅವರಿಗೆ ಟಿಕೆಟ್ ನೀಡಿದೆ. ಎಚ್.ಪಿ. ರಾಜೇಶ್ ಬಂಡಾಯ ಎದ್ದು ಕಣಕ್ಕಿಳಿದಿದ್ದಾರೆ.

ಕ್ಷೇತ್ರದಲ್ಲಿ ತ್ರಿಕೋನ ಸ್ಪರ್ಧೆ ಇದೆ. ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳಷ್ಟೇ ಅಬ್ಬರದಿಂದ ಸ್ವತಂತ್ರ ಅಭ್ಯರ್ಥಿ ರಾಜೇಶ್ ಕೂಡಾ ಪ್ರಚಾರ ಮಾಡುತ್ತಿದ್ದಾರೆ.

ಚನ್ನಗಿರಿ ರಹಸ್ಯ



ಚುನಾವಣೆಯ ಹೊಸ್ತಿಲಲ್ಲಿ ಲೋಕಾ ಯುಕ್ತರು ಬೀಸಿದ ಬಲೆಗೆ ಸಿಲುಕಿದ ಚನ್ನಗಿರಿಯ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಜೈಲುವಾಸ ಅನುಭವಿಸಿ ವಾಪಸ್ಸಾಗಿದ್ದಾರೆ. ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿದು ಬಿಜೆಪಿಗೆ ಸಡ್ಡು ಹೊಡೆದಿರುವ ಮಾಡಾಳ್ ಮಲ್ಲಿಕಾರ್ಜುನ್ ಪುತ್ರ ಮಲ್ಲಿಕಾರ್ಜುನ್ ಪರ ಪ್ರಚಾರಕ್ಕೂ ಇಳಿದಿದ್ದಾರೆ. ಬಂಡೆದ್ದು ಸ್ಪರ್ಧಿಸಿರುವ ಮಲ್ಲಿಕಾರ್ಜುನ್ ಅವರನ್ನು ಉಚ್ಚಾಟಿಸಿರುವ ಬಿಜೆಪಿ, ಮಗನಿಗೆ ಸಾಥ್ ನೀಡಿರುವ ವಿರೂಪಾಕ್ಷಪ್ಪ ವಿರುದ್ಧ ಕ್ರಮ ಕೈಗೊಂಡಿಲ್ಲ.

ವಯಸ್ಸಿನ ಕಾರಣ ಈ ಬಾರಿ ಟಿಕೆಟ್ ಸಿಗುವ ಬಗ್ಗೆ ನಿರೀಕ್ಷೆ ಇಟ್ಟುಕೊಳ್ಳದೆ ಮಗನಿಗೇ ಟಿಕೆಟ್ ಕೇಳಿದ್ದ ವಿರೂಪಾಕ್ಷಪ್ಪ ಲಂಚ ಪ್ರಕರಣದಿಂದಾಗಿ ರಾಜ್ಯಕ್ಕೇ ಪರಿಚಯವಾದರು. 'ನಮ್ಮ ಕುಟುಂಬದ ವಿರುದ್ಧ ಷಡ್ಯಂತ್ರ ನಡೆದಿದೆ' ಎಂದು ಹೇಳುತ್ತಲೇ ಪ್ರಚಾರ ಮಾಡುತ್ತಿರುವ ಮಲ್ಲಿಕಾರ್ಜುನ್ ಅವರಿಗೆ, 'ಐದು ವರ್ಷಗಳ ಅವಧಿಯಲ್ಲಿ ಬಿಜೆಪಿ ಸರ್ಕಾರದಿಂದ ಸಾವಿರಾರು ಕೋಟಿ ರೂಪಾಯಿ ಅನುದಾನ ತಂದಿರುವ ವಿರೂಪಾಕ್ಷಪ್ಪ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿರುವುದು ಮತದಾರರಿಗೆ ಗೊತ್ತಿದೆ. ಅವರು ಕೈಬಿಡುವುದಿಲ್ಲ' ಎಂಬ ಹುಮ್ಮಸ್ಸಿದೆ.

ಬಿಜೆಪಿಯಿಂದ ತುಮ್ಕೋಸ್ ಮಾಜಿ ಅಧ್ಯಕ್ಷ ಶಿವಕುಮಾರ್ ಸ್ಪರ್ಧಿಸಿದ್ದು, ಮಾಡಾಳ್ ಬಂಡೆದ್ದಿರುವುದು ನುಂಗಲಾರದ ತುತ್ತಾಗಿದೆ. ಈ ಪರಿಸ್ಥಿತಿಯ ಲಾಭವನ್ನು ಎದುರು ನೋಡುತ್ತಿರುವ ಕಾಂಗ್ರೆಸ್‌ನಿಂದ ಹೊಸಮುಖವಾದ ಬಸವರಾಜ್ ಶಿವಗಂಗಾ ಅಭ್ಯರ್ಥಿಯಾಗಿದ್ದಾರೆ.

ಮಾಜಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ಸಹೋದರನ ಪುತ್ರ ತೇಜಸ್ವಿ ಪಟೇಲ್ ಕಾಂಗ್ರೆಸ್ ಟಿಕೆಟ್ ಸಿಗದಿರುವುದರಿಂದ ಬಂಡಾಯವೆದ್ದು ಜೆಡಿಎಸ್‌ನಿಂದ ಸ್ಪರ್ಧಿಸಿದ್ದಾರೆ.

ಪ್ರಜಾವಾಣಿ ಶನಿವಾರ • ಮೇ 6, 2023

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

RENTAL PROPERTIES

Accommodation Available

House

5 BHK home available for rent in Nagarbhavi 2 stage contact 9538266888

Accommodation Wanted

Flat

WANTED FLAT 2 Bed /Pent House in Jayanagar/ Basavanagudi for Company Guest House. Budget- 30k/ Month. Contact: 9986660721

REAL ESTATE BUYING

Real Estate Agents

Multiple Locations

"WANTED PURCHASE Sites/Houses/ Industrial/ Commercial Banashankari, Kanakapura Road, Jayanagar, J.P.Nagar, Bannergatta Road, BTM, HSR. 9845286505"

General

General

UNLOCK THE Value of your Mortgaged/NPA Land with our short-term funding. We specialize in releasing Residential, Commercial and Industrial Land, Which We then sell at Best Market Price. www. vernadevelopers.com 9353128035, 9916310226

Sites

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA`Sites Wanted. Contact: SAPTHAGIRI. 9900268073, 9448068073.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Commercial Building

Malleshwaram

FULLY FURNISHED 16,000Sft. A/C Showroom For Rent/Sale On Prime Busy Commercial Area,8th Cross, Malleshwaram, Bangalore. Contact: 9663001940.

Commerical

Basaveshwaranagar

COMMERCIAL FULLY DEVELOPED NORTH EAST Corner Site, 2250 Sqft Near Pushpanjali Theater, Opposite Base College, Basaveswarnagar 9343782958

Rajajinagar

-:RAJAJINAGAR INDUSTRIAL Town:- Suitable for Kalyana Mantapa 120x120 corner site for sale. Contact: 9945079777

Flat

Banashankari

FOR SALE Ready to Move Luxury 3 BHK 1750 sft 2.10 Cr & 2000 sft 2.40 Cr Flats for Sale @ Banashankari 2nd stage near BDA complex Brokers excuse Call 9741868566

Cambridge Layout

ARTILLARY ROAD Four Bedroom 3600 sft/ Private Garden. Entrance/ Semi Bungalow. 2.8 Cr. 9620901776/ 9880346216.

J P Nagar

SALE OVER 10 Year, Semi-furnished 2_BHK Flat_1080 Sq.ft. with Roofed Car-parking. J.P.Nagar 5th Phase 9986763007.

Malleshwaram



MALLESWARAM
southwest corner 2340 sft property with three floor building for sale. 8 crores. Contact. 6363161053

Farm House/ Land/ Resorts

Multiple Locations

NANDI HILLS rd 1/2 acre converted eKhata furnished 15 AC rooms resto cafe ready occupy 9Cr Ph 7019346409

General

South

FREE HOLD 650 Sft in Chamarajpet - off 5th Main Road- for sale. Expected price 1.3 Crores. Slightly negotiable. Contact9739004452. No brokers please.

House

Hennur

SALE 9SQUARE House on site 1296 sft 36x36 on KACHARAKANAHALLI Main Road, 400 meters from HENNUR RING ROAD- 9341158904, 8088886269, 9448031252

Jayanagar

JAYANAGAR 7TH BLOCK Excellent Location 40x60 North Facing Old House For Sale. RN Rao: 9341906338

Vijayanagar

PATTEGARPALYA: SALE 30X40 House, East, 6 BHK Duplex, A Katha, Fully Furnished, Shivakumar: 8095976649 (Owner)

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Sites

Banashankari

Property for SALE
BSK 2nd Stage, Off KR Road 2 adjacent Sites 973 Sft SF with G+2, 23 Sq.Bldg., 40 HP Power & 1680 Sft WF 12 Sq.AC Roof Shed & 25 HP Power
9845023509

"AVAILABLE BDA Sites Banasankari 6th Stage 20x30, 30x40, 40x60, 50x80 Genuine buyers Contact: 9845146725/ 9741466369"

-:BANASHANKARI 6TH Stage:- 10th Block West face 40x60 BDA Site for sale. Contact: 9945079777

Dollars Colony

SALE 50X80 West`Facing No 218 5th Cross diagonally Opposite cafe-coffee day Dollars Colony RMV 2nd Stage Bangalore Call:9980066939

SALE 50X80 West`Facing No 218 5th Cross diagonally Opposite cafe-coffee day Dollars Colony RMV 2nd Stage Bangalore Call:9980066939

Gnanabharathi

"2268 SQFT EF Good Residential BDA Site Sale Ganabharathi 2nd Block [Near Amma Arch]- 9845143579"

HRBR Layout

HRBR 2ND Block BDA Site 40x60 North Facing Sale Rs 23,000. Negotiable OMBR BDA 30x40 2 BHK House site value Rs 15,000 Sale call: 73493-22223

Kengeri

SITE FOR SALE
BBMP 'A' Katha @ Rs.3999/-Sft
Near Hemmigepura just 6Km from Kengeri Metro station & BGS Hospital. Ready to build with all basic amenities
Call: 9008005029 7829000837

Intl Airport Road

SALE 10000 to 55000 sft 'North' facing 180feet width @ 1600/-sft Bangalore North, Sugata Main Road, Hunsamaranahalli Call VERNA DEVELOPERS, MG.Road, 9916310226/ 9844056596. www. vernadevelopers.com

J P Nagar

2100 SFT North- West Corner 'A' Khatha Adjacent to Brigade Millenium JP.NAGAR 7th Phase Mobile: 98443-76310

Kanakapura Road

KANAKAPURA ROAD Gubbalala 1km- Doddakallasandra Metro Station 40x60 N/F, Road Face 60 Feet. 9945724472.

KANAKAPURA ROAD "Gokul Gardens" BMRDA Approved 30x57,North 60x90, East, 2600/- Negotioble: 9740150364, 9986146147

Nelamangala

SALE SITES 2000sft 2 Sites at 'Eden World' Nelamangala, Rs. 1300/-sft. Contact: 9886988257/ 23367729

Mysore

HUNSUR ROAD Kuberananda Sagara Layout, Sale 50X80 Site #691, 1 K.M. From Main Road. 9945724472.

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact:9844533371/ 9341733480

30X40 SITE SALE Vishveshwaraiah Layout BDA 6500 Sqft Negotiable and 20x30 North Site Sale National School 6th Block, Builder Location: 8310003509

Whitefield

30X 40 site Chikkathirupathi- hoskote NH648 for 17 Lakhs SBI approved. 30 minutes drive from whitefield. Call 7022206007

BUILDERS ESSENTIAL

Water Proofing

'WE FIX' LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

General

XIME
Manager Admin.
XIME Bangalore needs qualified and experienced Manager (Admin.) for its Bangalore campus. This is a residential campus with about 500 PG management students in residence in a five-acre campus.
Applicants must have an Engineering Degree or PG in Commerce / Admin. and have 10-12 years' experience in similar institutions /organisations.
Apply with detailed bio-data to: secretary@xime.org
Xavier Institute of Management & Entrepreneurship
Electronics City, Hosur Road, Bangalore-100 Mob.9845280734
Website: www.xime.org

INDUSTRY AT Peenya requires JUNIOR ACCOUNTANT- Female, B.Com. two years Experience in ESI, PF, Salary. CONVENTIONAL LATHE MILLER- Experience two years. Immediate Appointment. 9972410541, 9845915484 infusilindia@infusil.in

Hospital & Medical Jobs

NURSES NEEDED for reputed eye hospital. Day care. No night shifts. Freshers 20- 25K, 3 yrs + exp 25- 40k. Bsc/ GNM. Apply, coo@shekareyehospital.com, 9148147176

Teachers/ Professors

WANTED MONTESSORI trained adults with a passion of working with little children @ Ace Montessori Padmanabhanagar Bengaluru contact:7338613945

AUTOMOTIVE

Four Wheelers Selling

Others

DAILY CAR-BAZAAR Buying /Selling /Exchanging different Types, Models of USED CARS. 'STANDARD AUTOMOBILE CONSULTANT' since-1949 MUNAWER SHARIEFF 9844078655 FINANCE AVAILABLE

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

PERSONAL

Change of Name

I, PARTHIV SUDHIRKUMAR PURANI, residing at Bengaluru Rural-560102 have changed my name as PARTHIV PURANI, vide affidavit dated 5/5/2023 before Notary P.C.Ramaiah, Bengaluru

I,RAGHUNATH KRISHNA JETTY S/o Krishna Jetty R/a No.70,1st Cross, 3rd Main, N.S. Palya Main Road, Dollars Colony BTM 2nd Stage, Bangalore-560076 have canged my name from RAGHUNATH JETTY to RAGHUNATH KRISHNA JETTY vide affidavit dated 04-05-2023 before Notary Neha Baddi, Bangalore

I, SANJANA R/o, #948, 6th Cross, 9th Main, 2nd Block, Banashankari 1st Stage, Bangalore-50 have changed my name as SANJANAA SHRIKANT vide affidavit dated 3/5/2023 before notary H.G. Venkataramu, Bangalore

CHANGE OF NAME
I, ANITHA YADLA
W/o. Ramesh Babu Antharvedi R/@. PSR Residency, Block-1, F-3, 5th Main, 6th Cross, Ganganagar, R.T. Nagar, Bangalore- 560032 have changed my Daughter name from **JASMITHA ANTHARVEDI** to
JASMITHA RAJI ANTHARVEDI
vide affidavit dated 02.05.2023 before Notary Sivakumara. M.N., Bengaluru

PUBLIC NOTICE

PUBLIC NOTICE

The General Public is hereby informed that my clients are intending to purchase the below mentioned schedule of property from its owner viz., Mrs.Mangalam W/o. Late. R. Natarajan residing at- DS-5, GR Grand Residency, JP Nagar 6th Phase, Bangalore- 560078 (hereinafter referred as 'Owner'), The Owner claim that she is the sole and absolute right, title and interest holder thereof and her rights are free from all encumbrances, charges, claims, etc. of whatsoever nature and that she has a clear and marketable title in respect of the 'Scheduled Property'. This public notice is issued for verification of the title of the `Owner' with respect to the 'Scheduled Property'.

All or any persons including any banks, financial institutions or any other party or person, having any valid and legal claim, right, title, demand or interest by virtue of any sale, gift, lease, tenancy, license, exchange, partition, mortgage, charge, lien, inheritance, succession, trust, maintenance, possession, easement, agreement, lis-pendence, stay order, attachment, decree, specific performance or otherwise or any other right of whatsoever nature are required/called upon to convey their objection/s in writing at the address mentioned below, within (15) fifteen days from issuance of this notice, along with all supporting documents relating to such claim, failing which it shall be presumed that there is/are no claim/s and such claim/s if any, shall be considered to be waived and abandoned in respect of the 'Scheduled Property'.

Schedule of Property

All that piece and parcel of **Flat bearing.No.204**, admeasuring about 2050 square feet built-up area, on Second Floor, in the residential apartment known as **"SURAJ GANGA ORCHID"** constructed on land property bearing Municipal No.1/2, falls within BBMP Limits, situated at National High School Road, Visveswarapuram in Corporation Ward No. 50, Bangalore.
East by : Passage & Private Property
West by : Diagonal Road.
North by: Apartment No.203.
South by: Road

Sd/- **Mrs.USHA M.P**. Advocate
Off: # 94,1st Floor, 2nd Main, 2nd Cross, Sarvabouma Nagar, Bilekahalli, Bannerghatta Main Road, Bangalore-560076
Ph: 79630187, Cell: 9880042432
Place: Bengaluru
Date: 6.5.2023

PUBLIC NOTICE

This is to notify the public that my client is intending to purchase the property specified in the schedule here to from **Sri. Ravishankar K.R.** and **Smt. Anitha. R,** residing at No.824, 24th Main Road, J.P. Nagar 2nd Phase, Bengaluru-560 078. If anybody having a claim over the schedule property or objections to the proposed sale, may submit his/her claim or objections to the undersigned in writing with supporting documents within ten days from the date of publication of this notice. If no claim or objection is received within the stipulated time, it will be presumed that there are no claims or objections for transferring the schedule property in favour of my client by way of absolute sale.

SCHEDULE

All that piece and parcel of the BDA property bearing No. 824, PID No. 57-83-824, situated at 24th Main, Sarakki Extension, J.P. Nagar II Phase, Bangalore City Corporation Division No. 60/B, BBMP Ward No. 57, Bengaluru, measuring East to West: 35.58 Meters & North to South: 24.39 Meters, together with residential house consisting of Ground and First Floor with built up area of 7000 square feet, bounded on the:
East by : Site No. **816 & 817** West by : **Road**
North by : Site No. **825** and South by : Site No. **823**

ADDRESS:
N.R. NAGARAJA Advocate
No.5/1, 1st Floor, 1st Cross, C.S.I. Compound, Mission Road, Bengaluru - 560 027, Ph. No: 98458-46421
Email:nrnadvocate@gmail.com
6-5-2023, Bengaluru

AGM Notice

66th Annual General Body Meeting of Kerala Samajam Dooravaningar (Regd)
will be held on 28/05/2023 at 10 am at Jubilee School Vijinappura Dooravaninagar Bengaluru 560016.

Detailed notice with Agenda and Calendar of events are published on the notice board of Kerala Samajam Dooravaninagar at its registered office, D-69, North Avenue, ITI Township Bangalore -560016. All eligible members are requested to attend.

Date: 6.5.2023
Adv. Radhakrishnan Alapra.
General Secretary
Kerala Samajam Dooravaninagar (Regd)

For Advertising Booking Contact : 9731810277

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331